ಅಲೆಮಾರಿ ಸಮುದಾಯಗಳ ಸಾಮಾಜಿಕ ಅಧ್ಯಯನ

(ಶಹಾಪುರ ಪಟ್ಟಣವನ್ನು ಅನುಲಕ್ಷಿಸಿ)

A SOCIOLOGICAL STUDY OF NOMADIC COMMUNITIES

(WITH SPECIAL REFERENCE TO SHAHPUR TOWNSHIP)

ಸಮಾಜಶಾಸ್ತ್ರದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ ಫಿಲ್ ಪದವಿಗಾಗಿ ಸಲ್ಲಿಸಿದ ಪ್ರಬಂಧ

ಸಂಶೋಧಕರು

ಶ್ರೀನಾಥ ಸುಭಾಷ

ಮಾರ್ಗದರ್ಶಕರು

ಡಾ ಕೆ ಎಂ ಮೇತ್ರಿ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ -೫೮೩ ೨೭೬

೨೦೦೯

ಅಲೆಮಾರಿ ಸಮುದಾಯಗಳ ಸಾಮಾಜಿಕ ಅಧ್ಯಯನ

(ಶಹಾಪುರ ಪಟ್ಟಣವನ್ನು ಅನುಲಕ್ಷಿಸಿ)

A SOCIOLOGICAL STUDY OF NOMADIC COMMUNITIES

(WITH SPECIAL REFERENCE TO SHAHPUR TOWNSHIP)

ಸಮಾಜಶಾಸ್ತ್ರದಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ ಫಿಲ್ ಪದವಿಗಾಗಿ ಸಲ್ಲಿಸಿದ ಪ್ರಬಂಧ

ಸಂಶೋಧಕರು
ಶ್ರೀನಾಥ ಸುಭಾಷ

ಮಾರ್ಗದರ್ಶಕರು
ಡಾ ಕೆ ಎಂ ಮೇತ್ರಿ

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ -೫೮೩ ೨೭೬

೨೦೦೯

ದೃಢೀಕರಣ ಪತ್ರ

ಅಲೆಮಾರಿ ಸಮುದಾಯಗಳ ಸಾಮಾಜಿಕ ಅಧ್ಯಯನ (ಶಹಾಪುರ ಪಟ್ಟಣವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಪ್ರಬಂಧವನ್ನು **ಶ್ರೀನಾಥ ಸುಭಾಷ** ಇವರು ನನ್ನ ಮಾರ್ಗದರ್ಶನದಲ್ಲಿ ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಸಿದ್ಧಪಡಿಸಿರುತ್ತಾರೆ. ಎಂ ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 15-10-2009

ಸ್ಥಳ : ವಿದ್ಯಾರಣ್ಯ

(ಡಾ ಕೆ ಎಂ ಮೇತ್ರಿ)
ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

ಅಲೆಮಾರಿ ಸಮುದಾಯಗಳ ಸಾಮಾಜಿಕ ಅಧ್ಯಯನ (ಶಹಾಪುರ ಪಟ್ಟಣವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಪ್ರಬಂಧವನ್ನು ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಎಂ ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ ಕೆ ಎಂ ಮೇತ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 15-10-09
ಸ್ಥಳ : ವಿದ್ಯಾರಣ್ಯ

(ಶ್ರೀನಾಥ ಸುಭಾಷ)
ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಶಹಾಪುರ ತಾಲೂಕಿನ ಭೂಪಟ



ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಪ್ರಸ್ತಾವನೆ

ಭಾರತವು ವಿವಿಧ ರೀತಿಯ ಸಂಸ್ಕೃತಿಯುಳ್ಳ ದೇಶ. ಇಲ್ಲಿ ಹಲವಾರು ಸಮುದಾಯಗಳು ತಮ್ಮದೇ ಆದ ರೂಢಿ ಸಂಪ್ರದಾಯ, ಭಾಷೆ, ಧರ್ಮ, ವೃತ್ತಿ ಇಟ್ಟುಕೊಂಡು ಬಹುಮುಖಿ ಸಂಸ್ಕೃತಿಯನ್ನು ಹೊಂದಿದೆ. ಬೇರೆ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತ ದೇಶದಂತಹ ವಿಶಿಷ್ಟ ಸಂಸ್ಕೃತಿ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಅದರಲ್ಲಿಯೂ ಅಲೆಮಾರಿಗಳದ್ದೇ ಸಿಂಹಪಾಲು ಇದೆ. ದೇಶದ ಮೂಲಿಗರು ಇಂದಿಗೂ ಅಲೆಮಾರಿಗಳಾಗಿ ಉಳಿದಿದ್ದಾರೆ. ಅಲೆಮಾರಿ-ಅರೆಅಲೆಮಾರಿ ಸಮುದಾಯಗಳು ಇಂದು ಮುಖ್ಯ ವಾಹಿನಿಗೆ ಬರಲು ಹವಣಿಸುತ್ತಿವೆ. ಅಲೆಮಾರಿ ಸಮುದಾಯಗಳನ್ನು ಕುರಿತು ಪ್ರಸ್ತುತ ಸಂದರ್ಭದಲ್ಲಿ ಅಧ್ಯಾಯನಗಳು ಹೆಚ್ಚಾಗಿ ನಡೆಯಬೇಕಿದೆ. ಜಗತ್ತು ಬಹಳಷ್ಟು ವೇಗವಾಗಿ ಬದಲಾವಣೆ ಹೊಂದುತ್ತಿರುವ ಸಂದರ್ಭದಲ್ಲಿ ಕೆಲವು ಸಮುದಾಯಗಳು ಅಭಿವೃದ್ಧಿ ಹೊಂದಿ ಇನ್ನೂ ಕೆಲವು ಸಮುದಾಯಗಳು ಅತ್ಯಂತ ಹೀನಾಯ ಬದುಕನ್ನು ಸಾಗಿಸುತ್ತಾ ಹಸಿದ ಹೊಟ್ಟೆಯನ್ನು ತುಂಬಿಸಿಕೊಳ್ಳಲು ಊರಿಂದ ಊರಿಗೆ ಅಲೆಮಾರಿಗಳಾಗಿ ಅಲೆದಾಡುತ್ತಿರುವುದು ಈ ದೇಶದ ದುರಂತವೇ ಸರಿ.

ಜಾಗತೀಕರಣ ಸಂದರ್ಭದಲ್ಲಿಯೂ ಕೆಲವು ಸಮುದಾಯಗಳು ಇಂದಿಗೂ ಅಲೆಮಾರಿಗಳಾಗಿ ಉಳಿದಿರುವ ವಿಚಾರ ವಿಷಾದನೀಯ ಸಂಗತಿ ಈ ಅಲೆಮಾರಿಗಳು ದೇಶದ ನಡೆದಾಡುವ ಜೀವಂತ

ಸಂಸ್ಕೃತಿಗಳ ಸಂಕೇತವಾಗಿವೆ. ಹಾಗೆಯೇ ಇಲ್ಲಿ ಅನೇಕ ನಿಗೂಢ ಪ್ರಶ್ನೆಗಳು ಎದುರಾಗುತ್ತವೆ. ಅಲೆಮಾರಿ ಬುಡಕಟ್ಟುಗಳು ಹೇಗೆ ಜೀವಿಸಿದರು, ಇಂದಿಗೂ ಅಲೆಮಾರಿಗಳಾಗಿಯೇ ಉಳಿದಿರಲು ಅವರಿಗಿರುವ ಸಮಸ್ಯೆಗಳೇನು? ಯಾವ ಕಾರಣಕ್ಕಾಗಿ ಒಂದು ಕಡೆ ನೆಲೆನಿಲ್ಲಲು ಇವತ್ತಿಗೂ ಅಲೆಮಾರಿ ಸಮುದಾಯಗಳಿಗೆ ಸಾಧ್ಯವಾಗುತ್ತಿಲ್ಲ? ಈ ಸಮುದಾಯಗಳನ್ನು ಮುಖ್ಯವಾಹಿನಿಗೆ ತರಲು ಸರ್ಕಾರಗಳು ಎಲ್ಲಿ ದಾರಿ ತಪ್ಪುತ್ತಿವೆ? ಅಲೆಮಾರಿತನದ ಜೀವನವನ್ನು ಬಿಟ್ಟು ಒಂದೇ ಕಡೆ ಸ್ಥಿರವಾಗಿ ನೆಲೆಸಲು ಅಲೆಮಾರಿಗಳು ಏಕೆ ಮನಸ್ಸು ಮಾಡುತ್ತಿಲ್ಲ? ಒಂದು ವೇಳೆ ಮನಸ್ಸು ಮಾಡಿದರೂ ಏತಕ್ಕಾಗಿ ಸಾಧ್ಯವಾಗುತ್ತಿಲ್ಲ? ನೆಲೆನಿಲ್ಲಲು ಅವರಿಗೆ ಇರುವ ಎಡರು-ತೊಡರುಗಳೇನು? ಅವರ ಮಾನಸಿಕ ಸ್ಥಿತಿ-ಗತಿ ಯಾವ ಮಟ್ಟದಲ್ಲಿರುತ್ತದೆ? ಅವರ ಮೂಲ ಆಚರಣೆಗಳಲ್ಲಿ ಜೀವನ ವಿಧಾನಗಳಲ್ಲಿ ಯಾವ ರೀತಿ ಬದಲಾವಣೆಗಳಾಗಿವೆ? ಮತ್ತು ಸರ್ಕಾರ ಮತ್ತು ಸಂಘ ಸಂಸ್ಥೆಗಳು ಈ ಸಮುದಾಯಗಳ ಅಭಿವೃದ್ಧಿಗೆ ಯಾವ ರೀತಿ ಯೋಜನೆಗಳನ್ನು ಕೈಗೊಳ್ಳುತ್ತಿವೆ? ಎನ್ನುವುದರ ಕುರಿತು ಚರ್ಚಿಸಬೇಕಾಗಿದೆ.

ಬ್ರಿಟಿಷ್ ಸರ್ಕಾರ ಮತ್ತು ಮೇಲ್ವರ್ಗದ ವ್ಯವಸ್ಥೆ ಸ್ವಾತಂತ್ರ್ಯ ಪೂರ್ವದಿಂದಲೂ ಅಲೆಮಾರಿ ಸಮುದಾಯಗಳನ್ನು ಶೋಷಣೆ ಮಾಡುತ್ತಾ ಬಂದಿವೆ. ಇಂದು ಸ್ವಾತಂತ್ರ್ಯ ನಂತರ ಹಲವಾರು ಸರ್ಕಾರಗಳು ಅಧಿಕಾರಕ್ಕೆ ಬಂದರೂ ಪರಿಸ್ಥಿತಿ ಹೇಳಿಕೊಳ್ಳುವಂತೆನು ಬದಲಾಗಿಲ್ಲ ಮತ್ತು ಬದಲಾಗುತ್ತಿರುವ ಲಕ್ಷಣಗಳು ಗೋಚರಿಸುತ್ತಿಲ್ಲವೆಂದು ಹೇಳಬಹುದು. ನಮ್ಮ ಸಂವಿಧಾನ ನಿರ್ಮಾತರು ಅದೇಷ್ಟೋ ಗುರಿಗಳನ್ನು, ಆಶೋತ್ತರಗಳನ್ನು ಇಟ್ಟುಕೊಂಡು ದೀನ-ದುರ್ಬಲರ, ತುಳಿತಕ್ಕೊಳಗಾದವರ ಸಮುದಾಯಗಳ ಅಭ್ಯುದಯಕ್ಕಾಗಿ ವಿಶೇಷ ಸವಲತ್ತು, ಸೌಲಭ್ಯಗಳನ್ನು ಕಲ್ಪಿಸಿತ್ತು. ಅಲ್ಲದೆ ಮೀಸಲಾತಿಯ ವ್ಯವಸ್ಥೆಯನ್ನೂ ಸಂವಿಧಾನ ಜಾರಿಗೆ ಬಂದ ದಿನದಿಂದಲೇ ಜಾರಿಗೆ ತಂದರು. ಆದರೆ ಅತ್ಯಂತ ದಮನಿಯ ಸ್ಥಿತಿಯಲ್ಲಿರುವ ಸಮುದಾಯಗಳಿಗೆ ಸಂವಿಧಾನಿಕ ಸವಲತ್ತುಗಳು ಒದಗಿಸುವಲ್ಲಿ ಸರ್ಕಾರಗಳು ವಿಫಲವಾಗಿವೆ. ಅದರಲ್ಲೂ ಕೆಲವೊಂದು ವರ್ಗಗಳಿಗೆ ಮಾತ್ರ ಸೌಲಭ್ಯ ತಲುಪ್ಪುತ್ತಿವೆ. ಆದರೆ ಅಲೆಮಾರಿ ಸಮುದಾಯಗಳಿಗೆ ಈ ಯಾವ ಸೌಲಭ್ಯಗಳು ಸರಿಯಾದ ರೀತಿಯಲ್ಲಿ ದೊರೆಯುತ್ತಿಲ್ಲ ಮತ್ತು ಆ ಜನರಿಗೆ ಶಿಕ್ಷಣ, ಉದ್ಯೋಗ, ವಸತಿ, ಅಭಿವೃದ್ಧಿಯ ಬಗ್ಗೆ ಪ್ರಜ್ಞೆಯನ್ನು ಮೂಡಿಸಿಲ್ಲ, ಜನಜಾಗೃತಿ ಇಲ್ಲವೇ ಇಲ್ಲ. ಹೀಗಾಗಿ ಸರ್ಕಾರ, ಸಂಘ-ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಸಂಶೋಧನಕಾರರು, ಲೇಖಕರು ಈ ವರ್ಗಗಳ ಕಡೆಗೆ ತಮ್ಮ ಗಮನಹರಿಸಬೇಕಾಗಿದೆ. ಈ ಸಂಶೋಧನಾ ಅಧ್ಯಾಯನದಲ್ಲಿ ಅವರ ಜೀವನ ಸ್ಥಿತಿ-ಗತಿಗಳು ಮತ್ತು ಅವರ ಸಮಸ್ಯೆಗಳನ್ನು ಕುರಿತು ಅಧ್ಯಯನಿಸಲಾಗಿದೆ.

ಅಲೆಮಾರಿಗಳು ನೆಲೆ ನಿಂತು ಮುಖ್ಯವಾಹಿನಿಗೆ ಬರಬೇಕಾದರೆ ಈ ಸಮುದಾಯಗಳ ಅಭಿವೃದ್ಧಿಗೆ ಸರ್ಕಾರಗಳು ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ

ಅಲೆಮಾರಿಗಳನ್ನು ಮುಖ್ಯವಾಹಿನಿಗೆ ತರಬೇಕೆಂಬ ಮಹಾದಾಸೆಯಿಂದ ಕರ್ನಾಟಕ ರಾಜ್ಯ ಅಲೆಮಾರಿ-ಅರೆಅಲೆಮಾರಿ ಸಮುದಾಯಗಳ ಒಕ್ಕೂಟವು ಹುಟ್ಟಿಕೊಂಡು ಬಹಳಷ್ಟು ಆ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದೆ. ಸರ್ಕಾರ ಮತ್ತು ಸಂಘಸಂಸ್ಥೆಗಳು ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಕಾಳಜಿವಹಿಸಬೇಕಿದೆ.

ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳು

ಕರ್ನಾಟಕದಲ್ಲಿ ಅಲೆಮಾರಿ ಸಮುದಾಯಗಳನ್ನು ಕುರಿತು ಇತ್ತೀಚಿನ ವರ್ಷಗಳಲ್ಲಿ ಬಹಳಷ್ಟು ತೀವ್ರವಾಗಿ ಅಧ್ಯಯನಗಳು ನಡೆದಿವೆ. ಆದರೆ. ಈ ಹಿನ್ನೆಲೆಯಲ್ಲಿ ಶಹಾಪೂರ ನಗರದ ಒಟ್ಟು ಅಲೆಮಾರಿ ಸಮುದಾಯಗಳ ಕುರಿತು ಇದುವರೆಗೂ ಅಂತಹ ಅಧ್ಯಯನಗಳು ನಡೆದಿಲ್ಲ. ಹೀಗಾಗಿ ಇಂದಿನ ಸಂದರ್ಭದಲ್ಲಿ ಸಣ್ಣಪುಟ್ಟ ಘಟಕಗಳನ್ನು ಕುರಿತು ಅಧ್ಯಯನಕ್ಕೆ ಒಳಪಡಿಸುವುದು ಮಹತ್ವದ್ದಾಗಿದೆ. ಇದುವರೆಗೂ ನಡೆದ ಅಧ್ಯಯನಗಳನ್ನು ಈ ಕೆಳಕಂಡಂತೆ ಗಮನಿಸಲಾಗಿದೆ.

ಕರ್ನಾಟಕದ ಅಲೆಮಾರಿ ಸಮುದಾಯಗಳನ್ನು ಕುರಿತು ಡಾ ಕೆ ಎಂ ಮೇತ್ರಿಯವರ ಸಂಪಾದಕತ್ವದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಪ್ರಕಟಿಸಿ ಹೊರತಂದ ಅಲೆಮಾರಿ ಸಮುದಾಯಗಳ ೨೨ ಕೃತಿಗಳಲ್ಲಿ ಸಮುದಾಯಗಳ ಕುರಿತು ಸಮಗ್ರ ಚಿತ್ರಣವನ್ನು ದಾಖಲಿಸಲಾಗಿದೆ.

ಎಡ್ಗರ್ ಥರ್ಸ್ಟನ್ ಅವರು ರಚಿಸಿದ ದಿ ಕ್ಯಾಸ್ಟ್ ಆ್ಯಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ,

ಎಚ್ ವಿ ನಂಜುಂಡಯ್ಯ ಮತ್ತು ಎಲ್ ಕೆ ಅನಂತಕೃಷ್ಣ ಅಯ್ಯರ್ ಅವರು ಬರೆದಿರುವ "ದಿ ಮೈಸೂರು ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್ ಆಫ್ ಇಂಡಿಯಾ" ಹಾಗೂ ಎಲ್ ಜಿ ಹಾವನೂರ ಅವರ "ಕರ್ನಾಟಕ ಬ್ಯಾಕ್‌ವರ್ಡ್ ಕ್ಲಾಸಸ್ ಕಮಿಷನ್ ರಿಪೋರ್ಟ್", ಟಿ ವೆಂಕಟಸ್ವಾಮಿ ಅವರ "ಗವರ್ನ್‌ಮೆಂಟ್ ರಿಪೋರ್ಟ್ ಆಫ್ ದಿ ಸೆಕೆಂಡ ಬ್ಯಾಕ್‌ವರ್ಡ್ ಕ್ಲಾಸಸ್ ಕಮಿಷನ್" ಈ ಮೇಲಿನ ಎಲ್ಲ ಅಧ್ಯಯನಗಳಲ್ಲಿ ಬುಡಕಟ್ಟು ಅಲೆಮಾರಿ ಸಮುದಾಯಗಳನ್ನು ಕುರಿತ ಮಾಹಿತಿ ಲಭ್ಯವಾಗುವುದು.

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಪ್ರಕಟಿಸಿರುವ "ಬುಡಕಟ್ಟು ಕುಲಕಸುಬುಗಳು" ಎಂಬ ಗ್ರಂಥದಲ್ಲಿ ಡಾ ಕೆ ಎಂ ಮೈತ್ರಿ ಅವರು ಪ್ರತಿಯೊಂದು ಬುಡಕಟ್ಟು ಅಲೆಮಾರಿ ಸಮುದಾಯಗಳು ತಮ್ಮದೇ ಆದ ವೃತ್ತಿಯನ್ನು ಹೊಂದಿರುತ್ತವೆ ಎಂಬುದು ಇವರ ಗ್ರಂಥದಿಂದ ತಿಳಿದುಬರುತ್ತದೆ.

ಡಾ ಸ ಚಿ ರಮೇಶ ಅವರ ಸಂಪಾದಕತ್ವದಲ್ಲಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಕಟಿಸಿದ "ಅಲೆಮಾರಿಗಳ ಸ್ಥಿತಿಗತಿ" ಎಂಬ ಪುಸ್ತಕದಲ್ಲಿ ಅಲೆಮಾರಿ ಸಮುದಾಯಗಳ ಜೀವನಕ್ರಮ ಮತ್ತು ಅವರ ಸಮಸ್ಯೆ, ಸವಾಲುಗಳ ಬಗ್ಗೆ ವಿವರಿಸಲಾಗಿದೆ.

ಪರಿಶೋಧಿಸಬೇಕಾದ ಸಮಸ್ಯೆ

೧. ಅಲೆಮಾರಿ ಸಮುದಾಯಗಳು ಇಂದಿಗೂ ಅಲೆಮಾರಿಗಳಾಗಿ ಉಳಿದಿರಲು ಅವರಿಗಿರುವ ಸಮಸ್ಯೆಗಳೇನು.

೨. ಅಲೆಮಾರಿ ಸಮುದಾಯಗಳಿಗೆ ಒಂದು ಕಡೆ ನೆಲೆನಿಲ್ಲಲು ಇವತ್ತಿಗೂ ಏಕೆ ಸಾಧ್ಯವಾಗುತ್ತಿಲ್ಲ.

೩. ಅಲೆಮಾರಿ ಸಮುದಾಯಗಳನ್ನು ಮುಖ್ಯವಾಹಿನಿಗೆ ತರಲು ಸರ್ಕಾರಗಳು ಎಲ್ಲಿ ದಾರಿ ತಪ್ಪುತ್ತಿವೆ.

೪. ಅಲೆಮಾರಿತನದ ಜೀವನವನ್ನು ಬಿಟ್ಟು ಒಂದು ಕಡೆ ಸ್ಥಿರವಾಗಿ ನೆಲೆಸಲು ಈ ಸಮುದಾಯಗಳು ಏಕೆ ಮನಸ್ಸು ಮಾಡುತ್ತಿಲ್ಲ.

೫. ಅಲೆಮಾರಿ ಸಮುದಾಯಗಳು ನೆಲೆನಿಲ್ಲಲು ಅವರಿಗೆ ಇರುವ ಎಡರು ತೊಡರುಗಳೇನು? ಅವರ ಮಾನಸಿಕ ಸ್ಥಿತಿಗತಿ ಯಾವ ಮಟ್ಟದಲ್ಲಿದೆ.

೬. ಅಲೆಮಾರಿ ಸಮುದಾಯಗಳು ತಮ್ಮ ಮೂಲ ವೃತ್ತಿಗಳನ್ನು ಇನ್ನು ಜೀವಂತವಾಗಿ ಉಳಿಸಿಕೊಂಡಿದ್ದಾರೆಯೇ?

೭. ಅವರ ಮೂಲ ಆಚರಣೆಗಳಲ್ಲಿ ಜೀವನ ವಿಧಾನಗಳಲ್ಲಿ ಯಾವ ರೀತಿ ಬದಲಾವಣೆಗಳಾಗಿವೆ.

೮. ಸರ್ಕಾರ ಮತ್ತು ಸಂಘಸಂಸ್ಥೆಗಳು ಈ ಸಮುದಾಯಗಳ ಅಭಿವೃದ್ಧಿಗೆ ಯಾವ ರೀತಿಯ ಯೋಜನೆಗಳನ್ನು ಕೈಗೊಂಡಿವೆ.

ಅಧ್ಯಯನದ ವ್ಯಾಪ್ತಿ

ಅಲೆಮಾರಿ ಸಮುದಾಯಗಳು ವಿಶ್ವದ ಎಲ್ಲೆಡೆಯಲ್ಲಿಯೂ ಕಂಡುಬರುತ್ತವೆ. ಯಾವುದೇ ಒಂದು ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ನಿಖರತೆ ಬರಬೇಕಾದರೆ ಅದಕ್ಕೆ ನಿಗದಿಪಡಿಸಿಕೊಂಡ ಸೀಮಿತವಾದ ಪ್ರದೇಶ ಇರಬೇಕಾದದ್ದು ತುಂಬಾ ಅಗತ್ಯವಾಗಿರುತ್ತದೆ. ಹೀಗಾಗಿ ಪ್ರಾಥಮಿಕ ಆಕಾರಗಳ ಅವಶ್ಯಕತೆಗಳಿಗಾಗಿ ಭಾರತ ದೇಶದ ಪರಂಪರೆಯನ್ನು ಬಿಂಬಿಸುವ ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿರುವ ಗುಲಬರ್ಗಾ ಜಿಲ್ಲೆಯ ಶಹಾಪುರ ಪಟ್ಟಣದಲ್ಲಿಯ ಅಲೆಮಾರಿ ಸಮುದಾಯಗಳು ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿವೆ.

ಅಧ್ಯಯನದ ಉದ್ದೇಶಗಳು

ಭಾರತವು ಸಾಂಪ್ರದಾಯಿಕ ಹಿನ್ನಲೆಯಲ್ಲಿ ಅನೇಕ ಅಲೆಮಾರಿ ಸಮುದಾಯಗಳನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡಿದೆ. ಅಲೆಮಾರಿಗಳ ಅಧ್ಯಯನ ಇಂದು ಕ್ರಮಬದ್ಧ ಹಾಗೂ ಮಂದಗತಿಯ ಬೆಳವಣಿಗೆಯಲ್ಲಿ ಸಾಗುತ್ತಿದೆ. ಭಾರತೀಯ ಸಮಾಜವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅಲೆಮಾರಿ ಸಮುದಾಯಗಳ ಅಧ್ಯಯನ ಅತ್ಯವಶ್ಯಕವಾಗಿ ಆಗಬೇಕಾಗಿದೆ.

ಒಮ್ಮೆ ಮುಸುಕಿನಂತೆ ಮತ್ತೊಮ್ಮೆ ಬೆಳಕಿನಂತೆ ಕಾಣುವ ಈ ಬಗೆಯ ಸಮುದಾಯಗಳ ನೀತಿ

ನಿಯಮಗಳು ನಮ್ಮ ಆಧುನಿಕ ಲೋಕಕ್ಕೆ ಅನಗತ್ಯ ಅನ್ನಿಸುತ್ತದೆ. ಏಕೆಂದರೆ ಇಂದು ನಗರೀಕರಣದ ಪ್ರಭಾವದಿಂದ ಈ ಸಮುದಾಯಗಳು ದೂರವೇ ಉಳಿದಿವೆ. ಆದ್ದರಿಂದ ಈ ಅಲೆಮಾರಿಗಳ ಸಾಮಾಜಿಕ ಬದಲಾವಣೆ ಹೇಗಿದೆ, ಅವರಿಗೆ ಇರುವ ಅಡತಡೆಗಳೇನು? ಎಂಬುದನ್ನು ಈ ಕೆಳಕಂಡಂತೆ ಸೂಕ್ಷ್ಮವಾಗಿ ಅವಲೋಕಿಸಬೇಕಾಗಿದೆ.

೧. ಅಲೆಮಾರಿ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ-ಗತಿಗಳ ನಡುವಿನ ಸಂಬಂಧಗಳನ್ನು ಗುರುತಿಸುವುದು.

೨. ಅಲೆಮಾರಿ ಸಮುದಾಯಗಳಲ್ಲಿ ಸಾಮಾಜಿಕ ಸಂಘಟನೆ, ಸಾಮಾಜಿಕ ನಿಯಂತ್ರಣ ಮತ್ತು ಧರ್ಮ ಇವುಗಳಲ್ಲಿ ಉಂಟಾಗಿರುವ ಬದಲಾವಣೆಯನ್ನು ಅಧ್ಯಯನದಲ್ಲಿ ಅಭಿವ್ಯಕ್ತಿಸುವುದು.

೩. ಅಲೆಮಾರಿ ಸಮುದಾಯಗಳು ತಮ್ಮ ಸಾಂಸ್ಕೃತಿಕ ನಿರಂತರತೆಯನ್ನು ಕಾಪಾಡಿಕೊಂಡು ಉಳಿಸಿ ಕೊಂಡಿದ್ದಾರೆಯೆ ಎಂಬುದನ್ನು ಅಧ್ಯಯನ ಮಾಡುವುದು.

ಸಂಶೋಧನಾ ವಿನ್ಯಾಸ ಮತ್ತು ವಿಧಾನಗಳು

ಅಲೆಮಾರಿ ಸಮುದಾಯಗಳ ಅಧ್ಯಯನ ಯಾವ ರೀತಿಯಿಂದ ಸಾಗಬೇಕು ಮತ್ತು ಅದರಲ್ಲಿ ಅನುಸರಿಸುವಂಥ ವಿಧಾನಗಳು ಯಾವುವು. ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಲು ಕ್ಷೇತ್ರಕಾರ್ಯ ಮಾಡುವುದು. ಇನ್ನೂ ವಿಶೇಷ ರೀತಿಯಲ್ಲಿ ಇದಕ್ಕೆ ಸಂಬಂಧಿಸಿದಂತೆ ವಿವಿಧ ಅಧಿಕಾರಿ ಗಳೊಂದಿಗೆ ಚರ್ಚಿಸಿ ಅಲೆಮಾರಿ ಸಮುದಾಯಗಳು ಯಾವ ರೀತಿ ಅಭಿವೃದ್ಧಿಯಾಗುತ್ತಿವೆ ಎಂಬುದನ್ನು ಚರ್ಚಿಸುವುದು. ಶಹಾಪುರ ನಗರದಲ್ಲಿ ಅಧಿಕವಾಗಿ ಕಂಡುಬರುವ ಅಲೆಮಾರಿ ಸಮುದಾಯಗಳ ಮಾಹಿತಿ ಯನ್ನು ಸಂಗ್ರಹಿಸಲು ಈ ಕೆಳಗಿನ ಮೂಲಗಳನ್ನು ಬಳಸಿಕೊಳ್ಳಲಾಗಿದೆ.

೧. ಪ್ರಾಥಮಿಕ ಆಕರಗಳು : ಮೂಲ ಆಕರಗಳ ಸಹಾಯದಿಂದ ಸಂದರ್ಶನ ಅನುಸೂಚಿ ತಯಾರಿಸಿ ಅದನ್ನು ಪೂರ್ವ ಪರೀಕ್ಷೆಗೆ ಒಳಪಡಿಸಿ ನಂತರ ಬಂದ ಫಲಿತಾಂಶದಿಂದ ಅಂತಿಮವಾಗಿ ಸಂದರ್ಶನ ಹಾಗೂ ಪ್ರಶ್ನಾವಳಿ, ಸಾಮಾಜಿಕ ಸಮೀಕ್ಷೆ ಮತ್ತು ಸಹಭಾಗಿತ್ವ ಅವಲೋಕನದಿಂದ ಅಲೆಮಾರಿ ಸಮುದಾಯಗಳನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ.

೨. ಅನುಷಂಗಿಕ ಆಕರಗಳು : ಸಂಶೋಧನೆಗೆ ಸಂಬಂಧಿಸಿದಂತೆ ಅನುಷಂಗಿಕ ಮಾಹಿತಿಗಾಗಿ ಪತ್ರಿಕೆಗಳು ಮತ್ತು ವಿವಿಧ ಗ್ರಂಥಗಳಲ್ಲಿರುವ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ. ಈ ಅಧ್ಯಯನಕ್ಕೆ ಕೆಳಗಿನ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

೧. ಚಾರಿತ್ರಿಕ ವಿಧಾನ

೨. ಸಂಖ್ಯಾಶಾಸ್ತ್ರೀಯ ವಿಧಾನ

೩. ತುಲನಾತ್ಮಕ ವಿಧಾನ

೪. ಸಂದರ್ಶನ ವಿಧಾನ

೫. ಸಹಭಾಗಿತ್ವ ವಿಧಾನ

೬. ಪ್ರಶ್ನಾವಳಿ ವಿಧಾನ

ಸಂಶೋಧನ ಸಾಧನಗಳು

ಅಲೆಮಾರಿ ಸಮುದಾಯಗಳ ಸಾಮಾಜಿಕ ಅಧ್ಯಯನದ ಸಂದರ್ಭದಲ್ಲಿ ಹಾಗೂ ಕ್ಷೇತ್ರಕಾರ್ಯ ಸಮಯದಲ್ಲಿ ಮೂಲಭೂತ ಸಾಧನಗಳಾದ ಕ್ಯಾಮರಾ, ಟೇಪರೆಕಾರ್ಡ್, ಲೇಖನ ಸಾಮಗ್ರಿಗಳು, ಗಣಕಯಂತ್ರ, ಸಿ ಡಿ ಮತ್ತು ಕ್ಯಾಸೇಟ್‌ಗಳು, ನಕ್ಷೆಗಳು ಹಾಗೂ ರೇಖಾಚಿತ್ರಗಳನ್ನು ಬಳಸಿಕೊಳ್ಳಲಾಗಿದೆ.

ಅಧ್ಯಯನದ ಶೈಕ್ಷಣಿಕ ಮಹತ್ವ

ಅಭಿವೃದ್ಧಿಯನ್ನು ಹೊಂದುತ್ತಿರುವ ನಮ್ಮ ದೇಶವು ಹಲವು ರೀತಿಯ ಸಾಮಾಜಿಕ ಸಮಸ್ಯೆಗಳಲ್ಲಿ ಸಿಲುಕಿಕೊಂಡಿದೆ. ಅಂತಹ ಸಮಸ್ಯೆಗಳಲ್ಲಿ ಅಲೆಮಾರಿ ಸಮುದಾಯಗಳ ಅಭಿವೃದ್ಧಿಯ ಬಗೆಗಿನ ದೃಷ್ಟಿಕೋನಗಳು ಸಮರ್ಪಕವಾಗಿಲ್ಲ. ಈ ಕಾರಣ ಈ ಅಧ್ಯಯನವು ಅಲಕ್ಷಿತ ಸಮುದಾಯಗಳಾದ ಅಲೆಮಾರಿ ಸಮುದಾಯಗಳು ಸಾಮಾಜಿಕ ಬದುಕನ್ನು ಕುರಿತು ಗಮನಹರಿಸುವುದು ಹಾಗೂ ನಿರಂತರ ಅಲೆಮಾರಿತ್ವದಿಂದ ಸಮಸ್ಯೆಗಳಿಗೆ ಸಿಲುಕಿದ ಪ್ರಮುಖ ಸಮುದಾಯಗಳಲ್ಲಿ ಅಲೆಮಾರಿ ಸಮುದಾಯಗಳನ್ನು ಅಭಿವೃದ್ಧಿ ಕಡೆಗೆ ಚಲಿಸುವಂತೆ ಮಾಡಲು ಸಹಾಯಕವಾಗುವ ಸಲಹೆ ಸೂಚನೆಗಳನ್ನು ತಿಳಿಸುವ ಕಾರಣ ಈ ಅಧ್ಯಯನದ ವಿವರಣಾತ್ಮಕ ಸಂಶೋಧನೆಯಿಂದ ದೊರಕುವ ದತ್ತಾಂಶಗಳು ಹಾಗೂ ಒಳನೋಟಗಳು ಸಹಜವಾಗಿಯೇ ಶೈಕ್ಷಣಿಕ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ಸಮಕಾಲೀನ ಸಮಸ್ಯೆಗಳಿಗೆ ಪ್ರಸ್ತುತ ಅಧ್ಯಯನದ ಸಂಬಂಧ

ಜಾಗತೀಕರಣ ಮತ್ತು ವಸಹಾತುಶಾಹಿಯ ಪ್ರಭಾವದಿಂದ ಅಲೆಮಾರಿ ಸಮುದಾಯಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಹೀಗಾಗಿ ಪ್ರಸ್ತುತ ಅಧ್ಯಯನವು ಸಮಕಾಲೀನ ಸಾಮಾಜಿಕ ಸಮಸ್ಯೆಗಳ ಜೊತೆ ನೇರ ಹಾಗೂ ಪರೋಕ್ಷ ಸಂಬಂಧವನ್ನು ಹೊಂದಿದ್ದು ಪ್ರಸ್ತುತ ಅಧ್ಯಯನದಿಂದ ದೊರಕಬಹುದಾದ ವಿಷಯ ಜ್ಞಾನವು ಸಮಾಜಕ್ಕೆ ಹಾಗೂ ಸರ್ಕಾರಕ್ಕೆ ದಿಕ್ಸೂಚಿಯಾಗಿ ಅಲೆಮಾರಿ ಸಮುದಾಯಗಳಿಗೆ ಸಹಾಯಕ ವಾಗಲ್ಲದು.

ಸಮಾಜ ಅಥವಾ ರಾಷ್ಟ್ರಕ್ಕೆ ಪ್ರಸ್ತುತ ಅಧ್ಯಯನದ ಅವಶ್ಯಕತೆ

ಭಾರತದ ಅಲೆಮಾರಿ ಸಮುದಾಯಗಳನ್ನು ಗಮನಿಸಿದರೆ ಅವರು ನಿರಂತರ ಅಲೆಮಾರಿತ್ವ, ನಿರುದ್ಯೋಗ, ಬಡತನ, ಹಸಿವು ಮುಂತಾದ ಸಮಸ್ಯೆಗಳಿಂದ ತೊಳಲಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ

ಪರಿಶೋಧಿಸಬೇಕಾದ ವಿಷಯವು ಹೆಚ್ಚು ಹೆಚ್ಚು ಕ್ಷೇತ್ರಾಧಾರಿತವಾಗಿರುವುದರಿಂದ ಬರುವ ಫಲಿತತೆಗಳು ಸಮುದಾಯದ ತಾರತಮ್ಯದ ಕ್ರೂರ ವ್ಯವಸ್ಥೆಯಲ್ಲಿ ತೊಳಾಡುತ್ತಿರುವ ಅಲೆಮಾರಿ ಸಮುದಾಯಗಳ ಸಮಸ್ಯೆಗಳು ಹಾಗೂ ಅಭಿವೃದ್ಧಿಗೆ ಪೂರಕವಾದ ಮಾಹಿತಿಯನ್ನು ಒದಗಿಸುವ ಪ್ರಯತ್ನ ಇಲ್ಲಿನದು. ಜಾಗತೀಕರಣವನ್ನು ಇಡೀ ರಾಷ್ಟ್ರವೆ ಒಪ್ಪಿಕೊಂಡು ಸಾಮಾಜಿಕ ಸ್ತರವಿನ್ಯಾಸದ ಮೇಲಸ್ತರದಲ್ಲಿರುವ ವರ್ಗಗಳು ಎಷ್ಟರ ಮಟ್ಟಿಗೆ ಶಿಕ್ಷಣ ವ್ಯವಸ್ಥೆ ರೂಪಿಸಿವೆ ಹಾಗೂ ಅಲೆಮಾರಿಗಳು ತಮ್ಮ ವೃತ್ತಿಗಳನ್ನು ತಮ್ಮ ಒಂದು ಹೊತ್ತಿನ ಊಟವೆಂದು ನಂಬಿಕೊಂಡು ಬದುಕುವ ಅಲೆಮಾರಿ ಸಮುದಾಯಗಳ ಗುಡಾರಗಳ ರೀತಿಯ ಮನೆಗಳನ್ನು ಎಷ್ಟರ ಮಟ್ಟಿಗೆ ತಲುಪಿವೆ ಎಂಬುದನ್ನು ಕುರಿತು ಸುದೀರ್ಘವಾಗಿ ಚರ್ಚಿಸುವುದಾಗಿದೆ.

ಜ್ಞಾನ ಶಾಖೆಗೆ ಪ್ರಸ್ತುತ ಅಧ್ಯಯನ ಕೊಡುಗೆ

ಈ ಅಧ್ಯಯನವು ಅಲೆಮಾರಿ ಸಮುದಾಯಗಳಿಗೆ ಆಶಾಕಿರಣವಾಗಬಲ್ಲದು ಮತ್ತು ಇವರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಜ್ಞಾನವನ್ನು ದೊರಕಿಸಿಕೊಡಬಲ್ಲದು. ಒಟ್ಟಿನಲ್ಲಿ ಪ್ರಸ್ತುತ ಜ್ಞಾನ ಶಾಖೆಯ ಬೆಳವಣಿಗೆಗೆ ಪೂರಕವಾದ ಮಾಹಿತಿಯನ್ನು ಒದಗಿಸಬಲ್ಲದು.

ಸಮಾರೋಪ

ಈ ಸಂಶೋಧನಾ ಪ್ರಬಂಧವು ತನ್ನ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ಅಧ್ಯಾಯನಕ್ಕಾಗಿ ಕಂಡುಕೊಂಡ ವಿಧಾನಗಳನ್ನು ಅವಲೋಕಿಸಿದಾಗ ಪ್ರಸ್ತುತ ಸಂದರ್ಭದಲ್ಲಿ ಭಾರತದ ಮೂಲ ನಿವಾಸಿಗಳಾದ ಅಲೆಮಾರಿ ಸಮುದಾಯಗಳ ಸಮಸ್ಯೆಗಳಿಗೆ ಪರಿಹಾರವಾಗಿ ನಿಲ್ಲಬಲ್ಲ ಪ್ರಮುಖ ಸಂಶೋಧನಾ ಪ್ರಬಂಧವಾಗುವುದರ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ ಹಾಗೂ ಅಲೆಮಾರಿ ಸಮುದಾಯಗಳ ಮೂಲ ವೃತ್ತಿಗಳಿಗೆ ಪರ್ಯಾಯ ವೃತ್ತಿಗಳನ್ನು ಕಲ್ಪಿಸಲು ಸಾಧ್ಯವೇ? ಅಥವಾ ಆ ಪರ್ಯಾಯ ವೃತ್ತಿಗಳಿಂದ ಅಲೆಮಾರಿ ಸಮುದಾಯಗಳ ಅಭಿವೃದ್ಧಿ ಸಾಧ್ಯವೇ? ಅಲೆಮಾರಿ ಸಮುದಾಯಗಳ ಸಮಸ್ಯೆಗಳನ್ನು ಶಾಶ್ವತವಾಗಿ ಪರಿಹರಿಸಲು ಸಾಧ್ಯವೇ? ಎನ್ನುವ ಮಹತ್ವದ ಅಂಶಗಳಿಗೆ ಈ ಸಂಶೋಧನೆ ಉತ್ತರವಾಗಬಲ್ಲುದು.

ಅಧ್ಯಾಯ ೨

ಶಹಾಪುರ ಪರಿಸರ ಮತ್ತು ಅಲೆಮಾರಿಗಳ ಜೀವನ

೨.೧. ಶಹಾಪುರ ಪರಿಸರ

ಯಾವುದೇ ಒಂದು ಪ್ರದೇಶದ ಪರಿಚಯವನ್ನು ಕಂಡುಕೊಳ್ಳಬೇಕಾದರೆ ನಾವು ಮೊದಲಿಗೆ ಮೊರೆ ಹೋಗುವುದು ಅಲ್ಲಿನ ಭೌಗೋಳಿಕ ಪರಿಸರಕ್ಕೆ. "ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತ ಮತಿಗಳ್" ಎಂಬ ಖ್ಯಾತಿಗೆ ಪಾತ್ರರಾದವರ ಜಿಲ್ಲೆ ಕಲಬುರ್ಗಿ. ಈ ಜಿಲ್ಲೆಯು ಕರ್ನಾಟಕ ರಾಜ್ಯದ ಉತ್ತರಕ್ಕೆ ತನ್ನ ವಿಸ್ತರತೆಯನ್ನು ಹೊಂದಿದೆ. ಕೃಷ್ಣಾ ಭೀಮಾ ನದಿಗಳು ಈ ಜಿಲ್ಲೆಯಲ್ಲಿ ಹರಿಯುತ್ತವೆ. ಫಲವತ್ತಾದ ಕಪ್ಪು ಭೂಮಿಯನ್ನು ಈ ಪ್ರದೇಶ ಹೊಂದಿದೆ. ಇದನ್ನು ಸಗರ ನಾಡು ಎಂದು ಕರೆಯುತ್ತಾರೆ. ಜೇವರ್ಗಿ, ಶಹಾಪುರ, ಸುರಪುರ ಹಾಗೂ ಬೀಜಾಪುರ ಜಿಲ್ಲೆಯ ಸಿಂದಗಿ, ಮುದ್ದೇಬಿಹಾಳ ತಾಲೂಕುಗಳನ್ನೊಳಗೊಂಡ ಪ್ರದೇಶವನ್ನು 'ಸಗರನಾಡು' ಎಂದು ಹೇಳುವುದುಂಟು. ಈ ಸಗರ ನಾಡಿಗೆ ಕಳಶವಿಟ್ಟಂತೆ ತನ್ನ ಹಿರಿಮೆಯಿಂದ ಕಂಗೊಳಿಸುತ್ತಿರುವ ನಗರ ಶಹಾಪುರ. ಇದು ಹಲವು ವೈಶಿಷ್ಟ್ಯಗಳಿಂದ ಕೂಡಿದ ಪಟ್ಟಣ.

ಸಗರ ನಾಡಿನ ಕೇಂದ್ರ ಸ್ಥಾನವೇ ಶಹಾಪುರ. ನಾಡಿಗೆ ವೈಶಿಷ್ಟ್ಯವಿದ್ದಂತೆ ಈ ಪ್ರದೇಶಕ್ಕೂ ತನ್ನದೆ ಆದ ವೈಶಿಷ್ಟ್ಯವಿದೆ. ಪುರಾಣ ಇತಿಹಾಸವನ್ನು ಅವಲೋಕಿಸಿ ನೋಡಿದಾಗ ಅನೇಕ ಮಹತ್ವದ ಚಾರಿತ್ರಿಕ ಅಂಶಗಳು ಗೋಚರಿಸುತ್ತವೆ. 'ಸಗರ ನಾಡು' ಎಂಬ ಹೆಸರು ಬಳಕೆಗೆ ಬಂದದ್ದು ಇತಿಹಾಸ ಕಾಲದಿಂದ ಆದರೆ ಸಗರ 'ಸಾಗರಪುರಿ' ಎಂಬ ಪ್ರಖ್ಯಾತಿ ಪಡೆದದ್ದು ಪುರಾಣ ಕಾಲದಿಂದ. ಈ ಭಾಗಕ್ಕೆ ಜಂಬೂದ್ವೀಪ

ದಂಡಕಾರಣ್ಯ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ಈ ಜಂಬೂ ದ್ವೀಪವನ್ನು ಅನೇಕ ಜನ ಅರಸರು ಹಂಚಿಕೊಂಡು ಆಳುತ್ತಿದ್ದರು. ದಂಡಕನೆಂಬ ಅರಸ ಈ ಭಾಗವನ್ನು ಆಳುತ್ತಿದ್ದಾಗಿನಿಂದಲೇ ಇದಕ್ಕೆ 'ದಂಡಕಾರಣ್ಯ' ಎಂಬ ಹೆಸರು ಬಂದಿದೆ. ಆ ತರುವಾಯ ಸಗರ ಚಕ್ರವರ್ತಿ ಸಗರಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನೆಂಬುದು ಮಂದಾಕಿನಿ ಮಹಾತ್ಮೆಯಿಂದ ತಿಳಿಯುತ್ತದೆ. ಶಹಾಪುರಕ್ಕೆ ಹೊಂದಿಕೊಂಡಿರುವ ಬೆಟ್ಟಕ್ಕೆ 'ಸಗರಾದ್ರಿ' ಎಂಬ ಹೆಸರಿನಿಂದ ಕರೆಯುತ್ತಾರೆ(ಕರದಳ್ಳಿ ಚಂದ್ರಕಾಂತ :೨೦೦೮:೨) ಶಹಾಪೂರ ತಾಲೂಕಿನ ಆಡಳಿತ ಕೇಂದ್ರವಾಗಿದೆ. ಶಹಾಪುರ ತಾಲೂಕಿನಲ್ಲಿರುವ ಪಟ್ಟಣ ಇದೊಂದೆ. ಸುರಪುರ- ಗುಲಬರ್ಗಾ ರಾಜ್ಯ ಹೆದ್ದಾರಿಯಲ್ಲಿ ಗುಲಬರ್ಗಾದಿಂದ ದಕ್ಷಿಣಕ್ಕೆ ಶಹಾಪುರ ಪಟ್ಟಣ ೭೭ ಕಿಮೀ ದೂರದಲ್ಲಿದೆ. ಪಟ್ಟಣದ ಈಶಾನ್ಯಕ್ಕೆ ೩೪ ಕಿಮೀ ದೂರದಲ್ಲಿಯೇ ಯಾದಗಿರಿ ರೈಲ್ವೆ ನಿಲ್ದಾಣವಿದೆ. ಈ ಭಾಗದ ಜನರಿಗೆ ಇದು ತುಂಬಾ ಅನುಕೂಲವಾಗಿದೆ.

ಶಹಾಪುರದಲ್ಲಿ ಪುರಸಭೆಯಿದ್ದು ೨೩ ವಾರ್ಡಗಳನ್ನು ಹೊಂದಿದೆ. ಪ್ರತಿ ವಾರ್ಡಿಗೊಬ್ಬರಂತೆ ಸದಸ್ಯರನ್ನು ಹೊಂದಿದೆ. ನಗರದಲ್ಲಿಇತರ ಜನರು ವಾಸಿಸುವಂತೆ ಕೆಲವೊಂದು ವಾರ್ಡಗಳಲ್ಲಿ ಅಲೆಮಾರಿ ಸಮುದಾಯಗಳು ಸಹ ಗುಡಾರ ಗುಡಿಸಲುಗಳನ್ನು ಹಾಕಿಕೊಂಡು ಇತರ ಜನ ಸಮುದಾಯಗಳಂತೆ ವಾಸಿಸುತ್ತಿದ್ದಾರೆ. ಶಹಾಪುರವು ಯಾದಗಿರಿ ಉಪ ವಿಭಾಗಕ್ಕೆ ಸೇರಿದ್ದು. ಉತ್ತರಕ್ಕೆ ಜೇವರ್ಗಿ ದಕ್ಷಿಣಕ್ಕೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನಿಂದ ಆವೃತವಾಗಿದೆ. ಯಾದಗಿರಿ, ಚಿತ್ತಾಪುರ ತಾಲೂಕುಗಳನ್ನು ಬೇರ್ಪಡಿಸುವ ಸೀಮಾರೇಖೆ ಭೀಮನದಿಯಾದರೆ, ಕೃಷ್ಣಾ ನದಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕನ್ನು ಈ ತಾಲೂಕಿನಿಂದ ವಿಂಗಡಿಸುವುದು. ಶಹಾಪುರ ತಾಲೂಕನ್ನು ಗೋಗಿ, ಶಹಾಪುರ, ದೋರನಹಳ್ಳಿ ಹಿರಿಹಯ್ಯಾಳ ಮತ್ತು ವಡಗೇರಾ ಎಂದು ಐದು ಹೋಬಳಿಗಳಾಗಿ ವಿಂಗಡಿಸಲಾಗಿದೆ. ಸಮುದ್ರ ಮಟ್ಟದಿಂದ ೧೪೦೦ ಅಡಿ (೪೨೭ ಮೀಟರಗಳು) ಎತ್ತರದಲ್ಲಿದ್ದು ಉತ್ತರ ಅಕ್ಷಾಂಶ ೧೬° ಯಿಂದ ೧೬°-೫೩° ಮತ್ತು ಪೂರ್ವ ರೇಖಾಂಶ ೭೬°-೫೯° ಯಿಂದ ೭೭°-೧೨°ರವರೆಗೆ ವ್ಯಾಪಿಸಿರುವ ಈ ತಾಲೂಕಿನ ವಿಸ್ತೀರ್ಣ ೧೬೯೪ ಚ.ಕಿ.ಮೀ.ಗಳಷ್ಟಿದೆ ಎಂದು ತಿಳಿದುಬರುತ್ತದೆ (ಹಕ್ಕಿ, ಡಿ ಎನ್: ೧೯೮೬:೩-೪).

೨೦೧೧ರ ಜನಗಣತಿಯ ಪ್ರಕಾರ ಶಹಾಪೂರ ತಾಲೂಕಿನ ಜನಸಂಖ್ಯೆ ೨೯೩.೫೧೮ ಇದೆ. ಇದರ ಪೈಕಿ ೨೪೯.೮೧೯ ಗ್ರಾಮ ವಾಸಿಗಳು. ೪೩.೬೯೯ ಜನರು ನಗರ ವಾಸಿಗಳಾಗಿದ್ದು ತಾಲೂಕಿನ ಜನಸಾಂದ್ರತೆ ಪ್ರತಿ ಚ. ಕಿ.ಮೀ ಗೆ ೧೫೫ರಷ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ಪುರುಷರ ಸಂಖ್ಯೆ ೧೪೮.೩೧೯ ಸ್ತ್ರೀಯರ ಸಂಖ್ಯೆ ೧೪೫.೧೯೯ ಇದೆ. ಶಹಾಪುರ ತಾಲೂಕಿನಲ್ಲಿ ಒಟ್ಟು ೧೫೭ ಹಳ್ಳಿಗಳಿದ್ದು ಜನವಸತಿ ಇರದ ಹಳ್ಳಿಗಳ ಸಂಖ್ಯೆ ೧೦. ಜೂನ್ ತಿಂಗಳಿಂದ ಸೆಪ್ಟಂಬರ್ ವರೆಗೆ ನೈರುತ್ಯ ಮಾರುತಗಳು ಬೀಸುವುದರಿಂದ ಅದು ಮುಂಗಾರು ಮಳೆಗಾಲ, ಅಕ್ಟೋಬರ್ ನವೆಂಬರ್ ಹಿಂಗಾರು ಮಳೆಗಾಲವಾಗಿದ್ದು, ಡಿಸೆಂಬರ್

ನಿಂದ ಫೆಬ್ರವರಿಯವರೆಗೆ ಹವೆ ತಂಪಾಗಿರುತ್ತದೆ. ಮಾರ್ಚ್‌ನಿಂದ ಮೇ ತಿಂಗಳವರೆಗೆ ಬಿಸಿಲು ಪ್ರಖರತೆಯು ತೀಕ್ಷ್ಣವಾದ ಸಹಿಸಲಸಾಧ್ಯವಾದ ಸೆಖೆ ಇರುತ್ತದೆ. ಈ ತಾಲೂಕು ಉಷ್ಣವಲಯದಲ್ಲಿದ್ದು ತಾಲೂಕಿನಲ್ಲಿ ಐದು ವೃಷ್ಟಿ ಮಾಪನ ಕೇಂದ್ರಗಳಿವೆ. ತಾಲೂಕಿನಲ್ಲಿ ಮಳೆ ಪ್ರಮಾಣ ೭೬೯.೯ ಮಿ.ಮೀ. ಎಂದಿದೆ. ಆದರೆ ವಾಸ್ತವಿಕವಾದ ಮಳೆಯ ವಾಸ್ತವಿಕ ಸರಾಸರಿ ಪ್ರಮಾಣ ೬೨೪.೫ ಮಿ.ಮೀಗಳಲ್ಲಿ ಆಗುತ್ತದೆ.

ನದಿ ಬೆಟ್ಟ ಅರಣ್ಯ : ಕೃಷ್ಣಾ ಮತ್ತು ಭೀಮಾ ಈ ತಾಲೂಕಿನ ಮುಖ್ಯ ನದಿಗಳು. ತಾಲೂಕಿನ ದಕ್ಷಿಣದಲ್ಲಿ ತಾಲೂಕಿನ ಗಡಿಯಾಗಿ ಹರಿಯುವ ಈ ಕೃಷ್ಣಾ ನದಿ ರಾಯಚೂರು ಜಿಲ್ಲೆಯ ದೇವದುರ್ಗ ಮತ್ತು ರಾಯಚೂರು ತಾಲೂಕುಗಳನ್ನು ಬೇರ್ಪಡಿಸಿದೆ. ಭೀಮನದಿ ತಾಲೂಕಿನ ಉತ್ತರದಿಂದ ಪೂರ್ವಕ್ಕೆ ಹರಿದು ಅನಂತರ ತಾಲೂಕಿನ ಆಗ್ನೇಯ ದಿಕ್ಕಿನಲ್ಲಿರುವ ಸಂಗಮದ ಬಳಿ ಕೃಷ್ಣಾ ನದಿಯನ್ನು ಸೇರುತ್ತದೆ.

ಭೀಮಾ ಮತ್ತು ಕೃಷ್ಣಾ ನದಿಗಳ ಇಕ್ಕೆಲಗಳಲ್ಲಿ ಫಲವತ್ತಾದ ಎರೆಭೂಮಿಯು ಇದ್ದು ಕೃಷಿಗೆ ಯೋಗ್ಯವಾದ ಭೂಮಿ ಇದಾಗಿದೆ. ತಾಲೂಕಿನಲ್ಲಿ ಅನೇಕ ಸಣ್ಣ-ಪುಟ್ಟ ತೊರೆಗಳು, ಕೆರೆಗಳು ಇದ್ದುದರಿಂದ ಅಂತರ್ಜಲ ಹೆಚ್ಚಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಶಹಾಪುರ ತಾಲೂಕಿನ ಬಹಳಷ್ಟು ಪ್ರದೇಶವು ನೀರಾವರಿಗೆ ಒಳಪಟ್ಟಿದೆ. ಇದರಿಂದಾಗಿಯೂ ನೀರಿನ ಅನುಕೂಲತೆ ಹೊಂದಿದೆ.

ಶಹಾಪುರ ನಗರದಿಂದ ಪಶ್ಚಿಮಾಭಿಮುಖವಾಗಿ ಸುಮಾರು ಒಂದುವರೆ ಕಿ.ಮೀ. ದೂರದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಇಲಾಖೆಯ ಕಾರ್ಯಾಲಯವಿದೆ. ಶಹಾಪುರದಿಂದ ಆರಂಭವಾದ ಸಗರಾದ್ರಿ ಪರ್ವತ ಅಥವಾ ಶಹಾಪುರದ ಗುಡ್ಡವು ಸುಮಾರು ೫ ಕಿ.ಮೀ.ವರೆಗೆ ವ್ಯಾಪಿಸಿದೆ. ಈ ಬೆಟ್ಟದ ವೈಶಿಷ್ಟ್ಯವೆಂದರೆ ಅನೇಕ ಚಿಕ್ಕಪುಟ್ಟ ಗುಡ್ಡಗಳು ಕೂಡಿ ನೋಡಲು ಒಂದೇ ಗುಡ್ಡ ಎಂಬಂತೆ ಭಾಸವಾಗುತ್ತದೆ(ಕರದಳ್ಳಿ ಚಂದ್ರಕಾಂತ: ೨೦೦೮:೭).

ನಗರದಲ್ಲಿರುವ ಕೆ.ಪಿ.ಟಿ.ಸಿ.ಎಲ್. ಕಛೇರಿ ಎದುರುಗಡೆ ನಿಂತು ಗುಡ್ಡವನ್ನು ನೋಡಿದರೆ ಆಕಾಶಕ್ಕೆ ಮುಖ ಮಾಡಿಕೊಂಡು ಎದೆಯ ಮೇಲೆ ಕೈಯಿರಿಸಿಕೊಂಡು ಮಲಗಿರುವ ಬುದ್ಧನಂತೆ ಭಾಸವಾಗುವ ದೃಶ್ಯ ಕಂಡುಬರುತ್ತದೆ. ಶಹಾಪೂರದ ಸಮೀಪಕ್ಕೆ ಬಂದು ಹೋಗುವ ಪ್ರವಾಸಿಗರು ಈ ನಿಸರ್ಗದ ಕೌತುಕವಾದ ಮಲಗಿರುವ ಬುದ್ಧನ ದೃಶ್ಯವನ್ನು ನಿಂತು ನೋಡಿ ಆನಂದವನ್ನು ಅನುಭವಿಸುತ್ತಾರೆ., ಇದು ನಿಸರ್ಗದ ಕಲಾ ವೈಶಿಷ್ಟ್ಯತೆಗೆ ಸಾಕ್ಷಿಯಾಗಿದೆ. ಶಹಾಪೂರ ಗುಡ್ಡದಲ್ಲಿ ಸೀತಾಫಲ ಗಿಡಗಳು ಇವೆ. ಗುಡ್ಡಕ್ಕೆ ಗುಡ್ಡವೆ ಹಸಿರು ಹೊದಿಸಿದಂತೆ ಕಾಣುತ್ತದೆ. ಒಂದು ಜೋರಾದ ಮಳೆ ಬಿದ್ದರೆ ಸಾಕು ಸೀತಾಫಲ ಗಿಡಗಳು ಸುಮಧುರ ಕಂಪಿನ ಸುವಾಸನೆಯನ್ನು ಸೂಸುತ್ತವೆ. ಸೀತಾಮಾತೆಯು ಈ ಬೆಟ್ಟದ ಹಣ್ಣನ್ನು ಸವಿದು ರುಚಿಗೆ ಮಾರು ಹೋಗಿದ್ದುದರಿಂದ ಈ ಫಲಕ್ಕೆ ಸೀತಾಫಲ ಎಂಬ ಹೆಸರು ಬಂದಿದೆಯೆಂಬ ಪ್ರತೀತಿ ಇದೆ. ಗುಡ್ಡದಲ್ಲಿ ತಾವರಕೆರೆ, ಮಂದಾಕಿನಿ ಸರೋವರ ಇವೆ. ಅಲ್ಲಲ್ಲಿ ನೈಸರ್ಗಿಕವಾದ ನೀರಿನ ಬಾವಿಗಳು, ಝರಿಗಳು, ಒರತೆಗಳು, ಕೆರೆಗಳೋಪಾದಿಯಲ್ಲಿ ನೀರು ಲಭ್ಯವಿದೆ.

ಖನಿಜ ಸಂಪತ್ತು : ಶಹಾಪುರ ತಾಲೂಕಿನಲ್ಲಿರುವ ಖನಿಜ ಸಂಪತ್ತೆಂದರೆ ಮುಖ್ಯವಾಗಿ ಕಲ್ಲಿನಗಣಿ. ತನ್ನ ಒಡಲಾಳದಲ್ಲಿ ಅಡಗಿರುವ ಹಾಸುಗಲ್ಲುಗಳಿಗೆ ಶಿರವಾಳ ಕಲ್ಲುಗಳೆಂದೆ ಹೆಸರಾಗಿವೆ. ನೆಲಹಾಸಲು ಈ ಕಲ್ಲುಗಳನ್ನು ಉಪಯೋಗಿಸುತ್ತಾರೆ. ಬಾಂಡ ಕಲ್ಲುಗಳು ಮನೆಕಟ್ಟಲು ಉಪಯೋಗಿಸುತ್ತಾರೆ. ಮನೆಯ ತಲೆ ಬಾಗಿಲು ಮುಂದಿನ ಸಿಂಗಾರಕ್ಕಾಗಿಯೂ ಶಿರವಾಳ ಕಲ್ಲಿನಲ್ಲಿ ವಿವಿಧ ನಮೂನೆಯ ಶಿಲಾಕೃತಿಗಳನ್ನು ಮಾಡುತ್ತಾರೆ. ತಾಲೂಕಿನ ಹಳ್ಳಿಗಳಲ್ಲಿ ಈ ತರದ ಮನೆಗಳನ್ನು ನಾವು ನೋಡಬಹುದಾಗಿದೆ.

ತಾಲೂಕಿನ ೨೫ ಪ್ರತಿಶತ ಸುಣ್ಣದ ಕಲ್ಲು ಗೋಗಿ, ದೋರನಹಳ್ಳಿ, ಮದ್ರಿಕಿ ಮುಡಭೂಳ ಗ್ರಾಮಗಳ ಸುತ್ತಮುತ್ತ ದೊರಕುತ್ತಿದ್ದು. ಈ ತಾಲೂಕು ಸುಣ್ಣದ ಕಲ್ಲಿನ ಕಣಜವೆಂದು ಹೇಳಬಹುದು. ಈ ತಾಲೂಕಿನಲ್ಲಿ ದೊರಕುವ ವಿಫುಲವಾದ ಸುಣ್ಣದ ಕಲ್ಲುಗಳನ್ನು ಬಳಸಿಕೊಂಡು ಸರ್ಕಾರ ಸಿಮೆಂಟ್ ಕಾರ್ಖಾನೆಗಳನ್ನು ಸ್ಥಾಪಿಸಿದಲ್ಲಿ ಸ್ಥಳೀಯರಿಗೆ ಅನುಕೂಲವಾಗುವುದಲ್ಲದೆ, ಸರ್ಕಾರಕ್ಕೆ ಆರ್ಥಿಕ ಲಾಭದ ಜೊತೆಗೆ ಸಿಮೆಂಟ್ ಕೊರತೆಯನ್ನು ಈ ತಾಲೂಕು ನೀಗಿಸಬಲ್ಲದು. ಅದೇ ರೀತಿ ರಸ್ತಾಪುರ ಸುತ್ತಮುತ್ತಲ ಪ್ರದೇಶದಲ್ಲಿ ಪಿಂಕ್ ಗ್ರಾನೈಟ್ ಶಿಲೆ ಸಾಕಷ್ಟು ಪ್ರಮಾಣದಲ್ಲಿದ್ದು ಈ ಕಲ್ಲಿಗೆ ಬೇರೆ ಕಡೆ ತುಂಬಾ ಬೇಡಿಕೆ ಇರುವುದಲ್ಲದೆ ಹೊರದೇಶದಲ್ಲೂ ಈ ಪಿಂಕ್ ಗ್ರಾನೈಟ್ ಕಲ್ಲಿಗಾಗಿ ಬೇಡಿಕೆ ಇದೆ. ರಾಜ್ಯ ಸರ್ಕಾರ ಇದರ ಸದುಪಯೋಗ ಪಡೆದುಕೊಳ್ಳುವಲ್ಲಿ ಆಸಕ್ತವಾದರೆ ರಾಜ್ಯಕ್ಕೆ ಆರ್ಥಿಕವಾಗಿ ತುಂಬಾ ಲಾಭವುಂಟು. ತಾಲೂಕಿನ ಕೆರೆಗಳಲ್ಲಿ ಎರೆಮಣ್ಣು ಹಾಗೂ ಕೆಂಪು ಮಿಶ್ರಿತ ಮಣ್ಣು ಲಭ್ಯವಿರುವುದರಿಂದ ಕುಂಬಾರರಿಗೆ ಅನುಕೂಲಕರವಾಗಿದೆ. ಶಹಾಪುರ ನಗರದಲ್ಲಿ ಒಂದು ಕುಂಬಾರ ಓಣಿಯೇ ಇದೆ. ಇದು ಊರಿನ ಮಧ್ಯೆ ಭಾಗದಲ್ಲಿದೆ. ಮಡಿಕೆ, ಕುಡಿಕೆಗಳನ್ನು ಚೆನ್ನಾಗಿ ಮಾಡುತ್ತಾರೆ. ಇತ್ತೀಚೆಗೆ ಫಲವತ್ತಾದ ಮಣ್ಣಿನಿಂದ ಇಟ್ಟಿಗೆ ಉದ್ಯಮವು ಭರದಿಂದ ಸಾಗಿದೆ. ಶಹಾಪುರದ ಹೊರವಲ್ಲಯದಲ್ಲಿ (ಒಂದು ಕಿ.ಮಿ. ದೂರದ) ಇಟ್ಟಿಗೆ ಭಟ್ಟಿಗಳು ಕಣ್ಣಿಗೆ ಬೀಳುತ್ತವೆ. ಇದರಿಂದಾಗಿ ದುಡಿಯುವ ವರ್ಗಕ್ಕೆ ಕೆಲಸ ಹಾಗೂ ಕಟ್ಟಡಗಳನ್ನು ಕಟ್ಟುವರಿಗೆ ಸ್ಥಳೀಯವಾಗಿ ತಯಾರಾದ ಇಟ್ಟಿಗೆಗಳು ಸಿಗುತ್ತವೆ.

ಇತ್ತೀಚಿನ ಸಂಶೋಧನೆಯ ಪ್ರಕಾರ ಶಹಾಪೂರ ತಾಲೂಕಿನ ಗೋಗಿ ಗ್ರಾಮದಲ್ಲಿ ಯೂರೆನಿಯಂ ಪತ್ತೆಯಾಗಿದೆ. ಇದರಿಂದಾಗಿ ಶಹಾಪುರ ಸುತ್ತಮುತ್ತಲಿನ ಭೂಮಿಗಳಿಗೆ ತುಂಬಾ ಬೇಡಿಕೆ ಇರುವುದು ಕಂಡುಬರುತ್ತದೆ. ಈ ಎಲ್ಲಾ ಖನಿಜ ಸಂಪತ್ತಿನಿಂದಾಗಿ ಶಹಾಪುರವು ಅಭಿವೃದ್ಧಿಯತ್ತ ಸಾಗುತ್ತಲಿದೆ.

ಜನ ವರ್ಗಗಳು : ತಾಲೂಕು ಕೇಂದ್ರವಾಗಿ ಬೆಳೆದಿರುವ ಶಹಾಪೂರದಲ್ಲಿ ವಿವಿಧ ಜನವರ್ಗಗಳು ಇವೆ. ದಲಿತ, ಲಿಂಗಾಯಿತ, ಕಬ್ಬಲಿಗ, ಕುರುಬ, ಬೇಡ, ಬ್ರಾಹ್ಮಣ, ಪಂಚಾಳ, ಜೈನ, ದೇವಾಂಗ, ಮುಸ್ಲಿಂ, ರಜಪೂತ, ಕ್ಷತ್ರಿಯ, ಮರಾಠ, ಈಳಿಗೇರ, ಸ್ವಕುಲ ಸಾಳಿ ಮುಂತಾದ ಜಾತಿ ಉಪಜಾತಿಯವರು ಸೌಹಾರ್ದದಿಂದ ಬಾಳಿ ಬದುಕುತ್ತಿದ್ದಾರೆ. ಕೃಷಿಯ ಜೊತೆಗೆ ಕಮ್ಮಾರಿಕೆ ಬಡಿಗೆತನ ಅಕ್ಕಸಾಲಿಗತನ ಮುಂತಾದ ಕೆಲಸ ಕಾರ್ಯಗಳನ್ನು ಮಾಡುತ್ತ ತಮ್ಮ ಜೀವನ ಸಾಗಿಸುತ್ತಿದ್ದಾರೆ.

ಶಹಾಪುರ ಪಟ್ಟಣದಲ್ಲಿ ಇತರ ಜನ ವರ್ಗಗಳು ಇರುವಂತೆ ಅಲೆಮಾರಿ ಜನರು ಸಹ ವಾಸವಾಗಿದ್ದಾರೆ. ನಗರದ ಕೆಲವು ಬಯಲು ಪ್ರದೇಶಗಳಲ್ಲಿ ಗುಡಾರಗಳನ್ನು ಹಾಕಿಕೊಂಡು ವಾಸಿಸುತ್ತಿದ್ದಾರೆ. ಇವರು ಮೊದಲು ಭಿಕ್ಷಾಟನೆ ಮಾಡಿ ಜೀವಿಸುತ್ತಿದ್ದರು. ಇತ್ತೀಚಿಗೆ ಭಿಕ್ಷಾಟನೆ ಕಡಿಮೆ ಮಾಡಿ ವ್ಯಾಪಾರ ಮತ್ತು ವಿವಿಧ ವೃತ್ತಿಯಲ್ಲಿ ತೊಡಗಿಕೊಂಡು ಜೀವನ ಸಾಗಿಸುತ್ತಿದ್ದಾರೆ.

ಆಹಾರ : ಬಿಸಿಲುನಾಡಿನ ಹಾಗೂ ಬಯಲು ಸಿಮೇಯ ಜನ ಇಲ್ಲಿಯ ಬೆಳೆಯಂತೆ ಆಹಾರ ಪದ್ಧತಿ ಇದೆ. ತಾಲೂಕಿನ ಬೆಳೆ ಬಿಳಿಜೋಳ, ತೊಗರಿ, ಶೆಂಗಾ, ಸೂರ್ಯಪಾನ, ಹತ್ತಿ, ಸಜ್ಜೆ, ಗೋಧಿ, ನವಣೆ, ಹೆಸರು, ಅಲಸಂದಿ, ಅವರೆ, ಮೆಟಗಿ ಬೆಳೆಗಳನ್ನು ಬೆಳೆಯುತ್ತಾರೆ. ಇತ್ತೀಚೆಗೆ ಕೃಷ್ಣಾ ಮೆಲ್ದಂಡೆ ಯೋಜನೆಯಿಂದಾಗಿ ತಾಲೂಕಿನ ಪ್ರಮುಖ ಬೆಳೆ ಭತ್ತವಾಗಿದೆ.

ಇಲ್ಲಿನ ಜನ ಬೇಳೆಸಾರು, ಅನ್ನ, ಕಾಯಿಪಲ್ಲೆ, ಕಾಳುಗಳನ್ನು ಬಳಸುತ್ತಾರೆ. ಕಡಕ್ ರೊಟ್ಟಿ, ಪುಂಡಿಪಲ್ಲೆ, ಸೇಂಗಾ ಚಟ್ನಿ, ಮೊಸರು ಇಲ್ಲಿನ ಜನಕ್ಕೆ ಅಚ್ಚುಮೆಚ್ಚಿನ ಊಟವಾಗಿದೆ. ತಾಲೂಕಿನಲ್ಲಿ ಕನ್ನಡ ಭಾಷೆಯೊಂದಿಗೆ ಉರ್ದು, ಮರಾಠಿ, ಹಿಂದಿ ಮಾತನಾಡುವವರು ಇದ್ದಾರೆ. ದಿನನಿತ್ಯದ ವ್ಯವಹಾರಗಳಲ್ಲಿ ಕನ್ನಡ ಉರ್ದು ಭಾಷೆಗಳನ್ನು ಬಳಸುತ್ತಾರೆ.

ನೀರಾವರಿ ಯೋಜನೆ : ತಾಲೂಕಿನಲ್ಲಿ ವಾರ್ಷಿಕ ಮಳೆಯ ಪ್ರಮಾಣ ಅತಿ ಕಡಿಮೆಯಾಗಿದ್ದು ಈ ಪ್ರದೇಶ ಸದಾ ಬರಗಾಲ ಪೀಡಿತವಾಗಿ ಆರ್ಥಿಕವಾಗಿ ಹಿಂದುಳಿದುದೆ. ಆದರೆ ಕೃಷ್ಣಾ ಮೇಲ್ದಂಡೆ ಯೋಜನೆಯ ಫಲವಾಗಿ ಕೃಷ್ಣಾ ನದಿಯ ನೀರು ತಾಲೂಕಿನ ಜನಕ್ಕೆ ಸಿಗುತ್ತಿದೆ. ಈ ಯೋಜನೆ ನಾಡಿನ ದೊಡ್ಡ ಯೋಜನೆಯಾಗಿದ್ದು ನಾರಾಯಣಪುರ ಎಡದಂಡೆ ನಾಲೆಯಿಂದ ಹರಿದು ಬರುವ ನೀರು ೭೬ ಕಿ.ಮೀ. ಶಹಾಪುರ ಉಪ ಕಾಲುವೆ ಮತ್ತು ೪೯ ಕಿ.ಮೀ. ಮುಡಬುಳ ಉಪಕಾಲುವೆಗಳ ಮುಖಾಂತರ ಹಾಯ್ದು ತಾಲೂಕಿನ ಎರಡು ಲಕ್ಷ ೩೦ ಸಾವಿರ ಎಕರೆ ಭೂಮಿಗೆ ನೀರಾವರಿ ಸೌಕರ್ಯವನ್ನು ಒದಗಿಸಿದೆ. ಈ ನೀರಾವರಿ ವ್ಯವಸ್ಥೆಯಿಂದ ರೈತರು ತಮ್ಮ ಹೊಲಗಳಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆದು ಇತ್ತೀಚಿನ ದಿನಗಳಲ್ಲಿ ಆರ್ಥಿಕವಾಗಿ ಚೇತರಿಸಕೊಳ್ಳುತ್ತಿದ್ದಾರೆ.

ಶೈಕ್ಷಣಿಕ ಸ್ಥಿತಿಗತಿ : ಶಹಾಪುರ ತಾಲೂಕಿನಲ್ಲಿ ಹಿಂದೆ ಹಳೆಯ ಸಂಪ್ರದಾಯದಂತೆ ಶಿಕ್ಷಣ ಕಲಿಕೆಯ ಕಾರ್ಯವನ್ನು ದೇವಾಲಯ, ಮಠಗಳಿಂದಲೇ ಆರಂಭವಾಯಿತೆಂದು ತಿಳಿದು ಬರುತ್ತದೆ. ತರುವಾಯ ಹೈದ್ರಾಬಾದ್ ನಿಜಾಮರ ಆಳ್ವಿಕೆ ಬಂದ ನಂತರ ಇಲ್ಲಿಯ ಜನರು ಉರ್ದುಭಾಷೆಯನ್ನು ಶಾಲೆಗಳಲ್ಲಿ ಕಲಿಯಬೇಕಾಯಿತು. ಸ್ವಾತಂತ್ರ್ಯ ನಂತರ ಸಾರ್ವಜನಿಕ ಶಿಕ್ಷಣ ಇಲಾಖೆ ರೂಪುಗೊಂಡ ಮೇಲೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಒತ್ತು ಕೊಡಲಾಗಿದೆ. ಶಹಾಪೂರ ತಾಲೂಕಿನಲ್ಲಿ ೧೬೫ ಕಿರಿಯ ಪ್ರಾಥಮಿಕ ಶಾಲೆಗಳು, ೬೨ ಹಿರಿಯ ಪ್ರಾಥಮಿಕ ಶಾಲೆಗಳು, ೧೦ ಮಾದರಿ ಪ್ರಾಥಮಿಕ ಶಾಲೆಗಳು, ೩೫

ಪ್ರೌಢಶಾಲೆಗಳು, ೫ ಕಿರಿಯ ಮಹಾವಿದ್ಯಾಲಯಗಳು, ೨ ಪದವಿ ಕಾಲೇಜುಗಳು, ೧ ಕೃಷಿ ಕಾಲೇಜು (ಭೀಮರಾಯನ ಗುಡಿ)ಗಳು ಕಂಡುಬರುತ್ತವೆ. ಕೈಗಾರಿಕಾ ತರಬೇತಿ ಕೇಂದ್ರಗಳು ಜೆ.ಓ.ಡಿ.ಸಿ. ಕಲಿಕಾ ಕೇಂದ್ರಗಳು, ಇತ್ತೀಚೆಗೆ ಬಿ.ಸಿ.ಎ. ಕಾಲೇಜು ಹಾಗೂ ಮೊರಾರ್ಜಿ ವಸತಿ ಶಾಲೆಗಳು, ನವೋದಯ ವಿದ್ಯಾಲಯ ಶಹಾಪೂರ ಸಮೀಪವಿರುವ ಬೇವಿನಹಳ್ಳಿ ಹಾಗೂ ಹೋತಪೇಠಗಳಲ್ಲಿವೆ. ಇತ್ತೀಚೆಗೆ ಎರಡು ವರ್ಷದಿಂದ ಸಿದ್ಧಲಿಂಗೇಶ್ವರ ಶಿಕ್ಷಣ ಸಂಸ್ಥೆಯಿಂದ ಡಿ.ಇಡಿ. ಮತ್ತು ಬಿ.ಇಡಿ. ತರಬೇತಿ ಕೇಂದ್ರಗಳು ಆರಂಭಗೊಂಡು ಆ ಪ್ರದೇಶದ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಶಿಕ್ಷಕರಾಗುವ ಕನಸು ಕಾಣುತ್ತಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಶಹಾಪೂರ ಹಾಗೂ ಕೆಲವು ಗ್ರಾಮಗಳಲ್ಲಿ ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್ ವ್ಯವಸ್ಥೆ ಇದೆ. ಶಹಾಪೂರದಲ್ಲಿ ಸರ್ಕಾರಿ ಬಾಲಕರ ವಸತಿ ನಿಲಯವಿದ್ದು ೧೨೦ ವಿದ್ಯಾರ್ಥಿಗಳು ಲಾಭ ಪಡೆಯುತ್ತಿದ್ದಾರೆ. ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ೫೦ ವಿದ್ಯಾರ್ಥಿನಿಯರು ಇದ್ದಾರೆ.

ಹಿಂದುಳಿದ ವರ್ಗಗಳ (ಬಿ.ಸಿ.ಎಂ.) ವಸತಿ ನಿಲಯ, ಶಹಾಪೂರದಲ್ಲಿ ೭೫ ವಿದ್ಯಾರ್ಥಿಗಳಿಗೆ ಅವಕಾಶವಿದೆ. ಈ ವಸತಿ ನಿಲಯಗಳ ವ್ಯವಸ್ಥೆಯಿಂದಾಗಿ ಬಡ ವಿದ್ಯಾರ್ಥಿಗಳು ಶಿಕ್ಷಣವನ್ನು ಕಲಿಯಲು ಹೆಚ್ಚು ಪ್ರಯೋಜನಕಾರಿಯಾಗಿದೆ (ಕರದಳ್ಳಿ ಚಂದ್ರಕಾಂತ: ೨೦೦೮:೫೭-೮) ಎಂದೇ ಹೇಳಬಹುದು.

ಆರೋಗ್ಯ ಸೇವೆ : ಶಹಾಪುರದಲ್ಲಿ ತಾಲೂಕು ಆಸ್ಪತ್ರೆ ಇದೆ. ಈಗ ಇದನ್ನು ೧೦೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಸಾರ್ವಜನಿಕರಿಗೆ ಆರೋಗ್ಯ ಇಲಾಖೆಯು ತನ್ನ ಇಲಾಖೆಯ ವ್ಯಾಪ್ತಿಯಲ್ಲಿ ಆರೋಗ್ಯ ಸೇವೆಯನ್ನು ನೀಡುತ್ತಿದೆ. ವೈದ್ಯರಿದ್ದಾರೆ. ಔಷಧಿ ಇವೆ. ಸುಸಜ್ಜಿತ ಕಟ್ಟಡವಿದೆ. ನಿಸ್ವಾರ್ಥತೆಯಿಂದ ವೈದ್ಯರು ತಮ್ಮ ಸೇವೆಯನ್ನು ಜವಬ್ದಾರಿಯುತವಾಗಿ ನೀಡಿದರೆ ಬಡಜನರು ಹಾಗೂ ಇತರ ಕೆಳವರ್ಗದ ಜನರು ಆರೋಗ್ಯದ ಸದುಪಯೋಗವನ್ನು ಪಡೆದುಕೊಳ್ಳುವಂತಾಗುತ್ತದೆ.

ಶಹಾಪುರದಲ್ಲಿ ತಾಲೂಕು ಅಭಿವೃದ್ಧಿ ಮಂಡಳಿ, ವಿದ್ಯುತ್ ಮಂಡಳಿ ಕಛೇರಿ, ಪ್ರೌಢಶಾಲೆ, ಕಿರಿಯ ಮಹಾವಿದ್ಯಾಲಯ, ಪದವಿ ಕಾಲೇಜು, ಆಸ್ಪತ್ರೆ, ನಗರದಲ್ಲಿ ಕಾನೂನಿಗೆ ಸಂಬಂಧಿಸಿದಂತೆ ದಂಡಾಧಿಕಾರಿಯವರ ನ್ಯಾಯಾಲಯವಿದೆ. ಇತ್ತೀಚೆಗೆ ಸಿವಿಲ್ ನ್ಯಾಯಾಲಯ ಅಸ್ತಿತ್ವಕ್ಕೆ ಬಂದಿದ್ದು, ವಾರದಲ್ಲಿ ಮೂರು ದಿನಗಳ ಕಾಲ ಕಾರ್ಯ ನಿರ್ವಹಿಸುತ್ತಿದೆ.

ರಕ್ಷಣೆಗೆ ಸಂಬಂಧಿಸಿದಂತೆ ಶಹಾಪುರದಲ್ಲಿ ಕೇಂದ್ರ ಪೋಲಿಸ್ ಠಾಣೆಯೊಂದಿದೆ. ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದು ಇದರಿಂದ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗುತ್ತಿದೆ. ಜೊತೆಗೆ ಇದರ ಪ್ರಯೋಜನವನ್ನು ಜನರು ಪಡೆಯುತ್ತಿದ್ದಾರೆ.

೨.೨. ಅಲೆಮಾರಿಗಳ ಜೀವನ

ಅಲೆಮಾರಿ ಪದದ ಅರ್ಥ

ಮಾನವನ ಸಾಮಾಜಿಕ ವ್ಯವಸ್ಥೆಗೆ ದೀರ್ಘವಾದ ಇತಿಹಾಸವಿದೆ. ಅವರು ಮೊದಲು ಆದಿವಾಸಿಯಾಗಿದ್ದು, ಕಾಲ ಉರುಳಿದಂತೆ ಮೊದಲ ವೃತ್ತಿಗಳಿಂದ ಹೊರಬರುತ್ತಲೆ ಭಿನ್ನ ವೃತ್ತಿಗಳನ್ನು ಕಂಡುಕೊಂಡರು. ಜೊತೆಗೆ ವೈವಿಧ್ಯಮಯ ಬದುಕನ್ನು ಕಂಡುಕೊಂಡಿರುವುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಆದರೆ ಕೆಲವೊಂದು ಸಮುದಾಯಗಳು ಯಾವುದೇ ಸಾಂಸ್ಕೃತಿಕ ತಂತ್ರಜ್ಞಾನ, ಆಧುನಿಕ ಬಿರುಗಾಳಿ ಬೀಸಿದರೂ ಯಾವುದಕ್ಕೂ ಬಗ್ಗದೆ ತಮ್ಮ ಮೂಲ ಪರಂಪರೆಯೊಂದಿಗೆ ತಮ್ಮ ಸಾಂಸ್ಕೃತಿಕ ಕಲೆಯೊಂದಿಗೆ ಜೀವನವನ್ನು ಸಂದರ್ಭಗಳಿಗನುಸಾರವಾಗಿ ನಿರ್ವಹಿಸುತ್ತಾ ಬಂದಿವೆ. ಅನ್ಯಸಂಸ್ಕೃತೀಯ ಅನ್ಯಾಯವನ್ನು ಎದುರಿಸುತ್ತಾ ಪ್ರತ್ಯೇಕವಾಗಿ ಜೀವಿಸುತ್ತಿರುವ ಸಮುದಾಯಗಳೆ ಇವಾಗಿದ್ದು ಇವು ಜೀವನ ನಿರ್ವಹಣೆಗಾಗಿ ಒಂದು ಊರಿನಿಂದ ಇನ್ನೊಂದು ಊರಿಗೆ ವಲಸೆ ಹೋಗುತ್ತವೆ. ಹೀಗಾಗಿ ಇವುಗಳಿಗೆ ಅಲೆಮಾರಿ ಸಮುದಾಯಗಳು ಎಂದು ಕರೆಯಲಾಗುತ್ತದೆ.

ಜೀವನ ನಿರ್ವಹಣೆಗಾಗಿ ಉನ್ನತ ಹುದ್ದೆಗಳು ಹಾಗೂ ಉನ್ನತ ಪದವಿ ವ್ಯಾಸಂಗ ಮಾಡಿರುವ ಪರಿಣತರು, ದೇಶ ವಿದೇಶಗಳಲ್ಲಿ ತಿರುಗುವ ಉದ್ಯೋಗ ಮತ್ತು ಆಧುನಿಕ ವಿದ್ಯಾವಂತ ಜನ ಈ ಪದದ ಕಕ್ಷೆಗೆ ಬರುವುದಿಲ್ಲ. ನೌಕರಿಗಾಗಿ ತಮ್ಮ ಮೂಲ ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಿಬರುವ ಜನ ಸಮುದಾಯವು ಈ ಪದದ ಕಕ್ಷೆಗೆ ಬರುವುದಿಲ್ಲ. ವ್ಯಾಪಾರ ಉದ್ದೇಶಕ್ಕಾಗಿ ನೆಲೆನಿಂತು ಒಂದು ಸ್ಥಳದಿಂದ ಮತ್ತೊಂದು ಸ್ಥಳದಲ್ಲಿ ಪರಿಚಯಿಸುವ ಸಮುದಾಯಗಳು ಈ ಪದದ ಕಕ್ಷೆಗೆ ಬರುವುದಿಲ್ಲ.

ಗ್ರಾಮ ಮತ್ತು ನಗರ ಸಂಸ್ಕೃತಿಯ ಪ್ರಭಾವಕ್ಕೆ ಸಂಪೂರ್ಣ ಒಳಗಾಗದೆ ಅದರಿಂದ ದೂರವಿದ್ದು, ನಿರ್ಗತಿಕರಾಗಿ ಧಾರ್ಮಿಕ ಭಿಕ್ಷಾಟನೆ ಮಾಡುತ್ತಾ ಸ್ಮಶಾನ ಸಮಾನ ಸ್ಥಳಗಳಲ್ಲಿ ವಾಸಮಾಡುತ್ತಾ ಸಮುದಾಯದ ಕಾಯಕದೊಂದಿಗೆ ಪ್ರಾಣಿಗಳ ಬೇಟೆಯಾಡುತ್ತಾ ಇತರರಿಗಿಂತ ಭಿನ್ನ ರೀತಿಯಲ್ಲಿರುವ ಸಮುದಾಯಗಳನ್ನು ಅಲೆಮಾರಿ ಸಮುದಾಯಗಳೆನ್ನಬಹುದು. ಒಪ್ಪತ್ತಿನ ಊಟದ ಅನ್ವೇಷಣಯಲ್ಲಿ ೨೧ನೇ ಶತಮಾನದಲ್ಲಿಯೂ ಅಲೆದಾಡುವ ಸಾಮಾಜಿಕ ಅನಿವಾರ್ಯತೆಯನ್ನು ಅನುಭವಿಸುತ್ತಿರುವ ಸಮುದಾಯಗಳನ್ನು ಅಲೆಮಾರಿಗಳು ಎಂದು ಪರಿಭಾವಿಸಬಹುದಾಗಿದೆ.

ಅಲೆಮಾರಿ ಎಂಬ ಪದಕ್ಕೆ ತಮಿಳಿನಲ್ಲಿ ಪೊಕ್ಕೆನ್, ತುಳುವಿನಲ್ಲಿ ತೆಂಡುಳಿ, ತೆಲುಗಿನಲ್ಲಿ ತಿರುಗುಬೋತು, ಮಲೆಯಾಳಂನಲ್ಲಿ ತೆಂಟಿ, ಮರಾಠಿಯಲ್ಲಿ ಬೆಟಕ್ಯಾ, ಹಿಂದಿಯಲ್ಲಿ ಸಂಚಾರಿ ಘುಮೆಂತು, ಗ್ರೀಕ್‌ನಲ್ಲಿ ನೆಮಿನ್ (Nemin), ಲ್ಯಾಟೀನ್‌ನಲ್ಲಿ ನೋಮಾಸ (Nomas), ಇಂಗ್ಲೀಷ್‌ನಲ್ಲಿ ನೊಮ್ಯಾಡ (Nomad), ಜೊತೆಗೆ ಪರದೇಶಿ ನೆಲೆಯಿಲ್ಲದವರು ದೇಶ ಸಂಚಾರಿಗಳು, ಪರಸ್ಥಳದವರು, ಹೊರಗಡೆಯವರು, ಉಚಲ್ಯಾ ಜೀಪ್ಸಿ ಬೀಡು ಬಿಡುವವರು, ಗುಳೆ ಹೋಗುವವರು, ವಲಸಿಗರು, ಗಿರಿಜನರು, ಸನ್ಯಾಸಿಗಳು ಎಂಬ

ಇತ್ಯಾದಿ ಹೆಸರುಗಳಿಂದಲೂ ಕರೆಯಲಾಗುತ್ತದೆ. ಭಿಕ್ಷಾಟನಾ ವೃತ್ತಿಯ ಹಿನ್ನೆಲೆಯಲ್ಲಿ ಇವರನ್ನು ತಮಿಳಿನಲ್ಲಿ ಪಿಚ್ಚೈಕರಾ, ಹಿಂದಿಯಲ್ಲಿ ಭಿಕಾರಿ, ಕನ್ನಡದಲ್ಲಿ ಭಿಕ್ಷುಕರೆಂತಲೂ ಗುರುತಿಸಲಾಗುವುದು. ಜನಪದರು ಇವರನ್ನು ಗೋಸಾಯಿ ಜುಂಗಾಲಿ, ಬುಡ್ಗಜಂಗಮ, ಜೋಗಿ, ದಾಸಯ್ಯ ಎಂತಲೂ ಕರೆಯುವರು. ಮಾನವಶಾಸ್ತ್ರಜ್ಞರು ಆರಂಭದಲ್ಲಿ ಪಶುಪಾಲನೆಯ ಹಿನ್ನೆಲೆಯವರನ್ನು ಮಾತ್ರ ಅಲೆಮಾರಿ ಸಮುದಾಯದವರೆಂದು ಗುರುತಿಸಿದ್ದಾರೆ. ಎನ್ಸೈಕ್ಲೋಪಿಡಿಯಾ ಬ್ರಿಟಾನಿಕಾ ಪ್ರಕಾರ ಅಲೆಮಾರಿತನವು ಒಂದು ಜೀವನ ವಿಧಾನ ಬೇಟೆ ಮತ್ತು ಆಹಾರ ಸಂಗ್ರಹಣೆ, ಪಶುಪಾಲನೆ ಅಥವಾ ವ್ಯಾಪಾರಕ್ಕಾಗಿ ಮಾನವ ಒಂದೆಡೆ ನೆಲೆಯೂರದೇ ದಿಕ್ಕುದೆಸೆಯಿಲ್ಲದೆ ಕಾಲಕ್ರಮಾನುಸಾರದ ಅಲೆಯುವಿಕೆಯನ್ನು ಅಲೆಮಾರಿತನ ಎನ್ನಲಾಗುತ್ತದೆ (ಮೇತ್ರಿ ಕೆ ಎಂ: ೨೦೦೮).

ನಾಗರೀಕ ಸಮಾಜದಿಂದ ಬಹುದೂರ ಉಳಿದುಕೊಂಡು ಕಾಡು-ಗುಡ್ಡ, ಬೆಟ್ಟ-ಅರಣ್ಯ, ದುರ್ಗ ಕಣಿವೆಗಳ ಪ್ರದೇಶಗಳಲ್ಲಿ ಜೀವನ ಸಾಗಿಸುವವರಿಗೆ ಆದಿವಾಸಿಗಳು, ಇಲ್ಲವೆ ಅಲೆಮಾರಿಗಳೆಂದು ಕರೆಯುತ್ತಾರೆ. ಪ್ರಪಂಚದ ಎಲ್ಲಾ ಪ್ರದೇಶಗಳಲ್ಲಿಯೂ ಇಂತಹ ಸಾವಿರಾರು ಅಲೆಮಾರಿಗಳು ತಮ್ಮ ಅಲೆದಾಡುವಿಕೆಯ ಜೀವನವನ್ನು ಕಳೆಯುತ್ತಾ ಜೀವಿಸುತ್ತಿದ್ದಾರೆ.

ಒಂದು ಕಡೆ ತಮ್ಮದೆ ಆಗಿರುವ ಜನಸಮುದಾಯವನ್ನು ಹೊಂದಿರುವ ಮತ್ತು ಪ್ರತ್ಯೇಕವಾದ ಭಾಷೆ ಯನ್ನು ಮಾತನಾಡುವ ಜನಗಳಿಗೆ ನಾವು ಅಲೆಮಾರಿಗಳೆಂದು ಕರೆಯುತ್ತೇವೆ. ಅಲೆಮಾರಿ ಸಮುದಾಯಗಳು ಜಾತಿ ಶ್ರೇಣಿಯ ಕೆಳಗೆ ಬರುವವರಾಗಿದ್ದಾರೆ. ಆ ಮೂಲಕ ತಮ್ಮದೇ ಜೀವನ ಪದ್ಧತಿಯೊಂದಿಗೆ ಬದುಕನ್ನು ಅರಸಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆಯುತ್ತಿರುತ್ತಾರೆ. ಎಲ್ಲಿ ತಮಗೆ ಸ್ಮಶಾನ ಭಾಗ, ಊರಿನ ಕೊನೆಯ ಪ್ರದೇಶ, ನೀರು ಹರಿಯುವ ಸ್ಥಳ, ಶಾಲಾ ಮೈದಾನ, ಸಂತೆ, ರೈಲು ನಿಲ್ದಾಣ, ಬಸ್‌ನಿಲ್ದಾಣ, ಚಲನಚಿತ್ರ ಮಂದಿರಗಳ ಹಿಂಭಾಗ ಇತ್ಯಾದಿ ಸ್ಥಳಗಳಲ್ಲಿ ಕೆಲವು ದಿನಗಳವರೆಗೆ ಗುಡಾರಗಳನ್ನು ನಿರ್ಮಿಸಿ ಉಳಿದುಕೊಳ್ಳುವರು. ತರುವಾಯ ಅಲ್ಲಿಂದ ಮುಂದಿನ ಪ್ರದೇಶಗಳಿಗೆ ಸಂಚರಿಸುತ್ತಾ ಇರುತ್ತಾರೆ. ಈ ಚಲಿಸುವ ಬದುಕಿನ ಸಾಗಾಟದಲ್ಲಿ ಹಸಿವು, ನೋವು, ಹಿಂಸೆ, ಅವಮಾನಗಳು, ದುಃಖ ನಿಂದನೆಗಳೊಂದಿಗೆ ಕಷ್ಟಗಳನ್ನು ಅನುಭವಿಸಿ ತಮ್ಮ ಶ್ರೇಷ್ಠತೆ ಉಳಿಸಿಕೊಂಡು ನೆಲೆನಿಂತ ಸಮುದಾಯಗಳೊಂದಿಗೆ ಮುಖಾಮುಖಿ ಯಾಗಿ ಜೀವನ ನಡೆಸುತ್ತಿದ್ದಾರೆ.

ಅಲೆಮಾರಿಗಳ ಜೀವನ ಪರಿಚಯ

ಪ್ರಸ್ತುತ ಈ ಅಧ್ಯಯನದಲ್ಲಿ ಗುಲ್ಬರ್ಗಾ ಜಿಲ್ಲೆಯ ಶಹಾಪುರದಲ್ಲಿ ವಾಸಿಸಲು ಹವಣಿಸುತ್ತಿರುವ ೮ ಅಲೆಮಾರಿ ಸಮುದಾಯಗಳನ್ನು ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಆ ಸಮುದಾಯಗಳೆಂದರೆ ಪರಿಶಿಷ್ಟ ಜಾತಿಯ ೧. ಬುಡ್ಗಜಂಗಮ ೨. ಚೆನ್ನದಾಸರು ೩. ಕೊರಮ ೪. ಶಿಳ್ಳೇಕ್ಯಾತ ೫. ಸಿಂಧೊಳ್ಳು ಮತ್ತು ಹಿಂದುಳಿದ ವರ್ಗಗಳ ೧. ಬೈಲಪತ್ತಾರ ೨. ಘಿಸಾಡಿ ೩. ಹೆಳವರು. ಹೀಗೆ ಅಲೆಮಾರಿ ಸಮುದಾಯಗಳ

ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ, ಆಚರಣೆ, ನಂಬಿಕೆ, ಜೀವನ ವಿಧಾನಗಳನ್ನು ಕುರಿತು ಕ್ಷೇತ್ರಕಾರ್ಯದಲ್ಲಿ ಪಡೆದಂತಹ ಮಾಹಿತಿ ಹಾಗೂ ಅವರ ಸ್ಥಿತಿ-ಗತಿಗಳನ್ನು ಚರ್ಚಿಸಲಾಗಿದೆ. ಅಲೆಮಾರಿಗಳ ಜೊತೆ ನಡೆಸಿದಂತಹ ಕ್ಷೇತ್ರಕಾರ್ಯ ಸಂದರ್ಶನದಲ್ಲಿ ಅವರು ನೀಡಿದಂತಹ ಮಾಹಿತಿಗಳನ್ನು ಆಧಾರವಾಗಿಟ್ಟುಕೊಂಡು ಅವರ ಸಮುದಾಯದ ಕುರಿತು ಅಧ್ಯಯನದಲ್ಲಿ ವಿವರಿಸಲಾಗಿದೆ.

ಅಲೆಮಾರಿ ಸಮುದಾಯಗಳ ಚಾರಿತ್ರಿಕ ಹಿನ್ನೆಲೆ

ಅಲೆಮಾರಿ ಸಮುದಾಯಗಳನ್ನು ಕುರಿತು ನೋಡುವಾಗ ಆ ಸಮುದಾಯಗಳ ಆಚರಣೆ ಸಂಪ್ರದಾಯ ಗಳನ್ನು ನೋಡಬೇಕಾಗುತ್ತದೆ. ಹಾಗೂ ಅವರ ಸಂಸ್ಕೃತಿಯನ್ನು ಅರಿಯಬೇಕಾಗುತ್ತದೆ. ಯಾವ ಸಮುದಾಯಗಳೇ ಆಗಲಿ ಜನಾಂಗವೇ ಆಗಲಿ ಅವುಗಳಿಗೆ ತನ್ನದೆಯಾದ ಚಾರಿತ್ರಿಕ ಹಿನ್ನೆಲೆ ಇರಲೇಬೇಕು. ಮಾನವ ಹುಟ್ಟಿನಿಂದ ಸಾಯುವವರೆಗೂ ತನ್ನ ಜೀವಿತದಲ್ಲಿ ಹಲವು ಘಟ್ಟಗಳನ್ನು ತಲುಪುತ್ತಾನೆ. ಅವನ್ನೆಲ್ಲಾ ಸಂಪೂರ್ಣವಾಗಿ ಬಳಸಿಕೊಂಡಾಗ ಸಮಾಜ ಪರಿಚಯವಾಗುತ್ತದೆ. ಅವುಗಳಲ್ಲಿ ಸಮಾಜವು ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ.

ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರ ಎಂಬ ಜ್ಞಾನ, ಶಿಸ್ತುಗಳು ಮನುಷ್ಯನ ಎರಡು ಕಣ್ಣುಗಳಿದ್ದಂತೆ ಅವರೆಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಈ ಎರಡು ಶಾಸ್ತ್ರಗಳ ಗುರಿ ಮಾತ್ರ ಈ ನಗರದಲ್ಲಿ ವಾಸಿಸುವ ಅಲೆಮಾರಿ ಸಮುದಾಯಗಳ ಸ್ಥಿತಿ ಹೆಚ್ಚು ಕಡಿಮೆ ಒಂದೇ ರೀತಿಯಾಗಿದೆ. ಇನ್ನೂ ಕೆಲವೊಮ್ಮೆ ಸೂಕ್ಷ್ಮವಾದ ವ್ಯತ್ಯಾಸಗಳನ್ನು ಕಾಣುತ್ತೇವೆ. ಮಾನವ ಮತ್ತು ಸಮಾಜ ಎರಡು ಬೇರ್ಪಡಿಸಲಾಗದ ಶಬ್ದಗಳಾಗಿವೆ. ಇವೆರಡಕ್ಕೆ ನಿಕಟಸಂಪರ್ಕ ಹೊಂದಿದ್ದರಿಂದ ತನ್ನ ವಿಶೇಷತೆಯನ್ನು ಪಡೆದುಕೊಂಡಿವೆ. ಮಾನವನನ್ನು ಕುರಿತು ಅಧ್ಯಯನ ಮಾಡುವುದಾದರೆ ಅದು ಮಾನವಶಾಸ್ತ್ರ ಸಂಸ್ಕೃತಿ ಮತ್ತು ಸಮಾಜವನ್ನು ಕುರಿತು ಮಾಡುವ ಅಧ್ಯಯನ ಸಮಾಜಶಾಸ್ತ್ರವಾಗಿ ಕಂಡುಬರುತ್ತದೆ.

ಒಂದು ಅಲೆಮಾರಿ ಸಮುದಾಯ ಮತ್ತೊಂದು ಅಲೆಮಾರಿ ಸಮುದಾಯಗಿಂತ ವ್ಯತ್ಯಾಸವಿದೆ. ಅಲೆಮಾರಿಗಳು ಹಲವಾರು ಒತ್ತಡಗಳಿಗೆ ಒಳಗಾಗಿ ಬದಲಾವಣೆಗೆ ಒಳಗಾಗುತ್ತಿದ್ದಾರೆ. ಅಲೆಮಾರಿ ಸಮುದಾಯಗಳ ಕುರಿತು ಚಿಂತನೆಗೆ ತೊಡಗಬೇಕಾಗಿದ್ದು ಅತ್ಯಂತ ಅವಶ್ಯಕ. ಅವುಗಳ ಮೂಲ ಸ್ವರೂಪಗಳನ್ನು ಅರಿಯಲು ನಾವು ಅಧ್ಯಯನದಲ್ಲಿ ಅಲೆಮಾರಿ ಸಮುದಾಯಗಳ ಚಾರಿತ್ರಿಕವಾದ ಹಿನ್ನೆಲೆಯನ್ನು ತಿಳಿದುಕೊಳ್ಳುವುದು ಅತ್ಯಂತ ಅಗತ್ಯವಾಗಿದೆ.

ಅಲೆಮಾರಿ ಸಮುದಾಯಗಳ ಸಾಮಾಜಿಕ ಸ್ಥಿತಿಗತಿ

ಮಾನವ ಸಮಾಜವು ಸಾಮಾಜಿಕ ಸಂಬಂಧಗಳ ಬಲೆ. ವ್ಯಕ್ತಿಗಳ ನಡುವೆ ಪರಸ್ಪರ ಸಂಬಂಧ ಏರ್ಪಡುವ ಪ್ರಕ್ರಿಯೆಯು ವ್ಯವಸ್ಥೆಯೊಂದನ್ನು ಹೋಲುತ್ತಿದ್ದು ಅಂತಹ ವ್ಯವಸ್ಥೆಯನ್ನು 'ಸಾಮಾಜಿಕ

ವ್ಯವಸ್ಥೆ' ಎಂದು ಕರೆಯಬಹುದಾಗಿದೆ. ಇದೊಂದು ಸಮಾಜದ ಘಟಕಗಳಾದ ಅಥವಾ ಭಾಗಗಳಾದ ಸಾಮಾಜಿಕ ಸಂಬಂಧಗಳ ಕ್ರಮಬದ್ಧ ವ್ಯವಸ್ಥೆಯಾಗಿದೆ. ಅಲೆಮಾರಿ ಸಮುದಾಯಗಳ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯು ಲೋಕರೂಢಿಗಳು, ಸಂಪ್ರದಾಯಗಳು, ಪರಸ್ಪರ ಸಹಕಾರ, ವಿವಿಧ ನಿಯಮಗಳು, ವರ್ಗಗಳು, ಉಡುಗೆ-ತೊಡುಗೆ, ಆಹಾರ, ವಸತಿ, ವೃತ್ತಿ, ಬೆಡಗುಗಳು, ವಿವಾಹ, ಕುಟುಂಬ, ನ್ಯಾಯ ಪದ್ಧತಿ ಹಾಗೂ ಸಾಮಾಜಿಕ ನಿಯಂತ್ರಣವನ್ನೊಳಗೊಂಡ ಕ್ರಮಬದ್ಧವಾದ ವ್ಯವಸ್ಥೆಯಾಗಿದೆ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಇತರೆ ಹಲವಾರು ಉಪ ವ್ಯವಸ್ಥೆಗಳಿದ್ದು, ಇವೆಲ್ಲವೂ ತನ್ನದೇ ಆದ ವಿಶಿಷ್ಟ ಕಾರ್ಯಗಳನ್ನು ನಿರ್ವಹಿಸುತ್ತವೆ. ಈ ಕಾರ್ಯ ನಿರ್ವಹಣೆಯಲ್ಲಿ ಕ್ರಮಬದ್ಧತೆ ಇರುವುದನ್ನು ಕಾಣಬಹುದಾಗಿದೆ.

ಅಲೆಮಾರಿ ಸಮುದಾಯಗಳ ಆರ್ಥಿಕ ಸ್ಥಿತಿಗತಿ

ಆರ್ಥಿಕ ಸಂಸ್ಥೆ ಎನ್ನುವ ಒಂದು ವ್ಯವಸ್ಥೆ ಸಮಾಜ ಮತ್ತು ಸಮುದಾಯದ ಉಳಿವಿಗೆ ಬೆಳವಣಿಗೆಗೆ ಹಾಗೂ ಭವಿಷ್ಯದ ಮುಂದುವರಿಕೆಗೆ ಪ್ರಮುಖವಾದ ಜವಾಬ್ದಾರಿಯನ್ನು ಹೋರುವಂತದ್ದಾಗಿದೆ. ಇದರ ಕಾರ್ಯ ಸಮಾಜದ ಆಯಾಯ ಸಮುದಾಯದ ಸದಸ್ಯರ ಜೀವನಕ್ಕೆ ಅವಶ್ಯವಾದ ಹಾಗೂ ಅಭಿವೃದ್ಧಿಗೆ ಪೂರಕವಾದ ವಸ್ತುಗಳು ಹಾಗೂ ಸೇವೆಗಳನ್ನು ಒದಗಿಸುವುದೇ ಆಗಿದೆ. ಜೀವನಾವಶ್ಯವಾದ ಊಟ, ಬಟ್ಟೆ, ವಸತಿ ಸೇವೆಗಳು ಮುಂತಾದವುಗಳನ್ನು ಆರ್ಥಿಕ ಸಂಸ್ಥೆ ದೊರಕಿಸಿ ಕೊಡುವ ಕಾರಣದಿಂದ ಸಮಾಜದಲ್ಲಿ ಆರ್ಥಿಕ ವ್ಯವಸ್ಥೆಯ ಪಾತ್ರ ತುಂಬಾ ಬಹುಮುಖ್ಯವಾದದ್ದಾಗಿದೆ.

ಆದಿಮಕಾಲದಲ್ಲಿ ಆರ್ಥಿಕ ರಚನೆ ತುಂಬಾ ಸರಳವಾಗಿತ್ತು ಬೇಟೆಯ ಹಂತದಲ್ಲಿ ವ್ಯಕ್ತಿಗೆ ದುಡಿಮೆ ಎನ್ನುವ ಪರಿಕಲ್ಪನೆ ಇರಲಿಲ್ಲ. ಅಲೆಮಾರಿ ಸಮುದಾಯಗಳಿಗೆ ಆರ್ಥಿಕ ವ್ಯವಸ್ಥೆಯಲ್ಲಿ ಒದಗಬೇಕಾದ ಆದ್ಯ ಸ್ಥಾನವನ್ನು ಇದುವರೆಗೂ ದೊರೆತ್ತಿಲ್ಲದಿರುವುದನ್ನು ಕೆಳಗಿನ ಕೋಷ್ಟಕದಲ್ಲಿ ಅಲೆಮಾರಿ ಸಮುದಾಯಗಳು ಹೊಂದಿರುವ ವೃತ್ತಿಗಳನ್ನು ಗಮನಿಸಬಹುದು. ಈ ಸಮುದಾಯಗಳು ಮಾಡುವ ಕೆಲಸಗಳೆಲ್ಲಾ ಮೌಲ್ಯವಿರದ, ಪ್ರತಿಫಲವಿಲ್ಲದ ಅದೃಶ್ಯ ಶ್ರಮವಾಯಿತು. ಕುಟುಂಬದ ಹಿತಾಶಕ್ತಿಗಳನ್ನು ಪೂರೈಸುವುದಕ್ಕೆ ಸೀಮಿತವಾಯಿತು. ಆದ್ದರಿಂದ ಈ ಅಲೆಮಾರಿ ಸಮುದಾಯಗಳು ಮಾಡುವ ಕೆಲವು ಕೆಲಸಕಾರ್ಯಗಳು ಆರ್ಥಿಕ ವ್ಯವಸ್ಥೆಯಲ್ಲಿ ದುಡಿಮೆ ಎಂದು ಪರಿಗಣಿಸಲಾಗುವುದಿಲ್ಲ. ಏಕೆಂದರೆ ಬೇಟೆ, ಧಾರ್ಮಿಕ ಭಿಕ್ಷಾಟನೆ, ಇವು ಅನುತ್ಪಾದಕತೆ ಎಂಬ ಹಣೆಪಟ್ಟಿ ಕಟ್ಟಿದ್ದರಿಂದ ಆರ್ಥಿಕ ವ್ಯವಸ್ಥೆಯಲ್ಲಿ ಕೆಲಸವು ಮೌಲ್ಯವನ್ನು ಗುರುತಿಸುವಂತ ಕೆಲಸಗಳಲ್ಲವೆಂದು ನಿರ್ಧರಿಸಲಾಗುತ್ತದೆ.

ಕೋಷ್ಟಕ: ಸಮೀಕ್ಷೆಗೊಳಪಟ್ಟ ಶಹಾಪುರ ಅಲೆಮಾರಿಗಳ ಕಸುಬುಗಳು (೨೦೦೯)

ಸಮುದಾಯಗಳು	ಕಸುಬುಗಳು														
	ಕೃಷಿಕೂಲಿ			ಸಣ್ಣವ್ಯಾಪಾರ			ಕುಲಕಸುಬು			ಭಿಕ್ಷಾಟನೆ			ಇತರೆ		
	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
ಬೈಲಪತ್ತಾರ	೨	೧	೩	೨	೨	೪	೩	೩	೬	-	-	-	೧	೧	೨
ಬುಡ್ಗಜಂಗಮ	೧೫	೧೫	೩೦	೧೫	೧೫	೩೦	೫	೫	೧೦	೭	೮	೧೫	೧೨	೧೨	೨೪
ಚೆನ್ನದಾಸರು	೧೫	೧೦	೨೫	೨೦	೨೦	೪೦	೧೫	೧೫	೩೦	-	-	-	೧೦	೧೦	೨೦
ಘಿಸಾಡಿ				೨	೧	೩	೭	೮	೧೫	-	-	-	೩	೧	೪
ಹೆಳವ	೫	೩	೮	೭	೮	೧೫	೩	೨	೫	-	-	-	೨	೩	೫
ಕೊರಮ	೨	೧	೩	೫	೨	೭	೫	೩	೮	೩	೨	೫	೩	೧	೪
ಶಿಳ್ಳೇಕ್ಯಾತ	೭	೩	೧೦	೧೫	೧೫	೩೦	೧೫	೧೭	೩೨	-	-	-	೧೧	೮	೧೯
ಸಿಂಧೋಳ್ಳು				೭	೩	೧೦	೩	೨	೫	೭	೩	೧೦	೩	೨	೫

ಈ ಮೇಲಿನ ಕೋಷ್ಟಕದಿಂದ ತಿಳಿದುಬರುವುದೆನೆಂದರೆ ಸಮೀಕ್ಷೆಗೊಳ್ಳಪಟ್ಟ ಎಂಟು ಅಲೆಮಾರಿ ಸಮುದಾಯಗಳು ವಿವಿಧ ವೃತ್ತಿಗಳಲ್ಲಿ ತೊಡಗಿರುವುದನ್ನು ಗಮನಿಸಬಹುದು. ಅವುಗಳಲ್ಲಿ ಕೃಷಿಕೂಲಿ, ಸಣ್ಣವ್ಯಾಪಾರ, ಕುಲಕಸುಬುಗಳಾದ ಪತ್ತಾರಿಕೆ, ಚಾಪೆ ಹೆಣೆಯುವುದು, ಮೀನುಗಾರಿಕೆ, ಇತ್ಯಾದಿ ಅನುಸರಿಸುವುದರ ಜೊತೆಗೆ ಬುಡ್ಗಜಂಗಮ, ಕೊರಮ ಹಾಗೂ ಸಿಂಧೋಳ್ಳ ಸಮುದಾಯಗಳು ಧಾರ್ಮಿಕ ಭಿಕ್ಷಾಟನೆಯಲ್ಲಿ ತೊಡಗಿರುವುದು ಸಹ ಕಾಣಬಹುದು. ಜೊತೆಗೆ ಇತರೆ ವೃತ್ತಿಯಲ್ಲಿ ತೊಡಗಿದ ಕೆಲವು ಸಮುದಾಯಗಳು ಇತರೆಯಲ್ಲಿ ಬರುವ ಕಸುಬುಗಳಾದ ದಿನಗೂಲಿ, ರೀಕ್ಷಾಚಾಲನೆ, ಗೌಂಡಿ ಕೆಲಸ ಮುಂತಾದವುಗಳನ್ನು ಮಾಡುತ್ತಿರುವುದನ್ನು ಕಾಣಬಹುದು.

ಅಲೆಮಾರಿ ಸಮುದಾಯದವರು ಪ್ರಾರಂಭದ ಹಂತದಿಂದಲೂ ಅಲೆಮಾರಿಗಳಾಗಿದ್ದಾರೆ. ಅವರ ಪಾರಂಪರಿಕ ವೃತ್ತಿ ಹಾಗೂ ಪ್ರವೃತ್ತಿಗಳು ಜೀವನ ನಿರ್ವಹಣೆಗಾಗಿ ಅವಲಂಬಿಸಿಕೊಂಡಿದ್ದರು. ಬದಲಾದ ಆರ್ಥಿಕ ಪರಿಸ್ಥಿತಿಯಲ್ಲಿ ಬದುಕಿನ ಕ್ರಮ ಬದಲಾವಣೆಗೆ ಒಳಪಟ್ಟು ಪಾರಂಪರಾಗತವಾದ ವೃತ್ತಿಯ ಜೊತೆಗೆ ಆಧುನಿಕ ವೃತ್ತಿಗಳು ಸೇರ್ಪಡೆಗೊಂಡವು. ಪರಿಣಾಮ ಇದು ಆರ್ಥಿಕ ಜೀವನದ ಮೇಲೆ ಬೇರೆ ರೀತಿಯ ಪ್ರಭಾವ ಬೀರಿತು.

ಸಮಕಾಲೀನ ಸಂದರ್ಭದಲ್ಲಿ ಈ ಅಲೆಮಾರಿ ಸಮುದಾಯದ ಆರ್ಥಿಕ ಸ್ಥಾನಮಾನಗಳು ಕೆಳಸ್ತರದಲ್ಲಿವೆ. ಆದರೆ ಇತರೆ ಸಮುದಾಯಗಳು ಮನೆ, ಭೂಮಿ, ಹಾಗೂ ಇತರೆ ಮೂಲಭೂತ ಸೌಲಭ್ಯಗಳಿಂದ ವಾಸಿಸುತ್ತಿದ್ದಾರೆ. ಈ ಅಲೆಮಾರಿ ಸಮುದಾಯಗಳು ಮಾತ್ರ ಅನೇಕ ತೊಂದರೆಗಳಿಂದ ಜೀವನ ಮಾಡಬೇಕಾದ ಪರಿಸ್ಥಿತಿಯಲ್ಲಿದೆ. ಪ್ರಸ್ತುತ ಸಂದರ್ಭದಲ್ಲಿ ಹೊಸ ವೃತ್ತಿಗಳಿಗೆ ಹೊಂದಿಕೊಳ್ಳುವುದು ಕಷ್ಟಕರವಾಗಿದೆ.

ಮನ್ನಣೆ ದೊರೆಯದ ತಮ್ಮ ಸಾಂಪ್ರದಾಯಿಕ ವೃತ್ತಿಗಳಿಗೆ ಬದಲಾಗಿ ಆಧುನಿಕ ವೃತ್ತಿಗಳಿಗೆ ಅವಲಂಬಿಸುವುದು ಅನಿವಾರ್ಯವಾಗಿದೆ. ಶಿಕ್ಷಣವಿಲ್ಲದ್ದೆ ಸಾಮಾಜಿಕವಾಗಿ ತಳಸ್ತರದಲ್ಲಿರುವುದು ಕಂಡುಬರುತ್ತದೆ. ಹೀಗೆ ಆರ್ಥಿಕವಾಗಿ ಅಧಃಪತನಕ್ಕಿಳಿದಿರುವುದರಿಂದ ಸದೃಢ ಆರ್ಥಿಕ ವ್ಯವಸ್ಥೆ ರೂಪಿಸಿಕೊಳ್ಳುವಲ್ಲಿ ಈ ಅಲೆಮಾರಿ ಸಮುದಾಯಗಳು ವಿಫಲರಾಗಿದ್ದಾರೆ. ಇಂತ ಪ್ರಯತ್ನದ ಹಿನ್ನಲೆಯಲ್ಲಿ ಈ ಸಮುದಾಯಗಳು ಜೀವನ ನಿರ್ವಹಣೆಗೆ ಅವಲಂಬಿಸಿರುವ ರೀತಿಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಕಾಣಸಿಗುತ್ತದೆ.

ಅಲೆಮಾರಿ ಸಮುದಾಯಗಳ ಶೈಕ್ಷಣಿಕ ಸ್ಥಿತಿಗತಿ

ಜೈವಿಕ ಜೀವಿಯಾದ ಮಾನವ, ಸಮಾಜ ಜೀವಿಯಾಗಿ ಮಾರ್ಪಡುವಲ್ಲಿ ಶಿಕ್ಷಣವು ಉಪಯುಕ್ತವಾಗಿದೆ. ಶಿಕ್ಷಣವು ಮಾನವನ ಜೀವನದೊಂದಿಗೆ ಆರಂಭವಾಗಿದ್ದು, ಮಾನವನ ಮೂಲಭೂತ ಅಗತ್ಯತೆಗಳಾದ ಅನ್ನ, ಅರಿವೆ ಆಶ್ರಯಗಳಂತೆ ಶಿಕ್ಷಣವೂ ಸಹ ಅವಶ್ಯಕವಾಗಿದೆ. ಪ್ರಾಣಿಗಳಿಗಿಂತ ವಿಶಿಷ್ಟ ಶಕ್ತಿ ಸಾಮರ್ಥ್ಯಗಳನ್ನು ಹೊಂದಿರುವ ಮನುಷ್ಯ ತನ್ನ ಬುದ್ಧಿಶಕ್ತಿಯನ್ನು ಬಳಸಿಕೊಂಡು ಇಂದು ಅದ್ಭುತ ಪ್ರಗತಿ ಸಾಧಿಸಿದ್ದಾನೆ. ಈ ಪ್ರಗತಿಗೆ ಶಿಕ್ಷಣವೇ ಸಾಧನವಾಗಿದೆ. ಆದ್ದರಿಂದಲೇ ನಮ್ಮ ಪೂರ್ವಜರು "ವಿದ್ಯಾವಿಹೀನ ಪಶು" ಎಂದಿದ್ದಾರೆ. ಅಂದರೆ ವಿದ್ಯೆ ಇಲ್ಲದವರು ಪಶುವಿಗೆ ಸಮಾನವೆಂದು ಭಾವಿಸಿದ್ದಾರೆ. ಶಿಕ್ಷಣವು ವ್ಯಕ್ತಿ ಮತ್ತು ಸಮಾಜಗಳೆರಡರ ಪ್ರಗತಿಗೆ ಪೂರಕವಾಗಿ ಮಾನವನಲ್ಲಿ ಹುದುಗಿರುವ ಸೂಕ್ತ ಶಕ್ತಿಗಳನ್ನು ಜಾಗೃತಗೊಳಿಸುತ್ತದೆ. ಇಷ್ಟೊಂದು ವೈಶಾಲ್ಯತೆಯ ಆಳಹೊಂದಿರುವ ಮಾಧ್ಯಮದಿಂದ ಇಂತಹ ಅಲೆಮಾರಿ ಸಮುದಾಯಗಳನ್ನು ದೂರವಿರಸಲಾಯಿತು.

ಶಿಕ್ಷಣ ಮಾಧ್ಯಮದಿಂದ ವಂಚಿತವಾದ ಹಲವಾರು ಸಮುದಾಯಗಳಲ್ಲಿ ಶಹಾಪುರದಲ್ಲಿ ವಾಸಿಸುವ ಸಮೀಕ್ಷೆಗೊಳ್ಳಪಟ್ಟ ಈ ಎಂಟು ಅಲೆಮಾರಿ ಸಮುದಾಯಗಳೂ ಸಹ ಒಂದಾಗಿವೆ. ಶತ-ಶತಮಾನಗಳ ಕಾಲದಿಂದಲೂ ಅಕ್ಷರ ಪ್ರಪಂಚ ನೋಡದೆ ಬದುಕಿದ ಸಮುದಾಯಗಳಾಗಿದ್ದು, ಹೊಟ್ಟೆಪಾಡಿಗಾಗಿ ಮತ್ತು ಧಾರ್ಮಿಕ ಭಿಕ್ಷಾಟನೆಗಳನ್ನು ನಂಬಿಕೊಂಡು ಬಂದಿವೆ. ಆದ್ದರಿಂದಲೇ ಈ ಸಮುದಾಯಗಳಲ್ಲಿ ಶಿಕ್ಷಣವಂತರ ಸಂಖ್ಯೆ ತೀರಾ ಕಡಿಮೆಯಿದೆ. ದೇಶದ ಒಟ್ಟಾರೆ ಜನಸಂಖ್ಯೆಗೆ ಹೋಲಿಸಿದರೆ ಇವರ ಅನುಪಾತ ತಳದಲ್ಲಿದೆ. ಮೇಲ್ಜಾತಿ ಸಮುದಾಯಗಳ ವಂಚನೆ ಒಂದಡೆಯಾದರೆ ಆರ್ಥಿಕ ಭದ್ರತೆಯಿಲ್ಲ ದಿರುವುದು ಇನ್ನೊಂದಡೆ, ಹಾಗೆಯೇ ಈ ಸಮುದಾಯಗಳಲ್ಲಿ ಕಿತ್ತು ತಿನ್ನುವ ಬಡತನ ಮೌಢ್ಯತೆ ಮತ್ತೊಂದಡೆ, ಹೀಗೆ ಹಲವಾರು ಸಂದರ್ಭಗಳಿಂದ ಈ ಸ್ಥಿತಿ ನಿರ್ಮಾಣವಾಗಿದೆ. ಈ ವಿಷಯದಲ್ಲಿ ಅಲೆಮಾರಿ ಸಮುದಾಯಗಳು ಅಲಕ್ಷಿತ ಮತ್ತು ಅಸಡ್ಡೆ ಸಮೂಹವಾಗಿದೆ.

ಅಲೆಮಾರಿ ಸಮುದಾಯಗಳಲ್ಲಿ ಶಿಕ್ಷಣ ಪಡೆಯಲು ಇತ್ತೀಚಿಗೆ ಮಕ್ಕಳನ್ನು ಶಾಲೆಗೆ ಕಳುಸುತ್ತಿದ್ದಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಡೆದ ಮಾಹಿತಿ ಪ್ರಕಾರ ಪ್ರಸ್ತುತ ಶಿಕ್ಷಣ ಪಡೆಯುತ್ತಿರುವವರು ಮತ್ತು ಶಿಕ್ಷಣ ಪಡೆಯದೆ ಇರುವವರನ್ನು ದಾಖಲಿಸಲಾಗಿದೆ. ಈ ದಾಖಲಾತಿಯಲ್ಲಿ ಗುಲಬರ್ಗಾ ಜಿಲ್ಲೆಯ

ಶಹಾಪುರ ನಗರದ ಈ ಎಂಟು ಅಲೆಮಾರಿ ಸಮುದಾಯಗಳ ಸಾಕ್ಷರತೆಯ ಪ್ರಮಾಣದ ಅಂಕಿ-ಅಂಶಗಳು ಹೀಗೆ ಕಾಣಬಹುದು.

ಕೋಷ್ಟಕ: ಸಮೀಕ್ಷೆಗೊಳ್ಳಪಟ್ಟ ಶಹಾಪುರದ ಅಲೆಮಾರಿಗಳ ಲಿಂಗವಾರು ಸಾಕ್ಷರತೆಯ ಪ್ರಮಾಣ (೨೦೦೯)

ಸಮುದಾಯಗಳು	ಸಾಕ್ಷರರ್ಹರು		ಸಾಕ್ಷರಸ್ಥರು		ಅನಕ್ಷರಸ್ಥರು	
	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಬೈಲಪತ್ತಾರ	೧೫	೧೧	೬	೪	೧೦	೬
ಬುಡ್ಗಜಂಗಮ	೯೫	೯೦	೨೯	೨೬	೬೪	೬೮
ಚೆನ್ನದಾಸರು	೧೧೧	೮೬	೨೦	೧೩	೯೧	೭೩
ಘಿಸಾಡಿ	೨೬	೨೩	--	--	೨೬	೨೩
ಹೆಳವ	೧೮	೨೩	--	೪	೧೮	೧೯
ಕೊರಮ	೨೬	೨೦	೭	೫	೧೯	೧೫
ಶಿಳ್ಳೆಕ್ಯಾತ	೮೦	೮೨	೮	೧೫	೭೨	೬೭
ಸಿಂಧೋಳ್ಳು	೩೦	೩೬	--	--	೩೦	೩೬

ಮೇಲಿನ ಕೋಷ್ಟಕದಲ್ಲಿ ಕಂಡುಬರುವ ನಮೂನೆಯಾಧಾರಿತ ಸಮೀಕ್ಷೆಯ ಅಂಕಿ-ಅಂಶಗಳಿಂದ ಅಲೆಮಾರಿ ಸಮುದಾಯಗಳ ಶೈಕ್ಷಣಿಕ ಮಟ್ಟದಲ್ಲಿ ಸಾಕ್ಷರಸ್ಥರು ಹಾಗೂ ಅನಕ್ಷರಸ್ಥರ ಪ್ರಮಾಣಗಳನ್ನು ಅನುಲಕ್ಷಿಸಿದಾಗ ಅಲೆಮಾರಿ ಸಮುದಾಯಗಳ ಒಟ್ಟಾರೆ ಸಾಕ್ಷರತೆಯ ಪ್ರಮಾಣವು ಶೇ. ೧೮ರಷ್ಟು ಇರುವುದಾಗಿ ಅದರಲ್ಲಿ ಶೇ. ೫೧ರಷ್ಟು ಪುರುಷರು ಹಾಗೂ ಶೇ. ೪೯ ರಷ್ಟು ಸ್ತ್ರೀಯರು ಸಾಕ್ಷರತೆಯನ್ನು ಹೊಂದಿರುವುದು ಕಂಡುಬಂದರೆ, ಅಲೆಮಾರಿ ಸಮುದಾಯಗಳ ಅನಕ್ಷರತೆಯ ಒಟ್ಟಾರೆ ಪ್ರಮಾಣವು ಶೇ. ೮೨ರಷ್ಟು ಇರುವುದು ಕಾಣಸಿಗುತ್ತದೆ. ಮೇಲಿನ ಸಾಕ್ಷರತೆಯ ಪ್ರಮಾಣದಲ್ಲಿರುವುದಕ್ಕಿಂತ ಸ್ತ್ರೀಯರು ಅನಕ್ಷರತೆಯ ಪ್ರಮಾಣದಲ್ಲಿ ಶೇ. ೪೮ರಷ್ಟಿದ್ದಾರೆ. ಪುರುಷರು ಶೇ. ೫೨ರಷ್ಟು ಇರುವುದನ್ನು ಗಮನಿಸಿದಾಗ ಅನಕ್ಷರತೆಯಲ್ಲಿ ಈ ಅಲೆಮಾರಿ ಸಮುದಾಯಗಳು ಹೆಚ್ಚಿನ ಪ್ರಮಾಣದಲ್ಲಿ ಹಿಂದುಳಿದಿರುವುದು ಅಂಕಿ-ಅಂಶಗಳಿಂದ ಕಾಣಸಿಗುತ್ತದೆ. ಈ ಅಲೆಮಾರಿ ಸಮುದಾಯಗಳು ಸಂಪೂರ್ಣ ವಾಗಿ ಅಕ್ಷರಸ್ಥರಾಗಬೇಕು. ಆಗ ಸಮಾಜದಲ್ಲಿ ಇತರರಂತೆ ಮುಖ್ಯವಾಹಿನಿಯಲ್ಲಿ ಸ್ಥಾನಮಾನ ಪಡೆದುಕೊಳ್ಳಬಹುದು. ಶಿಕ್ಷಣ ಪಡೆದುಕೊಂಡು ಹುದ್ದೆಗಳು ದೊರೆಯುವಂತೆ ಆಗಬೇಕು. ಇಂಥಹ ಅಲೆಮಾರಿ ಸಮುದಾಯಗಳು ಸಹ ಸ್ವಾವಲಂಬಿಯಾಗಿ ಸ್ವತಂತ್ರವಾಗಿ ಬದುಕುವ ವಾತಾವರಣ ನಿರ್ಮಾಣವಾಗಬೇಕಿದೆ.

ಕೋಷ್ಟಕ: ಶಹಾಪುರದ ಅಲೆಮಾರಿಗಳ ಲಿಂಗವಾರು ಮೆಟ್ರಿಕ್ ಪೂರ್ವ ಶೈಕ್ಷಣಿಕ ಮಟ್ಟ

ಸಮುದಾಯಗಳು	ಕುಟುಂಬ	ಪ್ರಾಥಮಿಕ		ಮಾಧ್ಯಮಿಕ		ಪ್ರೌಢ	
		ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಬೈಲಪತ್ತಾರ	೦೮	-	-	೦೨	೦೨	೦೨	೦೨
ಬುಡ್ಗಜಂಗಮ	೩೭	೨೬	೨೫	೦೧	೦೧	-	-
ಚೆನ್ನದಾಸರ	೪೦	೧೮	೧೩	೦೧	-	೦೧	-
ಘಿಸಾಡಿ	೦೯	-	-	-	-	-	-
ಹೆಳವ	೦೯	-	೦೪	-	-	-	-
ಕೊರಮ	೧೦	೦೬	೦೫	೦೧	-	-	-
ಶಿಳ್ಳೇಕ್ಯಾತ	೩೯	೦೮	೧೫	-	-	-	-
ಸಿಂಧೋಳ್ಳು	೧೧	-	-	-	-	-	-
ಒಟ್ಟು	೧೬೩	೫೮	೬೨	೦೫	೦೩	೦೩	೦೨

ಮೇಲಿನ ಕೋಷ್ಟಕದಲ್ಲಿ ಮೆಟ್ರಿಕ್ ಪೂರ್ವ ಶಿಕ್ಷಣ ಹಾಗೂ ಕೆಳಗಿನ ಕೋಷ್ಟಕದಲ್ಲಿ ಮೆಟ್ರಿಕ್ ನಂತರದ ಶಿಕ್ಷಣ ಎಂದು ವಿಂಗಡಿಸಲಾಗಿದ್ದು ಶಹಾಪೂರದಲ್ಲಿರುವ ಸಮೀಕ್ಷೆಗೊಳಪಟ್ಟ ಒಟ್ಟಾರೆ ಎಂಟು ಅಲೆಮಾರಿ ಸಮುದಾಯಗಳ ಶೈಕ್ಷಣಿಕ ಸ್ಥಾನಮಾನದ ಸೂಚ್ಯಂಕಗಳನ್ನು ನೋಡಿದಾಗ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವವರ ಸಂಖ್ಯೆ ಒಟ್ಟಾರೆ ಪ್ರಮಾಣ ಶೇ. ೯೦ರಷ್ಟು, ಅದರಲ್ಲಿ ಗಂಡು ೫೮, ಹೆಣ್ಣು ೬೨, ಮಾಧ್ಯಮಿಕ ಹಂತದಲ್ಲಿ ಒಟ್ಟಾರೆ ಪ್ರಮಾಣ ಶೇ. ೬ರಷ್ಟು ಪುರುಷರು ೦೫, ಸ್ತ್ರೀಯರು ೦೩ ಇರುವುದು ಕಂಡುಬರುತ್ತದೆ. ಪ್ರೌಢ ಶಿಕ್ಷಣದಲ್ಲಿ ಪುರುಷರು ೦೩, ಸ್ತ್ರೀಯರು ೦೨ ಇದ್ದು ಒಟ್ಟಾರೆ ಪ್ರಮಾಣ ಶೇ. ೪ರಷ್ಟಿದ್ದರೆ, ಪದವಿಪೂರ್ವದಲ್ಲಿ ೦೨, ಪದವಿಯೇತರ ೦೨ ಶೈಕ್ಷಣಿಕ ಮಟ್ಟದಲ್ಲಿ ವ್ಯಾಸಂಗದಲ್ಲಿರುವುದು ಕಂಡುಬರುತ್ತದೆ. ಈ ಒಟ್ಟಾರೆ ಹಂತಗಳನ್ನು ಗಮನಿಸಿದಾಗ ಅಲೆಮಾರಿ ಸಮುದಾಯಗಳು ಕಡಿಮೆ ಸಾಕ್ಷರತೆಯ ಪ್ರಮಾಣದಲ್ಲಿರುವುದಾಗಿದೆ.

ಕೋಷ್ಟಕ: ಶಹಾಪುರದ ಅಲೆಮಾರಿಗಳ ಲಿಂಗವಾರು ಮೆಟ್ರಿಕ್ ನಂತರದ ಶೈಕ್ಷಣಿಕ ಮಟ್ಟ

ಸಮುದಾಯಗಳು	ಕುಟುಂಬ	ಪದವಿ ಪೂರ್ವ		ಪದವಿ		ಇತರೆ	
		ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು
ಬೈಲಪತ್ತಾರ	೦೮	೦೨	-	-	-	-	-
ಬುಡ್ಗಜಂಗಮ	೩೭	-	-	೦೨	-	-	-
ಚೆನ್ನದಾಸರ	೪೦	-	-	-	-	-	-
ಘಿಸಾಡಿ	೦೯	-	-	-	-	-	-
ಹೆಳವ	೦೯	-	-	-	-	-	-
ಕೊರಮ	೧೦	-	-	-	-	-	-
ಶಿಳ್ಳೇಕ್ಯಾತ	೩೯	-	-	-	-	-	-
ಸಿಂಧೋಳ್ಳು	೧೧	-	-	-	-	-	-
ಒಟ್ಟು	೧೬೩	೦೨	-	೦೨	-	-	-

ಶಿಕ್ಷಣದ ವಿಷಯದಲ್ಲಿ ಇಂತಹ ಹಲವಾರು ಅಲೆಮಾರಿ ಸಮುದಾಯಗಳು ಅಲಕ್ಷಿತ ಮತ್ತು ಅಸಡ್ಡೆ ಸಮೂಹವಾಗಿದೆ ಎಂದರೆ ತಪ್ಪಾಗಲಾರದು. ಮೊದ ಮೊದಲು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುತ್ತಾರೆ. ತೀರಾ ಚಿಕ್ಕ ಮಕ್ಕಳನ್ನು ಶಿಕ್ಷಣದಿಂದ ತಪ್ಪಿಸಿ ಭೀಕ್ಷಾಟನೆಯಿಂದ ಬರುವ ಪುಡಿಗಾಸು, ತಿಂಡಿ ಇತ್ಯಾದಿ ಕಾರಣಕ್ಕಾಗಿ ಬಳಸಿಕೊಳ್ಳುತ್ತಾರೆ. ಇದರಿಂದ ಮಕ್ಕಳು ಪ್ರಾಥಮಿಕ ಶೀಕ್ಷಣದಿಂದಲೇ ವಂಚಿತರಾಗಿ ಶಿಕ್ಷಣ ಏನೆಂಬುದು ಪರಿವೆ ಇಲ್ಲದಾಂತಗುತ್ತದೆ.

ಅಲೆಮಾರಿ ಸಮುದಾಯಗಳ ರಾಜಕೀಯ ಸ್ಥಿತಿಗತಿ

ಇಡೀ ವಿಶ್ವದಲ್ಲಿ ಅಸಂಖ್ಯಾತ ಜೀವರಾಶಿಗಳಲ್ಲಿ ಮಾನವ ಅತ್ಯಂತ ವಿಶಿಷ್ಟವಾದ ಹಾಗೂ ಪ್ರತ್ಯೇಕವಾದ ಪ್ರಾಣಿ. ಆತನಿಗೆ ನಿಸರ್ಗದ ಕೋಡುಗೆಯಾಗಿ ಯೋಚನಾಶಕ್ತಿ ಬುದ್ದಿಶಕ್ತಿ ಬಂದಿದೆ. ಯೋಚನಾ ಶಕ್ತಿಯು ನೆರವಿನಿಂದ ಮಾನವ ನಿರಂತರವಾಗಿ ಬದಲಾಗುತ್ತಬಂದ ಸಮುದಾಯಗಳು ಆ ದಿನಗಳಿಂದಲೂ ಇಂದಿನ ತಂತ್ರಜ್ಞಾನದ ಅಡಿಪಾಯದ ಬುನಾದಿಯ ಮೇಲೆ ನಿಂತು ಭೂಮಿಯನ್ನಲ್ಲದೆ ಇಡೀ ಸೌರಮಂಡಲದಲ್ಲಿ ವಿವಿಧ ಗ್ರಹಗಳ ಮೇಲೆಯೇ ತನ್ನ ಪ್ರಭುತ್ವ ಸ್ಥಾಪಿಸಿದ್ದಾನೆ. ಆ ಪ್ರಭುತ್ವ ಸ್ಥಾಪಿಸುವ ದಿಸೆಯಲ್ಲಿ ಮಾನವನ ಪ್ರಯತ್ನ ಶತಶತಕಗಳ ಹಿಂದಿನದು. ಅಷ್ಟೇ ಏಕೆ ಕೇವಲ ದಶಕದಿಂದಿರುವ ವ್ಯವಸ್ಥೆ ಪ್ರಸ್ತುತ ಇಲ್ಲವೇ ಇಲ್ಲ ಆಧುನಿಕ ಸಮಾಜ ಸಮಗ್ರ ದೃಷ್ಟಿಕೋನ ಬದಲಾಗಿದೆ. ಸಮಾಜ ಸಂಕೀರ್ಣ ಪರಿಸ್ಥಿತಿ ತಿಳಿಯಾಗಿದೆ. ಸಮುದಾಯದ ರಾಜ್ಯದ ರಾಷ್ಟ್ರದ ಹಾಗೂ ಅನಿವಾರ್ಯ ಪ್ರಭಾವಗಳ ಕಾರ್ಯದಿಂದಾಗಿ ರಾಜಕೀಯ ವ್ಯವಸ್ಥೆ ಎನ್ನುವುದು ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ತಿತ್ವಕ್ಕೆ ಬಂದಿತು.

ರಾಜಕೀಯ ವ್ಯವಸ್ಥೆಯು ಕೇವಲ ಮೇಲಸ್ತರದವರ ಕೈಯಲ್ಲಿಯೇ ಸಿಲುಕಿಕೊಂಡಿರುವುದು ಇಂದಿನ ಸಮಾಜದಲ್ಲಿ ಕಾಣಬಹುದು. ಸಮಾಜದಲ್ಲಿ ವಾಸಿಸುವ ಕೆಳಸ್ತರದ ಜನರಿಗೆ ರಾಜಕೀಯ ನೀಲುಕದ ಗಗನಕುಸುಮವಾಗಿದೆ. ಅಂತೆಯೇ ಅಲೆಮಾರಿ ಸಮುದಾಯಗಳು ಇದರ ಹೊರತಾಗಿಲ್ಲ. ಬಹಳಷ್ಟು ಅಲೆಮಾರಿ ಸಮುದಾಯಗಳು ತಮ್ಮ ಅಲೆಮಾರಿತನದಿಂದ ರಾಜಕೀಯವಾಗಿ ವಂಚಿತರಾಗಿದ್ದು ಕಂಡುಬರುತ್ತವೆ.

ಅಲೆಮಾರಿ ಸಮುದಾಯಗಳ ಧಾರ್ಮಿಕ ಜೀವನ

ಧರ್ಮವು ಮನುಷ್ಯನ ಕೆಟ್ಟತನವನ್ನು ನಿರ್ಮೂಲನ ಮಾಡುವಲ್ಲಿ ಪ್ರಮುಖವಾದ ರಕ್ಷಾಕವಚವಾಗಿದೆ. ಧರ್ಮೋರಕ್ಷತಿ ರಕ್ಷಿತಾ ಭಾರತೀಯ ಪಾರಂಪರಿಕ ಸಂಸ್ಕೃತಿಯಲ್ಲಿ ಹೇಳಲಾಗಿದೆ. ಯಾರು ಧರ್ಮವನ್ನು ಸಂಕ್ಷೇಪಿಸುತ್ತಾರೋ ಧರ್ಮವನ್ನು ರಕ್ಷಿಸುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆ. ಅಂದರೆ ಅವನಿಗೆ ಯಾವುದೇ ತೊಂದರೆಗಳಾಗದಂತೆ ತಡೆಯುತ್ತದೆ ಎನ್ನುವ ನಂಬಿಕೆ ಭಾರತೀಯ ಸಮಾಜದಲ್ಲಿ ಕಂಡುಬರುತ್ತದೆ. ಅಂತೆಯೇ ದೇಶದಲ್ಲಿ ವಾಸಿಸುವ ಪ್ರತಿಯೊಂದು ಸಮುದಾಯದಲ್ಲಿರುವಂತೆ ಧಾರ್ಮಿಕ ನಂಬಿಕೆಯು ಅಲೆಮಾರಿ ಸಮುದಾಯಗಳಲ್ಲಿ ಕಾಣಬಹುದು. ಇವರು ಹಿಂದಿನಿಂದಲೂ ತಮ್ಮ ಧಾರ್ಮಿಕ ನಂಬಿಕೆಯ ಜೊತೆಗೆ ನಿಸರ್ಗದಲ್ಲಿನ ದೈವಗಳನ್ನು ಪೂಜಿಸುವುದರ ಜೊತೆಗೆ ಧರ್ಮದ ಅಡಿಯಲ್ಲಿ ಜೀವಿಸುವುದನ್ನು ಕಾಣಬಹುದು.

ಅಲೆಮಾರಿ ಸಮುದಾಯದ ಸಾಂಸ್ಕೃತಿಕ ಸ್ಥಿತಿ-ಗತಿ

ಸಾಮಾಜಿಕ ವ್ಯವಸ್ಥೆಯಲ್ಲಿ ಸಂಸ್ಕೃತಿ ಎನ್ನುವುದು ಬಹು ಅರ್ಥ ಉಳ್ಳ ಪರಿಕಲ್ಪನೆಯಾಗಿದೆ. ಸಮಾಜದಲ್ಲಿ ಬದುಕಲು ಮಾನವ ತಮ್ಮದೇ ಆದ ಸಾಂಸ್ಕೃತೀಕ ಅಡಿಯಲ್ಲಿ ಜೀವಿಸುತ್ತಿರುವುದು ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುತ್ತದೆ. ಅಂತೆಯೆ ಅಲೆಮಾರಿ ಸಮುದಾಯಗಳಲ್ಲಿಯೂ ಸಹ ಸಂಸ್ಕೃತಿಯು ಹಿಂದಿನಿಂದಲೂ ಬೆಳೆದುಕೊಂಡು ಬಂದಿದ್ದು ಅವರು ತಮ್ಮ ಬದುಕಿನ ಜೊತೆ ಸಂಸ್ಕೃತಿಯನ್ನು ಅಳವಡಿಸಿಕೊಂಡು ಸಾಮಾಜಿಕ ವ್ಯವಸ್ಥೆಯಲ್ಲಿ ಅವರದೇ ಆದ ಸಂಸ್ಕಾರ ಆಚರಣೆಗಳನ್ನು ಇಂದಿಗೂ ಮುಂದುವರೆಸಿಕೊಂಡು ಬಂದಿರುವ ೧. ಬುಡ್ಗಜಂಗಮ ೨. ಚೆನ್ನದಾಸರು ೩. ಕೊರಮ ೪. ಶಿಳ್ಳೇಕ್ಯಾತ ೫. ಸಿಂಧೂಳ್ಳು ಮತ್ತು ಹಿಂದುಳಿದ ವರ್ಗಗಳ ೧. ಬೈಲಪತ್ತಾರ ೨. ಘಿಸಾಡಿ ೩. ಹೆಳವರು ಅಲೆಮಾರಿ ಸಮುದಾಯಗಳ ಸಾಂಸ್ಕೃತಿಕ ಜೀವನ ಕುರಿತು ವಿಶ್ಲೇಷಿಸುತ್ತಾ ಹೋಗಿರುವುದು ಮುಂದಿನ ಅಧ್ಯಾಯಗಳಲ್ಲಿ ಗಮನಿಸಬಹುದಾಗಿದೆ.

ಆಧಾರಗಳು

ಕರದಳ್ಳಿ ಚಂದ್ರಕಾಂತ, ೨೦೦೮, *ದರ್ಶನ ಮಾಲಿಕೆ ಶಹಾಪೂರ,* ಬಸವ ಪ್ರಕಾಶನ, ಗುಲಬರ್ಗಾ

ದೊಡ್ಡಮನಿ ಸಣ್ಣವೀರಣ್ಣ ಸಾಸನಿಕ್ ಮಹೇಂದರರಾವ್ ಪಿ, ೨೦೦೮, '*ಶಿಳ್ಳೇಕ್ಯಾತ*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ದೊಡ್ಡಮನಿ ಲೋಕರಾಜ ರಾವುಲೋಳ ಎಸ್ ಶ್ರೀನಿವಾಸ, ೨೦೦೮, '*ಸಿಂಧೊಳ್ಳು*' ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಬಾಲಗುರುಮೂರ್ತಿ ಪ್ರತಾಪ ರಾ. ಬಹುರೂಪಿ, ೨೦೦೮, '*ಬುಡ್ಗಜಂಗಮ*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಮಾನ್ವಡೆ ಬಿ. ಮಲ್ಲಿಕಾರ್ಜುನ, ೨೦೦೮,'*ಕೊರಮ*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ವಿಶ್ವನಾಥ ಎಲ್. ಬೈಲಪತ್ತಾರ ಜಗನ್ನಾಥ. ಎಂ. ಬೈಲಪತ್ತಾರ, ೨೦೦೮, '*ಬೈಲಪತ್ತಾರ*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಹಕ್ಕಿ ಡಿ.ಎನ್. ೧೯೮೬, ಶಹಾಪೂರ ತಾಲ್ಲೂಕು ದರ್ಶನ, ಐಬಿಹೆಚ್ ಪ್ರಕಾಶನ, ಬೆಂಗಳೂರು

ಹಿಮ್ಮಡಿ ಬಿ. ಯಲ್ಲಪ್ಪ, ೨೦೦೮, '*ಚೆನ್ನದಾಸರ*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಹಿರೇಮಠ ಎಸ್ ಬಿಸವರಾಜ್ ಸಾಳುಂಕಿ ಅಂಜಲಿ, ೨೦೦೮, '*ಘಸಾಡಿ*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಹೆಳವರ ಎಂ ಎಸ್, ೨೦೦೯,'*ಹೆಳವರು*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಅಧ್ಯಾಯ ೩

ಅಲೆಮಾರಿ ಸಮುದಾಯಗಳ ಪರಿಚಯ

೩.೧ ಬುಡ್ಗ ಜಂಗಮ

೩.೧.೧ ಚಾರಿತ್ರಿಕ ಹಿನ್ನೆಲೆ

ಪೂರ್ವ ಕಾಲದಲ್ಲಿ ಆಂಧ್ರ ಪ್ರದೇಶದ ಶ್ರೀಶೈಲ ಅರಣ್ಯ ಭಾಗಗಳಲ್ಲಿ ಬೇಟೆಯನ್ನೇ ಪ್ರಧಾನವಾಗಿಟ್ಟುಕೊಂಡು ನೆಲೆಸಿರುವ ಬುಡ್ಗ ಜಂಗಮರು ತಾವು ಬೇಟೆಯಾಡಿ ತಂದ ಮಾಂಸಹಾರದಲ್ಲಿ ಸ್ವಲ್ಪ ಭಾಗವನ್ನು ಶಿವನಿಗೆ ಭಕ್ತಿಯಿಂದ ಸಮರ್ಪಿಸಿ ತಾವು ಊಟ ಮಾಡುತ್ತಿದ್ದ ಸಂಪ್ರದಾಯ ಅವರಲ್ಲಿತ್ತು ಎಂಬುದಾಗಿ ಶ್ರೀ 'ಕಾಳಹಸ್ತಿ ಮಹಾತ್ಮೆ' ಎಂಬ ಪುಸ್ತಕದಲ್ಲಿ ಪುಟ ೩-೮೮ ಮತ್ತು ೨-೫೦ರಲ್ಲಿ ಉಲ್ಲೇಖಿಸಲಾಗಿದೆ. ಇವರು ಕಾಡಿನಿಂದ ಚದುರಿ ಮಹಾರಾಷ್ಟ್ರ, ಕರ್ನಾಟಕ ಇನ್ನಿತರ ರಾಜ್ಯಗಳಿಗೆ ಗುಳೆ ಹೋಗುವರು. ತಮ್ಮ ಸಂಚಾರಿ ಜೀವನದಲ್ಲಿ ಜೀವನ ನಿರ್ವಹಣೆಗಾಗಿ ವಿವಿಧ ವೃತ್ತಿಗಳನ್ನು ಕೈಗೊಂಡಿರುತ್ತಾರೆ.

ಅನೇಕ ಮಹಾದಾರ್ಶನಿಕರ ಪ್ರಭಾವದಿಂದ ಇವರ ವೃತ್ತಿಗಳಲ್ಲಿ ಅನೇಕ ಬದಲಾವಣೆಗಳಾದವು. ಆಂಧ್ರ ಪ್ರದೇಶ ಮತ್ತು ಕರ್ನಾಟಕದಲ್ಲಿ ೧೨ನೇ ಶತಮಾನದ ಬಸವಣ್ಣನ ಅನುಯಾಯಿಗಳು ಇವರನ್ನು ಧರ್ಮ ಪ್ರಚಾರಕ್ಕಾಗಿ ಬಳಸಿಕೊಂಡರು. ಶಿವಾಜಿ ಕಾಲದಲ್ಲಿ ಸ್ವತಂತ್ರ ಹೋರಾಟಕ್ಕೆ ಇವರನ್ನು ಗೂಡಾಚಾರಿಗಳಾಗಿ ಬಳಸಿಕೊಂಡಿರುವುದೂ ಕಂಡುಬರುತ್ತದೆ.

ಕಾಡಿನಲ್ಲಿ ಸಣ್ಣ-ಪುಟ್ಟ ಸಮುದಾಯಗಳ ಒಳ ಜಗಳಗಳನ್ನು ಮತ್ತು ಆಂಗ್ಲರು, ನಿಜಾಮ್ ಹಾಗೂ ಮುಸ್ಲಿಂರ ದಬ್ಬಾಳಿಕೆಗಳನ್ನು ಸಹಿಸದ ಇಡೀ ಸಮುದಾಯ ಅನೇಕ ತಿರುವುಗಳನ್ನು ಕಂಡಿತು. ಕಾಡಿನಿಂದ

ನಾಡಿನತ್ತ ಮರಳುವ ಸಂದರ್ಭದಲ್ಲಿ ಹೊಟ್ಟೆಪಾಡಿಗೆ ಸಾಂಸ್ಕೃತಿಕ ವೇಷಗಳನ್ನು ಹಾಕಿ ಕಲೆ ಪ್ರದರ್ಶನ ನೀಡುತ್ತ ನಾಡಿನಲ್ಲಿ ಪ್ರವೇಶ ಪಡೆದರು. ಒಂದೊಂದು ತಂಡವಾಗಿ ಊರಿನಲ್ಲಿ ಪ್ರವೇಶ ಮಾಡಿದ ಇವರು ಆ ಕಾಲದ ಘಟನೆಗಳನ್ನು ಹಾಗೂ ಧಾರ್ಮಿಕ ಪ್ರಚಾರವನ್ನು ತಮ್ಮ ವೇಷಗಳ ಹಾಗೂ ಕಲಾ ಪ್ರಕಾರಗಳ ಮೂಲಕ ದೇಶದ ಹಲವು ಪ್ರದೇಶಗಳಿಗೆ ಭಿಕ್ಷಾಟನೆ ಮಾಡುತ್ತಾ ಹೋದರು. ಪ್ರಮುಖವಾಗಿ ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ, ತಮಿಳುನಾಡು, ಗೋವಾ ರಾಜ್ಯಗಳಲ್ಲಿದ್ದು ಅಲ್ಲಿಯ ಪ್ರಾದೇಶಿಕ ಭಾಷೆಯಲ್ಲಿ ಕಲೆಗಳನ್ನು ಪ್ರದರ್ಶಿಸುತ್ತಾ ಜೀವನ ನಡೆಸುತ್ತಿದ್ದಾರೆ (ಬಾಲಗುರುಮೂರ್ತಿ; ಪ್ರತಾಪ ಬಹುರೂಪಿ: ೨೦೦೮:೧೧-೧೨).

ಆಂಧ್ರದಿಂದ ಗುಳೇ ಬಂದ ಬುಡ್ಗಜಂಗಮರು, ಚಿತ್ತೂರು ಜಿಲ್ಲೆಯ ಕೊಂಗನೂರು ತಾಲೂಕು ಕಾಂಚಾಪೇಟೆ ಈ ಭಾಗದಿಂದ ಬಂದ ಕುಟುಂಬದವರು ಕೋಲಾರ ಜಿಲ್ಲೆಯ ಮುಳಬಾಗಿಲೂ ತಾಲೂಕು ಕೊತ್ತುರು ಕಡೆ ಜೀವನ ಪ್ರಾರಂಭಿಸಿ ದಕ್ಷಿಣ ಕರ್ನಾಟಕದ ಹಲವು ಭಾಗಗಳಲ್ಲಿ ಅಲೆದಾಡಿ ನೆಲೆಯೂರಿರುತ್ತಾರೆ. ಈ ಭಾಗದ ಜನರು ತಮ್ಮ ಜೀವನ ಹಾಗೂ ತಮ್ಮ ವೈವಾಹಿಕ ಸಂಬಂಧಕ್ಕಾಗಿ ಕೆಲವು ಕಟ್ಟೆಗಳನ್ನು ನಿರ್ಮಿಸಿಕೊಂಡರು.

ಉತ್ತರ ಕರ್ನಾಟಕದಲ್ಲಿ ಸಂಚರಿಸುವ ಮತ್ತು ವಾಸಿಸುತ್ತಿರುವ ಸಮುದಾಯಗಳ ಕಟ್ಟೆಗಳು ಗದ್ವಾಲಕಟ್ಟೆ, ಗೋಲ್ಕಂಡ ಕಟ್ಟೆ, ಹರಪ್ಪನಹಳ್ಳಿ ಕಟ್ಟೆ, ಬೊಮ್ಮನಾಳ ಕಟ್ಟೆ, ಸೋಲ್ಲಾಪುರ ಕಟ್ಟೆ, ಯಂಕ್ಕಂಚಿ ಕಟ್ಟ ಬಿಜಾಪುರ ಕರ್ನೂಲ, ಆಧೋನಿ, ಬಳ್ಳಾರಿ ಕಟ್ಟೆ ತಾವರಗೇರಿ ಕೊಪ್ಪಳ ಜಿಲ್ಲೆ ಕುದುರೆ ಮೊತಿ, ಗುಂತಕಲ್ ಈ ಕಟ್ಟೆಗಳಲ್ಲಿ ಸೇರುತ್ತಾರೆ. ಆದರೆ ಇತ್ತೀಚೆಗೆ ರಾಜ್ಯದ ಎಲ್ಲಾ ಭಾಗಗಳಲ್ಲಿ ಅಲ್ಲಲ್ಲಿಯೇ ನೆಲೆಗಳನ್ನು ಮಾಡಿಕೊಂಡು ಸೇರುತ್ತಿದ್ದಾರೆ. ಒಂದು ಕಟ್ಟೆಯಿಂದ ಇನ್ನೊಂದು ಕಟ್ಟೆಗೆ ಕೇವಲ ಪ್ರಾದೇಶಿಕವಾಗಿ ಭಿಕ್ಷೆ ಬೇಡುವ ಹಾಗೂ ಪ್ರದರ್ಶನ ಮಾಡುವ ಕಲೆ ಮಾತ್ರ ಬೇರೆಯಾಗಿರುತ್ತದೆ. ಕುಲ ಮಾತ್ರ ಒಂದೇ. ಈ ಸಮುದಾಯದ ಯಾವುದೇ ವ್ಯಕ್ತಿ ಬಂದರು ಅವರನ್ನು ವಿಚಾರಿಸುವುದು 'ಮೀರು ಜಂಗಾಲ' ಎಂದು ಹೇಳುತ್ತಾನೆ. ಹೌದು ಎಂದಾದರೆ ಮುಂದೆ ಬೆಡಗುಗಳಿಂದ ಪರಿಚಯಿಸಿಕೊಂಡು ಬಂಧುಗಳಾಗುತ್ತಾರೆ. ಇವರು ಕುಲದಿಂದ ಮಾತ್ರ ಬುಡ್ಗಜಂಗಾಲರಾಗಿರುತ್ತಾರೆ. ಹೆಚ್ಚಾಗಿ ಆಯಾ ಕಟ್ಟೆಗಳಲ್ಲಿಯೆ ಹೆಚ್ಚು ಕೊಟ್ಟು ತೆಗೆದುಕೊಳ್ಳುವ ರೂಢಿ ಇರುತ್ತದೆ. ಕಾರಣ ಮಗಳು ಮತ್ತು ಸಂಬಂಧಿಕರು ಹತ್ತಿರದಲ್ಲಿಯೇ ಇರಬೇಕೆನ್ನುವ ಅಲ್ಲದೆ ಮ್ಯಾರ ಪೂಟ ಎನ್ನುವ ನಿಬಂಧನೆಗಳಿಂದಾಗಿ ರಕ್ತಸಂಬಂಧದಲ್ಲಿಯೆ ಮದುವೆ ಮಾಡಿಕೊಳ್ಳುತ್ತಾರೆ (ಬಾಲಗುರುಮೂರ್ತಿ; ಪ್ರತಾಪ ಬಹುರೂಪಿ: ೨೦೦೮:೧೫). "ಅನೇಕ ವರ್ಷಗಳಿಂದ ತಮ್ಮ ಪಾಲಿಗೆ ಬಂದಿರುವ ಊರು ಕೇರಿಗಳನ್ನು ತಾಲೂಕು ಜಿಲ್ಲೆಗಳನ್ನು ಆಸ್ತಿಯಂತೆ ಇವರು ಪಾಲು ಮಾಡಿಕೊಳ್ಳುವರು. ಹೆಚ್ಚು ಊರು ಕೇರಿಗಳನ್ನು ಹೊಂದಿರುವವರು ಶ್ರೀಮಂತರೆಂಬ ಮನೋಭಾವ ಇದೆ.

ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಇಲ್ಲವೇ ಮಗಳಿಂದ ಅಳಿಯನಿಗೆ, ಹಾಗೂ ತಾಯಿಯಿಂದ ಮಕ್ಕಳಿಗೆ ದತ್ತು ಪುತ್ರನಿಗೆ ಊರು ಕೇರಿಗಳನ್ನು ಹಸ್ತಾಂತರವಾಗುತ್ತದೆ. ತಮ್ಮ ಪಾಲಿನ ಹಳ್ಳಿಗಳಿಗೆ ಇನ್ನೊಬ್ಬರು ಹೋಗಿ ಅನ್ನ, ಬಟ್ಟೆ, ಕಾಳು, ವಸೂಲಿ ಮಾಡಿದರೆ ಅಂಥವರಿಗೆ ತಪ್ಪುದಂಡ ವಿಧಿಸುವ ಕಟ್ಟುಕಟ್ಟಳೆ ಇವರಲ್ಲಿದೆ. ಇವರು ಬೇಟೆ ಸಿಗುವ ಪ್ರದೇಶವನ್ನು ಅರಸುತ್ತಾ ಹೋಗುವರು. ಹೆಚ್ಚು ಭಿಕ್ಷಾಟನೆ ಸೀಗುವ ಸ್ಥಳಕ್ಕೆ ತನ್ನವರನ್ನು ಕರೆದುಕೊಂಡು ಹೋಗಿ ನೆಲೆ ಸ್ಥಾಪಿಸುವರು. ಬೇಟೆ ಪ್ರಧಾನವಾದ ಕಸಬು. ನಿಸರ್ಗದ ಜೀವಜಂತುಗಳನ್ನು ಅವಲಂಭಿಸಿದ್ದು ಕಾಲಕ್ರಮೇಣ ಬುಡ್ಗಜಂಗಮ ಸಮುದಾಯವು ಕಾಡಿನಿಂದ ನಾಡಿನತ್ತಾ ಪಯಣ ಬೆಳೆಸಿದರು. ಕರ್ನಾಟಕದ ಇತರ ಜಿಲ್ಲೆಗಳಲ್ಲಿ ನೆಲೆ ನಿಂತಿರುವಂತೆ, ಗುಲಬರ್ಗಾ ಜಿಲ್ಲೆಯ ಶಹಾಪುರ ನಗರದಲ್ಲಿಯೂ ಸಹ ಈ ಸಮುದಾಯ ನೆಲೆನಿಂತಿದೆ".

ಬುಡ್ಗಜಂಗಮ ಸಮುದಾಯದವರನ್ನು ವೇಷಗಾರ, ಬಾಳಸಂತ, ಬೈರಾಗಿ, ಬುರ್ರ ಕಥೆಯವರು, ಸನ್ಯಾಸಿ, ಜಂಗಾಲಿ, ಜಿಗ್ಗಾಲಿ ಎಂದು ವಿವಿಧ ಹೆಸರುಗಳಿಂದ ಇವರನ್ನು ಗುರುತಿಸುವರು. ಈ ಸಮುದಾಯಗಳು ವಾಸಿಸುವ ಆಯಾ ಪ್ರಾಂತ್ಯಗಳಲ್ಲಿ ಇವರನ್ನು ವಿವಿಧ ಹೆಸರಿನಿಂದ ಸೂಚಿಸುವರು. ಬುಡ್ಗಜಂಗಮರು ಮೂಲತಃ ಆಂಧ್ರ ಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದವರು. ಇವರು ಮೊದಲು ಆಂಧ್ರ ಪ್ರದೇಶದ ಶ್ರೀಶೈಲಕ್ಕೆ ಹೋಗುವ ಮಾರ್ಗ ಮಧ್ಯ ಕಾಡಿನಲ್ಲಿ ವಾಸವಾಗಿದ್ದರು. ನಿಜಾಮರ ಆಡಳಿತದ ಅವಧಿಯಲ್ಲಿ ಇವರು ಕರ್ನಾಟಕದ ಗಡಿ ಭಾಗದ ಪ್ರದೇಶಗಳಿಗೆ ಗುಂಪುಗುಂಪಾಗಿ ಚದುರಿ ಬಂದರು. ತಮ್ಮ ಜೀವನ ನಿರ್ವಹಣೆಗೆ ಜಾತ್ರೆ ಉತ್ಸವಗಳಲ್ಲಿ ರಾಮಾಯಣ-ಮಹಾಭಾರತ ಪೌರಣಿಕ ಪಾತ್ರಗಳ ವೇಷಗಳನ್ನು ಧರಿಸಿ ಬಯಲು ನಾಟಕಗಳ ಪ್ರದರ್ಶನದ ಮೂಲಕ ಜನರನ್ನು ರಂಜಿಸಲು ಪ್ರಾರಂಭಿಸಿದರು. ಜನರು ಇವರನ್ನು ವೇಷಗಾರರು. ಬುರ್ರಕಥೆಯವರು, ಬಾಳಸಂತೋಷ, ಜೋತಿಷ್ಯದವರು ಎಂದು ಕರೆಯಲು ಪ್ರಾರಂಭಿಸಿದರು.

ಬುಡ್ಗ ಜಂಗಮರು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ವಾಸಿಸುವಂತೆ ಗುಲ್ಬರ್ಗಾ ಜಿಲ್ಲೆಯ ಶಹಾಪುರ ನಗರದಲ್ಲಿಯೂ ಸಹ ಈ ಸಮುದಾಯದವರು ೩೦ ರಿಂದ ೪೦ ಕುಟುಂಬಗಳು ವಾಸವಾಗಿವೆ. ಇವರು ಮೊದಲು ಜೀವನ ನಿರ್ವಹಣೆಗಾಗಿ ವಿವಿಧ ವೇಷಗಳನ್ನು ಹಾಕುತ್ತಾ ಬದುಕುತ್ತಿದ್ದರು. ಇತ್ತೀಚೆಗೆ ವಿವಿಧ ವ್ಯಾಪಾರಗಳನ್ನು ಮಾಡುವುದರಲ್ಲಿ ತೊಡಗಿದ್ದಾರೆ. ಕೆಲವರು ಭಿಕ್ಷಾಟನೆಯನ್ನು ಮಾಡುವುದು ಕಂಡುಬರುತ್ತದೆ. ನಗರದ ಬಯಲು ಪ್ರದೇಶದಲ್ಲಿ ಗುಡಾರಗಳನ್ನು ಹಾಕಿಕೊಂಡು ದಿನನಿತ್ಯದ ಬದುಕನ್ನು ಸಾಗಿಸುತ್ತಿದ್ದಾರೆ.

ಬುಡ್ಗ ಜಂಗಮರನ್ನು ಮುಂದುವರೆದ ಇತರ ಸಮುದಾಯಗಳೊಂದಿಗೆ ಹೋಲಿಸಿ ನೋಡಿದಾಗ ಸಮಾಜದ ಕೆಳಸ್ತರದಲ್ಲಿ ಜೀವಿಸುತ್ತಿರುವುದು ಕಂಡುಬರುತ್ತದೆ. ಇವರು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿದ್ದರೂ ಯಾವುದೇ ರೀತಿಯ ಪ್ರಯೋಜನೆಗಳು ಈ ಸಮುದಾಯಕ್ಕೆ ಸಮರ್ಪಕವಾಗಿ ಸಿಗುತ್ತಿಲ್ಲ.

೩.೧.೨. ಬುಡ್ಗ ಜಂಗಮ ಪದ ನಿಷ್ಪತ್ತಿ

'ಬುಡಿಗೆ' ಎಂಬ ವಾದ್ಯವನ್ನು ನುಡಿಸುತ್ತಾ ಕಥೆ ಹೇಳುವವರನ್ನು ಬುಡ್ಗಜಂಗಮ ಎಂದು ಹೇಳಿದ್ದಾರೆ. ಮರವೂರು ಕೊದಂಡರಾಮರೆಡ್ಡಿ ಬರೆದ "ಮಾಂಡಲಿಕ ಪದಕೋಶಂ" ಎಂಬ ಗ್ರಂಥದಲ್ಲಿ ಇವರ ಕುರಿತು ವಿವರಿಸುತ್ತಾ ತಂದಾನಾ ಕಥೆಗಳನ್ನು ಹೇಳಿ ಜೀವಿಸುವ ಬುರ್ರಕಥೆಯವರು ಹಾಗೂ 'ಬುಡಗೇಲು' ವಾದ್ಯವನ್ನು ನುಡಿಸುತ್ತಾ ಭಿಕ್ಷೆ ಎತ್ತುವವರೇ ಬುಡ್ಗಜಂಗಾಲ ಜಾತಿಯವರು ಎಂದು ತಿಳಿಸಿರುತ್ತಾರೆ. ಹಗಲು ವೇಷ ಹಾಕುವ ಜನರನ್ನು ಬುಡ್ಗಜಂಗಾಲ ಎಂದು ಕರೆದಿರುವುದಾಗಿ ಹಗಲು ವೇಷದವರ ಸಂಸ್ಕೃತಿ ಎಂಬ ಪುಸ್ತಕದಲ್ಲಿ ಯಳನಾಡು ಅಂಜನಪ್ಪನವರು ದಾಖಲಿಸಿದ್ದಾರೆ.

ಆಂಧ್ರ ಪ್ರದೇಶದ ತೆಲಂಗಾಣ ಪ್ರಾಂತ್ಯದಲ್ಲಿ ಬೇಟೆಯಾಡಿ ಜೀವಿಸುವ ಜನರನ್ನು ಬೋಯಿ ಎಂದು ಕರ್ನಾಟಕದಲ್ಲಿ 'ಬೇಡ' ಎಂದು ಕರೆಯಲಾಗುತ್ತಿದೆ. ಥರ್ಸ್ಟನ್ ಅವರು ಬೇಡರನ್ನು ಬೇಡ ಜಂಗಾಲು ಎಂದು ಕರೆದಿರುವುದರಲ್ಲಿ ಅರ್ಥವಿದೆ.

೩.೧.೩ ಬುಡ್ಗ ಜಂಗಮರ ಸಾಮಾಜಿಕ ಜೀವನ

ಭೂಮಿ ಮೇಲೆ ಬದುಕಿರುವ ಪ್ರತಿಯೊಬ್ಬ ಮಾನವನು ಸಮಾಜದೊಂದಿಗೆ ಅನನ್ಯ ಸಂಬಂಧವನ್ನು ಹೊಂದಿದ್ದಾನೆ. ಸಮಾಜವನ್ನು ಬಿಟ್ಟು ಬದುಕುವ ಶಕ್ತಿ ಆತನಿಗಿಲ್ಲ. ಮಾನವ ಮತ್ತು ಸಮಾಜ ಎರಡೂ ಬಿಡಸಲಾರದ ಸಂಬಂಧಗಳಾಗಿವೆ. ಮಾನವನು ಸಮಾಜದಿಂದಲೆ ಎಲ್ಲವನ್ನು ಪೂರೈಸಲಾರದ ಸಂಬಂಧಗಳಾಗಿವೆ. ಮಾನವನು ಸಮಾಜದಿಂದಲೆ ಎಲ್ಲವನ್ನು ಪೂರೈಸಿಕೊಳ್ಳುತ್ತಾನೆ ಮತ್ತು ಮಾನವನಿಂದಲೆ ಸಮಾಜದ ಬೆಳವಣಿಗೆಯೂ ಸಹ ಸಾಧ್ಯವಾಗುತ್ತದೆ ಒಬ್ಬ ಮಾನವನು ಇತರರಂತೆ ಗುರುತಿಸಿಕೊಳ್ಳಲು ಸಮಾಜವು ಬಹು ಮುಖ್ಯವಾದ ಕೊಡುಗೆಯನ್ನು ನೀಡಿದೆ.

ಬುಡ್ಗ ಜಂಗಮ ಸಮುದಾಯವು ಕೂಡ ತಮ್ಮದೆಯಾದಂತಹ ಸಮುದಾಯಿಕ, ಸಾಮಾಜಿಕ ಜೀವನ ನಡೆಸುತ್ತಿದ್ದಾರೆ. ಇವರು ಅಲೆಮಾರಿ ಜೀವನ ನಡೆಸುವುದರೊಂದಿಗೆ ತಮ್ಮ ಸಂಸ್ಕೃತಿ ಆಚಾರ ವಿಚಾರಗಳು ನಡೆ-ನುಡಿಗಳು ನೈತಿಕ ನಿಯಮಗಳು ರೂಢಿ ಸಂಪ್ರದಾಯಗಳು ಯಾವಾಗಲೂ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ನಿರಂತರ ಅಲೆದಾಡುತ್ತಿರುತ್ತವೆ. ಇತರ ಸಮುದಾಯದವರಂತೆ ಸಮಾಜದಲ್ಲಿ ಬುಡ್ಗಜಂಗಮರು ಬದುಕನ್ನು ನಡೆಸುತ್ತಿರುವುದು ಕಂಡುಬರುತ್ತದೆ.

ಕುಟುಂಬ ರಚನೆ

ಬುಡ್ಗಜಂಗಮರಲ್ಲಿ ಸಾಮಾನ್ಯವಾಗಿ ಅವಿಭಕ್ತ ಕುಟುಂಬಗಳು ಹೆಚ್ಚಾಗಿ ಕಂಡುಬರುತ್ತವೆ. ಕುಟುಂಬದ ಎಲ್ಲಾ ಜವಬ್ದಾರಿಯನ್ನು ಯಜಮಾನನ ವಹಿಸಿಕೊಂಡಿದ್ದು ಆಗು-ಹೋಗುಗಳನ್ನು ಆತನೆ ನೋಡಿಕೊಳ್ಳುತ್ತಾನೆ. ಕುಟುಂಬದಲ್ಲಿ ಎಲ್ಲರು ಸಾಮೂಹಿಕವಾಗಿ ದುಡಿಯುತ್ತಾರೆ. ಬಂದ ಆದಾಯವನ್ನು ಕುಟುಂಬದ ಮುಖ್ಯಸ್ಥನ

ಕೈಯಲ್ಲಿ ಕೊಡುತ್ತಾರೆ. ಆತನೆ ಹಬ್ಬ-ಹರಿದಿನಗಳಲ್ಲಿ ಬಂದ ಆದಾಯದ ಹಣವನ್ನು ವಿವಿಧ ವಸ್ತುತರಲು ಮತ್ತು ಬಟ್ಟೆ ತರಲು ಉಪಯೋಗಿಸುತ್ತಾರೆ. ಕುಟುಂಬದ ಯಜಮಾನ ಇಲ್ಲದಿದ್ದರೆ ಜವಬ್ದಾರಿಯನ್ನು ಹಿರಿಯ ಮಗ ನಿರ್ವಹಿಸುತ್ತಾನೆ. ಒಂದು ವೇಳೆ ಮಕ್ಕಳು ಚಿಕ್ಕವರಾಗಿದ್ದರೆ ಕುಟುಂಬದ ಜವಬ್ದಾರಿ ಹೆಂಡತಿಯಾದವಳೆ ನಿರ್ವಹಿಸುತ್ತಾಳೆ. ಬುಡ್ಗಜಂಗಮರು ಇತ್ತೀಚಿನ ದಿನ ವ್ಯಾಪಾರ-ಕೂಲಿ ಕೆಲಸಗಳನ್ನು ಮಾಡಲು ಪ್ರಾರಂಭಿಸಿದ್ದಾರೆ. ಆಧುನಿಕತೆಗೆ ಒಳಗಾಗಿರುವ ಬುಡ್ಗಜಂಗಮರು ಅವಿಭಕ್ತ ಕುಟುಂಬದಿಂದ ಬೇರೆ ಆಗಿ ತಮ್ಮ ಹೆಂಡತಿ ಮಕ್ಕಳೊಂದಿಗೆ ವಿಭಕ್ತವಾಗಿ ಜೀವಿಸಲು ಪ್ರಾರಂಭಿಸಿರುವುದು ಕಂಡುಬರುತ್ತದೆ ಮತ್ತು ನನ್ನಕ್ಷೇತ್ರಕಾರ್ಯದ ಸಂದರ್ಭದಲ್ಲಿ ಇಂತಹ ವಿಭಕ್ತ ಕುಟುಂಬಗಳು ಇರುವುದು ಕಂಡುಬಂದವು.

ಬಳಿ, ಬೆಡಗು

ಬುಡ್ಗಜಂಗಮರು ತಮ್ಮನ್ನು ಗುರುತಿಸಿಕೊಳ್ಳುವುದಕ್ಕೆ ಮುಖ್ಯವಾಗಿ ಬೆಡಗುಗುಳ ಮೂಲಕ ಗುರುತಿಸಿಕೊಳ್ಳುತ್ತಾರೆ. ಇತರರೊಂದಿಗೆ ಸಂಬಂಧ ಬೆಳೆಸಲು ಈ ಬೆಡಗುಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಮುಖ್ಯವಾಗಿ ಬುಡ್ಗಜಂಗಮರಲ್ಲಿ ೧೫೫ ಬೆಡಗುಗಳು ಕಂಡುಬರುತ್ತಿದ್ದು ಅವುಗಳಲ್ಲಿ ಇಂದು ಎಷ್ಟೋ ಕಾಣೆಯಾಗಿವೆ. ಶಹಾಪುರದಲ್ಲಿ ವಾಸವಾಗಿರುವ ಬುಡ್ಗಜಂಗಮರ ಬೆಡಗುಗಳು. 'ರೇವಲ' ಎನ್ನುವ ಬೆಡಗಿನವರು ಹೆಚ್ಚಾಗಿ ವಾಸವಾಗಿದ್ದಾರೆ. ಇತರೆ ಬೆಡಗಿನವರು ಇದ್ದರೂ ಸ್ವಲ್ಪ ಕುಟುಂಬಗಳು ಮಾತ್ರವೇ ಕಂಡುಬರುತ್ತವೆ.

ಆಹಾರ ಪದ್ಧತಿ

ಭೂಮಿ ಮೇಲೆ ಅದರಲ್ಲೂ ಸಮಾಜದಲ್ಲಿ ಬದುಕಿರುವ ಪ್ರತಿಯೊಬ್ಬ ಜೀವಿಗಳು ಆಹಾರ ಅವಶ್ಯವಾಗಿ ಬೇಕು ಅದಿಲ್ಲದಿದ್ದರೆ ಮಾನವ ಬದುಕಲಾರ ಬುಡ್ಗಜಂಗಮರು ಸಹ ಸಸ್ಯಹಾರ ಮತ್ತು ಮಾಂಸಹಾರ ಗಳೆರಡನ್ನು ಸೇವಿಸುತ್ತಾರೆ. ಹೆಚ್ಚಾಗಿ ಇವರು ಮಾಂಸಹಾರವನ್ನು ಸೇವಿಸುತ್ತಾರೆ. ಬೇಟೆಯಾಡಿದ ಪ್ರಾಣಿಗಳನ್ನು ಸಹ ಸೇವಿಸುತ್ತಾರೆ. ದಿನನಿತ್ಯದ ಊಟದಲ್ಲಿ ತರಕಾರಿ ಬೇಳೆ ಪದಾರ್ಥಗಳನ್ನು ಸೇವಿಸುತ್ತಾರೆ. ಜೊತೆಗೆ ಕುರಿ-ಕೋಳಿ ಕೌಜುಗ, ಮೊಲ ಇತರ ಪ್ರಾಣಿಗಳ ಮಾಂಸವನ್ನು ಸೇವಿಸುತ್ತಾರೆ. ವಿಶೇಷವಾಗಿ ಈ ಸಮುದಾಯದ ಜನರು ಹಬ್ಬ-ಹರಿದಿನಗಳಲ್ಲಿ ಸಿಹಿ ಪದಾರ್ಥಗಳನ್ನು ಮಾಡಿಕೊಂಡು ಸೇವಿಸುತ್ತಾರೆ. ಹಬ್ಬವಾದ ನಂತರ ಕರಿ ದಿವಸದಿಂದ ಮಾಂಸವನ್ನು ಜೊತೆಗೆ ಹೆಂಡ ಸಾರಾಯಿಯನ್ನು ತಂದು ಕುಟುಂಬದ ಸದಸ್ಯರು ಎಲ್ಲರೂ ಸೇರಿ ಕುಡಿದು ತಿನ್ನುತ್ತಾರೆ. ಉಳಿದ ಪದಾರ್ಥ ಸಂರಕ್ಷಿಸಿ ಇಟ್ಟು ಬೆಳಿಗ್ಗೆ ಎದ್ದು ಅದನ್ನು ತಿಂದು ತಮ್ಮ ಕೆಲಸಗಳಿಗೆ ತೆರಳುತ್ತಾರೆ.

ವಸತಿ ವ್ಯವಸ್ಥೆ

ಬುಡ್ಗ ಜಂಗಮ ಸಮುದಾಯವು ಅಲೆಮಾರಿಯಾಗಿದ್ದು, ತಾವು ಸಂಚರಿಸುವ ಪ್ರದೇಶಗಳಲ್ಲಿ ತಾತ್ಕಾಲಿಕ ವಾಗಿ ನೆಲೆನಿಲ್ಲಲು ಗುಡಾರಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಗುಡಾರದ ಮುಂದೆಯೇ ಒಲೆಗಳನ್ನು ಹೂಡಿ

ಅಡುಗೆಯನ್ನು ಮಾಡುತ್ತಾರೆ. ಶಹಾಪೂರ ನಗರದಲ್ಲಿ ವಾಸಿಸುಂತಹ ಅಲೆಮಾರಿ ಬುಡ್ಗಜಂಗಮರು ಬಹುತೇಕ ಜನರು ಗುಡಾರಗಳನ್ನು ನಿರ್ಮಿಸಿಕೊಂಡು ವಾಸವಾಗಿದ್ದಾರೆ. ಇವರಿಗೆ ಇತ್ತೀಚೆಗೆ ನಿವೇಶನವನ್ನು ಸರ್ಕಾರದ ವತಿಯಿಂದ ನೀಡಿದ್ದರು. ಅದು ಸಮತಟ್ಟಾದ ಪ್ರದೇಶವಾಗಿರದ ಕಾರಣ ಆ ಪ್ರದೇಶಕ್ಕೆ ಹೋಗಲು ಅವರು ಮನಸ್ಸು ಮಾಡುತ್ತಿಲ್ಲ. ಶಹಾಪೂರದಲ್ಲಿ ಬುಡ್ಗಜಂಗಮರು ಸುಮಾರು ೩೦-೩೫ ಕುಟುಂಬಗಳು ವಾಸವಾಗಿರುವುದು ಕಂಡುಬರುತ್ತವೆ.

ಉಡುಗೆ - ತೊಡುಗೆ

ಬುಡ್ಗಜಂಗಮ ಸಮುದಾಯದವರು ಆರ್ಥಿಕವಾಗಿ ಬಹಳ ಹಿಂದುಳಿದವರಾಗಿದುದರಿಂದ ಇವರು ಇತರರಿಗಿಂತ ಸಾಮಾನ್ಯವಾದ ಬಟ್ಟೆಗಳನ್ನು ಹಾಕುತ್ತಾರೆ. ಇವರಲ್ಲಿ ಹಿರಿಯರು ಪಂಚೆ(ದೋತ್ರ) ಹಾಕುವರು. ಹೆಂಗಸರು ಸಾಮಾನ್ಯವಾದ ಸೀರೆ ಕುಪ್ಪಸವನ್ನು ತೊಡುತ್ತಾರೆ. ಯುವಕರು ಪ್ಯಾಂಟು ಶರ್ಟು ತೊಡುತ್ತಾರೆ. ಯುವತಿಯರು ಸೀರೆ, ರವಿಕೆ, ಲಂಗಾ, ದಾವಣೆ, ಚೂಡಿದಾರಗಳನ್ನು ಹಾಕುತ್ತಾರೆ. ಇವರು ಆರ್ಥಿಕವಾಗಿ ಬಡವರಾಗಿರುವುದರಿಂದ ಸಾಮಾನ್ಯವಾಗಿ ಆಭರಣಗಳನ್ನು ಬಂಗಾರದವು ದರಿಸದೆ ರೋಲ್ಡಗೋಲ್ಡ ಧರಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ವ್ಯಾಪಾರ ವೃತ್ತಿಯನ್ನು ಕೈಗೊಂಡಿರುವುದರಿಂದ ನಾಲ್ಕಾರು ಕಾಸು ಕೈಯಲ್ಲಿರುವುದರಿಂದ ಆರಭಣಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಇತರ ಸಮುದಾಯದವರಿಗಿಂತ ಬುಡ್ಗಜಂಗಮ ಸಮುದಾಯದವರು ಭಿನ್ನವಾಗಿ ಜೀವಿಸುದನ್ನು ಕಾಣಬಹುದು.

ಕುಲಪಂಚಾಯ್ತಿ

ಬುಡ್ಗಜಂಗಮ ಸಮುದಾಯದವರು ತಮ್ಮ ಒಳಜಗಳಗಳನ್ನು ನಿರ್ಣಯಗೊಳಿಸಲು ರಚಿಸಿಕೊಂಡಿರುವ ವ್ಯವಸ್ಥೆಯನ್ನು "ಕುಲದ ನ್ಯಾಯ" ಕುಲಪಂಚಾಯ್ತಿ ಎಂದು ಕರೆಯುತ್ತಾರೆ.

ಇವರಲ್ಲಿ ಪಂಚಾಯ್ತಿ ಮಾಡಲು ಸಮುದಾಯದಲ್ಲಿಯೇ ಒಬ್ಬರನ್ನು ಮುಖ್ಯಸ್ಥರನ್ನಾಗಿ ಆಯ್ಕೆ ಮಾಡುತ್ತಾರೆ. ಉಳಿದವರು ಇದರಲ್ಲಿ ಭಾಗವಹಿಸುತ್ತಾರೆ. ಇವರಲ್ಲಿ ವಿವಿಧ ಬೆಡಗಿನವರು ಸೇರಿ ಪಂಚಾಯ್ತಿ ಮಾಡುವುದುಂಟು.

ಬುಡ್ಗಜಂಗಮರಲ್ಲಿ ನ್ಯಾಯ ಪಂಚಾಯ್ತಿ ಏಳು ವಿಧಗಳಲ್ಲಿ ಮಾಡುವುದುಂಟು. ಇವುಗಳ ಮೂಲಕ ಪಂಚಾಯ್ತಿಯಲ್ಲಿ ನ್ಯಾಯ ಬಗೆಹರಿಸಿಕೊಳ್ಳುತ್ತಾರೆ.

೧. ಕಡ್ಡಿಕಟ್ಟುವುದು : ಇದರಲ್ಲಿ ಜಗಳವಾಡಿದ ವ್ಯಕ್ತಿಯ ಮೇಲೆ ಕಡ್ಡಿಕಟ್ಟಿ ನ್ಯಾಯ ಪರಿಹರಿಸುತ್ತಾರೆ.

೨. ಕುಲಪಂಚಾಯ್ತಿ : ಪಂಚಾಯ್ತಿದಾರರ ಸಮ್ಮುಖದಲ್ಲಿ ತಪ್ಪುಮಾಡಿದ ವ್ಯಕ್ತಿಗೆ ಇಬ್ಬರು ಸೇರಿ ೧೫ ರೂ.ಗಳನ್ನು ದಂಡವಿಧಿಸಿ ಮುಂದೆ ತಪ್ಪುಮಾಡದಂತೆ ತಿಳಿಸುತ್ತಾರೆ. ಇದಕ್ಕೆ ಕತಬಾ ಎನ್ನುವರು.

೩. ಸಾಲು : ಪಂಚಾಯ್ತಿಯ ಸಮ್ಮುಖದಲ್ಲಿ ಇಬ್ಬರು ಜಗಳವಾಡಿದ ವ್ಯಕ್ತಿಗಳು ಸೇರಿ ಜಗಳಕ್ಕೆ ಕಾರಣ ವಿವರಿಸುತ್ತಾರೆ. ಕೂಡಿ ಮುಡಿ (ತಪ್ಪುಒಪ್ಪು)ಗಳನ್ನು ತಿಳಿಸುವುದೇ ಸಾಲು.

೪. ಸಾಕ್ಷಿ : ಜಗಳವಾಡಿದ ವ್ಯಕ್ತಿಗಳು ಅಥವಾ ವ್ಯಭಿಚಾರ ಮಾಡಿದ ವ್ಯಕ್ತಿಗಳು ಸುಳ್ಳು ಹೇಳದಂತೆ ಗಿಡ ಮಗು ಹಾಗೂ ಇತರ ವಸ್ತುಗಳ ಮೇಲೆ ಪ್ರಮಾಣ ಮಾಡುತ್ತಾರೆ.

೫. ಸಾಟ್ಟಿ : ನ್ಯಾಯಪಂಚಾಯ್ತಿಯಲ್ಲಿ ಹಿಂದಿನ ತಪ್ಪುಗಳನ್ನು ನೇನಪಿಸಿ ಹೇಳುವುದಕ್ಕೆ ಸಾಟ ಎನ್ನುವರು.

೬. ತೀರ್ಪು : ನ್ಯಾಯ ಪಂಚಾಯ್ತಿಯಲ್ಲಿ ತಪ್ಪು ಮಾಡಿದವರಿಗೆ ದಂಡವನ್ನು ವಿಧಿಸಲು ಅಂಥವರಿಗೆ ಸಾಲು ಸಾಕ್ಷಿಗಳನ್ವಯ ದಂಡವಿದಿಸುವುದಾಗಿದೆ.

೭. ಮುಗಿಂಪು (ಮುಕ್ತಾಯ) : ಪಂಚಾಯ್ತಿಯಲ್ಲಿ ತಪ್ಪುಮಾಡಿದ ಇಬ್ಬರು ವ್ಯಕ್ತಿಗಳನ್ನು ಕೈಕೈ ಜೋಡಿಸಿ ಇನ್ನು ಮುಂದೆ ಯಾವ ತಪ್ಪು ಮಾಡುವುದಿಲ್ಲವೆಂದು ಹೇಳಿ ರಾಜಿ ಮಾಡಿಸುತ್ತಾರೆ. ನಂತರ ಎಲ್ಲರಿಗೂ ಶರಣಾರ್ಥಿ ಮಾಡಲು ಹೇಳಿ ಪಂಚಾಯ್ತಿ ಮುಗಿಸುತ್ತಾರೆ.

ಈ ರೀತಿಯಾಗಿ ಬುಡ್ಗಜಂಗಮ ಸಮುದಾಯದಲ್ಲಿ ಆದಿಕಾಲದಿಂದಲೂ ಕುಲ ಪಂಚಾಯ್ತಿ ನಡೆದು ಕೊಂಡು ಬಂದಿದೆ. ಇತ್ತೀಚಿನ ದಿನಗಳಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆಗಳಾಗಿರುವುದು ಕಂಡುಬರುತ್ತದೆ.

೩.೧.೪. ಬುಡ್ಗಜಂಗಮರ ರಾಜಕೀಯ ಸ್ಥಾನಮಾನ

ಬುಡ್ಗಜಂಗಮ ಸಮುದಾಯ ಅಲೆಮಾರಿ ಸಮುದಾಯವಾಗಿರುವುದರಿಂದ ಬಹು ದಿನಗಳಿಂದಲೂ ತಮ್ಮ ತುತ್ತಿನ ಚೀಲವನ್ನು ತುಂಬಿಸಿಕೊಳ್ಳಲು ಭಿಕ್ಷಾಟನೆ ಮತ್ತು ಇತರ ವೃತ್ತಿಗಳನ್ನು ಮಾಡಿ ಜೀವಿಸುತ್ತಿದ್ದಾರೆ. ಅಲೆಮಾರಿತನದಿಂದಾಗಿ ಸರಿಯಾಗಿ ಒಂದು ಕಡೆ ನೆಲೆನಿಲ್ಲಲಾಗದೆ ಶಿಕ್ಷಣದಿಂದ ವಂಚಿತರಾಗಿ ಬಡತನದಿಂದ ಕೂಡಿದ ಅಂದಕಾರದ ಜೀವನ ನಡೆಸುತ್ತಿದ್ದಾರೆ. ಈ ಸಮುದಾಯದಲ್ಲಿ ಇನ್ನೂ ಕೆಲವರು ಭಿಕ್ಷೆ ಬೇಡಿ ಜೀವಿಸುತ್ತಿದ್ದಾರೆ. ಕೆಲವರು ವ್ಯಾಪಾರ ಇನ್ನು ಕೆಲವರು ಕೂಲಿ ಕೆಲಸಮಾಡಿ ಜೀವನ ನಡೆಸುವುದು ಒಂದು ದೊಡ್ಡ ಕೆಲಸವಾಗಿದೆ. ಇನ್ನು ಇವರು ಒಂದು ಊರಿನಿಂದ ಇನ್ನೊಂದೂರಿಗೆ ನಿರಂತರ ಅಲೆಯುತ್ತಿರುತ್ತಾರೆ. ಇವರಿಗೆ ಗುರುತಿಸಿಕೊಳ್ಳಲು ಯಾವುದೇ ತರಹದ ಗುರುತಿನ ಚೀಟಿಯೂ ಸಹ ಇಲ್ಲ. ಹಾಗೂ ಈ ಜನರು ತುಂಬಾ ಕಡಿಮೆ ಈಗಾಗಿ ಆರ್ಥಿಕ ತೊಂದರೆಯೂ ಸಹ ಇವರನ್ನು ರಾಜಕೀಯದಿಂದ ವಂಚಿತರಾಗಲೂ ಪ್ರಮುಖವಾದ ಕಾರಣವಾಗಿದೆ.

ಬುಡ್ಗಜಂಗಮ ಸಮುದಾಯದವರು ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿದ್ದರೂ ಸಹ ಇವರಿಗೆ ಪರಿಶಿಷ್ಟ ಜಾತಿ ಪಟ್ಟಿಯಲ್ಲಿಯ ಪ್ರಬಲ ಜಾತಿಯ ಜನರು ಇದರ ಲಾಭವನ್ನು ಪಡೆದು ಕೊಳ್ಳುತ್ತಿದ್ದಾರೆ. ಇವರು ಆರ್ಥಿಕ ತೊಂದರೆಯನ್ನು ಎದುರಿಸುತ್ತಿದ್ದು, ರಾಜಕೀಯ ಪ್ರವೇಶಿಸಲು ಸಾಧ್ಯ ವಾಗುತ್ತಿಲ್ಲ. ಶಹಾಪುರ ನಗರದಲ್ಲಿ ವಾಸವಾಗಿರುವ ಬುಡ್ಗಜಂಗಮ ಸಮುದಾಯದವರನ್ನು ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಪ್ರಶ್ನಿಸಿದಾಗ, ನಮ್ಮಂತವರಿಗೆ ರಾಜಕೀಯ ಯಾಕೆ ಬೇಕು ಎಂದು ಸ್ವಾಮಿ ಎಂದು ಉತ್ತರಿಸುತ್ತಾರೆ. ಬುಡ್ಗಜಂಗಮ ಸಮುದಾಯದವರು ನಾವು ಅಲೆಮಾರಿಗಳು ನಮ್ಮಂಥವರಿಗೆ

ರಾಜಕೀಯ ಅವಕಾಶವನ್ನು ಯಾರು ಕೊಡುತ್ತಾರೆ ಎಂಬ ಭಾವನೆ ಇದೆ. ಇತ್ತೀಚೆಗೆ ಈ ಸಮುದಾಯದಲ್ಲಿ ಕೆಲ ಒಬ್ಬರು ರಾಜಕೀಯದಲ್ಲಿ ತೊಡಗಿಕೊಳ್ಳುತ್ತಿರುವುದು ಕಂಡುಬರುತ್ತದೆ. ಬುಡ್ಗಜಂಗಮ ಸಮುದಾಯದ ಜನರಿಗೆ ರಾಜಕೀಯದಲ್ಲಿ ಅವಕಾಶ ಸಿಗಬೇಕಾದರೆ ತಮ್ಮಲ್ಲಿಯ ಪ್ರಮುಖವಾದ ವ್ಯಕ್ತಿಯನ್ನು ಬೆಳೆಸಿದಾಗ ಮಾತ್ರ ಅವಕಾಶ ಪಡೆಯಲು ಸಾಧ್ಯ. ಹಾಗೂ ತಮ್ಮಲ್ಲಿಯೇ ಒಬ್ಬ ನಾಯಕನು ಅಧಿಕಾರ ಪಡೆದರೆ ತಮ್ಮ ಸಮುದಾಯ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ ಎನ್ನುವ ನಂಬಿಕೆ ಅವರದು.

೩.೧.೫. ಬುಡ್ಗಜಂಗಮರ ಧಾರ್ಮಿಕ ಜೀವನ

ಬುಡ್ಗ ಜಂಗಮ ಸಮುದಾಯದವರು ತಾವು ವಾಸಿಸುವ ಪ್ರದೇಶಗಳಲ್ಲೆ ಧಾರ್ಮಿಕವಾದ ಆಚರಣೆಗಳನ್ನು ಮಾಡುತ್ತಾರೆ. ಆಯಾ ಬೆಡಗಿನವರು ಪೂಜಿಸುವ ದೇವರುಗಳನ್ನು ತಮ್ಮ ಗುಡಾರಗಳ ಮುಂದೆಯೆ ನಿರ್ಮಿಸಿಕೊಂಡು ವಾರಕ್ಕೆ ಒಂದು ಬಾರಿ ವಿಶೇಷವಾಗಿ ಪೂಜೆ ಮಾಡುತ್ತಾರೆ. ಈ ಕುಲದ ಪ್ರಮುಖ ದೇವರುಗಳು. 'ಜಂಬಲಮ್ಮ' ಮತ್ತು 'ಸುಂಕಲಮ್ಮ' ಈ ದೇವತೆಗಳ ಆರಾಧನೆಯನ್ನು ವರ್ಷಕ್ಕೆ ಒಂದು ಬಾರಿ ಮಾಡುತ್ತಾರೆ. ಈ ದೇವತೆಗಳಿಗೆ ಕುರಿಯನ್ನು ಬಲಿಕೊಡುವುದರ ಮೂಲಕ ತಮ್ಮ ಹರಕೆಯನ್ನು ತಿರಿಸಿಕೊಳ್ಳುತ್ತಾರೆ. ಈ ದೇವತೆಗಳು ಒಬ್ಬಳನ್ನು ಬಂಡಾರದ ಭರಣಿ ಮತ್ತು ಕುಂಕುಮದ ಭರಣಿಯವಳೆಂದು ಹೇಳುತ್ತಾರೆ. ಬುಡ್ಗಜಂಗಮರಲ್ಲಿ ಎರಡು ವಿಧಾವಾದ ಆರಾಧನೆ ಪದ್ಧತಿಯಿದೆ.

೧. ದೇವತಾರಾಧನೆ ದೈವಗಳು	೧. ಮಾರೆಮ್ಮ	೨. ಸುಂಕಲ್ಲಮ್ಮ
	೩. ಜಮ್ಮಕ್ಕ	೪. ಹುಲಿಗೆಮ್ಮ
	೫. ದುರ್ಗಮ್ಮ	೬. ಯಲ್ಲಮ್ಮ
೨. ಭೂತಾರಾಧನೆ ದೈವಗಳು	೧. ದೆವ್ವಗಳ ಪೂಜೆ	೨. ಕೊಡದ ಶಕುನ
	೩. ಚೆಂಬುತಾಟನಕಿನೆ ತೆಡ್ಡುಕುಂಡ ಸಕಿನ ಗಡಿಗೆ	

ಇವರು, ಶಿಷ್ಟ ದೇವತೆಗಳಾದ ಶಿವ, ಆಂಜನೇಯಸ್ವಾಮಿ, ವೆಂಕಟರಮಣ ಜೊತೆಗೆ ಮುಸ್ಲಿಂ ದೇವರುಗಳನ್ನು ಸಹ ಪೂಜಿಸುತ್ತಾರೆ. ಜೊತೆಗೆ ಮೊಹರಂ ಕೂಡಾ ಆಚರಿಸುತ್ತಾರೆ.

ಹಬ್ಬಗಳು

ಬುಡ್ಗಜಂಗಮ ಸಮುದಾಯದವರು ಮೂಲತಃ ಅಲೆಮಾರಿ ಭಿಕ್ಷುಕರಾಗಿರುವುದರಿಂದ ಹಬ್ಬಗಳನ್ನು ಮಾಡುವುದು ಬಹಳ ಅಪರೂಪ. ಇವರು ವರ್ಷಕ್ಕೆ ಒಂದು ಬಾರಿ ತಮ್ಮ ದೇವತೆಗಳಿಗೆ ಕುರಿ ಅಥವಾ ಕೋಳಿ ಬಲಿ ಕೊಟ್ಟು ಅದನ್ನು ಕುಟುಂಬದ ಎಲ್ಲಾ ಜನರು ತಿಂದು ಹಬ್ಬವನ್ನು ಆಚರಿಸುತ್ತಾರೆ.

೩.೧.೬. ಬುಡ್ಗ ಜಂಗಮರ ಸಾಂಸ್ಕೃತಿಕ ಜೀವನ

ಸಂಸ್ಕೃತಿ ಎಂಬುವುದು ಬಹು ಅರ್ಥ ವ್ಯಾಪ್ತಿಯುಳ್ಳ ಪರಿಕಲ್ಪನೆಯಾಗಿದೆ. ಇದು ಮಾನವ ಜೀವನದ ಪ್ರತೀಕ. ಅದು ಮಾನವನ ನಡತೆಯನ್ನು ನಮ್ಮ ಧಾರ್ಮಿಕ ಹಾಗೂ ನೈತಿಕತೆಯನ್ನು ರೂಢಿ ಸಂಪ್ರದಾಯ

ಗಳನ್ನು ನಂಬಿಕೆ ಮೌಲ್ಯಗಳನ್ನು ಆಚರಣೆ-ಆದರ್ಶಗಳನ್ನು ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳನ್ನು ಒಳಗೊಂಡಿದೆ. ಮಾನವನ ವ್ಯಕ್ತಿಗತ ಮತ್ತು ಸಾಮಾಜಿಕ ಜೀವನದಲ್ಲಿ ಮಾನವ ಸಂಪಾದಿಸಿರುವ ಎಲ್ಲ ಅಂಶಗಳನ್ನು ಸಂಸ್ಕೃತಿ ಒಳಗೊಂಡಿರುತ್ತದೆ.

ಸಂಸ್ಕಾರಗಳು

ವಿವಾಹ : ವಿವಾಹವು ಮಾನವನ ಬದುಕಿನ ಪ್ರತಿಯೊಂದು ಸಂಸ್ಕಾರಗಳಿಗಿಂತ ಪವಿತ್ರ ಮತ್ತು ಪ್ರಮುಖವಾದುದು. ಪ್ರತಿಯೊಂದು ಮಾನವ ಜೀವಿಗೆ ಗೃಹಸ್ಥಾಶ್ರಮ ಪ್ರಮುಖ ಘಟ್ಟ. ಮಾನವನ ಇಂದ್ರಿಯ ಸಹಜ ಬಯಕೆಯನ್ನು ಇಡೇರಿಸಿಕೊಳ್ಳಲು ವಿವಾಹ ಬಹುಮುಖ್ಯವಾಗಿದೆ. ಮೂಲತಃ ಅಲೆಮಾರಿ ಗಳಾದ ಬುಡ್ಗಜಂಗಮರು. ಸರಳವಾದ ಹಾಗೂ ವಿಶಿಷ್ಟವಾದ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಇವರು ಮದುವೆಯನ್ನು ಸಾರಾಯಿ ಕುಡಿಯಲು ಹೋದಾಗ ಮತ್ತು ಬೇಟೆಗೆ ಹೋದಾಗ ಮಾತುಕೊಡುವುದರ ಮೂಲಕ ವಿವಾಹ ಕಾರ್ಯಗಳು ನಡೆಯುತ್ತವೆ.

ಇವರಲ್ಲಿ ಬಾಲ್ಯ ವಿವಾಹಗಳು ಹೆಚ್ಚಾಗಿ ನಡೆಯುತ್ತವೆ. ಆದುದರಿಂದ ಹುಡುಗಿ ದೊಡ್ಡವಳಾದ ಮೇಲೆ ಹುಡುಗಿ ತಂದೆ-ತಾಯಿಗಳು ಗಂಡನ ಊರಿಗೆ ಹೋಗಿ ನಮ್ಮ ಹುಡುಗಿ ದೊಡ್ಡವಳಾಗಿದ್ದಾಳೆ. ತಿಂಡಿತಿನ್ನುವ ಹಾಗೆ ಆಗಿದ್ದಾಳೆ. ಬಟ್ಟೆ ಕಟ್ಟುವವಳೇ ಆಗಿದ್ದಾಳೆ ಎಂದು ಹೇಳಿಬರುತ್ತಾರೆ. ಇದಲ್ಲದೆ ಈ ಸಮುದಾಯದಲ್ಲಿ ಬಹುಪತ್ನಿತ್ವ ವಿವಾಹಗಳು ಹೆಚ್ಚಾಗಿ ಕಂಡುಬರುತ್ತವೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ವಿವಾಹದ ಬಗ್ಗೆ ಕೇಳಿದ ಪ್ರಶ್ನೆಗೆ ಹೆಚ್ಚಾಗಿ ಈ ಸಮುದಾಯದ ಜನರು ಎರಡೇರಡೂ ಮದುವೆ ಆಗಿರುವುದು ಕಂಡುಬರುತ್ತದೆ. ಇವರಲ್ಲಿ ಮದುವೆ ಕಾರ್ಯಗಳು ಇತರ ಸಮುದಾಯಗಳಿಗಿಂತ ಭಿನ್ನವಾಗಿ ಮಾಡುತ್ತಾರೆ. ಇವರಲ್ಲಿ ವಿವಾಹ ವಿಚ್ಛೇಧನಕ್ಕೆ ಅವಕಾಶವಿದೆ ಜೊತೆಗೆ ಮರು ವಿವಾಹಕ್ಕೂ ಅವಕಾಶವಿರುವುದು ಕಂಡುಬರುತ್ತದೆ.

ಜನನ : ಬುಡ್ಗಜಂಗಮ ಸಮುದಾಯದಲ್ಲಿ ಹೇರಿಗೆ ಸಮಯದಲ್ಲಿ ಮಂತ್ರಸಾನಿ ಎಂಬ ಸಮುದಾಯದ ಅನುಭವಸ್ಥೆ ಇರುತ್ತಾಳೆ. ಇವಳು ಹೆರಿಗೆಯನ್ನು ಆಗುವವರೆಗೆ ಅವಳ ಜೊತೆಗೆ ಇದ್ದು ಹೆರಿಗೆಯಾದ ನಂತರ ಮಗುವಿನ ಹೊಕ್ಕಳ ಬಳ್ಳಿಯನ್ನು ಈಳಿಗೆಯಿಂದ ಕೊಯ್ದು ಹರಿಸಿನ ಎಣ್ಣೆ ಹೊಕ್ಕಳಿಗೆ ಹಚ್ಚುತ್ತಾಳೆ. ನಂತರ ಮಾಸವನ್ನು ಗುಡಾರದ ಮುಂದೆ ಹೊಸ ಮಡಿಕೆಯಲ್ಲಿ ಹಾಕಿ ಹೂಳುತ್ತಾರೆ. ಹೆರಿಗೆಯಾದ ಮೇಲೆ ಬಾಣಂತಿ ಹಾಗೂ ಮಗು ಇಬ್ಬರು ಇರುವ ಗುಡಾರದ ಸುತ್ತ ಮುತ್ತಲು ಮಂತ್ರಿಸಿದ ಬೂದಿಹಾಕುತ್ತಾರೆ ಇದನ್ನು ಈ ಸಮುದಾಯದವರು "ಪೊತ್ತಿ ಕಟ್ಟಡಂ" ಎಂದು ಕರೆಯುತ್ತಾರೆ.

ನಾಮಕರಣ : ಬುಡ್ಗಜಂಗಮರು ಮಗು ಜನಿಸಿದ ಮೂರು ದಿನಕ್ಕೆ ನಾಮಕರಣವನ್ನು ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳುವರು. ಆದಿನ ಎಲ್ಲರಿಗೂ ಹೆಂಡವನ್ನು ಹಂಚಿ ಬಾಣಂತಿಗೆ ತಿನ್ನಲು ಆಹಾರವನ್ನು ಕೊಟ್ಟು ಮಗುವಿಗೆ ಬಜ್ಜಿಯ ತುಂಡುಗಳನ್ನು ಹಾಕಿ ಅಂದು ರಾತ್ರಿ ಮಗುವಿಗೆ ಹೆಸರಿಡುತ್ತಾರೆ. ನಂತರ ಸಮುದಾಯದ ಎಲ್ಲಾ ಜನರಿಗೆ ಸಿಹಿ ಊಟ ಹಾಕಿಸುತ್ತಾರೆ.

ಋತುಮತಿ : ಹೆಣ್ಣು ಬಾಲ್ಯವಸ್ಥೆಯನ್ನು ಕಳೆದು ಯೌವ್ವನಾವಸ್ಥೆಗೆ ಬರುವ ಈ ದಿಸೆಯಲ್ಲಿ ಹೆಣ್ಣಿನ ಶಾರೀರಿಕ ಬದಲಾವಣೆಯಿಲ್ಲದ ಜನನಾಂಗದಲ್ಲಿಯೂ ಬದಲಾವಣೆ ಕಂಡುಬರುತ್ತಿದೆ. ಈ ಸುದ್ದಿಯನ್ನು ಸೊದರ ಮಾವನಿಗೆ ತಿಳಿಸಿದರೆ, ಆತ ಪ್ರತ್ಯೇಕವಾದ ಗುಡಾರವನ್ನು ಹಾಕಿ ಅದರಲ್ಲಿ ಅವಳನ್ನು ಇರಿಸುತ್ತಾನೆ. ಇವಳ ಜೊತೆ ಇನ್ನೊಬ್ಬರನ್ನು ಜೊತೆಯಲ್ಲಿ ಇರಿಸುತ್ತಾರೆ. ಜೊತೆಗೆ ಊಟವನ್ನು ಪ್ರತ್ಯೇಕ ವಾಗಿಯೆ ಕೊಡುತ್ತಾರೆ.

ಈ ಸಮುದಾಯದಲ್ಲಿ ಋತುಮತಿಯಾದವಳನ್ನು ಐದು ಅಥವಾ ಏಳುದಿನಗಳವರೆಗೆ ಅಂದರೆ ಸೂತಕ ಕಳೆಯುವವರೆಗೆ ಈ ಕಾರ್ಯ ಮಾಡುತ್ತಾರೆ. ನಂತರ ಗುಡಾರಕ್ಕೆ ಗೋಮೂತ್ರ ಸಿಂಪಡಿಸಿ ಅವಳನ್ನು ಸ್ನಾನ ಮಾಡಿಸಿ ದೇವರಿಗೆ ನಮಸ್ಕರಿಸಿ ಗುಡಾರದೊಳಗೆ ಕರೆದುಕೊಳ್ಳುತ್ತಾರೆ. ನಂತರ ಆದಿನ ಮಾಂಸದ ಊಟವನ್ನು ಮಾಡಿಸಿ ಆಕೆಗೆ ತಿನಿಸಿ ಕುಲಬಾಂಧವರೆಲ್ಲರಿಗೂ ಊಟವನ್ನು ಹಾಕಿಸುತ್ತಾರೆ.

ಮರಣ : ಬುಡ್ಗಜಂಗಮ ಸಮುದಾಯದಲ್ಲಿ ಯಾವುದೇ ವ್ಯಕ್ತಿ ಸಮುದಾಯದ ಎಲ್ಲಾ ಜನರು ಸೇರಿ ಹೆಣವನ್ನು ಸ್ನಾನಮಾಡಿಸಿ ಗುಡಾರದ ಮುಂದೆ ಕೂಡಿಸುವರು. ನಂತರ ಸುದ್ದಿಯನ್ನು ತಮ್ಮ ಸಂಬಧಿಕರಿಗೆ ತಿಳಿಸುವರು. ಅವರಲ್ಲಿ ಮುಖ್ಯವಾದ ವ್ಯಕ್ತಿ ಬರುವವರಿದ್ದರೆ, ರಾತ್ರಿ ಶವ ಇಟ್ಟು ಭಜನೆ ಮಾಡುವರು ಈ ಸಮುದಾಯದಲ್ಲಿ ಶವವನ್ನು ಹೂಳುವ ಪದ್ಧತಿಯಿದೆ. ಇವರಲ್ಲಿ ವಯಸ್ಕರರು ಸತ್ತರೆ ಎಲ್ಲಾ ಕಾರ್ಯಗಳನ್ನು ಮಾಡುವರು. ಬಾಣಂತಿ ಸತ್ತರೆ ಆ ಹೆಣವನ್ನು ಸುಡುತ್ತಾರೆ. ನಂತರ ಮೂರು ದಿನಗಳವರೆಗೆ ಸೂತಕ ವಿರುತ್ತದೆ. ಮೂರು ದಿನದನಂತರ ವ್ಯಕ್ತಿಯನ್ನು ಹೂಳಿದ ಜಾಗಕ್ಕೆ ಹೋಗಿ ಆತ ಬದುಕಿದ್ದಾಗ ಇಷ್ಟಪಡುತ್ತಿದ್ದ ಆಹಾರ ಪದಾರ್ಥಗಳನ್ನು ಕುಣಿಯ ಮೇಲೆ ಅಥವಾ ಸಮಾದಿ ಮೇಲೆ ಇಟ್ಟು ಬರುತ್ತಾರೆ. ಆ ವಸ್ತುಗಳನ್ನು ಕಾಗೆ ಮುಟ್ಟಿದರೆ ಆತನ ಆತ್ಮಕ್ಕೆ ಶಾಂತಿ ಸಿಕ್ಕಿದೆ ಎಂಬ ನಂಬಿಕೆಯಿದೆ. ಹಾಗೂ ಇವರಲ್ಲಿ ಸತ್ತ ವ್ಯಕ್ತಿಗಳು ದೆವ್ವ-ಭೂತಗಳಾಗುತ್ತಾರೆ ಎಂಬ ನಂಬಿಕೆ ಇನ್ನು ಜೀವಂತವಾಗಿರುವುದು ಕಂಡುಬರುತ್ತದೆ.

೩.೨ ಚೆನ್ನದಾಸರು

೩.೨.೧. ಚಾರಿತ್ರಿಕ ಹಿನ್ನೆಲೆ

ಪೌರಾಣಿಕ ಹಿನ್ನೆಲೆ : ಪ್ರತಿಯೊಂದು ಸಮುದಾಯವು ತನ್ನದೇ ಆದ ಚಾರಿತ್ರಿಕ ಹಿನ್ನೆಲೆಯನ್ನು ಪರಂಪರೆಯನ್ನು ಕಟ್ಟಿಕೊಳ್ಳುವುದು ನಮ್ಮಲ್ಲಿ ರೂಢಿಗೆ ಬಂದಿದೆ. ಈ ಹಿನ್ನೆಲೆ ಅಥವಾ ಧಾರ್ಮಿಕ ಮೂಲ ಪುರುಷರಿನಿಂದಿರಬಹುದು. ಪೌರಾಣಿಕ ವ್ಯಕ್ತಿ ಅಥವಾ ಸಂಗತಿಯಿಂದಿರಬಹುದು. ಚಾರಿತ್ರಿಕ ವ್ಯಕ್ತಿ ಅಥವಾ ಘಟನೆಯನ್ನಾಧರಿಸಿರಬಹುದು. ಇಲ್ಲವೇ ಸಾಮಾಜಿಕ ಸಂಗತಿಯನ್ನವಲಂಬಿಸಿರಬಹುದು. ತನ್ನ ಸಮುದಾಯ ಕ್ಕೊಂದು ಧೀರ್ಘ ಮತ್ತು ಹೆಮ್ಮೆ ತರುವ ಪರಂಪರೆ ಇರಬೇಕೆಂದು ಪ್ರತಿ ಸಮುದಾಯವು ಬಯಸುತ್ತದೆ.

ಚೆನ್ನದಾಸರ ಸಮುದಾಯವು ಚದುರಿ ಹೋಗಿರುವ ಕಡಿಮೆ ಜನಸಂಖ್ಯೆಯ ಸಮುದಾಯವಾಗಿದೆ.

ಇದು ಶೈಕ್ಷಣಿಕವಾಗಿಯೂ ತೀರಾ ಹಿಂದುಳಿದಿದೆ. ಸಂಘಟನಾತ್ಮಕವಾಗಿಯೂ ಅಷ್ಟೇ ಹಿಂದಿದೆ. ಹೀಗಿರುವ ಈ ಸಮುದಾಯ ತನಗೊಂದು ಐತಿಹಾಸಿಕ ಹಿನ್ನೆಲೆಯಿದೆ ಎಂಬುದನ್ನು ಗಮನಿಸಲು ಮುಂದಾಗಿಲ್ಲ. ಪೌರಾಣಿಕವಾಗಿಯೂ ಅಷ್ಟೇ. ಪ್ರತಿ ಸಮುದಾಯವು ತಮ್ಮ ವಂಶವು ಒಬ್ಬ ಮಹರ್ಷಿಯಿಂದಲೇ ಆರಂಭವಾದ ಗೋತ್ರಕ್ಕೆ ಸಂಬಂಧಿಸಿದೆಂಬುದು ಸಾಮಾನ್ಯವಾಗಿ ಹೇಳುವ ರೂಢಿ ನಮ್ಮ ದೇಶದಲ್ಲಿದೆ. ಆದರೆ ದಾಸರ ವಂಶದ ಮೂಲ ಪುರುಷನು ಯಾವ ಋಷಿಯೂ ಆಗಿರದೆ ಸಾಮಾನ್ಯ ಮಾನವನಾಗಿದ್ದಾನೆ. ಅಜಮಿಳ ಎಂಬ ವ್ಯಕ್ತಿಯು ಊರ ಹೋರಗೆ ಜೀವಿಸುತ್ತಿನು. ಅಂತ್ಯಜ ಕುಲದವನಾಗಿದ್ದನೆಂದು ಹೇಳುವರು. ಈತನು ಸಮೀಪದ ಅರಣ್ಯದಿಂದ ಸೌದೆ ತಂದು ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದನು. ಅದೇ ಹಳ್ಳಿಯ ಇನ್ನೊಂದು ಹೊರಬದಿಯಲ್ಲಿ ಬಹಿಷ್ಕೃತ ಉಚ್ಚಕುಲದ ಸ್ತ್ರೀಯೋರ್ವಳು ರೂಪ ಜೀವಿಯಾಗಿ ಜೀವಿಸುತ್ತಿದ್ದಳು. ಅಜಮಿಳನಿಗೂ ಆಕೆಗೂ ಸಂಬಂಧವಾಗಿ ಇಬ್ಬರು ಕೂಡಿ ಜೀವಿಸುತ್ತಿದ್ದರು. ಕಲಾಂತರದಲ್ಲಿ ಅವರಿಗೆ ಗಂಡು, ಹೆಣ್ಣು ಮಕ್ಕಳಾದರು ಈತನು ಅತಿ ಕಾಮುಖನಾಗಿದ್ದರಿಂದ ತನ್ನ ಮಗಳನ್ನೇ ಕೂಡಿ ಕಾಮತೃಷೆಯನ್ನು ತಣಿಸಿಕೊಂಡನು. ತನ್ನ ಅವಸಾನ ಕಾಲದಲ್ಲಿ ಆಪ್ರಯತ್ನವಾಗಿ ತನ್ನ ಕೊನೆಯ ಮಗನಾದ ನಾರಾಯಣನನ್ನು ಕೂಗಿದನು. ಭಗವಂತನ ಸ್ಮರಣೆ ಮಾಡಿದರಿಂದ ಆತನು ಮಾಡಿದ ಪಾಪಗಳೆಲ್ಲಾ ತೊಳೆದು ಹೋಗಿ ಆತನನ್ನು ವೈಕುಂಠಕ್ಕೆ ಒಯ್ಯಲಾಯಿತು. ಈ ಸಂತತಿಯೇ ಈಗಿನ ದಾಸರು (ಹಿಮ್ಮಡಿ ಬಿ. ಯಲ್ಲಪ್ಪ:೨೦೦೮:೩೦) ಎಂದು ಉಲ್ಲೇಖಿಸಲಾಗಿದೆ."

"ಮತ್ತೊಂದು ನಂಬಿಕೆಯ ಪ್ರಕಾರ ಬ್ರಾಹ್ಮಣನಾದ ಅಜಮಿಳನು ಕೆಳಜಾತಿಯ ಹೆಣ್ಣನ್ನು ಮದುವೆಯಾದನು. ಮುಂದೆ ಅವನಿಗೊಂದು ಗಂಡು ಮಗು ಹುಟ್ಟಿತು. ಎರಡು ಕುಲದವರು ಈ ಮಗುವನ್ನು ತಮ್ಮವನೆಂದು ಸ್ವೀಕರಿಸಲಿಲ್ಲ. ಬಳಿಕ ಆ ಮಗುವು ದಿಕ್ಕಿಲ್ಲದೆ ಭಿಕ್ಷೆ ಬೇಡುತ್ತ ತಿರುಗುತ್ತ ಹೊರಟ ಅವನೇ ಚೆನ್ನದಾಸ. ಅವನ ಸಂತತಿಯವರೆ ಚೆನ್ನದಾಸರು" ಎಂದು ಹೇಳುತ್ತಾರೆ.

ಐತಿಹಾಸಿಕ ಹಿನ್ನೆಲೆ

೧೫-೧೬ನೇ ಶತಮಾನದಲ್ಲಿ ಹರಿದಾಸ ಪಂಥದ ವೈಷ್ಣವ ಧರ್ಮವನ್ನು ಸ್ವೀಕರಿಸುವ ಮುಂಚೆಯೇ ಈ ಸಮುದಾಯ ದಾಸ ಅಥವಾ ದಾಸರು ಎನ್ನುವ ಜಾತಿಯಿಂದಲೇ ಹೆಸರಾಗಿತ್ತು ಎನ್ನುವುದಕ್ಕೆ ಹಲವಾರು ನಿದರ್ಶನಗಳು ದೊರೆಯುತ್ತವೆ. ಆರ್ಯರನ್ನು ಪ್ರತಿಭಟಿಸಿದ ದ್ರಾವೀಡರೇ ದಸ್ಯುಗಳಾಗಿ ದಾಸರಾಗಿದ್ದಾರೆಂದು ಕಲಾನಿಪುಣರಾಗಿದ್ದ ಅವರನ್ನು ನಟುವರೆಂದೂ ಕರೆದಿದ್ದಾರೆಂದೂ ಅವರೇ ಮುಂದೆ ೬-೭ನೇ ಶತಮಾನ ದಷ್ಟೊತ್ತಿಗೆ ವೈಷ್ಣವ ಧರ್ಮಕ್ಕೆ ಸೇರ್ಪಡೆಯಾಗುತ್ತಾ ವೈಷ್ಣವ ಭೀಕ್ಷುಕರಾದರೆಂದೂ ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಕೆಲವು ಸಂಸ್ಕೃತ ಗ್ರಂಥಗಳಲ್ಲಿ ದಾಸರನ್ನು 'ದಸ್ಯು'ಗಳೆಂದು ವರ್ಣಿಸಿದ್ದಾರೆ. ಆರ್ಯರನ್ನು ಪ್ರತಿಭಟಿಸಿದ ದ್ರಾವಿಡರೇ ದಸ್ಯುಗಳೆಂದು ವಿವರಣೆಯಿದೆ.

ನಟುವ ಜನಾಂಗವನ್ನು ಹೊಲುವಂತಹ ಜನರೆಂದು ತಿಳಿಸಲಾಗಿದೆ. ನರಕುಲ ವಿಜ್ಞಾನಿಗಳ ಪ್ರಕಾರ ನಟು ಜನಾಂಗವು ಒಂದು ಅಲೆಮಾರಿ ಜನಾಂಗ. ಕ್ರೂಕರ ಅಭಿಪ್ರಾಯದಂತೆ ಜಿಪ್ಸಿಯಂತಹ ಜನಾಂಗ ಇವರು ನೃತ್ಯಗಾರರು, ಆಟವಾಡವ, ರೂಪಜೀವಿಗಳಾದ ಒಂದು ಜನಾಂಗ. ಈ ಜನಾಂಗದ ಉಗಮಸ್ಥಾನದ ಬಗ್ಗೆ ನರಕುಲ ವಿಜ್ಞಾನಿಗಳು ಇನ್ನೂ ಒಂದು ನಿಶ್ಚಿತ ಅಭಿಪ್ರಾಯವನ್ನು ತಳೆದಿಲ್ಲ. ನಟು ಜನಾಂಗದ ಉಗಮ ದಾಸ ಜನಾಂಗದ ಉಗಮದಂತಿದೆ ಎಂಬ ಅಭಿಪ್ರಾಯ ತಳೆದಿದ್ದಾರೆ.

ಮತ್ತೊಂದು, ವೇದ ಪುರಾಣದಲ್ಲಿ ಬರುವ ಶುಷ್ಣಶಂಬರ ಇತ್ಯಾದಿಗಳು ಭಾರತದಲ್ಲಿ ಅಡಿಯಿಟ್ಟ ಆರ್ಯರ ಆಕ್ರಮಣಗಳನ್ನು ತಡೆಗಟ್ಟುವಲ್ಲಿ ಮಹತ್ವದ ಪಾತ್ರವಹಿಸಿದ ಐತಿಹಾಸಿಕ ವ್ಯಕ್ತಿಗಳೇ ಆಗಿದ್ದಾರೆ. ಅವರನ್ನೇ ದಾಸ ಎಂದು ಕರೆದಿರಬಹುದು. ದಾಸ ಎನ್ನುವುದು ಉತ್ತರ ಭಾರತದ ಪಶ್ಚಿಮ ಭಾಗದ 'ದ್ಹಾಹ' ಎನ್ನುವ ಬುಡಕಟ್ಟಿಗೆ ಸಾದೃಶ್ಯವಾಗಿದೆ ಎಂದು ಹೇಳಲಾಗಿದೆ.

ಇನ್ನೊಂದು ದಾಸರ ಕುರಿತ ವಿವೇಚನೆಯಲ್ಲಿ ಸಾಮಾನ್ಯವಾಗಿ ಮಾರಾಟ ಮಾಡಿದ ಹೆಣ್ಣಲ್ಲಿ ಹುಟ್ಟಿದ ಮಗು ಆ ಮನೆಗೆ ದಾಸನಾಗಿರುತ್ತಿದ್ದ ಎಂದು ಊಹಿಸಲು ಅವಕಾಶವಿದೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿತವಾದ ಜನ್ಮದಾಸರು ಇಂಥವರೇ ಆಗಿರಬಹುದು. ಇವರಿಗೆ ಸಾಯುವವರೆಗೆ ಒಂದು ಮನೆಯಿಂದ ಬಿಡುಗಡೆಯಿಲ್ಲ. ಅವರು ಹುಟ್ಟುವಾಗಲೇ ದಾಸರು. ಮನುಸ್ಮೃತಿಯಲ್ಲಿ ದಾಸಿ ದಕ್ಷಿಣೆಗಳಿಂದ ಬಂದವರು ಎಂಬ ವಿವರವಿದೆ. ಹಾಗೇ ಕೊಳ್ಳಲ್ಪಟ್ಟವರು ಎಂಬ ಮಾತಿದೆ. ಈ ಮಾತುಗಳಲ್ಲಿ ಮಾರಾಟ ಮಾಡಲ್ಪಟ್ಟ ಇಲ್ಲವೇ ಹುಟ್ಟುತ್ತಲೇ ದಾಸರಾದ ಜನವರ್ಗವೊಂದನ್ನು ಹೇಳುತ್ತವೆ. (ಬಿಳಿಮಲೆ ಪುರುಷೋತ್ತಮ: ೧೯೮೮:೬೫)

ಈಗಲೂ ಕೂಡ ಉತ್ತರ ಕರ್ನಾಟಕದ ಹಲವು ಕಡೆ ಈ ಸಮುದಾಯದವರು ತಾವು ಕ್ಷತ್ರಿಯ ಕುಲದವರೆಂದು ಹೇಳಿಕೊಳ್ಳುತ್ತಾರೆ. ಅವರನ್ನು ಅದು ಹೇಗೆ ಎಂದು ಕೇಳಿದರೆ ನಮ್ಮ ಹಿರಿಯವರು ಹೇಳುತ್ತಿದ್ದರು. ಅದಕ್ಕಾಗಿ ನಾವು ಶ್ರೇಷ್ಠ ಕುಲದವರು ಎಂದು ಹೇಳುತ್ತಾರೆ. ಈ ಮಾತಿನ ಜಾಡು ಹಿಡಿದು ಹೊರಟಾಗ ಈ ಸಮುದಾಯದ ಮತ್ತೊಂದು ಚರಿತ್ರೆ ಬಿಚ್ಚಿಕೊಳ್ಳುತ್ತದೆ. ದಾಸ ಸಮುದಾಯ ಕ್ಷತ್ರಿಯ ಕುಲವೇ ಎನ್ನುವ ಪ್ರಶ್ನೆ ಎದುರಾಗುತ್ತದೆ. ಹಾಗದರೆ ಕ್ಷತ್ರಿಯರು ದಾಸರೇಗಾದರು. ದಾಸ ಅಥವಾ ದಾಸರು ಪದ ಯಾವ ಅರ್ಥವನ್ನು ಒಳಗೊಂಡಿದೆ ಎಂಬುದು ಬಹು ಮುಖ್ಯವಾಗುತ್ತದೆ.(ಹಿಮ್ಮಡಿ ಬಿ. ಯಲ್ಲಪ್ಪ:೨೦೦೮:೩೩-೩೪)

ಚೆನ್ನದಾಸರ ಸಮುದಾಯವು ಅಲೆಮಾರಿ-ಅರೆ ಅಲೆಮಾರಿಗಳಾಗಿದ್ದು ಪರಿಶಿಷ್ಟ ಜಾತಿಗೆ ಸೇರಿದವ ರಾಗಿದ್ದಾರೆ. ಇದು ತೀರಾ ನಿರ್ಲಕ್ಷಕ್ಕೆ ಒಳಗಾಗಿರುವ ಸಮುದಾಯವಾಗಿದೆ.

ಥರ್ಸ್ಟನ್ ಅವರು ತಮ್ಮ ಕೃತಿಯಲ್ಲಿ "ದಾಸಂ"ಗಳ ಕುರಿತು "ದಾಸರಿಗಳು ಬೇರೆ ಬೇರೆ ಜಾತಿಗಳಿಗೆ ಗುರುಗಳಿಗಿರುವ ವೈಷ್ಣವ ಬ್ರಾಹ್ಮಣರ ಕೈಕೆಳಗಿನ ಸೇವಕರು" ಎಂದಿರುವರು. ಸಯ್ಯದ ಸಿರಾಜ್ ಉಲ್

ಹಸನ್ ಅವರು 'ದಾಸರಿ' ಎಂದರೆ ವೈಷ್ಣವ ಭಿಕ್ಷುಕರ ವರ್ಗ ದಾಸ ಅಥವಾ 'ದೇವರಸೇವಕ' ಎಂಬುದರಿಂದ ಈ ಹೆಸರು ಬಂದಿದೆ ಎಂದಿರುವರು. ಮೂಲತಃ ತೆಲುಗಿನಿಂದ ನಾಮಾಂಕಿತಗೊಂಡ ಇವರಲ್ಲಿ ಬೇರೆ ಬೇರೆ ಪಂಗಡಗಳಿರುವುದಾಗಿ ಹೇಳಿರುವ ಅವರು ಹತ್ತು ಒಳಪಂಗಡಗಳನ್ನು ಹೆಸರಿಸಿದ್ದಾರೆ.

ಬುಕ್ಕದಾಸರಿ, ಪಾಗದಾಸರಿ, ದಂಡೆದಾಸರಿ, ಭಗವತ ಅಥವಾ ಭುಟ್ಟಾದಾಸರಿ, ಕುಂಚಲೋಯ ಅಥವಾ ತೆಲಿಗ ದಾಸರಿ, ಚಿನ್ನದಾಸರಿ, ಕಂಗೆದ್ದುಲ ದಾಸರಿ, ಮಾಲಾ ದಾಸರಿ, ಹೊಲೆ ದಾಸರಿ ಮತ್ತು ಚೆಂಟು ದಾಸರಿ ಎಂದು ಮುಂತಾಗಿ ಹೆಸರಿಸುವರು.

ಉತ್ತರ ಕರ್ನಾಟಕದಲ್ಲಿ ವಾಸವಾಗಿರುವ ಚೆನ್ನದಾಸರು ಸಮಾಜದ ಇತರ ಜಾತಿಯ ಜನರಿಗೆ ಗುರುಗಳಾಗಿದ್ದಾರೆ. ಇವರು ಮೂಲತಃ ಆಂಧ್ರದವರಾಗಿರುವುದರಿಂದ ವೆಂಕಟರಮಣ ಇವರ ಆರಾಧ್ಯದೈವ ವಾಗಿದೆ. ವೆಂಕಟರಮಣನಿಗೆ ಇತರ ಜಾತಿಯವರು ತಮ್ಮ ದೇವರೆಂದು ನಂಬಿಕೊಂಡಿದ್ದಾರೆಯೋ ಅಂಥವರ ಮನೆಗಳಲ್ಲಿ ವಿಶೇಷ ಸಂದರ್ಭದಲ್ಲಿ ಇವರು ತಮ್ಮ ಗೋಪಾಳ ಬುಟ್ಟಿ ಹಾಗೂ ಶಂಖ, ಜಾಗಟೆ, ಸಮೇತವಾಗಿ ಪೂಜೆ ಮಾಡುತ್ತಾರೆ. ಚೆನ್ನದಾಸರ ಸಮುದಾಯವು ಈ ಭಾಗದಲ್ಲಿ ತುಂಬಾ ಹಿಂದುಳಿದ ಜನರಾಗಿದ್ದಾರೆ ತಾವು ಬದುಕುವುದಗೋಸ್ಕರ ತಮ್ಮ ಸಾಂಪ್ರದಾಯಿಕ ದಾಸ ವೃತ್ತಿಯನ್ನು ನಂಬಿ ಬದುಕುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅನಿವಾರ್ಯವಾಗಿ ಇವರು ಬೇರೆ ಬೇರೆ ವೃತ್ತಿಗಳನ್ನು ಮಾಡಿ ಬದುಕುತ್ತಿದ್ದಾರೆ.

ಚೆನ್ನದಾಸರ ಸಮುದಾಯವು ಸಮಾಜದಲ್ಲಿ ಮುಂದುವರಿದ ಇತರ ಜಾತಿ ಸಮುದಾಯಗಳಿಗೆ ಹೋಲಿಸಿದರೆ ತುಂಬಾ ಕೆಳಸ್ತರದಲ್ಲಿ ಇದೆ ಎಂಬುದು ತಿಳಿಯುತ್ತದೆ. ಪರಿಶಿಷ್ಟ ಜಾತಿ ಪಟ್ಟಿಯಲ್ಲಿದ್ದರೂ ಸಹ ಇವರಿಗೆ ಯಾವುದೇ ವಿಧದ ಅನುಕೂಲಗಳು ಸಿಗುತ್ತಿಲ್ಲ ಎಂಬುದು ವಿಷಾದನೀಯ ಸಂಗತಿಯಾಗಿದೆ.

೩.೨.೨. ಸಮುದಾಯದ ಹೆಸರು, ಔಚಿತ್ಯ

ಕರ್ನಾಟಕದಲ್ಲಿ ಚೆನ್ನದಾಸರ ಸಮುದಾಯಕ್ಕೆ ಬೇರೆ ಬೇರೆ ಹೆಸರುಗಳಿದ್ದರು ಈ ಸಮುದಾಯದವರು ತಾವು ಚೆನ್ನದಾಸರು ಎಂದು ಗುರುತಿಸಿಕೊಂಡಿದ್ದಾರೆ. 'ಚೆನ್ನು' ಎನ್ನುವ ವಾದ್ಯವನ್ನು ನುಡಿಸುವವರು ಚೆನ್ನದಾಸರಾಗಿದ್ದಾರೆ. ಈ ವಾದ್ಯವನ್ನು ಅವರು ಭಿಕ್ಷೆಗೆ ಹೋಗುವಾಗ ಸಾಮಾನ್ಯವಾಗಿ ಬಳಸುತ್ತಾರೆ.

೩.೨.೩ ಚೆನ್ನದಾಸರ ಸಾಮಾಜಿಕ ಜೀವನ

ಸಮಾಜ ಮತ್ತು ಮಾನವರ ನಡುವೆ ಅನನ್ಯವಾದ ಸಂಬಂಧವನ್ನು ಹೊಂದಿರುವುದು ಕಂಡುಬರುತ್ತಿದೆ. ಸಮಾಜ ಬಿಟ್ಟು ಯಾವ ಪ್ರಾಣಿಯೂ ಬದುಕಲಾರದು. ಮಾನವನ ವಿಕಾಸಕ್ಕೆ ಸಮಾಜ ಬಹುಮುಖ್ಯ ಪಾತ್ರವಹಿಸುತ್ತದೆ.

ಚನ್ನದಾಸರ ಸಮುದಾಯವು ಕೂಡ ಸಮಾಜದಿಂದ ಹೊರತಾಗಿಲ್ಲ. ಇವರು ತಮ್ಮದೆಯಾದಂಥ

ಸಾಮಾಜಿಕ, ಸಮುದಾಯಿಕವಾಗಿ ಬದುಕನ್ನು ನಡೆಸುತ್ತಿದ್ದಾರೆ. ಮೂಲತಃ ಅಲೆಮಾರಿಗಳಾದ ಇವರು, ಅಲೆಮಾರಿ ತನದ ಜೀವನದ ಜೊತೆಗೆ ತಮ್ಮ ಸಾಮಾಜಿಕ ಆಚಾರ-ವಿಚಾರ-ನಡೆ-ನುಡಿಗಳು, ನೈತಿಕ ನಿಯಮಗಳು ರೂಢಿ ಸಂಪ್ರದಾಯಗಳನ್ನು ಬದುಕಿನ ಜೊತೆಗೆ ಮುಂದುವರೆಸಿಕೊಂಡು ಬಂದವರಾಗಿದ್ದಾರೆ.

ಕುಟುಂಬ ರಚನೆ

ಚೆನ್ನದಾಸರ ಸಮುದಾಯವು ಅಲೆಮಾರಿ-ಅರೆಅಲೆಮಾರಿ ಸಮುದಾಯದವರಾಗಿದ್ದರಿಂದ ಅವಿಭಕ್ತ ಕುಟುಂಬಗಳು ಇವರಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಕುಟುಂಬದ ಜವಬ್ದಾರಿ ಯಜಮಾನ ನೋಡಿ ಕೊಳ್ಳುತ್ತಾನೆ. ಚನ್ನದಾಸರು ತಮ್ಮ ಭಿಕ್ಷಾಟನೆಯಿಂದ ಬಂದ ಹಣ ದವಸ-ಧಾನ್ಯ ಎಲ್ಲವು ಯಜಮಾನನಿಗೆ ಒಪ್ಪಿಸುತ್ತಾರೆ. ಅದನ್ನು ಆತನು ಕುಟುಂಬದಲ್ಲಿ ಅವಶ್ಯವಿರುವ ವಸ್ತುಗಳಿಗೆ ಉಪಯೋಗಿಸುತ್ತಾನೆ. ಯಜಮಾನ ಇಲ್ಲದಿದ್ದರೆ ಕುಟುಂಬದ ಜವಬ್ದಾರಿ ಹಿರಿಯ ಮಗ ವಹಿಸಿಕೊಳ್ಳುತ್ತಾನೆ. ಒಂದು ವೇಳೆ ಮಕ್ಕಳು ಚಿಕ್ಕವರಿದ್ದರೆ ಹೆಂಡತಿ ಮನೆಯ ಯಜಮಾನಿಕೆಯನ್ನು ಮಾಡುತ್ತಾಳೆ. ಚೆನ್ನದಾಸರು ಇತ್ತೀಚಿನ ದಿನಗಳಲ್ಲಿ ನಗರೀಕರಣದ ಪ್ರಭಾವಕ್ಕೆ ಒಳಗಾಗಿ ವಲಸೆ ಬರುತ್ತಿರುವುದರಿಂದ ಅವಿಭಕ್ತ ಕುಟುಂಬಗಳು ಒಡೆದು ವಿಭಕ್ತ ಕುಟುಂಬಗಳು ಕಂಡುಬರುತ್ತಿವೆ. ಇವರು ತಮ್ಮ ಮೂಲ ಕಾಯಕವನ್ನು ಬಿಟ್ಟು ಇತರ ವ್ಯಾಪಾರ, ಕೂಲಿಯಂತಹ ಕೆಲಸಗಳ ಕಡೆಗೆ ಮುಖಮಾಡಿರುವುದು ಕಂಡುಬರುತ್ತದೆ. ಶಹಾಪೂರ ನಗರದಲ್ಲಿ ಇಂತಹ ನಲವತ್ತು ಕುಟುಂಬಗಳು ವಾಸ ಮಾಡುತ್ತಿರುವುದು ಕಂಡುಬರುತ್ತವೆ.

ಬಳಿ, ಬೇಡಗು

ಚನ್ನದಾಸರ ಸಮುದಾಯದಲ್ಲಿ ಕರ್ನಾಟಕದ ತುಂಬೆಲ್ಲಾ ವಾಸವಾಗಿರುವ ಇವರ ಬೇಡಗುಗಳು ಸುಮಾರು ನಾಲ್ಕು ಸಾವಿರದ ಐದುನೂರಾ ಇಪ್ಪತ್ತೊಂದು ಇವೆ. ಶಹಾಪೂರ ನಗರದ ದೇವಿನಗರ ಬಡಾವಣೆಯಲ್ಲಿ ವಾಸವಾಗಿರುವ ಅಲೆಮಾರಿ ಚೆನ್ನದಾಸ ಸಮುದಾಯದಲ್ಲಿ ಪಿ ನಮು. ಶೇರಕಿಪಲ್ಲೆ, ಗೋರಮುಚ್ಚೊಳ್ಳು, ಆಕ್ಲೋರ್ ಮುಂತಾದ ಬೆಡಗಿನವರು ವಾಸವಾಗಿದ್ದಾರೆ. ಇವರಲ್ಲಿ ಸಮಬೆಡಿಗಿನವರಲ್ಲಿ ವಿವಾಹ ನಿಷೇಧ ವಿದೆ. ಬೆಸಬೆಡಗಿನವರ ಜೊತೆಗೆ ಮಾತ್ರ ಸಂಬಂಧವನ್ನು ಬೆಳೆಸುತ್ತಾರೆ. ಹೀಗೆ ಚೆನ್ನದಾಸರು ತಮ್ಮ ಬೆಡಗುಗಳಿಂದ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ.

ಆಹಾರ ಪದ್ಧತಿ

ಭೂಮಿ ಮೇಲೆ ಜೀವಿಸುವ ಪ್ರತಿಯೊಂದು ಜೀವಿಗೂ ಬದುಕಿಗಾಗಿ ಆಹಾರವು ಬಹುಮುಖ್ಯವಾಗಿ ಬೇಕು. ಆಹಾರವಿಲ್ಲದಿದ್ದರೆ ಯಾವ ಜೀವಿಯೂ ಬದುಕಿ ಉಳಿಯಲಾರದು. ಚೆನ್ನದಾಸರ ಸಮುದಾಯವು ಸಸ್ಯಹಾರ ಮತ್ತು ಮಾಂಸಹಾರ ಎರಡನ್ನೂ ಸೇವಿಸುತ್ತಾರೆ. ಇವರು ಮಾಂಸಹಾರವನ್ನು ಸ್ವಲ್ಪಮಟ್ಟಿಗೆ ಹೆಚ್ಚಾಗಿ ತಿನ್ನುತ್ತಾರೆ. ಕುರಿ, ಕೋಳಿ, ಕೌಜುಗ, ಮೊಲ ಇತರ ಮಾಂಸಹಾರಿ ಪ್ರಾಣಿಗಳನ್ನು ಸೇವಿಸುತ್ತಾರೆ. ಜೊತೆಗೆ ದಿನನಿತ್ಯದ ಆಹಾರವಾಗಿ ರೊಟ್ಟಿ, ಬೇಳೆ ತರಕಾರಿಗಳನ್ನು ಸೇವಿಸುತ್ತಾರೆ. ವಿಶೇಷವಾಗಿ ಹಬ್ಬ-

ಹರಿದಿನಗಳಲ್ಲಿ ಸಿಹಿ ಪದಾರ್ಥಗಳಾದ ಹೋಳಿಗೆ, ಸೀರಾ, ಮುಂತಾದ ಪದಾರ್ಥಗಳನ್ನು ಸೇವಿಸುತ್ತಾರೆ. ಹಬ್ಬದ ನಂತರ ಕರಿ ದಿನ ಮಾಂಸವನ್ನು ತಂದು ಜೊತೆಗೆ ಹೆಂಡ ಸಾರಾಯಿಯನ್ನು ತಂದು ಗುಂಡು-ಹೆಣ್ಣು ಒಟ್ಟಿಗೆ ಕುಳಿತು ಕುಡಿದು ಮಾಂಸವನ್ನು ಸೇವಿಸುತ್ತಾರೆ.

ವಸತಿ ವ್ಯವಸ್ಥೆ

ಚೆನ್ನದಾಸರ ಸಮುದಾಯವು ಅಲೆಮಾರಿ-ಅರೆಅಲೆಮಾರಿ ಸಮುದಾಯವಾಗಿರುವುದರಿಂದ ಇವರು ತಮ್ಮ ವಾಸಕ್ಕಾಗಿ ತಾತ್ಕಾಲಿಕವಾಗಿ ಗುಡಾರಗಳನನ್ನು ನಿರ್ಮಿಸಿಕೊಂಡು ಜೀವಿಸುತ್ತಾರೆ. ಶಹಾಪೂರ ನಗರದಲ್ಲಿ ವಾಸಿಸುತ್ತಿರುವ ಚೆನ್ನದಾಸರ ಸಮುದಾಯದವರು ಬಹುತೇಕ ಜನರು ಗುಡಿಸಲುಗಳಲ್ಲಿ ವಾಸವಾಗಿರುವುದನ್ನು ಸಮೀಕ್ಷಾ ಕಾರ್ಯದಲ್ಲಿ ಕಂಡುಬಂದವು. ಇವರಲ್ಲಿ ಕೆಲವರಿಗೆ ಮಾತ್ರ ಸರ್ಕಾರದಿಂದ ನಿವೇಶನ ದೊರೆತಿವೆ ಇನ್ನು ಕೆಲವರಿಗೆ ದೊರೆತಿಲ್ಲ ಇದರಿಂದಾಗಿ ಅವರ ಬದುಕು ಅತಂತ್ರವಾಗಿದೆ. ಖಾಸಗಿಯವರ ಜಾಗದಲ್ಲಿ ವಾಸಿಸುತ್ತಿರುವ ಇವರು, ಅವರು ಜಾಗ ಕಾಲಿಮಾಡು ಎಂದಾಗ ಮಾಡಬೇಕಾದ ಅನಿವಾರ್ಯತೆಯನ್ನು ಸಮುದಾಯದವರು ಎದುರಿಸುತ್ತಿದ್ದಾರೆ.

ಉಡುಗೆ ತೊಡುಗೆ

ಚೆನ್ನದಾಸರ ಸಮುದಾಯದ ಜನರು ಸಮಾಜದ ಕೆಳಸ್ತರದಲ್ಲಿ ಬದುಕನ್ನು ಸಾಗಿಸುತ್ತಿದ್ದು ಆರ್ಥಿಕವಾಗಿ ತುಂಬಾ ಬಡವರಾಗಿದ್ದಾರೆ. ಇತರ ಸಮುದಾಯದವರಂತೆ ಉಡುಗೆ-ತೊಡುಗೆಗಳನ್ನು ಮಾಡದೆ ಸಾಮಾನ್ಯವಾದ ಬಟ್ಟೆಗಳನ್ನು ತೊಟ್ಟುಕೊಳ್ಳುತ್ತಾರೆ. ಜೊತೆಗೆ ಆಭರಣಗಳನ್ನು ಹಾಕಿಕೊಳ್ಳುವುದು ಈ ಸಮುದಾಯದ ಜನರಿಗೆ ಕನಸಿನ ಮಾತೇ ಸರಿ. ಇವರಲ್ಲಿ ಗಂಡಸರು ದೋತ್ರಗಳನ್ನು ಹಾಕಿಕೊಂಡರೆ ಹೆಂಗಸರು ಇಲಕಲ್ ಸೀರೆ ಕುಪ್ಪಸಗಳನ್ನು ತೊಡುತ್ತಾರೆ. ಯುವತಿಯರು ಲಂಗಾ ದಾವಣಿ ಚೂಡಿದಾರಗಳನ್ನು ತೊಡುತ್ತಾರೆ. ಜೊತೆಗೆ ಸಂತೆಯಲ್ಲಿ ಸೀಗುವ ಅಲ್ಪ ಬೇಲೆಯ ಕಂಚಿನ ರೊಲ್ಡ್‌ಗೊಲ್ಡ್ ಆಭರಣಗಳನ್ನು ಹಾಕಿಕೊಳ್ಳುತ್ತಾರೆ. ಈ ಜನರು ವ್ಯಾಪಾರ, ಕೂಲಿ, ಇನ್ನಿತರ ವೃತ್ತಿಗಳನ್ನು ಮಾಡುತ್ತಿರುವುದರಿಂದ ಹಾಗೂ ಆಧುನಿಕತೆಯ ಪ್ರಭಾವದಿಂದ ಬಟ್ಟೆಧರಿಸುವುದರಲ್ಲಿ ಬದಲಾವಣೆಗಳನ್ನು ಕಂಡುಕೊಂಡಿರುವರು.

ಕುಲಪಂಚಾಯ್ತಿ

ಚೆನ್ನದಾಸರ ಸಮುದಾಯದಲ್ಲಿ ಅನ್ಯಾಯ, ಅಸಮಾನತೆ, ಕಟ್ಟುಪಾಡುಗಳ ಉಲ್ಲಂಘನೆ ಮತ್ತೊಬ್ಬರ ಮೇಲಿನ ದೌರ್ಜನ್ಯ ಇತ್ಯಾದಿಗಳನ್ನು ನಿಯಂತ್ರಿಸಲು ಈ ಸಮುದಾಯ ಮೊದಲಿನಿಂದಲೂ ನ್ಯಾಯ ಪಂಚಾಯ್ತಿಯನ್ನು ರಚಿಸಿಕೊಂಡು ಬಂದಿದೆ. ಕೆ.ಎಸ್. ಸಿಂಗ್ ಅವರ ಗ್ರಂಥದಲ್ಲಿ 'ಸಾಂಪ್ರದಾಯಿಕ ಜಾತಿ ಪಂಚಾಯ್ತಿ ಅವರಲ್ಲಿದ್ದು ಅದನ್ನು ಕಟ್ಟೆ ಎಂದು ಕರೆಯುತ್ತಾರೆ. ಈ ಸಮುದಾಯದಲ್ಲಿ ಜನರೆಲ್ಲರು ಸೇರಿ ಮುಖ್ಯಸ್ಥನನ್ನು ಆಯ್ಕೆ ಮಾಡುತ್ತಾರೆ. ಮುಖ್ಯಸ್ಥನನ್ನು ದೊಡ್ಡ ಯಜಮಾನ ಎಂದು ಕರೆಯುತ್ತಾರೆ. ಈ ಸಮುದಾಯದಲ್ಲಿ ಯಾವುದೇ ವ್ಯಕ್ತಿ ಅಪರಾಧ ಮಾಡಿರಲಿ ಅವರಿಗೆ ದಂಡಹಾಕುವ, ಕುಲದಿಂದ ಬಹಿಷ್ಕಾರ ಹಾಕುವ ಅಧಿಕಾರ ಪಂಚಾಯ್ತಿದಾರರಿಗೆ ಸಂಪೂರ್ಣ ಇರುತ್ತದೆ.

ಈ ಸಮುದಾಯದಲ್ಲಿ ಮದುವೆ ಮತ್ತು ಧಾರ್ಮಿಕ ಕಾರ್ಯಗಳನ್ನು ಕುಲ ಪಂಚಾಯ್ತಿಯಲ್ಲೆ ನಿರ್ಧರಿಸುತ್ತಾರೆ. ಇವರಲ್ಲಿ ಅಂತರ ಜಾತಿ ವಿವಾಹ, ಸೋದರ ಸಂಬಂಧ ವಿವಾಹ, ಬಹುಪತ್ನಿತ್ವ ವಿವಾಹ ಮೊದಲಾದವುಗಳನ್ನು ನಿರ್ಬಂಧಿಸುತ್ತದೆ. ತಮ್ಮ ಸಮುದಾಯದ ಜಾತ್ರೆ ಇತರ ಮನೋರಂಜನೆ ಕಾರ್ಯ ಕ್ರಮಗಳನ್ನು ಕುಲಪಂಚಾಯ್ತಿ ನಿರ್ಣಯಿಸುತ್ತದೆ. ಇವರಲ್ಲಿ ಹೆಂಗಸು ಬೇರೆ ಸಮುದಾಯದವನ ಜೊತೆ ಓಡಿಹೋಗಿದ್ದರೆ ಅತ್ಯಚಾರ, ಕಳ್ಳತನ ಮಾಡಿದ್ದರೆ ಧಾರ್ಮಿಕ ಕಾರ್ಯಗಳಲ್ಲಿ ತಪ್ಪು ಎಸಗಿದ್ದರೆ ಕಠಿಣ ಶಿಕ್ಷೆ ಅಥವಾ ಕುಲದಿಂದ ಹೊರಹಾಕುತ್ತಾರೆ. ನ್ಯಾಯ ತೀರ್ಮಾನಗಳು ಸಭೆಯಲ್ಲಿ ಬೇಗ ಆಗದಿದ್ದರೆ ಮುಖ್ಯಸ್ಥ ಕಡ್ಡಿಮುರಿಯುವ ಮೂಲಕ ತೀರ್ಪನ್ನು ಕೊಡುತ್ತಾನೆ. ತಪ್ಪು ಮಾಡಿದವರಿಗೆ ಇಂತಿಷ್ಟು ಎಂದು ದಂಡವನ್ನು ಹಾಕುತ್ತಾರೆ. ಅದನ್ನು ಅವರು ಕಟ್ಟಬೇಕು. ಮುಂದೆ ತಪ್ಪು ಮಾಡದಂತೆ ದೇವರ ಮೇಲೆ ಪ್ರಮಾಣವನ್ನು ಮಾಡಿ ಸಭೆಗೆ ವಂದಿಸಲು ತಿಳಿಸುತ್ತಾ ಸಭೆ ಮುಗಿಸುತ್ತಾನೆ.

೩.೨.೪ ಚೆನ್ನದಾಸರ ರಾಜಕೀಯ ಸ್ಥಾನಮಾನ

ಕರ್ನಾಟಕದಲ್ಲಿ ಚೆನ್ನದಾಸರ ಸಮುದಾಯವು ಅಲೆಮಾರಿ-ಅರೆಅಲೆಮಾರಿಗಳಾಗಿ ಬದುಕುತ್ತಿರುವುದರಿಂದ ರಾಜಕೀಯದಲ್ಲಿ ಭಾಗವಹಿಸದಿರುವುದು ಕಂಡುಬರುತ್ತದೆ. ಕಾರಣ 'ದಾಸ' ವೃತ್ತಿಯನ್ನು ಮಾಡಿ ಬದುಕುತ್ತಿರುವ ಇವರು ಸಮಾಜದ ಕೆಳಸ್ತರದಲ್ಲಿ ಜೀವನ ಮಾಡುತ್ತಿದ್ದಾರೆ. ಆರ್ಥಿಕತೆಯಿಂದ ತುಂಬಾ ಕೆಳಸ್ತರದವರಾಗಿರುವ ಇವರು ರಾಜಕೀಯ ಎಂದರೆ ಏನು ಎನ್ನುವ ಹಂತದಲ್ಲಿದ್ದಾರೆ. ಇವರಿಗೆ ಸಮಾಜದಲ್ಲಿ ಗುರುತಿಸಿಕೊಳ್ಳಲು ಯಾವುದೇ ಸೌಲಭ್ಯಗಳು ಇನ್ನುವರೆಗೆ ಸಿಕ್ಕಿಲ್ಲ. ತಮ್ಮ ಹೊಟ್ಟೆಪಾಡಿಗಾಗಿ ಕೆಲವರು ಭಿಕ್ಷಾಟನೆಯಲ್ಲಿ ತೊಡಗಿದ್ದರೆ ಇನ್ನು ಕೆಲವರು ಸಣ್ಣ-ಸಣ್ಣ ವ್ಯಾಪಾರ ಹಾಗೂ ಕೂಲಿ ಕೆಲಸವನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇನ್ನು ಒಂದು ಊರಿನಿಂದ ಮತ್ತೊಂದು ಊರಿಗೆ ಅಲೆಮಾರಿಗಳಾಗಿ ತಿರುಗುವ ಇವರು ಸರಿಯಾಗಿ ಒಂದು ಕಡೆ ನೆಲೆ ನಿಂತರೆ ಮಾತ್ರ ಗುರುತಿಸಿಕೊಳ್ಳಲು ಸಾಧ್ಯ. ಅದು ಇವರಿಗೆ ಸಾಧ್ಯವಾಗುತ್ತಿಲ್ಲ. ಈ ಸಮುದಾಯದ ಜನರಿಗೆ ಸರಿಯಾಗಿ ಗುರುತಿನ ಚೀಟಿ ಸಿಗದ ಕಾರಣ ಚುನಾವಣೆಯಲ್ಲಿ ಮತ ಚಲಾಯಿಸಲಾರದವರಾಗಿದ್ದಾರೆ.

ಈ ಸಮುದಾಯದವು ಪರಿಶಿಷ್ಟ ಜಾತಿಯ ಮೀಸಲಾತಿಯಲ್ಲಿ ಬರುತ್ತಿದ್ದರು ಸಹ ಯಾವುದೇ ಸೌಲಭ್ಯಗಳು ಸಮರ್ಪಕವಾಗಿ ದೊರೆಯುತ್ತಿಲ್ಲ. ಅವು ಇತರ ಜಾತಿಯವರು ಪಡೆದು ಕೊಳ್ಳುತ್ತಿದ್ದಾರೆ ಎಂದು ಹೇಳುತ್ತಾರೆ. ಚೆನ್ನದಾಸ ಸಮುದಾಯವು ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯವರಾಗಿದ್ದರು ಇವರಿಗೆ ಸಂವಿಧಾನ ಬದ್ಧ ಮೀಸಲಾತಿಯಿಂದ ಶೋಷಣೆಗೆ ಒಳಗಾಗಿದ್ದಾರೆ. ಶಹಾಪೂರ ನಗರದಲ್ಲಿವಾಸವಾಗಿರುವ ಚೆನ್ನದಾಸ ಸಮುದಾಯವು ಆರ್ಥಿಕವಾಗಿ ತುಂಬಾ ಹಿಂದುಳಿದ ಜನರಾಗಿದ್ದಾರೆ. ಇವರಿಗೆ ಇವತ್ತೇ ದುಡಿದು ಇವತ್ತೆ ತಿನ್ನವಂತಹ ಸ್ಥಿತಿ ಇದೆ. ಹೀಗಾಗಿ ಈ ಸಮುದಾಯದವರು ರಾಜಕೀಯದಲ್ಲಿ ಭಾಗಿಯಾಗಿಲ್ಲವೆಂದೆ ಹೇಳಬಹುದು. ಈ ಸಮುದಾಯವನ್ನು ಮುಖ್ಯವಾಹಿನಿಗೆ ತರಬೇಕಾದರೆ ಇವರಲ್ಲಿಯ ಒಬ್ಬ ಸಮರ್ಥ

ವ್ಯಕ್ತಿಯನ್ನು ಆಯ್ಕೆಮಾಡಿ ಆತನನ್ನು ಎಲ್ಲಾ ಅಲೆಮಾರಿಗಳು ಕಲೆತು ಯಾವುದೊಂದು ಸ್ಥಾನಕ್ಕೆ ಕಳಿಸಿದರೆ ತಮ್ಮ ಸಮುದಾಯಕ್ಕೂ ಹಾಗೂ ಇತರ ಅಲೆಮಾರಿ ಸಮುದಾಯಗಳ ಮುಂದೆ ಬಂದು ಸೌಲಭ್ಯಗಳನ್ನು ಪಡೆದುಕೊಳ್ಳುವುದರ ಜೊತೆಗೆ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ.

೩.೨.೫. ಚೆನ್ನದಾಸರ ಧಾರ್ಮಿಕ ಜೀವನ

ಅಲೆಮಾರಿ ಬುಡಕಟ್ಟಿನ ಸಮುದಾಯಗಳು ಧಾರ್ಮಿಕ ಜೀವನವನ್ನು ಆದಿಮಾನವನ ಕಾಲದಿಂದಲೂ ಮುಂದುವರೆಸಿಕೊಂಡು ಬಂದವರಾಗಿದ್ದಾರೆ. ಮೊದಲು ಮಾನವ ಪ್ರಕೃತಿಯನ್ನೆ ದೈವಕ್ಕೆ ಹೋಲಿಸಿ ಪ್ರತಿಯೊಂದು ಮರ, ಪ್ರಾಣಿ, ಪಕ್ಷಿಗಳನ್ನು ಪೂಜಿಸುತ್ತಿದ್ದನ್ನು. ಮುಂದೆ ಮಾನವ ಕಾಲ ಕ್ರಮಕ್ಕನುಗುಣವಾಗಿ ಬದಲಾದಂತೆ ತನ್ನ ಜೀವನದ ಸ್ವರೂಪದ ಜೊತೆಗೆ ತಾನು ಆರಾಧಿಸುವ ದೈವಗಳು ಬದಲಾದುದನ್ನು ಕಂಡುಕೊಂಡನು. ಚೆನ್ನದಾಸರ ಸಮುದಾಯವು ಧಾರ್ಮಿಕತೆಗೆ ಹೆಚ್ಚಿನ ಮಹತ್ವ ನೀಡುತ್ತದೆ. ಇವರು ಎರಡು ವಿಧವಾದ ದೇವರನ್ನು ಪೂಜೆ ಮಾಡುತ್ತಾರೆ. ಒಂದು ಕುಲದೇವರನ್ನು ಮತ್ತೊಂದು ಮನೆದೇವರನ್ನು ಕುಲದೇವರನ್ನಾಗಿ ವೆಂಕಟರಣನನ್ನು ಪೂಜಿಸಿದರೆ ಮನೆದೇವರನ್ನಾಗಿ ಆಂಜನೆಯ ಇನ್ನಿತರ ದೇವರನ್ನು ಪೂಜಿಸುತ್ತಾರೆ. ಪ್ರತಿ ಶನಿವಾರ ಇವರು ಗೋಪಾಳ ಬುಟ್ಟಿಯನ್ನು ಹಿಡಿದು ಭಿಕ್ಷೆಗೆ ಹೋಗುತ್ತಾರೆ. ಭಿಕ್ಷೆಯಿಂದ ಬಂದ ಹಣದಿಂದ ದವಸ ಧಾನ್ಯದಿಂದ ಜೀವನ ನಡೆಸುತ್ತಾರೆ.

ಚೆನ್ನದಾಸರ ಧಾರ್ಮಿಕ ಕೇಂದ್ರಗಳು ತಿರುಪತಿ ತಿಮ್ಮಪ್ಪನ ಬೇಟ್ಟವೆ ಇವರ ಸಮುದಾಯದ ಧಾರ್ಮಿಕ ಕೇಂದ್ರ. ತಿಮ್ಮಪ್ಪನಿಗೆ ಹೊಗಲಾಗದ ಭಕ್ತರು ಸ್ಥಳೀಯ ಆಂಜನೆಯ ದೇವರನ್ನು ವೆಂಕಟರಮಣನೆಂದು ಪೂಜಿಸುತ್ತಾರೆ ಮತ್ತು ಮನೆದೇವರನ್ನಾಗಿ ಯಲ್ಲಮ್ಮ, ದುರುಗಮ್ಮ, ಹುಲಿಗೆಮ್ಮ, ತಾಯಮ್ಮ, ಭಾಗ್ಯಮ್ಮ ದೇವತೆಗಳನ್ನು ಪೂಜಿಸುತ್ತಾರೆ. ವಿಶೇಷವಾಗಿ ಜಾತ್ರೆ ಮತ್ತು ಹಬ್ಬಗಳಲ್ಲಿ ದೇವರಿಗೆ ಕುರಿ ಬಲಿಕೊಡುತ್ತಾರೆ. ಈ ದೇವತೆಗಳನ್ನು ಶುಕ್ರವಾರ ಮತ್ತು ಮಂಗಳವಾರ ವಿಶೇಷವಾಗಿ ಪೂಜಿಸುತ್ತಾರೆ.

ಹಬ್ಬಗಳು

ಚೆನ್ನದಾಸರ ಸಮುದಾಯದವರು ಇತರ ಸಮುದಾಯದವರು ಆಚರಿಸುವಂತೆ ಹಬ್ಬಗಳನ್ನು ಆಚರಿಸುತ್ತಾರೆ. ಇವರು ನಾಗರಪಂಚಮಿ, ವಿಜಯದಶಮಿ, ದೀಪಾವಳಿ ಮತ್ತು ಯುಗಾದಿ ಹಾಗೂ ಹಿರಿಯರ ಹಬ್ಬವನ್ನು ಸಹ ಮಾಡುವುದರ ಜೊತೆಗೆ ಮುಸ್ಲಿಂ ಹಬ್ಬವಾದ ಮೊಹರಂನ್ನು ಈ ಸಮುದಾಯದವರು ಆಚರಿಸುತ್ತಾರೆ.

೩.೨.೬. ಚೆನ್ನದಾಸರ ಸಾಂಸ್ಕೃತಿಕ ಜೀವನ

ಸಮಾಜ ಜೀವನಕ್ಕೆ ಮನುಷ್ಯನಿಗೆ ಪ್ರೇರಕಶಕ್ತಿಯನ್ನು ಸ್ಫೂರ್ತಿಯನ್ನು ನೀಡುವ ಆಭವನಾತ್ಮಕ ಅರಿವಿನ ಅಮೂರ್ತ ಸ್ವರೂಪಕ್ಕೆ "ಸಂಸ್ಕೃತಿ ಎನ್ನುವುದು ಉಂಟು. ಸಂಸ್ಕೃತಿ ಭಾವನಾತ್ಮಕವಾಗಿದ್ದರೂ ಸುಸಬಂದ್ದವಾಗಿ ವ್ಯಕ್ತಗೊಳ್ಳುವ ಸಾಮಾಜಿಕ ಗುಣ ಸಂಸ್ಕೃತಿ ಪಾಲನೆಯಿಂದ ಮನುಷ್ಯ ತನ್ನ ಬದುಕಿಗೆ

ಬೇಕಾಗುವ ಏನೆಲ್ಲಾ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತದೆ. ನಿಸರ್ಗದತ್ತ ಜೀವನಾಗತ್ಯ ವಸ್ತು ಹೊಂದಲು ಸಂಸ್ಕೃತಿ ಬೆಂಬಲ ನೀಡುತ್ತದೆ(ಬಿ. ಸಿದ್ದಲಿಂಗಯ್ಯ: ೧೯೯೩:೧) ಎಂದಿದ್ದಾರೆ.

ಸಂಸ್ಕಾರಗಳು

ವಿವಾಹ : ಮಾನವನು ಜೀವನದಲ್ಲಿ ನಡೆಯುವ ಸಂಸ್ಕಾರಗಳಲ್ಲಿ ವಿವಾಹವು ಒಂದು ಇದು ಅತ್ಯಂತ ಪ್ರಮುಖ ಸಂಸ್ಕಾರಗಳಲ್ಲಿ ಒಂದಾಗಿದೆ. ಇದರಿಂದಾಗಿಯೆ ಆತನ ಲೈಂಗಿಕ ಬಯಕೆಗಳನ್ನು ಹಿಡೇರಿಸಿಕೊಳ್ಳುತ್ತಾನೆ. ಚೆನ್ನದಾಸ ಸಮುದಾಯದಲ್ಲಿ ಅತ್ಯಂತ ಸರಳವಾಗಿ ವಿವಾಹ ಕಾರ್ಯಗಳು ನೇರವೇರುತ್ತವೆ. ಇವರ ಮದುವೆಗಳು ಸಾಮಾನ್ಯವಾಗಿ ಐದು ದಿನಗಳಿಗೆ ಊಟವನ್ನು ಹಾಕಿಸುತ್ತಾರೆ. ಇವರು ಕುಲದೇವರಾದ ವೆಂಕಟರಮಣನಿಗೆ ಪೂಜೆ ಮಾಡುವ ಮೂಲಕ ಮದುವೆ ಕಾರ್ಯಗಳಿಗೆ ಚಾಲನೆ ನೀಡುತ್ತಾರೆ. ಮನೆಯ ಮುಂದೆ ಮದುವೆಗೆ ಮುಂಚೆ ಸಿಂಗಾರವನ್ನು ಮಾಡಿ ಚಪ್ಪರವನ್ನು ಹಾಕುತ್ತಾರೆ. ತಾಳಿಕಾರ್ಯ ಆದನಂತರ ಎಲ್ಲರಿಗೂ ಮಾಂಸದ ಊಟ ಹಾಕುತ್ತಾರೆ. ಈ ಸಮುದಾಯದಲ್ಲಿ ಹೆಚ್ಚಾಗಿ ಬಾಲ್ಯ ವಿವಾಹಗಳು ನಡೆಯುತ್ತವೆ. ಹಿರಿಯ ಮಗನ ಜೊತೆಗೆ ಕಿರಿಯ ಮಗನಿಗೂ ಸಹ ಅದೇ ಖರ್ಚಿನಲ್ಲಿ ಮಾಡುತ್ತಾರೆ. ಇವರಲ್ಲಿ ಉಡುಕಿ (ಕುಡಿಕೆ) ಮುದವೆ ಮತ್ತು ವಿಧವಾ ವಿವಾಹಗಳು ಕೂಡ ನಡೆಯುತ್ತವೆ.

ಜನನ : ಚನ್ನದಾಸರ ಸಮುದಾಯದಲ್ಲಿ ಮೊದಲ ಹೆರಿಗೆಯನ್ನು ತವರು ಮನೆಯಲ್ಲಿಯೇ ಆಗಬೇಕೆಂಬ ನಿಯಮವಿದೆ. ಹೆರಿಗೆಯನ್ನು ಸೂಲಗಿತ್ತಿಯು ಬಂದು ಮಾಡುವುದು ವಾಡಿಕೆಯಲ್ಲಿದೆ. ಮಗು ಜನಿಸಿದ ನಂತರ ಮಾಸನ್ನು ಗುಡಿಸಿಲು ಮುಂದೆ ಒಂದು ಮಡಿಕೆಯಲ್ಲಿ ಹಾಕಿ ಹೂಳುವ ಪದ್ಧತಿಯಿದೆ. ಇವರಲ್ಲಿ ಐದು ದಿನಗಳವರೆಗೆ ಸೂತಕವಿರುತ್ತದೆ. ಐದು ದಿನಗಳಾದ ನಂತರ ಒಂದು ಕೋಳಿಕೊಯ್ದು ಎಲ್ಲರ ಸಮ್ಮುಖದಲ್ಲಿ ಮಗು ಜನಿಸಿದ ಒಂಬತ್ತು ದಿನಗಳವರೆಗೆ ಮುಡಿಚಟ್ಟು ಇರುತ್ತದೆ. ಗಂಗೆಪೂಜೆ ಮಾಡಿದನಂತರ ಮುಡಿಚೆಟ್ಟು ಕಳೆಯುತ್ತದೆ ಎಂಬ ನಂಬಿಕೆ ಈ ಸಮುದಾಯದಲ್ಲಿದೆ.

ನಾಮಕರಣ : ಚೆನ್ನದಾಸರ ಸಮುದಾಯದಲ್ಲಿ ಮಗು ಹುಟ್ಟಿದ ಒಂಬತ್ತು ದಿನಕ್ಕೆ ನಾಮಕರಣ ಮಾಡುತ್ತಾರೆ. ಕೆಲವು ಕಡೆ ಹೆಣ್ಣು ಮಗುವಿಗೆ ಹನ್ನೆರಡು ದಿನಕ್ಕೆ ಮಾಡಿದರೆ ಗಂಡು ಮಗುವಿಗೆ ಹದಿಮೂರು ದಿನಕ್ಕೆ ಈ ಕಾರ್ಯ ಮಾಡುತ್ತಾರೆ. ಈ ಸಂದರ್ಭದಲ್ಲಿ ಜೋಳಿಗೆಯ ತೊಟ್ಟಿಲು ಮಾಡಿ ಮಗುವಿಗೆ ಹಾಕಿ ಸೋದರ ಮಾವನು ಮಗುವಿಗೆ ಹೆಸರನ್ನು ಹಿಡುತ್ತಾನೆ. ಈ ಸಂದರ್ಭದಲ್ಲಿ ಮನೆದೇವರ ಹೆಸರನ್ನೇಳಿ ಕೊನೆಗೆ ಹೆಸರನ್ನು ಮಗುವಿನ ಕಿವಿಯಲ್ಲಿ ಹೇಳುತ್ತಾನೆ. ನಂತರ ಬಂದ ಎಲ್ಲರಿಗೂ ಮಂಡಾಳು ಹಂಚುತ್ತಾರೆ. ಸ್ಥಿತಿವಂತರಾಗಿದ್ದರೆ ಎಲ್ಲರಿಗೂ ಊಟವನ್ನು ಹಾಕಿಸುತ್ತಾರೆ. ಮಗು ಹುಟ್ಟಿದ ಮೂರು ತಿಂಗಳಿಗೆ ಮನೆದೇವರ ಎದುರಿಗೆ ಸೋದರ ಮಾವನ ಕೈಯಿಂದ ಜವಳವನ್ನು ತೆಗೆಸುತ್ತಾರೆ.

ಋತುಮತಿ : ಈ ಸಮುದಾಯದಲ್ಲಿ ಋತುಮತಿಯಾದ ಹೆಣ್ಣನ್ನು ಐದು ದಿನಗಳವರೆಗೆ ಆಕೆಯನ್ನು ಪ್ರತ್ಯೇಕವಾಗಿ ಒಂದು ಮೂಲೆಯಲ್ಲಿ ಕೂಡಿಸುತ್ತಾರೆ. ನಂತರ ಸೋದರ ಮಾವನಿಗೆ ವಿಷಯ ತಿಳಿಸಿದ

ನಂತರ ಆತ ಬಂದು ಅವಳ ಮೇಲೆಕೊಬ್ಬರಿ ಮುರಿಯುತ್ತಾನೆ. ನಂತರ ಆಕೆಗೆ ಕೊಬ್ಬರಿ ಉತ್ತತ್ತಿ ಇತರ ಪೌಷ್ಟಿಕ ಆಹಾರಗಳನ್ನು ಒಂಬತ್ತು ದಿನಗಳವರೆಗೆ ಕೊಡುತ್ತಾರೆ. ನಂತರ ಆಕೆಯು ದೇವರಿಗೆ ನಮಸ್ಕಾರಿಸಿ ಬರುತ್ತಾಳೆ. ಆದಿನ ಸಂಜೆ ಆಕೆಯನ್ನು ಎಬ್ಬಿಸುತ್ತಾರೆ. ಬಂದ ಎಲ್ಲಾ ಕುಲಭಾಂದವರಿಗೆ ಮಾಂಸದ ಊಟ ಹಾಕುತ್ತಾರೆ.

ಮರಣ : ಭೂಮಿ ಮೇಲೆ ಜನಿಸಿದ ವ್ಯಕ್ತಿ ಒಂದಿಲ್ಲಾ ಒಂದು ಬಾರಿ ಸಾಯಲೆಬೇಕು. ಚೆನ್ನದಾಸರ ಸಮುದಾಯದಲ್ಲಿ ಸತ್ತವ್ಯಕ್ತಿಯನ್ನು ಸುಡುವುದು ಮತ್ತು ಹೂಳುವ ಕಾರ್ಯ ಎರಡನ್ನು ಮಾಡುತ್ತಾರೆ. ವ್ಯಕ್ತಿಯು ಸತ್ತರೆ ಆತನನ್ನು ಚಟ್ಟದ ಮೇಲೆ ಇಲ್ಲವೆ ಕಳ್ಳಿಕಟ್ಟಿಗೆ ಚಟ್ಟಮಾಡಿ ಶವಯಾತ್ರೆ ಮಾಡುತ್ತಾರೆ. ದಾರಿಯಲ್ಲಿ ಶವದ ಮುಂದೆ ಕೋಳಿತತ್ತಿ ಒಡೆಯುವ ಸಂಪ್ರದಾಯವಿದೆ. ಈ ಸಮುದಾಯದಲ್ಲಿದ್ದ ಶವವನ್ನು ಹೂತನಂತರ ಎರಡು ಕಡೆ ಕಲ್ಲುಗಳನ್ನು ಹಿಡುತ್ತಾರೆ. ನಂತರ ಮಾರನೆ ದಿನಕ್ಕೆ ಸತ್ತ ವ್ಯಕ್ತಿಗೆ ಇಷ್ಟವಾದ ಆಹಾರ ಹಣ್ಣು ಇತರೆ ವಸ್ತುಗಳನ್ನು ಸಮಾದಿ ಮೇಲೆ ಇಡುತ್ತಾರೆ. ಅದನ್ನು ಕಾಗೆ ಮುಟ್ಟಿದರೆ ಆತನು ಯಾವುದೊ ಒಂದು ಕಾಲದಲ್ಲಿ ಬಿದ್ದಿದ್ದಾನೆ ಎಂಬ ನಂಬಿಕೆ ಇವರಲ್ಲಿದೆ.

೩.೩. ಕೊರಮ

೩.೩.೧. ಚಾರಿತ್ರಿಕ ಹಿನ್ನೆಲೆ

ಬುಡಕಟ್ಟು ಅಲೆಮಾರಿ ಸಮುದಾಯಗಳ ಮೂಲ ಕುರಿತ ಹಾಗೂ ಹಿನ್ನಲೆಯನ್ನು ಒಳಗೊಂಡ ಹಲವಾರು ಐತಿಹ್ಯಗಳು ಹಾಗೂ ಕೆಲವು ಪೌರಾಣಿಕ ಕಥೆಗಳು ಹುಟ್ಟಿಕೊಂಡಿವೆ. ಈ ನಿಟ್ಟಿನಲ್ಲಿ ನೋಡುವುದಾದರೆ ಕೊರಮ ಸಮುದಾಯದ ಮೂಲ ಕುರಿತು ಹಲವಾರು ಐತಿಹ್ಯಗಳಿವೆ. ರಾಮಾಯಣ ಮಹಾಭಾರತ ಭಾಗವತ ಮುಂತಾದ ಎಲ್ಲವುಗಳಿಗೆ ಜನಪದರು ಕೊರಮ ಸಮುದಾಯವನ್ನು ಗಂಟು ಹಾಕಿದ್ದಾರೆ, ಜಾತಿಯ ಹುಟ್ಟು ದೈವ ನಿರ್ಮಿತವಾದದ್ದು ಎಂದು ಅವರ ನಂಬಿಕೆಯಾಗಿರುವುದು ಹಲವಾರು ಕಥೆಗಳಲ್ಲಿ ಕಂಡುಬರುತ್ತದೆ.

ಪಾರ್ವತಿಯ ತಪಸ್ಸನ್ನು ಪರೀಕ್ಷಿಸಲು ಶಿವನು ಅನೇಕ ವೇಷಗಳನ್ನು ತಾಳುತ್ತಾನೆ. ಅವುಗಳಲ್ಲಿ ಕೊರವಂಜಿ ವೇಷವು ಒಂದು. ಆ ಕೊರವಂಜಿಯ ವಂಶಜರೇ ಇಂದಿನ ಕೊರಮರು ಎಂದು ಹೇಳುತ್ತಾರೆ.

ಪಾರ್ವತಿ ಒಂದು ಸಲ ಹಾವಿನ ಹೊಟ್ಟೆಯಲ್ಲಿ ಬೆಲೆ ಬಾಳುವ ಹರಳುಗಳನ್ನು ತುಂಬಿ ಮೇದರವನಿಗೆ ತೊಟ್ಟಿಲು ಮಾಡಲು ಕೊಟ್ಟಳಂತೆ. ಮೇದರವನು ಆ ಹಾವಿನ ಹೊಟ್ಟೆಯಲ್ಲಿರುವ ಹರಳಿನ ಕರಕರ ಧ್ವನಿಗೆ ಹೆದರಿ ಅದನ್ನು ಮುಟ್ಟಲು ಹಿಂಜರಿದನಂತೆ. ಆಗ ಪಾರ್ವತಿ ಮೇದಾರನಿಗೆ ಬೇಡವಾದ ಕೆಲಸ ನೀನು ಮಾಡು ಎಂದು ಕೊರಚನಿಗೆ ಹೇಳಿದಳು. ಅವನು ಹಾವನ್ನು ಸೀಳಿ ತೊಟ್ಟಿಲು ಮಾಡಿ ಕೊಟ್ಟನಂತೆ ಇದರಿಂದ ಸಂತೃಪ್ತಳಾದ ಪಾರ್ವತಿಯು ಕೊರಚನಿಗೆ ತಾನು ಕಣಿ ಹೇಳಲು ಬಳಸುತ್ತಿದ್ದ ಬಿದಿರಿನ ಮಾಂತ್ರಿಕ ದಂಡವನ್ನು ಮತ್ತು ಮರವನ್ನು ಕೊಟ್ಟಳಂತೆ. ಮುಂದೆ ಕೊರವರ ಹೆಣ್ಣು ಮಕ್ಕಳು ಕಣಿ ಹೇಳುವುದನ್ನೆ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿರುವುದಾಗಿ ಹೇಳುತ್ತಾರೆ.

ಮಹಾಭಾರತದಲ್ಲಿ ಕೊರಮರು ಧರ್ಮರಾಜನ ವಂಶಜರೆಂದು ಸೂಚಿಸುವ ಒಂದು ಕಥೆಯಿದೆ. ಸೋದರರ ಜೊತೆ ಧರ್ಮರಾಜನು ವನವಾಸಕ್ಕೆ ಹೋದಾಗ ಅವನನ್ನು ಪ್ರೀತಿಸಿದ ಓರ್ವ ಕನ್ಯೆ ಕಣಿ ಹೇಳುವವಳ ವೇಷಧರಿಸಿ ಹೋಗಿ ಅವನನ್ನು ವರಿಸಿದಳಂತೆ. ಆಕೆಯ ಸಂತಾನವೇ ಕೊರಮರೆಂದು ನಂಬಲಾಗುತ್ತದೆ. ಇಂದಿನ ಕೊರಮರು ಚಾಣಾಕ್ಷತನ ಹಾಗೂ ಸಾಹಸಗಳನ್ನು ಹೋಲುವ ಕಾರ್ಯನಿರತ ಕುರು ಎಂಬ ಜನಾಂಗದ ಹೆಸರು ಮಹಾಭಾರತದಲ್ಲಿ ಬರುವುದಾದರೂ ಮೇಲಿನ ಕಥೆಯನ್ನು ನಂಬಲು ಅನುಮಾನಿಸಬೇಕಾಗುತ್ತದೆ. ಕೊರಮರು ಮೂಲತಃ ಉತ್ತರ ಭಾರತದವರೆಂದು ಸೂಚಿಸುವ ಪ್ರಯತ್ನ ಇಲ್ಲಿದೆ.

ಗೌರಿ ಮಕ್ಕಳು, ಗಂಗೆಮಕ್ಕಳು ಅಂದಿನಿಂದ ಬಿದಿರಿನ ಕೆಲಸ ಮಾಡುತ್ತಾ ಬಂದಿದ್ದಾರೆ. ಗಂಗೆಯ ಮಗ ಮೇದಾರ ಮಚ್ಚಿನ ಮೇಲ್ಭಾಗ ಹಿಡಿದಿದ್ದರಿಂದ ಅವನ ಮಚ್ಚಿಗೆ ಇಂದಿಗೂ ಹಿಡಿಕೆ ಇಲ್ಲ. ಕೊರಮರು ಬಳಸುವ ಮಚ್ಚಿಗೆ ಹಿಡಿ ಇದೆ. ಕೊರಮರು ಕೇರುವ ಮರ ಮತ್ತು ಬಿಸಣಿಕೆಗಳನ್ನು ಮಾಡುವುದಿಲ್ಲ. ಅವುಗಳ ಅಣಿ ಗೌರಿಗದ್ದುಗೆ ಎಂದು ಕಾಲಿನಿಂದ ಮೆಟ್ಟುವುದಿಲ್ಲ. ಮೇದರು ಬಿದಿರನ್ನು ತುದಿಯಿಂದ ಸೀಳಿದರೆ ಕೊರಮರು ಬುಡದಿಂದ ಸೀಳುತ್ತಾರೆ. ಗೌರಿಮಕ್ಕಳಿಂದ ನಮ್ಮ ಜಾತಿ ಬೆಳೆಯಿತು. ಪಾರ್ವತಿಯಂತೆ ನಮ್ಮ ಕೊರವಂಜಿಯರು ಕಣಿ ಹೇಳುವುದನ್ನು, ಮಕ್ಕಳ ಫಲಕ್ಕೆ ಔಷಧಿ ಕೊಡುವುದನ್ನು ಬಹಳ ಹಿಂದಿನಿಂದ ರೂಢಿಸಿಕೊಂಡಿದ್ದಾರೆ. ಇದು ನಮಗೆ ದೈವದತ್ತವಾಗಿ ಬಂದ ಹಕ್ಕು ಎಂದು ಕೊರಮರು ಹೇಳುತ್ತಾರೆ.

ಬಳೆ ಮಲಾರ (ಬಳೆಜೋಡಿಸಿಕೊಂಡಿರುವುದು) ಬಗಲಲ್ಲಿ ಹಾಕಿಕೊಂಡು ಲಿಂಗ ಎದೆ ಮೇಲೆ ಹಾಕಿ ಕೊಂಪು ಕಟ್ಟೆಕೆರೆ ಕಡೆ ಹೋಗುತ್ತಿರಬೇಕಾದರೆ ಕಟ್ಟೆ ಕೆರೆ ಹದಿನೆಂಟು ಜಾತಿಯವರು ಸ್ನಾನ ಮಾಡುತ್ತಿದ್ದರು. ಅವರನ್ನು ನೋಡಿಕೊಂಡು ಬಿಟ್ಟು, ಅವರೆಲ್ಲರು ಸ್ನಾನಮುಗಿಸಿ ದೇವರ ಹತ್ತಿರ ವರ ಕೇಳಲು ಹೋದರು. ಕೊನೆಗೆ ಈತನು ಸ್ನಾನಮಾಡಲು ಬಳೆ ಮಲಾರ ಕೆಳಗಿಟ್ಟು ಸ್ನಾನಕ್ಕೆ ಇಳಿದನು. ಇತನು ನೀರಿನಲ್ಲಿ ಮೀನು ಹಿಡಿಯುವುದನ್ನು ಉಪ್ಪಾರ ಶೆಟ್ಟಿ ನೋಡಿ ಬಳೆಮಲಾರ ಹಾಕಿಕೊಂಡು ಹೋದನು. ಇತನು ಸೊಂಟಕ್ಕೆ ಮೀನನ್ನು ಹಾಕಿಕೊಂಡು ದೇವರಲ್ಲಿ ವರಹ ಕೇಳಲು ಹೋದನು. ಸೊಂಟಕ್ಕೆ ಕಟ್ಟಿ ಕೊಂಡಿರುವುದು ಏನು ಎಂದು ಕೇಳಿದನು. ಆಗ ಅವನು ಮೀನುಗಳಿಗೆ ಕೊರಮ ಮೀನು ಎಂದ ಆಗ ದೇವರು ಹಾಗಾದರೆ ನೀನು ಕೊರಮನೆ ಸರಿ ಎಂದು ಆಗ ಇವನು ಮುಂದಿನ ಜೀವನಕ್ಕೆ ಏನು ಮಾಡೊದು ಸಾಮಿ ಎಂದ, ಪರಮೇಶ್ವರನ ಹತ್ತಿರ ತ್ರಿಶೂಲ ತೆಗೆದುಕೊಳ್ಳುವದು. ರಾಮನ ಹತ್ತಿರ ಬಾಣ ತೆಗೆದುಕೊಳ್ಳುವುದು. ಬಾಣವೆ ಅಂಬುಗತ್ತಿ ಇವೆರಡು ತೆಗೆದುಕೊಂಡು ಚಾಮುಂಡಮ್ಮನ ಹತ್ತಿರ ಹೋಗಿ ಕಣಿ ಕುಕ್ಕೆ ತೆಗೆದುಕೋ ಎಂದ ಬೆಟ್ಟಕ್ಕೆ ಗಡ (ಬಿದಿರು) ತರುವುದು ಹೊಟ್ಟೆ ಹೊರೆಯುವುದು. ಮೀನು ಹಿಡಿದುಕೊಂಡು ಬಂದಿದ್ದಕ್ಕೆ ಸಂತೆಗೆ ಸಾವಿರ ಬಂದರೂ ಸಂಜೆಗೆ ತೀರಿಹೋಗಲಿ ಎಂದು ಶಾಪಕೊಟ್ಟನು.

"ಈ ಕಥೆಗಳಲ್ಲಿ ಪಾರ್ವತಿ ಶಿವ, ನಡುವಿನ ಸಂಬಂಧಗಳು ಕೊರವ ದ್ರಾವಿಡ ಮೂಲದವರೆಂಬುದನ್ನು ತಿಳಿಸಿದ್ದಾರೆ. ಮಹಾಭಾರತದ ಭಾಗವತದ ಕಥೆಗಳು ಆರ್ಯ ಮೂಲವನ್ನು ಸಾಧಿಸಲು ಪ್ರಯತ್ನಿಸುತ್ತವೆ" (ಮಾನ್ಪಡೆ, ಬಿ ಮಲ್ಲಿಕಾರ್ಜುನ ೨೦೦೮.೧೦.೧೧). ಆದರೆ ಕೊರಮರ ಸಂಪ್ರದಾಯ ಆಚರಣೆಗಳು ಸಂಸ್ಕೃತಿಗಳು ರೀತಿ ನೀತಿಗಳು ವೃತ್ತಿಗಳು ಆಡುವ ಭಾಷೆ ಜೀವನ ವಿಧಾನ ಇವೆಲ್ಲವನ್ನು ನೋಡಿದರೆ ಇವರು ದ್ರಾವಿಡ ಮೂಲದಿಂದ ಬದುವರೆಂದು ಸ್ಪಷ್ಟವಾಗುತ್ತದೆ.

ಕೊರಮ ಸಮುದಾಯವು ಮೂಲತಃ ಅಲೆಮಾರಿ ಸಮುದಾಯವಾಗಿದ್ದು ಕಾಡುಮೇಡು, ಆಶ್ರಯಿಸಿ ತಮ್ಮ ಮೂಲ ಆಚಾರ, ವಿಚಾರ, ಭಾಷೆ, ವೇಷ, ನಂಬಿಕೆ ಮತ್ತು ಆಚರಣೆಗಳನ್ನು ಇನ್ನೂ ಬಿಡದೆ ಉಳಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಈ ಸಮುದಾಯವು ತಮ್ಮ ಬದುಕಿಗಾಗಿ ಕಾಡು ಉತ್ಪನ್ನಗಳನ್ನು ನಂಬಿಕೊಂಡು ಈಚಲು ಮತ್ತು ಬಿದಿರುಗಳನ್ನು ಉಪಯೋಗಿಸಿ ಹಳ್ಳಿ ಜನರಿಗೆ ಉಪಯೋಗವಾಗಬಲ್ಲ ಕೃಷಿ ಸಂಬಂಧಿ ಮತ್ತು ಗೃಹೋಪಯೋಗಿ ವಸ್ತುಗಳನ್ನು ತಯಾರಿಸಿ ಕಾಡಿನಿಂದ ನಾಡಿಗೆ ಮಾರಾಟ ಮಾಡುತ್ತಾ ನಾಡಿನ ಜೊತೆ ನಿರಂತರ ಸಂಪರ್ಕ ಇಟ್ಟುಕೊಂಡಿರುವ ಈ ಸಮುದಾಯ ನಿರಂತರವಾಗಿ ಅಲೆಯುತ್ತಿರುತ್ತದೆ. ತುತ್ತಿನ ಚೀಲ ತುಂಬಿಸಿಕೊಳ್ಳಲು ವಿವಿಧ ಉದ್ಯೋಗಗಳನ್ನು ಅನುಸರಿಸುತ್ತಾ ವೃತ್ತಿ ನೈಪುಣ್ಯತೆಯನ್ನು ಮೆರೆಯುತ್ತಾ ಪಾರಂಪರಿಕ ಜ್ಞಾನವನ್ನು ಮುಂದುವರೆಸಿಕೊಂಡು ಬಂದಿರುವುದು ಕಂಡು ಬರುತ್ತದೆ.

ಪ್ರಸ್ತುತ ಶಹಾಪೂರ ನಗರದಲ್ಲಿ ವಾಸವಾಗಿರುವ ಕೊರಮ ಸಮುದಾಯವು ಇಂದಿಗೂ ತಮ್ಮ ಕುಲಕಸುಬು ಮುಂದುವರಿಸಿಕೊಂಡು ಬಂದಿದೆ. ಜೊತೆಗೆ ಆಚಾರ, ವಿಚಾರ, ನೀತಿ ನಿಯಮ ರೂಢಿ ಸಂಪ್ರದಾಯ, ಆಚರಣೆ, ಧಾರ್ಮಿಕ ನಂಬಿಕೆಗಳನ್ನು ಪಾಲಿಸುತ್ತಾ ಇತರ ಅನ್ಯ ಸಮುದಾಯಗಳ ಮಧ್ಯೆ ಜೀವನ ನಡೆಸುತ್ತಿರುವುದು ಕಂಡುಬರುತ್ತದೆ.

೩.೩.೨. ಕೊರಮ ಪದದ ಔಚಿತ್ಯ

ಕೊರಮ ಎನ್ನುವುದು ಜಾತಿ ಸೂಚಕ ಪದವಾಗಿದೆ. ಕರ್ನಾಟಕದಲ್ಲಿ ಇವರನ್ನು ಕೊರಮ, ಕೊರಮಶೆಟ್ಟಿ, ಕೋತಿ ಕೊರಮ, ಭಜಂತ್ರಿ, ಕೊರಚ, ಕೊರವ, ಕುಂಚಿಕೊರಮರು, ಕುರವನ್, ಕೇಪಮಾರಿಸ್, ವಾಜಂತ್ರಿ ಎಂದು ಇವರನ್ನು ಗುರುತಿಸಿದ್ದಾರೆ. ಈ ಸಮುದಾಯದ ಹೆಣ್ಣು ಮಕ್ಕಳನ್ನು ಕೊರವಿ, ಕೊರಮಿ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಕೊರಮ ಎಂಬುದು ಜಾತಿ ಸೂಚಕ ಪದವಾಗಿದೆ. ಕೊರವಂಜಿ ಶಬ್ದ ಪ್ರಮುಖ ದ್ರಾವಿಡ ಭಾಷೆಗಳಲ್ಲಿ ಕಂಡುಬರುತ್ತದೆ.

"ಹಾಗೆಯೇ ಕುರು ಶಬ್ದದ ಮೂಲ ಕು ಅಂದರೆ ಒಂದು ಪರ್ವತ. ೯ನೇ ಶತಮಾನದ ತಮಿಳು ಕೃತಿಯಲ್ಲಿ ಕುರು ಅವಾ ಕುರ ಎನ್ನುವ ಪದ ಪರ್ವತದಲ್ಲಿನ ಒಂದು ಬುಡಕಟ್ಟು ಸಮುದಾಯ ಎಂಬರ್ಥದಲ್ಲಿ ಬಳಕೆಗೊಂಡಿದೆ ಎಂದು ತಿಳಿಸಲಾಗುತ್ತದೆ. ಇಲ್ಲಿಯೂ ಕೂಡ ಈ ಸಮುದಾಯ ಕಣಿ ಹೇಳುವ ವೃತ್ತಿಯೊಂದಿಗೆ ಸಂಬಂಧ ಹೊಂದಿರುವುದಾಗಿ ತಿಳಿಸುತ್ತಾರೆ."(ಮಾನ್ಪಡೆ ಬಿ. ಮಲ್ಲಿಕಾರ್ಜುನ:೨೦೦೮:೭-೮)

೩.೩.೩. ಕೊರಮ ಸಮುದಾಯದ ಸಾಮಾಜಿಕ ಜೀವನ

ಮಾನವ ಮೂಲತಃ ಸಮಾಜ ಜೀವಿ. ಆದಿಮಾನವನ ಕಾಲದಿಂದಲೂ ಮಾನವ ಸಮಾಜವನ್ನು ನಂಬಿ ಬದುಕುತ್ತಿದ್ದರು ಎಂಬ ಅಂಶವು ಅನೇಕ ಆಧಾರಗಳಿಂದ ತಿಳಿದುಬರುತ್ತದೆ. ಮಾನವ ಮತ್ತು ಸಮಾಜ ಎರಡು ಒಂದಕ್ಕೊಂದು ಬಿಟ್ಟಿರಲಾರದ ಸಂಬಂಧವಾಗಿದೆ. ಮಾನವನು ಯಾವಾಗಲೂ ಸಮುದಾಯಿಕವಾಗಿ ಅಥವಾ ಸಾಂಘಿಕವಾಗಿ ಸಮಾಜದಲ್ಲಿ ಜೀವಿಸುತ್ತಾರೆ. ಪ್ರತಿಯೊಬ್ಬ ಮಾನವನು ತನ್ನ ಅಪಾರವಾದ ಬೇಡಿಕೆಗಳನ್ನು ಸಮಾಜದೊಳಗಡೆಯೇ ಪೂರೈಸಿಕೊಳ್ಳುತ್ತಾನೆ. ವ್ಯಕ್ತಿ ಮತ್ತು ಸಮಾಜಗಳ ನಡುವೆ ಒಡನಾಟದ ಬದುಕು ಬಹುಮುಖ್ಯ ಪಾತ್ರವಹಿಸುತ್ತದೆ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ಸಾಮಾಜಿಕ ಸಂಬಂಧಗಳು ರಚನೆಯಾಗಿರುತ್ತವೆ. ಅಂತೆಯೇ ಸಾಮಾಜಿಕ ರಚನೆ ಮತ್ತು ಅಂತರ ಕ್ರಿಯೆಗಳನ್ನು ಕುರಿತು ಪ್ರಖ್ಯಾತ ಸಮಾಜಶಾಸ್ತ್ರ ವಿದ್ವಾಂಸರಾದ ಗಿಡ್ಡಿಂಗ್ಸ್‌ರವರು ಜೊತೆಗೂಡಿ ಇರಬಹುದಾದ ವ್ಯಕ್ತಿಗಳನ್ನು ಒಟ್ಟುಗೂಡಿಸಿ ಆದ ಒಂದು ಒಕ್ಕೂಟ ಸಂಘಟನೆ ಹಾಗೂ ಔಪಚಾರಿಕ ಬಾಂದವ್ಯಗಳ ಒಟ್ಟು ಮೊತ್ತವೇ ಸಮಾಜವಾಗಿದೆ. ಎಂದಿದ್ದಾರೆ. (ಪ್ರೊ.ರಾಮಚಂದ್ರ ಜೋಷಿ, ೨೦೦೪, ೩೮) ಎಂದು ವಿದ್ವಾಂಸರ ಅಭಿಪ್ರಾಯವು ಸಾಮಾಜಿಕ ರಚನೆ, ಸ್ವರೂಪ, ಸಾಮಾಜಿಕ ಕ್ರಿಯೆಗಳ ಬಗ್ಗೆ ಸಾಕಷ್ಟು ಮಾಹಿತಿ ನೀಡುತ್ತದೆ.

ಕೊರಮ ಸಮುದಾಯವು ಕೂಡ ತಮ್ಮದೇಯಾದಂತಹ ಸಾಮುದಾಯಿಕ ಸಾಮಾಜಿಕ ಜೀವನ ಸಾಗಿಸುತ್ತಿದ್ದಾರೆ. ಇವರು ಅಲೆಮಾರಿ ಜೀವನ ನಡೆಸುವುದರೊಂದಿಗೆ ತಮ್ಮ ಸಂಸ್ಕೃತಿ ಆಚಾರ-ವಿಚಾರಗಳು, ನಡೆ-ನುಡಿಗಳು, ನೈತಿಕ-ನಿಯಮಗಳು, ಸಂಪ್ರದಾಯಗಳು ಯಾವಾಗಲೂ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆದಾಡುತ್ತಿರುತ್ತದೆ. ಅವರು ಮಾಡುವ ಸಂಪ್ರದಾಯ, ರೀತಿ-ನೀತಿಗಳಲ್ಲಿ ಹೆಚ್ಚಿನ ಪ್ರಮಾಣದ ಏಕತೆ ಮತ್ತು ಆಯಾ ಪರಿಸರದ ಪ್ರಭಾವದಿಂದ ಕಡಿಮೆ ಪ್ರಮಾಣದ ಭಿನ್ನತೆಗಳನ್ನು ಕಂಡುಬರುತ್ತದೆ. ಕೊರಮ ಸಮುದಾಯವು ಕೂಡ ಆರ್ಥಿಕವಾಗಿ ಹಿಂದುಳಿದಿರುವುದರಿಂದ ಅನೇಕ ಜನರು ಗುಡಿಸಲು ನಿವಾಸಿಗಳಾಗಿದ್ದಾರೆ. ಇವರು ಸಮಾಜದ ಇತರ ಸಮುದಾಯದ ಜನರ ಕಣ್ಣಿಗೆ ಬಹಳ ಕೀಳು ಎನಿಸಿಕೊಂಡಿದ್ದಾರೆ. ಅಲ್ಲದೆ, ಸಾಮಾಜಿಕ ಸ್ಥಾನ-ಮಾನಗಳ ಕೊರತೆಗಳು ಕೂಡ ಕಂಡುಬರುತ್ತವೆ. ಇವರು ತಾವು ವಾಸಿಸುವ ಪರಿಸರ, ಕುಟುಂಬ, ಸಮುದಾಯದಲ್ಲಿ ಒಂದು ವೇಳೆ ಸ್ತ್ರೀಯಾಗಲಿ ಅಥವಾ ಪುರುಷನಾಗಲಿ ತಪ್ಪು ಮಾಡಿದಾಗ ತಮ್ಮ ಸಮುದಾಯದ ನಾಯಕರು ಕೊಡುವ ತೀರ್ಪಿಗೆ ತಲೆ ಬಾಗುತ್ತಾರೆ. ಇತರ ಸಮುದಾಯಗಳ ಜೊತೆ ತಮ್ಮ ವೃತ್ತಿಯಿಂದ ಬಹಳ ಅನನ್ಯವಾಗಿ ಸಮಾಜದಲ್ಲಿ ಜೀವಿಸುತ್ತಿರುವುದು ಕಂಡುಬರುತ್ತದೆ.

ಕುಟುಂಬ ರಚನೆ

ಮಾನವನು ತನ್ನ ಮೂಲ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಮಾಜದಲ್ಲಿ ಮಾನವನಿಗೆ ಜೀವಿಸಲು ಕುಟುಂಬವು ಬಹುಮುಖ್ಯ ಪಾತ್ರವಹಿಸುತ್ತದೆ. ಮಾನವನು ಕುಟಂಬದ ಮೂಲಕ ವಿವಾಹ ಕಾರ್ಯಗಳ

ಇನ್ನಿತರ ಬಹುಮುಖ್ಯವಾದಂತಹ ಕಾರ್ಯಗಳನ್ನು ಕುಟುಂಬದಿಂದಲೆ ಪಡೆದುಕೊಳ್ಳುತ್ತಾನೆ. ವ್ಯಕ್ತಿಯ ವಿಕಾಸ, ಸಾಮಾಜಿಕ ಸಂಬಂಧ, ಸಾಮಾಜಿಕ ಚಲನೆ ಮುಂತಾದವು ಕುಟುಂಬದಿಂದ ಮಾತ್ರ ಸಾಧ್ಯವಾಗುತ್ತವೆ. ಅಂತೆಯೇ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ವಿಭಕ್ತ ಮತ್ತು ಅವಿಭಕ್ತ ಎಂದು ಎರಡು ವಿಧದ ಕುಟುಂಬ ವ್ಯವಸ್ಥೆ ಕಂಡುಬರುತ್ತದೆ.

ಕೊರಮ ಸಮುದಾಯದಲ್ಲಿಯೂ ಹೆಚ್ಚಾಗಿ ವಿಭಕ್ತ ಕುಟುಂಬ ವ್ಯವಸ್ಥೆ ಜಾರಿಯಲ್ಲಿದೆ. ಕುಟುಂಬದ ಎಲ್ಲಾ ಜವಾಬ್ದಾರಿಯು ಯಜಮಾನನ ಕೈಯಲ್ಲಿರುತ್ತದೆ. ಉಳಿದಂತೆ ಎಲ್ಲರು ತಮ್ಮ ವೃತ್ತಿಯಲ್ಲಿ ತೊಡಗಿ ಕೊಂಡು ತಾವು ಮಾಡಿದ ಕೆಲಸದಿಂದ ಬಂದ ಹಣವನ್ನು ಮುಖ್ಯಸ್ಥನ ಕೈಯಲ್ಲಿ ಕೊಡುತ್ತಾರೆ. ಇತ್ತೀಚಿನ ಆಧುನಿಕತೆಯಿಂದಾಗಿ ನಗರಗಳಿಗೆ ವಲಸೆ ಬರುತ್ತಿರುವುದರಿಂದ ವಿಭಕ್ತ ಕುಟುಂಬಗಳಾಗಿ ಪಡೆದಿರುವುದನ್ನು ಕಂಡುಬರುತ್ತವೆ. ಪ್ರಸ್ತುತ ಶಹಪೂರ ನಗರದಲ್ಲಿ ವಾಸವಾಗಿರುವ ಕೊರಮ ಸಮುದಾಯದ ಹತ್ತು ಕುಟುಂಬಗಳು ವಾಸವಾಗಿದ್ದು ತಮ್ಮ ಮೂಲ ವೃತ್ತಿಯಿಂದ ಬಾರಿಗೆ ಕಟ್ಟುವ ಕೆಲಸವನ್ನು ಮಾಡುತ್ತಾ ಅದರಿಂದಲೆ ತಮ್ಮ ಜೀವನವನ್ನು ಜೊತೆಗೆ ಕುಟುಂಬವನ್ನು ನಿರ್ವಹಣೆ ಮಾಡುತ್ತಿದ್ದಾರೆ.

ಬಳಿ-ಬೆಡಗುಗಳು

ಸಮಾಜದಲ್ಲಿ ಬದುಕುವ ಮಾನವ ಬದುಕಿನಲ್ಲಿ ವಿವಾಹವೆನ್ನುವುದು ಪ್ರಮುಖ ಘಟ್ಟವಾಗಿದೆ. ಪ್ರತಿಯೊಂದು ಅಲೆಮಾರಿ ಸಮುದಾಯಗಳು ಬಂಧುತ್ವವನ್ನು ರೂಪಿಸಿಕೊಳ್ಳುವುದಕ್ಕೆ ಹಲವು ನೀತಿ-ನಿಯಮಗಳನ್ನು ರಚಿಸಿಕೊಂಡಿರುತ್ತದೆ. ಅದಕ್ಕೆ ಕೊರಮ ಸಮುದಾಯವು ಹೊರತಾಗಿಲ್ಲ, ಕೊರಮ ಸಮುದಾಯದಲ್ಲಿ ವಿವಾಹ ಹಾಗೂ ಬಂಧುತ್ವ ಸಂದರ್ಭದಲ್ಲಿ ಬೆಡಗು ಪ್ರಮುಖ ಸ್ಥಾನವನ್ನು ಪಡೆದು ಕೊಂಡಿದೆ.

ಕೊರಮರಲ್ಲಿ ಮುಖ್ಯವಾಗಿ ಎರಡು ಬೆಡಗುಗಳು ಇವೆ. ಅವು ಸಾತಪಾಡಿ, ಕಾವಾಡಿ. ಆದರೆ ಮೈಸೂರು ಪ್ರದೇಶದಲ್ಲಿ ನಾಲ್ಕು ಬೆಡಗುಗಳಿವೆ. ೧. ಸಾತಪಾಡಿ ೨. ಕಾವಾಡಿ ೩. ಮಾನಪಾಡಿ ೪. ಮೆಂಡ್ರಗುತ್ತಿ ಎಂದಿವೆ. ಪ್ರಸ್ತುತ ಶಹಾಪೂರ ನಗರದಲ್ಲಿರುವ ಕೊರಮರಲ್ಲಿ ಸಾತಪಾಡಿ ಮತ್ತು ಕಾವಾಡಿ ಎಂಬ ಎರಡು ಬೆಡಗುಗಳು ಕಂಡುಬರುತ್ತವೆ. ಕೊರಮ ಸಮುದಾಯದವರು ಹನುಮಂತ ದೇವರನ್ನು ಹೆಚ್ಚಾಗಿ ಪೂಜಿಸುವುದು ಕಂಡುಬರುತ್ತದೆ. ಸಮುದಾಯದಲ್ಲಿ ಸ್ವ-ಬೆಡಗು ಬಿಟ್ಟು ಉಳಿದ ಬೆಡಗಿನವರ ಜೊತೆ ವಿವಾಹ ಕಾರ್ಯ ಮಾಡುತ್ತಾರೆ. ಈ ರೀತಿ ಕೊರಮ ಸಮುದಾಯದಲ್ಲಿ ಬೆಡಗುಗಳು ಕಂಡುಬರುತ್ತವೆ.

ಆಹಾರ ಪದ್ಧತಿ

ಸಮಾಜದಲ್ಲಿ ಬದುಕುವ ಪ್ರತಿಯೊಂದು ಜೀವಿಗೂ ಆಹಾರ ಅವಶ್ಯಕವಾಗಿದೆ. ಹಾಗೆ ಗಾಳಿ, ನೀರು, ಬೆಂಕಿ, ಬೆಳಕು ಮುಂತಾದವು ಕೂಡ ಅವಶ್ಯಕವಾಗಿ ಬೇಕಾಗುತ್ತವೆ. ಆದಿಕಾಲದಿಂದಲೂ ಮಾನವ ತನ್ನ

ಹೊಟ್ಟೆಪಾಡಿಗಾಗಿ ಆಹಾರ ಅನ್ವೇಷಣೆ ಮಾಡುತ್ತಾ ಹಗಲು ರಾತ್ರಿ ಶ್ರಮಿಸುತ್ತಾ ತನ್ನದೆ ಆದ ಪಾರಂಪರಿಕ ಜ್ಞಾನ, ಶಿಸ್ತುಗಳಿಂದ ಶ್ರಮ ವಹಿಸಿ ತನ್ನ ದೈನಂದಿನ ಆಹಾರ ಪೂರೈಸಿಕೊಳ್ಳುತ್ತಿದ್ದಾನೆ.

ಕೊರಮ ಸಮುದಾಯದಲ್ಲಿ ಕೂಡ ತನ್ನದೆಯಾದ ಆಹಾರ ಕ್ರಮವನ್ನು ಹೊಂದಿದ್ದು ಇವರು ಮಾಂಸಹಾರಿ ಮತ್ತು ಸಸ್ಯಹಾರಗಳನ್ನು ಸೇವಿಸುವುದರ ಜೊತೆಗೆ ಮೀನು, ಕುರಿ, ಆಡು, ಕೋಳಿ, ಏಡಿ, ಕಾಜುಗ, ಹಂದಿ ಮಾಂಸವನ್ನು ತಿನ್ನುವರು. ಸಾಮಾನ್ಯವಾಗಿ ದಿನನಿತ್ಯದ ಆಹಾರವಾಗಿ ರೊಟ್ಟಿ, ಬೇಳೆ ತಿನ್ನುವರು. ಹಬ್ಬ-ಹರಿದಿನಗಳಲ್ಲಿ ಹೋಳಿಗೆ-ಪಾಯಸ ಇನ್ನಿತರ ಪದಾರ್ಥಗಳನ್ನು ಮಾಡಿಕೊಂಡು ತಿನ್ನುವರು. ಹಬ್ಬದ ಕರಿದಿನ ಕುರಿ, ಕೋಳಿ, ಮಾಂಸ ಮತ್ತು ಹಂದಿ ಮಾಂಸದ ಜೊತೆಗೆ ಸಾರಾಯಿಯನ್ನು ಕುಡಿದು ಮಾಂಸವನ್ನು ತಿನ್ನುತ್ತಾರೆ. ಉಳಿದ ಆಹಾರವನ್ನು ಇತರ ಪ್ರಾಣಿಗಳಾದ ಹಂದಿ ನಾಯಿಯಿಂದ ರಕ್ಷಿಸಿ ಇಡುತ್ತಾರೆ.

ಉಡುಗೆ-ತೊಡುಗೆಗಳು

ಕೊರಮ ಸಮುದಾಯದವರು ದ್ರಾವಿಡ ಮೂಲದವರು. ಹೀಗಾಗಿ ಕಪ್ಪಗಿನ ಬಣ್ಣದ ಗಟ್ಟಿಮುಟ್ಟಾಗಿ ಕಂಡುಬರುತ್ತಾರೆ. ಕೊರಮ ಸಮುದಾಯದಲ್ಲಿ ಉಡುಗೆ-ತೊಡುಗೆಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಗಂಡಸರು, ದೋತರ, ಶರ್ಟ್ ಹಾಕಿಕೊಳ್ಳುತ್ತಾರೆ. ಹೆಂಗಸರು ಸೀರೆ, ಕುಪ್ಪಸ ತೊಡುತ್ತಾರೆ. ಯುವಕರು ಪ್ಯಾಂಟು, ಶರ್ಟ್ ತೊಡುತ್ತಾರೆ. ಆರ್ಥಿಕವಾಗಿ ಬಹಳ ಹಿಂದುಳಿದವರು ರೋಲ್ಡ್‌ಗೋಲ್ಡ್ ಬಂಗಾರವನ್ನು ಧರಿಸುತ್ತಾರೆ. ಆರ್ಥಿಕವಾಗಿ ಸ್ಥಿತಿವಂತರು ಬಂಗಾರ-ಬೆಳ್ಳಿಯನ್ನು ಮೈಮೇಲೆ ಧರಿಸುವುದನ್ನು ಕಂಡುಬರುತ್ತದೆ.

ವಸತಿ ವ್ಯವಸ್ಥೆ

ಮಾನವನು ಸಮಾಜದ ಚೌಕಟ್ಟಿನಲ್ಲಿ ಬದುಕಲು ಆತನಿಗೆ ಒಂದು ಮನೆಯು ವಾಸಿಸಲು ಅವಶ್ಯವಾಗಿ ಬೇಕು. ಅಂತೆಯೇ ಕೊರಮ ಸಮುದಾಯದವರು ಬಹುತೇಕ ಜನರು ಗುಡಿಸಲುಗಳಲ್ಲಿ ವಾಸಿಸುವುದನ್ನು ಕಂಡುಬರುತ್ತಾರೆ. ಎಲ್ಲಾ ವಸ್ತುಗಳನ್ನು ಗುಡಿಸಲಿನಲ್ಲಿಯೇ ಇಟ್ಟಿರುತ್ತಾರೆ. ಗುಡಿಸಲಿನ ಮೂಲೆಯಲ್ಲಿ ದೇವರ ಜಗಲಿ ಮಾಡಿ ದೇವರ ಮೂರ್ತಿ ಇಲ್ಲವೆ ಫೋಟೊ ಇಟ್ಟು ಪೂಜಿಸುತ್ತಾರೆ. ಆರ್ಥಿಕವಾಗಿ ಬಹಳ ಹಿಂದುಳಿದಿರುವ ಕೊರಮ ಸಮುದಾಯದವರು ಬದುಕನ್ನು ನಡೆಸುವುದೇ ಕಷ್ಟಕರವಾಗಿದೆ. ಅದರಲ್ಲೂ ಶಹಪೂರ ನಗರದಲ್ಲಿ ವಾಸವಾಗಿರುವ ಕೊರಮ ಸಮುದಾಯದವರು ಆರ್ಥಿಕವಾಗಿ ಹಿಂದುಳಿದವರಾಗಿದ್ದು ಅವರಿಗೆ ಸರ್ಕಾರದ ವತಿಯಿಂದ ನಿವೇಶನವಾಗಲಿ, ಮನೆಯಾಗಲಿ ತೊರೆಯದೆ ಗುಡಿಸಲಿನಲ್ಲಿ ವಾಸವಾಗಿ ತಮ್ಮ ಮೂಲ ವೃತ್ತಿಯನ್ನೇ ನಂಬಿಕೊಂಡು ಬದುಕುತ್ತಿದ್ದಾರೆ.

ಕುಲಪಂಚಾಯಿತಿ

ಸಮುದಾಯದಲ್ಲಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಲು ತಮ್ಮದೇ ಆದ ಪ್ರತ್ಯೇಕ ನ್ಯಾಯ ಪಂಚಾಯ್ತಿ ವ್ಯವಸ್ಥೆಯನ್ನು ಕೊರಮ ಸಮುದಾಯದವರು ಮಾಡಿಕೊಂಡಿದ್ದಾರೆ. ಇದಕ್ಕೆ ಅವರು ಜಾತಿ ಪಂಚಾಯ್ತಿ ಎಂದು ಕರೆಯುತ್ತಾರೆ. ಸಮುದಾಯದ ಮುಖಂಡರೆ ನ್ಯಾಯ ಪಂಚಾಯ್ತಿಯ ಮುಖಂಡ

ನಾಗಿರುತ್ತಾನೆ. ಜಾತಿ ಪಂಚಾಯ್ತಿಯ ಸದಸ್ಯರು, ಹಿರಿಯರು, ಯಜಮಾನರು, ಸಮಾಜದವರು, ದೈವದವರು ಎಂದು ಕರೆಯುವ ಸಂಪ್ರದಾಯವಿದೆ.

ಕೊರಮ ಸಮುದಾಯದವರಲ್ಲಿ ತಮ್ಮ ಜಾತಿ ಪಂಚಾಯ್ತಿಗೆ ಕುಲಂ-ಕುಲ ಸಭೆ ಅಥವಾ ಕುಲ ಪಂಚಾಯ್ತಿ ಎಂದು ಕರೆಯುತ್ತಾರೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕುಲಪಂಚಾಯಿತಿಗೆ ಓ ಕಾಳಂಗ ಸಭೆ ಎಂದು ಕರೆಯುವರು. ಈ ಸಭೆಯ ಅಧ್ಯಕ್ಷತೆಯನ್ನು ಓಕಾಳಿ (ಗಂಡು) ಓಕಾಳ್ಳಿ (ಹೆಣ್ಣು) ವಹಿಸುವರು. ಇವರ ಪಂಚಾಯ್ತಿ ಕಾರ್ಯಗಳು ಊರ ಹೊರಗಿನ ಜನಸಂಪರ್ಕವಿಲ್ಲದೆ ಪ್ರದೇಶದ ಒಂದು ಗಿಡದ ಕೆಳಗೆ ನಡೆಯುತ್ತವೆ.

ಕೊರಮ ಕುಲದಲ್ಲಿ ಯಾರಾದರೂ ಅಪರಾಧ ಮಾಡಿದರೆ ಅವರಿಗೆ ದಂಡ ವಿಧಿಸುವ ಹಾಗೂ ಕುಲದಿಂದ ಬಹಿಷ್ಕಾರ ಹಾಕುವ ಪದ್ಧತಿ ಇವರಲ್ಲಿದೆ. ಇತ್ತೀಚಿನ ದಿನಗಳಲ್ಲಿ ಈ ಸಂಪ್ರದಾಯಗಳು ಆಧುನಿಕತೆಯಿಂದ ಬದಲಾವಣೆ ಹೊಂದುತ್ತಿರುವುದು ಕಂಡುಬರುತ್ತದೆ. ಸಮುದಾಯದಲ್ಲಿ ಜಗಳವಾಡಿದರೆ ಪೊಲೀಸ್ ಠಾಣೆಗೆ ಹೋಗುವುದನ್ನು ಇಂದು ಕಾಣಬಹುದಾಗಿದೆ. ಆದ್ದರಿಂದ ಕೊರಮ ಸಮುದಾಯದಲ್ಲಿ ನ್ಯಾಯಪಂಚಾಯ್ತಿಗಳು ತಮ್ಮ ಅಸ್ತಿತ್ವಗಳನ್ನು ಇಂದಿನ ದಿನಗಳಲ್ಲಿ ಕಳೆದುಕೊಳ್ಳುತ್ತಿರುವಂತೆ ಕಾಣುತ್ತವೆ.

೩.೩.೪. ಕೊರಮರ ರಾಜಕೀಯ ಸ್ಥಾನಮಾನ

ಅಲೆಮಾರಿ ಸಮುದಾಯಗಳಲ್ಲಿ ರಾಜಕೀಯವು ಅಂತಹ ಮಹತ್ವದಾದ ಪರಿಣಾಮವನ್ನು ಬೀರಿಲ್ಲವೆಂದರೆ ತಪ್ಪಾಗಲಾರದು ನಿರಂತರವಾಗಿ ಅಲೆಯುವ ಅಲೆಮಾರಿ ಸಮುದಾಯಗಳಿಗೆ ರಾಜಕೀಯದ ಸ್ವರೂಪವಾದರೂ ಹೇಗಿದೆ ಎಂಬುದು ತಿಳಿದಿಲ್ಲ. ರಾಜಕೀಯ ಏನಿದ್ದರೂ ಸಮಾಜದಲ್ಲಿ ಉನ್ನತ ಸ್ತರದ ಜೀವನ ನಡೆಸುವ ಕುಟುಂಬದವರಿಗೆ ಅನ್ವಯಿಸುವ ವಿಚಾರವಾಗಿದೆ. ಇದರಿಂದ ಅಲೆಮಾರಿಗಳಿಗೆ ರಾಜಕೀಯದ ಮುಖವು ಇನ್ನುವರೆಗೆ ತಿಳಿದಿಲ್ಲ. ಪ್ರಸ್ತುತವಾಗಿ ಅಲೆಮಾರಿ ಅರೆ-ಅಲೆಮಾರಿ ಸಮುದಾಯವಾಗಿ ಜೀವಿಸುವ ಕೊರಮ ಸಮುದಾಯವು ರಾಜಕೀಯದಿಂದ ಸ್ವಲ್ಪ ದೂರವಿದೆ ಎಂದು ಹೇಳಬಹುದು. ಸರ್ಕಾರದ ಮೀಸಲಾತಿ ಪಟ್ಟಿಯಲ್ಲಿರುವ ಕೊರಮ ಸಮುದಾಯವು ರಾಜಕೀಯ ಪ್ರವೇಶಕ್ಕೆ ಮುಖ್ಯ ಕಾರಣ. ಸಾಮಾಜಿಕವಾಗಿ ಕೆಳಸ್ತರದಲ್ಲಿ ಜೀವನ ನಡೆಸುವುದಾಗಿದೆ. ಜೊತೆಗೆ ಆರ್ಥಿಕವಾಗಿ ಬಹಳವಾಗಿ ಹಿಂದುಳಿದ ಸಮುದಾಯವಾಗಿ ಕಂಡುಬರುತ್ತದೆ. ಕರ್ನಾಟಕದಲ್ಲಿ ಬಹಳವಾಗಿ ಇವರ ಸಮುದಾಯವು ಬಹಳ ಅಲ್ಪಸಂಖ್ಯಾತರಂತೆ ಕಂಡುಬರುತ್ತಾರೆ. ಜೊತೆಗೆ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಕರ್ನಾಟಕದಲ್ಲಿ ಕೊರಮ ಸಮುದಾಯದ ರಾಜಕೀಯ ಸ್ಥಿತಿಗತಿ ಅಷ್ಟೇನು ತೃಪ್ತಿಕರವಾದುದಲ್ಲ. ಇಲ್ಲಿಯವರೆಗೆ ಕೊರಮರಲ್ಲಿ ಕೆಲ ಒಬ್ಬರು ಮಾತ್ರ ರಾಜಕೀಯದಲ್ಲಿ ಪ್ರವೇಶಿಸಿ ಶಾಸಕ, ಜಿಲ್ಲೆ ಪಂಚಾಯ್ತಿ ನಗರ ಸಭೆ, ತಾಲ್ಲೂಕು ಪಂಚಾಯ್ತಿ, ಗ್ರಾಮ ಪಂಚಾಯ್ತಿ ಸದಸ್ಯರಾಗಿ ಕಾರ್ಯನಿರ್ವಹಿಸಿರುವುದುಂಟು. ಇದು ರಾಜಕೀಯ ಅನುಭವಕ್ಕೆ ಸಾಧ್ಯವಾಗಿದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಶಹಾಪೂರ ನಗರದಲ್ಲಿ ವಾಸಿಸುತ್ತಿರುವ ಅಲೆಮಾರಿ ಕೊರಮ

ಸಮುದಾಯವನ್ನು ಪರಿವೀಕ್ಷಿಸಿದಾಗ ಯಾರು ರಾಜಕೀಯದವರೆಗೆ ಹೋಗದೆ ಇರುವುದು ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ಇವರಿಗೆ ಮತದಾನದ ಮಾಪನ ಗುರುತಿನ ಚೀಟಿಯನ್ನು ವಿತರಿಸಿದೆ ಇದರಿಂದ ಈ ಸಮುದಾಯದವರು ತಮಗೆ ಹಿತವೆನಿಸಿದ ವ್ಯಕ್ತಿಗೆ ಚುನಾವಣೆಯಲ್ಲಿ ಮತ ಹಾಕುತ್ತಾರೆ. ತಮ್ಮ ಮೂಲ ವೃತ್ತಿಯಾದ ಕಸಬಾರಿಗೆಯನ್ನು ಕಟ್ಟಿಕೊಂಡು ಅದನ್ನು ಮಾರಿ ಬಂದ ಹಣದಿಂದ ಜೀವನವನ್ನು ನಡೆಸುತ್ತಿರುವ ಕೊರಮ ಸಮುದಾಯವು ಈ ಕ್ಷೇತ್ರದಲ್ಲಿ ರಾಜಕೀಯ ಜೀವನವನ್ನು ನಡೆಸದೆ ತಮ್ಮಷ್ಟಕ್ಕೆ ತಾವು ಇತರ ಸಮುದಾಯಗಳ ಜೊತೆ ಪರಸ್ಪರ ಪ್ರೀತಿ ಸಹಭಾಳ್ವೆಯಿಂದ ಬದುಕುತ್ತಿರುವುದು ಕಂಡುಬರುತ್ತದೆ.

೩.೩.೫. ಕೊರಮರ ಧಾರ್ಮಿಕ ಜೀವನ

ಕೊರಮ ಸಮುದಾಯದವರೂ ಮೊದಲಿನಿಂದಲೂ ಆಚಾರ ಸಂಪ್ರದಾಯಕ್ಕೆ ಆಚರಣೆಗಳು, ಹಿಂದೂ ಸಂಪ್ರದಾಯಕ್ಕೆ ಅಂಟಿಕೊಂಡಿದ್ದರೂ ತಾವು ಆಚರಿಸುವ ಆಚರಣೆ, ಹಬ್ಬ ಹರಿದಿನಗಳಲ್ಲಿ ತಮ್ಮದೆ ಆದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಕೊರಮ ಸಮುದಾಯವು ಧಾರ್ಮಿಕ ಆಚರಣೆಗ ಬಗ್ಗೆ ಪೂಜೆ, ಬಲಿ, ನಂಬಿಕೆ ಮುಂತಾದವುಗಳನ್ನು ಬಹಳ ಶ್ರದ್ಧೆಯಿಂದ ಆಚರಿಸುತ್ತಾರೆ. ಈ ಸಮುದಾಯವು ತಮ್ಮ ಮೂಲ ಸಂಪ್ರದಾಯವನ್ನು ಚಾಚು ತಪ್ಪದೆ ಆಚರಿಸುವವರಾಗಿದ್ದಾರೆ.

ಕೊರಮ ಸಮುದಾಯದವರು ಸಾಮಾನ್ಯವಾಗಿ ತಮ್ಮ ಮನೆ ದೇವರು, ಕುಲ ದೇವರು, ಊರು ದೇವರು, ಪಿತೃ ದೇವ, ನಾಡ ದೇವರು ಹೀಗೆ ಹಲವಾರು ದೇವರನ್ನು ಸೃಷ್ಟಿಸಿಕೊಂಡಿದ್ದಾರೆ. ಕೊರಮ ಸಮುದಾಯಕ್ಕೆ ಒಬ್ಬ ಕುಲದೇವರು ಇದ್ದು ಅದಕ್ಕೊಬ್ಬ ಪೂಜಾರಿಯೂ ಇರುತ್ತಾನೆ.

ಕೊರಮರು ಪೂಜಿಸುವ ದೈವಗಳು : ಅಂಜನೇಯ, ಯಲ್ಲಮ್ಮ, ಮಾರೆಮ್ಮ, ಹುಲಿಗೆಮ್ಮ ಮತ್ತು ಸುಂಕಲಮ್ಮ ಇನ್ನು ಮುಂತಾದ ದೇವರನ್ನು ಪೂಜಿಸುತ್ತಾರೆ. ಶಹಾಪೂರ ನಗರದಲ್ಲಿರುವ ಕೊರಮ ಸಮುದಾಯದವರು ತಮ್ಮ ಕುಲದೇವರನ್ನಾಗಿ ಆಂಜನೇಯನ್ನು ಪೂಜಿಸುತ್ತಾರೆ. ಅಂತೆಯೇ ಕೊರಮ ಸಮುದಾಯದವರು, ನುಲಿಯ ಚಂದಯ್ಯ ಕುಳುವ ಸಮುದಾಯದ ಗುರುಗಳು ಎಂಬ ಮಾತು ಈ ಸಮುದಾಯದಲ್ಲಿ ಇತ್ತೀಚಿನ ದಿನಗಳಲ್ಲಿ ಕೇಳಿಬರುತ್ತಿವೆ.

ಕೊರಮರು ಆಚರಿಸುವ ಹಬ್ಬಗಳು

ಕೊರಮ ಸಮುದಾಯದವರು ಆಯಾ ಸ್ಥಳೀಯ ಪದ್ಧತಿಗಳಿಗನುಗುಣವಾಗಿ ಶ್ರದ್ಧಾಭಕ್ತಿಯಿಂದ ದೇವರನ್ನು ಪೂಜಿಸುತ್ತಾರೆ. ಜೊತೆಗೆ ಇವರು ಯುಗಾದಿ, ನವರಾತ್ರಿ, ದೀಪಾವಳಿ ಮುಂತಾದ ಹಬ್ಬವನ್ನು ಆಚರಿಸುತ್ತಾರೆ. ಜೊತೆಗೆ ಶಹಾಪೂರ ನಗರದ ಕೊರಮ ಸಮುದಾಯದವರು ಸಂಕ್ರಾಂತಿಯನ್ನು ಬಹು ವಿಜೃಂಬಣೆಯಿಂದ ಆಚರಿಸುತ್ತಾರೆ. ಕ್ಷೇತ್ರಕಾರ್ಯದಲ್ಲಿ ನಡೆಸಿದ ಸಂದರ್ಶನದಲ್ಲಿ ಕೊರಮ ಸಮುದಾಯದ ಪೂಜಾರಿಯು ಹೇಳುವಂತೆ ಪ್ರತಿವರ್ಷ ಸಂಕ್ರಾಂತಿಯಂದು ನಾವು ಮಹಾದೇವನ ಪಲ್ಲಕ್ಕಿಯನ್ನು ಭೀಮಾ ನದಿಗೆ

ಹೊತ್ತುಕೊಂಡು ಹೋಗಿ ಗಂಗಾ ಸ್ನಾನ ಮಾಡಿಸಿ ಪೂಜೆ ಪುನಸ್ಕಾರ ಮಾಡಿ ನಂತರ ಪಲ್ಲಕ್ಕಿ ಇಲ್ಲಿಗೆ ತಂದು ರಾತ್ರಿಯಲ್ಲಿ ಸಮುದಾಯದ ಜನಸೇರಿ ಭಜನೆ ಇನ್ನಿತರ ಕಾರ್ಯಕ್ರಮ ಮಾಡಿ ಎಲ್ಲರಿಗೆ ಸಿಹಿ ಊಟವನ್ನು ಹಾಕಿಸುತ್ತಾರೆ ಎಂದು (ಮಾಹಿತಿದಾರ: ಹಣಮಂತ ಪೂಜಾರಿ, ೨೦೦೮) ಅವರು ಹೇಳುತ್ತಾರೆ. ಸಮಾಜದ ಇತರ ಸಮುದಾಯಗಳ ಮಧ್ಯ ವಾಸವಾಗಿರುವ ಕೊರಮ ಸಮುದಾಯವು ತಮ್ಮ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಆಚರಣೆ, ನೀತಿ-ನಿಯಮ ಇನ್ನೂ ಉಳಿಸಿಕೊಂಡು ಬಂದಿದ್ದಾರೆ.

೩.೩.೬. ಕೊರಮ ಸಾಂಸ್ಕೃತಿಕ ಜೀವನ

'ಸಂಸ್ಕೃತಿ' ಎಂಬುದು ಸಮಾಜ ವಿಜ್ಞಾನಗಳ ಪ್ರಮುಖ ಕಲ್ಪನೆಗಳಲ್ಲೊಂದು ಮಾನವ ಮತ್ತು ಸಮಾಜ ಸಾಂಸ್ಕೃತೀಯ ಪ್ರತೀಕವಾಗಿವೆ. ಸಂಸ್ಕೃತಿಯೂ ಮೂಲಭೂತ ಕಲ್ಪನೆಗಳಲ್ಲೊಂದಾಗಿದೆ. ಸಮಾಜ ಅಧ್ಯಯನವೆಂದರೆ ಸಂಸ್ಕೃತಿಯ ಅಧ್ಯಯನವೇ ಆಗಿದೆ. ಸಂಸ್ಕೃತಿಯು ಮಾನವ ಸಮಾಜದ ಉಸಿರು. ಅದು ಮಾನವ ಸಮೂಹ ಜೀವನದ ಅಭಿವ್ಯಕ್ತಿ, ಸಂಸ್ಕೃತಿ ಇವು ನಂಟು ಬಿಡಿಸಲಾಗದ ಗಂಟು. ಮಾನವ ಸಮೂಹ ಜೀವಿಯಾಗಿ ಇತರರೊಂದಿಗೆ ಸಮರಸಗೊಂಡು ಜೀವಿಸುವಂತಹ ಪರಿಸರವನ್ನು ನಿರ್ಮಿಸುವುದು ಸಂಸ್ಕೃತಿ, ಮಾನವ ಸಂಘ ಜೀವಿಯಲ್ಲಿ ಮಾತ್ರ ಸಾಂಸ್ಕೃತೀಯ ಜೀವಿಯೂ ಹೌದು. ಆತನ ವ್ಯಕ್ತಿತ್ವವು ಒಳ ಏಣಿಗೆ ಹೊಂದುವುದೂ ಕೂಡಾ ಸಾಂಸ್ಕೃತೀಕ ಪರಿಸರದಲ್ಲಿ ಆತನ ಅಂತರಿಕ ಶಕ್ತಿ-ಸಾಮರ್ಥ್ಯಗಳು ಬಹಿರಂಗವಾಗಿ ಪ್ರಕಟವಾಗಲೂ ವೇದಿಕೆಯನ್ನು ನಿರ್ಮಿಸಿಕೊಡುವುದು ಸಂಸ್ಕೃತಿ. ಕೊರಮ ಸಮುದಾಯ ದಲ್ಲಿಯೂ ಇದನ್ನು ವಹಿಸಿಕೊಂಡು ಬಂದಿರುವುದು ಕಂಡುಬರುತ್ತವೆ.

ಸಂಸ್ಕಾರಗಳು

ಜನನ : ಕೊರಮ ಸಮುದಾಯದಲ್ಲಿ ಗರ್ಭಿಣಿಯಾದ ಸ್ತ್ರೀಯು ಮೊದಲ ಹೆರಿಗೆಯನ್ನು ತವರು ಮನೆಯಲ್ಲಿ ಮಾಡಿಸಿಕೊಳ್ಳುವ ಸಂಪ್ರದಾಯ ಕಂಡುಬರುತ್ತದೆ. ಈ ಸಮುದಾಯದಲ್ಲಿ ಹೆರಿಗೆಯನ್ನು ಸಮುದಾಯದ ಹಿರಿಯ ಮಹಿಳೆ ಹಾಗೂ ಸಮುದಾಯ ಇನ್ನಿತರ ಹೆಣ್ಣು ಮಕ್ಕಳು ಬಂದು ಮಾಡಿಸುತ್ತಾರೆ. ಮಗು ಜನಿಸಿದ ನಂತರ ಮಕ್ಕಳ ಬಳ್ಳಿಯನ್ನು ಚಾಕು, ಕುಡುಗೋಲಿನಿಂದ ಕತ್ತರಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಹೊಸ ಬ್ಲೇಡಿನಿಂದ ಹೊಕ್ಕಳನ್ನು ಕತ್ತರಿಸುತ್ತಾರೆ. ನಂತರ ಮಾಸವನ್ನು ಒಂದು ಹೊಸ ಗಡಿಗೆಯಲ್ಲಿ ಹಾಕಿ ಮುಚ್ಚುತ್ತಾರೆ. ನಂತರ ಮಗು ಹುಟ್ಟಿದ ಐದು, ಒಂಭತ್ತು ಅಥವಾ ಒಂಭತ್ತು ದಿನಕ್ಕೆ ಇಲ್ಲವೆ ಹನ್ನೆರಡು ದಿನಕ್ಕೆ ನಾಮಕರಣವನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ಕುಲದ ಜನರಿಗೆ ಸಿಹಿ ಊಟವನ್ನು ಆರ್ಥಿಕವಾಗಿ ಶಕ್ತರಾದವರು ಹಾಕುತ್ತಾರೆ. ಇಲ್ಲಿಯವರು ಸಾಧಾರಣವಾಗಿ ಕಾರ್ಯಕ್ರಮ ಮುಗಿಸುತ್ತಾರೆ.

ಋತುಮತಿ : ಕೊರವ ಸಮುದಾಯದಲ್ಲಿ ಮೈನೆರೆದ ಹುಡುಗಿಯನ್ನು ತಮ್ಮ ಗುಡಾರದ ಒಂದು ಮೂಲೆಯಲ್ಲಿ ಕೂರಿಸುತ್ತಾರೆ. ನಂತರ ಹುಡುಗಿಯ ಸೋದರತ್ತೆ ಬಂದು ನೀರನ್ನು ಹಾಕುತ್ತಾಳೆ. ಇದನ್ನು ಮುಟ್ಟು ಎರೆಯುವುದು ಎನ್ನುತ್ತಾರೆ. ಇವರಲ್ಲಿ ಮೈನೆರೆದ ಹುಡುಗಿಯನ್ನು ೫ ದಿನಗಳಿಂದ ಹನ್ನೊಂದು

ದಿನಗಳವರೆಗೆ ಕೂಡಿಸಿ ಪದವಾಡುತ್ತಾರೆ. ಕೊನೆಯದಿನ ತಮ್ಮ ಬಾಂಧವರಿಗೆ ಹೇಳಿಕಳಿಸುತ್ತಾರೆ. ಅವರು ಸೀರೆ ಇತರ ಪದಾರ್ಥಗಳನ್ನು ತರುತ್ತಾರೆ. ಆ ದಿನ ಋತುಮತಿಯಾದ ಹುಡುಗಿ ಗಂಗೆ ಪೂಜೆಯನ್ನು ಮಾಡಿ ಒಂದು ಬಿಂದಿಗೆಯಲ್ಲಿ ನೀರನ್ನು ತರುತ್ತಾಳೆ. ಆ ದಿನ ರಾತ್ರಿ ಆಕೆಯನ್ನು ಆರತಿ ಬೆಳಗಿ ಎಬ್ಬಿಸುತ್ತಾರೆ. ನಂತರ ಬಂದಂತಹ ಬಂಧು-ಬಳಗಕ್ಕೆ ರಾತ್ರಿ ಹಂದಿ ಮಾಂಸದ ಅಡುಗೆ ಮತ್ತು ಸಿಹಿ ಊಟೋಪಚಾರವನ್ನು ಮಾಡಿಸುತ್ತಾರೆ.

ವಿವಾಹ : ಕೊರಮ ಸಮುದಾಯದಲ್ಲಿ ಮದುವೆಗೆ ಬಂದ ವಯಸ್ಕರ ಮಗನಿಗೆ ತಂದೆ ಅಥವಾ ಮನೆಯ ಹಿರಿಯರು ಹೆಣ್ಣನ್ನು ಹುಡುಕುವುದು ಇಂದಿನಿಂದ ಬಂದಂತಹ ಸಂಪ್ರದಾಯವಾಗಿದೆ. ಮಗನ ಮದುವೆ ಮಾಡಲು ತಂದೆ-ತಾಯಿಗಳು ಕನ್ಯೆಯನ್ನು ನೋಡಲು ಹೋಗುವರು. ಸಜಾತಿ ಬೆಡಗಿನ ಕನ್ಯೆಯನ್ನು ಬಿಟ್ಟು ವಿಜಾತಿ ಬೆಡಗಿನ ಹುಡುಗಿಯನ್ನು ಹುಡುಕಿ ಮದುವೆ ಮಾಡುತ್ತಾರೆ. ಮದುವೆ ಸಂದರ್ಭದಲ್ಲಿ ಬಾವಿಗೆ ಹೋಗಿ ಪಿರಣಿ ತರುವುದು, ಚಾಜ ಪದ್ಧತಿಯು ಮಾಡುತ್ತಾರೆ. ಕೊರಮರಲ್ಲಿ ಹಲವು ಬಗೆಯ ವಿವಾಹ ಕ್ರಮಗಳು ಕಾಣಬಹುದು. ಕುಡಿಕೆ ಮದುವೆ ಅಥವಾ ವಿವಾಹ ಚಾಲ್ತಿಯಲ್ಲಿರುವುದು ಕಾಣಬಹುದು. ಇವರಲ್ಲಿ ಏಕ ಪತ್ನಿತ್ವ ಜಾರಿಯಲ್ಲಿದೆ. ಕೊರಮ ಸಮುದಾಯದಲ್ಲಿ ಅಂತರ್ಜಾತಿಯ ವಿವಾಹಕ್ಕೆ ಅವಕಾಶವಿಲ್ಲ. ಒಂದು ವೇಳೆ ಈ ಸಮುದಾಯದ ಹುಡುಗನು ಬೇರೊಂದು ಸಮುದಾಯದ ಹುಡುಗಿಯನ್ನು ಮದುವೆಯಾದರೆ ಅಂಥವರಿಗೆ ಕುಲದಿಂದ ಹೊರಹಾಕಲಾಗುತ್ತದೆ. ಇತರ ಸಮುದಾಯಗಳಂತೆ ಕೊರಮ ಸಮುದಾಯವು ತನ್ನದೇ ಆದ ವಿವಾಹ ಸಂಪ್ರದಾಯಗಳನ್ನು ಹಿಂದಿನಿಂದಲೂ ಪರಿಪಾಲಿಸಿಕೊಂಡು ಬಂದಿದೆ.

ಮರಣ ಸಂಸ್ಕಾರ : ಕೊರಮ ಸಮುದಾಯದಲ್ಲಿ ಶವಸಂಸ್ಕಾರವು ಹಿಂದೂ ಧರ್ಮದಂತೆ ನಡೆದರು ಸಹ ಕೆಲವೊಂದು ಆಚರಣೆಯಲ್ಲಿ ವಿಧಿ-ವಿಧಾನಗಳಲ್ಲಿ ನಿಯಮಗಳಲ್ಲಿ ಭಿನ್ನತೆ ಇರುವುದು ಕಂಡುಬರುತ್ತದೆ. ಸಮುದಾಯದಲ್ಲಿ ಯಾವುದೇ ವ್ಯಕ್ತಿ ಸತ್ತರೆ ಮನೆಯ ಮುಂದೆ ತಂದು ಹಾಕುತ್ತಾರೆ. ಇವರಲ್ಲಿ ಯಾರೇ ಸಾಯಲಿ ಶವವನ್ನು ಮಲಗಿಸುತ್ತಾರೆ. ಶವವನ್ನು ಅದೇ ರೀತಿ ಸ್ಮಶಾನಕ್ಕೆ ಹೊಯುತ್ತಾರೆ. ಇವರಲ್ಲಿ ಶವವನ್ನು ಹೂಳುವ ಪದ್ಧತಿ ಇದೆ. ಸಮುದಾಯದಲ್ಲಿ ಯಾವುದೇ ವ್ಯಕ್ತಿ ಸತ್ತರೆ ಮೊದಲು ಸಂಬಂಧಿಕರಿಗೆ ಸುದ್ದಿ ತಿಳಿಸುತ್ತಾರೆ. ಸಂಬಂಧಿಕರು ಬಂದ ನಂತರ ಶವವನ್ನು ಚಟ್ಟದ ಮೇಲೆ ಹಾಕಿ ಹೊತ್ತುಕೊಂಡು ಹೋಗಿ ಸುಡುವ- ಇಲ್ಲವೆ ಮಣ್ಣು ಮಾಡುತ್ತಾರೆ. ಶವವನ್ನು ಹೂಳಿದ ಮೂರು ದಿನದ ನಂತರ ವ್ಯಕ್ತಿ ಬದುಕಿದ್ದಾಗ ಆತ ತಿನ್ನುತ್ತಿದ್ದ ವಸ್ತುಗಳು ಇತರೆ ಬೀಡಿ, ತಂಬಾಕು, ಎಲೆ, ಅಡಿಕೆ, ಮಾಂಸವನ್ನು ಮಾಡಿಕೊಂಡು ಸ್ಮಶಾನಕ್ಕೆ ಹೋಗಿ ಇಟ್ಟು ಬರುತ್ತಾರೆ. ಈ ಕಾರ್ಯ ಮಾಡದಿದ್ದರೆ ಸತ್ತ ವ್ಯಕ್ತಿಯು ಆತ್ಮ ಹಠ ಹಿಡಿಯುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಈ ರೀತಿಯಾಗಿ ಕೊರಮ ಸಮುದಾಯವು ವ್ಯಕ್ತಿ ಹುಟ್ಟಿನಿಂದ ಸಾಯುವವರೆಗಿನ ಅನೇಕ ವಿಧದ ಸಂಸ್ಕಾರಗಳನ್ನು ಮಾಡುತ್ತಾರೆ.

೩.೪. ಶಿಳ್ಳೇಕ್ಯಾತ

೩.೪.೧. ಚಾರಿತ್ರಿಕ ಹಿನ್ನೆಲೆ

ಪುರಾಣ ಕಥೆ

ಸಮುದಾಯದವರ ಪುರಾಣದ ಪ್ರಕಾರ ಇವರು ಮೊದಲು ಗಂಗಾನದಿ ಬಯಲುಗಳಲ್ಲಿ ವಾಸವಾಗಿದ್ದರು. ಅಲ್ಲಿಯ ಹಸ್ತಿನಾವತಿಯ ಚಕ್ರವರ್ತಿಯಾದ ಶಂತನು ಬೇಟೆಗೆ ಬಂದಿದ್ದಾಗ ಈ ಸಮುದಾಯದ ಚೆಲುವೆಯಾದ ಸುಗಂಧೆಗೆ ಮನಸೋತು ಅವಳನ್ನು ವಿವಾಹವಾಗಲು ನಿರ್ಧರಿಸುತ್ತಾನೆ. ಮತ್ಸ ಗಂಧಿಯು ಅಂದಿನ ಕಾಲದ ಹೆಣ್ಣು ಮಕ್ಕಳಿಗೆ ಸಹಜವಾಗಿದ್ದ ಹೆಣ್ತನದ ಏಕೈಕ ಆಭರಣಾವಾಗಿರುವ ನಾಚಿಕೆಯಿಂದ ಕೂಡಿದ್ದು. ಆಕೆಯ ಸೌಂದರ್ಯಕ್ಕೆ ಮನಸೋತ ಶಂತನ ಅಭಿಪ್ರಾಯಕ್ಕೆ ಮತ್ಸ್ಯಗಾಂಧಿಯ ಜನಪದ ಮುಗ್ಧತೆಯ ಪ್ರತೀಕವಾದ ಉತ್ತರವನ್ನು ನೀಡುತ್ತಾಳೆ. ನನಗಿಂತ ಮುಖ್ಯ ನನ್ನ ತಂದೆಯವರ ಅಭಿಪ್ರಾಯ ಅವರು ಒಪ್ಪುವದಾದರೆ ಆಗಲಿ ಎನ್ನುತ್ತಾಳೆ. ಆಗ ಸುಗಂಧೆಯ ತಂದೆ 'ಚಕ್ರವರ್ತಿ' ನನ್ನ ಮಗಳ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳಿಗೆ ಪಟ್ಟ ಕಟ್ಟುವುದಾದರೆ ಮಾತ್ರ ನನ್ನ ಮಗಳನ್ನು ನಿಮಗೆ ಧಾರೆ ಎರೆಯುವೆ, ಇಲ್ಲವಾದರೆ ಇಲ್ಲ ಎಂದು ಹೇಳುತ್ತಾನೆ. ಆಗ ಶಂತನುವಿನ ಮಗನಾದ ದೇವವ್ರತ ಶಪಥ ಮಾಡಿ ತಾನೆ ಮುಂದೆ ನಿಂತು ತಂದೆಯ ಮದುವೆ ಮಾಡುವ ಪ್ರಸಂಗವಿದೆ.

ಸೃಷ್ಟಿ ಪುರಾಣಗಳು

ಶಿಳ್ಳೇಕ್ಯಾತರು ತಮ್ಮ ಪ್ರಾಚೀನತೆಯನ್ನು ಕುರಿತು ಹೇಳುವ ಕೆಲವು ದಂತಕಥೆಗಳು ಶಿಳ್ಳೇಕ್ಯಾತರು ತಮ್ಮ ಪೂರ್ವ ಮಾಹಿತಿ ನೀಡುವಾಗ ಹೇಳಿದ ವಿಷಯ ಕೆಲವು ಜನ ಬ್ರಹ್ಮನಿಂದ ಸರಸ್ವತಿಯ ಮನರಂಜನೆಗಾಗಿ ಸೃಷ್ಟಿಯಾದ ಕಲೆ ಕೊಗಲು ಗೊಂಬೆಯಾಟ ಎಂದು ಹೇಳುತ್ತಾರೆ. ಇನ್ನು ಕೆಲವರು ರಾಮನು ತಾನು ಭೂಲೋಕವನ್ನು ತ್ಯಜಿಸುವ ಸಂದರ್ಭದಲ್ಲಿ ರಾಮನ ಸಹಚರರಾದ ಇವರು ನಮ್ಮನ್ನು ಹೀಗೆ ಬಿಟ್ಟಹೋದರೆ ಹೇಗೆ ನಮಗೆ ಬದುಕಲು ದಾರಿ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಂಡರು ರಾಮನು ತನ್ನ ಕೈಯಲ್ಲಿನ ಜಿಂಕೆ ಚರ್ಮ ನೀಡಿ ಅದರಿಂದ ತನ್ನ ಪ್ರತಿರೂಪವನ್ನು ಚಿತ್ರಿಸಿ ತೊಗಲು ಗೊಂಬೆ ಮಾಡಿ ಈ ತೊಗಲು ಗೊಂಬೆಯಾಟ ಆಡಿಸಿ ಬದುಕಿಬಾಳಿರಿ ಎಂದು ಹೇಳಿದ ಅಂದಿನಿಂದ ನಾವು ಗೊಂಬೆ ರಾಮರಾಗಿ ಬದುಕುತ್ತಿದ್ದೇವೆ ಎಂದು ಮಾಹಿತಿದಾರ ತಿಳಿಸುತ್ತಾರೆ.

ಇನ್ನು ಕೇಲವು ಶಿಳ್ಳೇಕ್ಯಾತರು ತನಗೂ ತನ್ನ ಅಣ್ಣನಿಗೂ ಆದ ಅನ್ಯಾಯದ ಸೇಡು ತೀರಿಸಿಕೊಳ್ಳಲು ಬಂದ ಶೂರ್ಪನಖಿಯ ಕಪಟ ಮಾತುಗಳಿಗೆ ಮರುಳಾಗಿ ಅವಳ ಬೇಡಿಕೆಯಂತೆ ಸೀತೆ ರಾವಣನ ಚಿತ್ರ ಬರೆದುಕೊಡುತ್ತಾಳೆ. ಲೋಕದ ಮೇಲೆ ಗೊಂಬೆಯಾಡಿಸಿ ಜೀವನ ಮಾಡುತ್ತೇನೆಂದಿದ್ದ ಶೂರ್ಪನಖಿ ನಂತರ ಸಬೂಬು ಹೇಳಿ ಗೊಂಬೆಯನ್ನು ಅಲ್ಲಿಯೇ ಬಿಟ್ಟು ಹೋಗುತ್ತಾಳೆ. ಸೀತೆ ಬಚ್ಚಿಟ್ಟ ಈ ಗೊಂಬೆ ನಂತರ ರಾಮನ ಗಮನಕ್ಕೆ ಬಂದು ಆತ ಸೀತೆಯ ನಿಷ್ಠೆಯ ಬಗೆಗೆ ಅನುಮಾನಿಸಿ ಗರ್ಭಿಣಿಯನ್ನು ಕಾಡಿಗೆ

ಅಟ್ಟುತ್ತಾನೆ. ಅಂದಿನಿಂದ ಸೀತೆಯಿಂದಲೇ ಗೊಂಬೆ ನಿರ್ಮಾಣ ಮಾಡುವ ಸಂತತಿ ಮುಂದೊರೆಯಿತು ಎಂದು ಹೇಳುತ್ತಾರೆ (ದೊಡ್ಡಮನಿ ಸಣ್ಣವಿರಣ್ಣ;ಸಾಸನಿಕ ಮಹೇಂದರ ರಾವ ಪಿ: ೨೦೦೮:೯-೧೦).

"ಶಿವಾಜಿಯನ್ನು ಒಬ್ಬ ಮಹಾರಾಜ ಯುದ್ಧಮಾಡಿ ಗೆದ್ದು ಅವನಿಗೆ ಗಲ್ಲು ಶಿಕ್ಷೆ ವಿಧಿಸಿದ. ಅವನನ್ನು ಮೂರನೆಯ ದಿವಸಕ್ಕೆ ಗಲ್ಲಿಗೆರಿಸುವುದು ಎಂದು ನಿರ್ಧರಿಸಲಾಯಿತು. ಶಿವಾಜಿಗೆ ಮೂರು ಜನ ಅಣ್ಣತಮ್ಮಂದಿರು ಇದ್ದರು. ಅದರಲ್ಲಿ ಒಬ್ಬ ವಿಚಾರ ಮಾಡಿ ನಮ್ಮ ಶಿವಾಜಿಯನ್ನು ಇದರಿಂದ ಹೇಗೆ ಪಾರುಮಾಡಬೇಕು ಎಂಬುದನ್ನು ಯೋಚಿಸುತ್ತಿದ್ದ ಮತ್ತೊಬ್ಬನಿಗೆ ಪಾಂಡವ ಕೌರವರ ಕಥೆ ನೆನಪಾಗಿ ಅವನು ಮರದ ತೊಗಟೆಯಲ್ಲಿ ಗೊಂಬೆ ಕತ್ತರಿಸಿ ಅವುಗಳಿಗೆ ಬಣ್ಣಹಚ್ಚಿ ಭೀಮ, ಅರ್ಜುನ, ಧರ್ಮರಾಯ ಇತ್ಯಾದಿ ಪಾತ್ರಗಳನ್ನು ಗುರುತಿಸಿ ಶಿವಾಜಿಗೆ ಗಲ್ಲು ಶಿಕ್ಷೆ ವಿಧಿಸಿದ ರಾಜನ ಅರಮನೆ ಮುಂದೆ ಮಹಾಭಾರತದ ಆಟವಾಡಲು ಕೇಳಿಕೊಂಡರು ಎರಡು ಹೊರಸು ಇಟ್ಟುಕೊಂಡು ತೆಳುದಾದ ಪರದೆ ಕಟ್ಟಿ ದೀಪಹಚ್ಚಿ ಒಳಗೆ ಒಬ್ಬ ಹೊರಗೆ ಒಬ್ಬ ಕುಳಿತು ಆಟ ಪ್ರಾರಂಭಿಸಿದರು. ಕೌರವ-ಪಾಂಡವರ ಯುದ್ಧ ಸನ್ನಿವೇಶ ರಾಜನ ಮನಸ್ಸಿಗೆ ಹಿಡಿಸಿ ಸ್ವತಃ ರಾಜನೆ ಎದ್ದು ಬಂದು ನಿನ್ನ ಆಟ ತುಂಬಾ ಸಂತೋಷ ತಂದಿದೆ. ರಾತ್ರಿಯಿಂದ ಬೆಳಗಿನವರೆಗೆ ಶ್ರಮಿಸಿದ್ದಕ್ಕಾಗಿ ನಿಮಗೆ ಏನು ಬೇಕು ಕೇಳಿ ಕೊಡುವೆ ಎಂದು ಮಾತು ನೀಡಿದನು. ಗೊಂಬೆಯಾಟಗಾರರು ತಾವು ಶಿವಾಜಿ ತಮ್ಮಂದಿರು ಎಂಬುದನ್ನು ತೋರಗೊಡದೆ ನಮ್ಮ ರಾಜ್ಯದ ಒಡೆಯನಾದ ಶಿವಾಜಿಯನ್ನು ಬಿಟ್ಟು ಬೀಡಬೇಕು ಎಂದು ಕೇಳಿಕೊಂಡರು. ಆಗ ಮಹಾರಾಜ ನನ್ನಿಂದ ಎಂಥಾ ತಪ್ಪಾಯಿತಲ್ಲಾ ಎಂದು ಕೊಟ್ಟ ಮತಿಗೆ ಬೆಲೆ ಇರಬೇಕೆಂದು ಶಿವಾಜಿಯನ್ನು ಬಿಟ್ಟನು (ದೊಡ್ಡಮನಿ ಸಣ್ಣವಿರಣ್ಣ; ಸಾಸನಿಕ ಮಹೇಂದರರಾವ.ಪಿ :೨೦೦೮:೧೫-೧೬).

ಹೀಗೆ ಶಿಳ್ಳೇಕ್ಯಾತರ ಸಮುದಾಯದ ಚರಿತ್ರೆಯನ್ನು ತಿಳಿಯಲು ಪುರಾಣ ಕಥೆಗಳು, ಇತರ ಜನಪದಿಯ ಕಥೆಗಳು ತುಂಬಾ ಸಹಕಾರಿಯಾಗಿವೆ.

ಅಲೆಮಾರಿ ಸಮುದಾಯಗಳಲ್ಲಿ ತಮ್ಮ ಜೀವನ ನಿರ್ವಹಣೆಗಾಗಿ ಲೌಕಿಕ ವೃತ್ತಿಗಳ ಹಿನ್ನೆಲೆಯಲ್ಲಿ ಮೂಡಿ ಬಂದ ಜನಪದರು ಹಲವು ವಿಧ. ಅದರಲ್ಲಿ ವೇಷಗಾರ, ಬುರ್ರಕಥೆಯವರು, ಸಿದ್ಧರು, ಹೆಳವರು, ಬುಡಬುಡಕೆಯವರು, ಕೊರವಂಜಿಯವರು ಇತ್ಯಾದಿ ಇರುವಂತೆಯೇ ಶಿಳ್ಳೇಕ್ಯಾತ ಸಮುದಾಯವು ಒಂದಾಗಿದೆ. ಇವರು ತಮ್ಮ ಪರಂಪರಾಗತವಾದ ಕಲೆಯನ್ನು ಅವಲಂಬಿಸಿ ಬದುಕಿದವರು. ಅಂತೆಯೇ ಶಹಾಪೂರ ನಗರದಲ್ಲಿ ವಾಸವಾಗಿರುವ ಶಿಳ್ಳೇಕ್ಯಾತ ಸಮುದಾಯವು ತಮ್ಮ ಕುಲಕಸುಬಾದ ಮೀನು ಹಿಡಿಯುವ ಮತ್ತು ಅದರಿಂದಲೇ ಜೀವನ ನಿರ್ವಹಣೆ ಮಾಡುವುದು ಕಂಡುಬರುತ್ತದೆ. ಜೊತೆಗೆ ತಮ್ಮದೇ ಆದ ಸಂಸ್ಕೃತಿ, ಆಚಾರ, ವಿಚಾರ, ಧಾರ್ಮಿಕ ಭಾವನೆಯನ್ನು ಹೊಂದಿದ್ದು ಇತರ ಸಮುದಾಯಗಳ ಮಧ್ಯೆ ಅನ್ಯೋನ್ಯತೆಯಿಂದ ಜೀವಿಸುತ್ತಿರುವುದನ್ನು ಕಾಣಬಹುದಾಗಿದೆ. ಆರ್ಥಿಕವಾಗಿ ಕೆಳಸ್ತರದ ಜೀವನ ನಡೆಸುವ ಇವರಿಗೆ ತಮ್ಮ ವೃತ್ತಿಯೇ ಮೂಲ ಆಧಾರವಾಗಿದೆ ಎಂದು ಹೇಳುತ್ತಾರೆ.

೩.೪.೨. ಶಿಳ್ಳೇಕ್ಯಾತ ಪದದ ಔಚಿತ್ಯ

ಶಿಳ್ಳೇಕ್ಯಾತ ಎಂಬ ಪದವು ವೃತ್ತಿ ಮೂಲವಾದದ್ದು ಎನ್ನಲಾಗುತ್ತಿದೆ. ಶಿಳ್ಳೇ ಎಂಬ ಜಾತಿಯ ಮೀನನ್ನು ಹಿಡಿಯುವುದರಲ್ಲಿ ಇವರು ನಿಸ್ಸೀಮರು. ಶಿಳ್ಳೆ ಜಾತಿಯ ಮೀನನ್ನು ಹಿಡಿಯವವರಿಗೆ ಶಿಳ್ಳೇಕ್ಯಾತ ಎನ್ನುವರು. ಕುಟುಬು ಎಂಬ ಮೀನನ್ನು ಹಿಡಿಯುವವರನ್ನು ಕಟುಬು ಎಂದು ಕರೆಯಲಾಗುತ್ತದೆ. ಮಹಾರಾಷ್ಟ್ರದ ಭೀಮಾನದಿಯ ಮುಖೇನ ಕರ್ನಾಟಕಕ್ಕೆ ಮೀನುಗಾರಿಕೆಗಾಗಿ ವಲಸೆ ಬಂದ ಇವರು ಕಾಲಾಂತರದಲ್ಲಿ ವಿವಿಧ ವೃತ್ತಿಗಳನ್ನು ಅಳವಡಿಸಿಕೊಂಡರು.

೩.೪.೩. ಶಿಳ್ಳೇಕ್ಯಾತರ ಸಾಮಾಜಿಕ ಜೀವನ

ಸಮಾಜ ಎಂಬ ಪರಿಕಲ್ಪನೆ ಇಂದು ನಿನ್ನೆಯದಲ್ಲ ಅದು ಅದಿಕಾಲದಿಂದಲೂ ಜಾರಿಯಲ್ಲಿರುವ ಪದವಾಗಿದೆ. ಮಾನವ ಮತ್ತು ಸಮಾಜ ಎರಡು ಒಂದಕ್ಕೊಂದು ಬಿಡಿಸಲಾರದ ಸಾಮಾಜಿಕ ಸಂಬಂಧವಾಗಿದೆ. ಮಾನವ ಮೂಲತಃ ಸಮಾಜ ಜೀವಿ. ಸಮಾಜದಿಂದ ಬೇರ್ಪಟ್ಟು ಆತ ಬದುಕಲಾರ. ಸಮಾಜದಿಂದಲೇ ಎಲ್ಲವನ್ನು ಅದರ ಚೌಕಟ್ಟಿನೊಳಗಡೆಯೇ ಪೂರೈಸಿಕೊಳ್ಳುತ್ತಾನೆ. ಒಂದು ವೇಳೆ ಸಮಾಜ ಸಂಪರ್ಕ ರಹಿತವಾದ ಜೀವನ ಮಾಡುವ ಸ್ಥಿತಿ ಬಂದರೆ ಅವನು ನೀರಿನಲ್ಲಿ ವಾಸಿಸುವ ಜಲಚರ ಪ್ರಾಣಿಗಳನ್ನು ಹೊರ ತೆಗೆದಾಗ ಅವುಗಳಿಗೆ ಆಗುವ ತೊಂದರೆಗಳಿಗಿಂತ ಹೆಚ್ಚಿನ ತೊಂದರೆಯನ್ನು ಅನುಭವಿಸುತ್ತಾನೆ. ಆದ್ದರಿಂದ ಯಾವಾಗಲೂ ಸಮುದಾಯಿಕವಾಗಿ ಅಥವಾ ಸಾಂಘಿಕವಾಗಿ ಮಾನವ ಸಮಾಜದಲ್ಲಿ ಜೀವಿಸುತ್ತಾನೆ.

ಸಮಾಜ ಎಂಬ ಮೂಲ ಕಲ್ಪನೆ ಬಗ್ಗೆ ಪ್ರಖ್ಯಾತ ಸಮಾಜಶಾಸ್ತ್ರಜ್ಞರಾದ ಡಾ. ಮೋರಿಸ್ ಗಿನ್ಸ್‌ಬರ್ಗ ಎಂಬುವವರ ಪ್ರಕಾರ ತಮ್ಮ ಸಂಬಂಧಗಳಿಗೆ ಒಳಪಡದ ಇಲ್ಲವೆ ತಮಗಿಂತ ಬೇರೆ ನಡತೆಯುಳ್ಳ ಜನರಿಂದ ಬೇರ್ಪಡಿಸುವಂತಹ ವಿಶಿಷ್ಠ ನಡತೆಗಳ ಮೂಲಕ ಒಂದುಗೂಡಿದ ವ್ಯಕ್ತಿಗಳ ಸಮೂಹ ವೆಂದರೆ ಸಮಾಜ" (ಶಂಕರರಾವ್ ಚ.ನ: ೧೯೯೮:೧೪೭) ಎಂದು ವ್ಯಾಖ್ಯಾನಿಸಿದ್ದಾರೆ.

ಶಿಳ್ಳೇಕ್ಯಾತ ಸಮುದಾಯವು ಕೂಡ ತಮ್ಮದೇ ಆದಂತಹ ಸಾಮಾಜಿಕ ಸಮುದಾಯಿಕ ಸಾಂಸ್ಕೃತೀಕ ಧಾರ್ಮಿಕ ಆಚಾರ ವಿಚಾರ, ನಡೆ ನುಡಿ, ನೈತಿಕ ನಿಯಮಗಳು ರೂಢಿ ಸಂಪ್ರದಾಯಗಳನ್ನು ಪರಿಪಾಲಿಸಿ ಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನತೆ ಇರುತ್ತದೆ. ಶಿಳ್ಳೆಕ್ಯಾತ ಸಮುದಾಯವು ಕೂಡ ಆರ್ಥಿಕವಾಗಿ ಹಿಂದುಳಿದಿರುವುದರಿಂದ ಅನೇಕ ಜನರು ಗುಡಾರ ನಿವಾಸಿಗಳಾಗಿ ಇವರು ಸಮಾಜದ ಇತರೆ ದೃಷ್ಟಿಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಸಾಮಾಜಿಕ ಸ್ಥಾನಮಾನಗಳ ಕೊರತೆ ಈ ಸಮುದಾಯ ದಲ್ಲಿದೆ. ಈ ಸಮುದಾಯವು ತಾವು ವಾಸಿಸುವ ಪರಿಸರದಲ್ಲಿ ಇತರೆ ಸಮುದಾಯದವರ ಜೊತೆ ಬಹಳ ಅನ್ಯೋನ್ಯತೆಯಿಂದಿರುವುದು ಕಂಡುಬರುತ್ತದೆ.

ಕುಟುಂಬ ರಚನೆ

ಅಲೆಮಾರಿಗಳಲ್ಲಿ ಇತರ ಸಮುದಾಯಗಳಲ್ಲಿರುವಂತೆ ಇವರಲ್ಲಿಯೂ ಸಹ ಕುಟುಂಬ ವ್ಯವಸ್ಥೆ

ಕಂಡುಬರುತ್ತದೆ. ಶಿಳ್ಳೇಕ್ಯಾತ ಸಮುದಾಯವು ತನ್ನದೇ ಆದ ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬ ರಚನೆಯನ್ನು ಹೊಂದಿರುವುದು ಕಂಡುಬರುವುದು. ಕುಟುಂಬ ವ್ಯವಸ್ಥೆಯಲ್ಲಿ ವಿಭಕ್ತ ಕುಟುಂಬಗಳು ಹೆಚ್ಚಾಗಿ ಕಂಡುಬರುತ್ತವೆ. ಕುಟುಂಬದ ಎಲ್ಲಾ ಜವಬ್ದಾರಿ ಯಜಮಾನ ನಿರ್ವಹಿಸುತ್ತಾನೆ. ಕುಟುಂಬದ ಎಲ್ಲಾ ಸದಸ್ಯರು ಯಜಮಾನನ ನಿರ್ದೇಶನದಂತೆ ನಡೆಯುತ್ತಾರೆ. ಅಂತೆಯೇ ಶಹಾಪೂರ ನಗರದಲ್ಲಿ ವಾಸವಾಗಿಸುವ ಅಲೆಮಾರಿ ಶಿಳ್ಳೇಕ್ಯಾತ ಸಮುದಾಯವು ತಮ್ಮದೇ ಆದ ಕೌಟುಂಬಿಕ ವ್ಯವಸ್ಥೆಯನ್ನು ಹೊಂದಿ ಇತರೆ ಸಮುದಾಯಗಳ ಜೊತೆ ಅನ್ಯೋನ್ಯತೆಯಿಂದ ಬದುಕುತ್ತಿರುವುದು ಕಾಣಬಹುದು.

ಬಳಿ ಬೆಡಗು

ಶಿಳ್ಳೇಕ್ಯಾತ ಸಮುದಾಯದಲ್ಲಿ ಮನೆತನದ ಮೂಲಗಳನ್ನು ಬೆಡಗುಗಳಿಂದ ಗುರುತಿಸುವರು. ಬೆಡಗುಗಳಿಗೆ ತಮ್ಮ ಸುತ್ತಮುತ್ತ ಇರುವ ಪಶು, ಪಕ್ಷಿ, ಪ್ರಾಣಿ, ಗಿಡ, ಬಳ್ಳಿ, ಸೂರ್ಯ, ಚಂದ್ರರಲ್ಲಿದೆ. ಪ್ರಕೃತಿಯ ವಿವಿಧ ವಸ್ತುಗಳಿಂದ ಗುರುತಿಸಿಕೊಳ್ಳುವುದು ಕಂಡುಬರುತ್ತದೆ. ಅವರ ದೈನಂದಿನ ಚಟುವಟಿಕೆಗಳು ಅವರ ಬೆಡಗುಗಳ ಮುಖಾಂತರವೇ ನಡೆಯುವವು. ಶಿಳ್ಳೇಕ್ಯಾತ ಸಮುದಾಯದಲ್ಲಿ ಅಟ್ರಾಕುಳಿ ಎಂಬ ಹದಿನೆಂಟು ಬೆಡಗುಗಳು ಕಂಡುಬರುತ್ತವೆ. ಶಹಾಪೂರ ನಗರದಲ್ಲಿ ವಾಸವಾಗಿರುವ ಅಲೆಮಾರಿ ಶಿಳ್ಳೇಕ್ಯಾತ ಸಮುದಾಯದವರಲ್ಲಿ ೧. ಅಟಕ (ಗಣಾಚಾ) ೨. ದುರ್ವೆ (ಕಟ್ಟಿಮನಿ) ೩. ರುಸುನಕುಂಟೆ ಈ ಬೆಡಗಿನವರು ಹೆಚ್ಚಾಗಿ ವಾಸವಾಗಿರುವುದು ಸಮೀಕ್ಷೆಯಿಂದ ತಿಳುದಬರುತ್ತದೆ.

ಆಹಾರ ಪದ್ಧತಿ

ಭೂಮಿಯ ಮೇಲೆ ಜೀವಿಸುವ ಪ್ರತಿಯೊಂದು ಜೀವಿಗೆ ಆಹಾರ ಅಗತ್ಯವಾಗಿ ಬೇಕೆ ಬೇಕು. ಮಾನವ ತನ್ನ ಹೊಟ್ಟೆಪಾಡಿಗಾಗಿ ಆಹಾರದ ಹುಡುಕಾಟದಿಂದ ತನ್ನದೇ ಆದ ಆಹಾರ ಕ್ರಮವನ್ನು ಹೊಂದಿದ್ದಾನೆ. ಅಂತೆಯೇ ಶಿಳ್ಳೇಕ್ಯಾತ ಸಮುದಾಯದಲ್ಲಿ ಸಸ್ಯಹಾರಿಗಳು ಮತ್ತು ಮಾಂಸಹಾರಿ ಎರಡನ್ನು ಸೇವಿಸುವ ಇವರು ಮೀನುಗಾರರಾಗಿರುವುದರಿಂದ ದಿನ ನಿತ್ಯದ ಆಹಾರದಲ್ಲಿ ಮೀನನ್ನು ತಿನ್ನುತ್ತಾರೆ. ಜೊತೆಗೆ ಕುರಿ, ಕೋಳಿ, ಮೊಲ, ಏಡಿ, ಕೌಜುಗ, ಆಮೆ, ಪಾರಿವಾಳ ಇತರ ಪ್ರಾಣಿಗಳ ಮಾಂಸ ತಿನ್ನುತ್ತಾರೆ. ಸಸ್ಯಹಾರಿಗಳಾಗಿ ರೊಟ್ಟಿ, ಬ್ಯಾಳಿ, ಕಾಯಿಪಲ್ಲೆ, ಕಾಳುಕಡಿಗಳನ್ನು ಊಟ ಮಾಡುತ್ತಾರೆ. ಹಬ್ಬ-ಹರಿದಿನಗಳಲ್ಲಿ ಹೋಳಿಗೆ, ಹುಗ್ಗಿ, ಸಜ್ಜಕ, ಕಡಬು ಹಬ್ಬದ ನಂತರ ದಿವಸ ಕರಿಮಾಡುತ್ತಾರೆ. ಮಾಂಸ ತಂದು ಹೆಂಡ ಇಲ್ಲವೆ ಸಾರಾಯಿ ತಂದು ಎಲ್ಲರು ಸೇರಿ ಕುಡಿದು ಊಟಮಾಡುತ್ತಾರೆ.

ವಸತಿ ವ್ಯವಸ್ಥೆ

ಶಿಳ್ಳೇಕ್ಯಾತ ಸಮುದಾಯವು ಮೂಲತಃ ಅಲೆಮಾರಿಯಾಗಿ ಸದಾ ಸಂಚಾರಿಗಳಾಗಿರುವುದರಿಂದ ಸ್ಥಳದಿಂದ ಸ್ಥಳಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಸಂಚರಿಸುವದರಿಂದ ಊರ ಮಧ್ಯದ ಚಾವಡಿ, ಧರ್ಮಶಾಲೆ, ಗುಡಿ ಗುಂಡಾರ ಇಲ್ಲವೆ ಊರ ಹೊರಗೆ ತಮ್ಮದೇ ಆದ ಗುಡಾರಗಳಲ್ಲಿ ಇವರು ವಾಸಮಾಡುತ್ತಾರೆ. ಶಹಾಪೂರ

ನಗರದ ಹಳಿಸಗರ ಎಂಬಲ್ಲಿ ವಾಸವಾಗಿರುವ ಶಿಳ್ಳೇಕ್ಯಾತ ಸಮುದಾಯದವರ ಬಹುತೇಕ ಮನೆಗಳು ಗುಡಾರಗಳಿಂದ ಕೂಡಿದ್ದು ಆರ್ಥಿಕವಾಗಿ ಬಹಳ ಹಿಂದುಳಿದವರಾಗಿದ್ದಾರೆ. ತಮ್ಮ ಹೊಟ್ಟೆ ತುಂಬಿಸಿ ಕೊಳ್ಳುವುದೇ ಅವರಿಗೆ ದೊಡ್ಡ ಸವಾಲಾಗಿದೆ. ಇನ್ನೂ ಮನೆ ಕಟ್ಟಿಕೊಳ್ಳುವುದು ಕನಸಿನ ಮಾತೆ ಸರಿ. ಇತ್ತೀಚಿನ ದಿನಗಳಲ್ಲಿ ಸರ್ಕಾರದ ವತಿಯಿಂದ ನಿವೇಶನಗಳು ನೀಡಿದ್ದು ಅಲ್ಲಿಯೇ ತಮ್ಮ ಗುಡಾರಗಳನ್ನು ನಿರ್ಮಿಸಿಕೊಂಡು ಜೀವಿಸುತ್ತಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ಕುಲಪಂಚಾಯತಿ

ಒಂದು ಸಮುದಾಯದ ಸ್ವಾಸ್ಥ್ಯ ಅದು ಅನುಸರಿಸುವ ಕುಲಕಟ್ಟಳೆ ಮತ್ತು ನ್ಯಾಯ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ. ಅಲೆಮಾರಿ ಸಮುದಾಯದಲ್ಲಿ ಇವು ಪ್ರಮುಖವಾದವು. ಇವು ಜನರ ವರ್ತನೆಗೆ ಒಂದು ಚೌಕಟ್ಟನ್ನು ಒದಗಿಸಿ, ದುರ್ನಡತೆಗೆ ಕಡಿವಾಣ ಹಾಕಿ ನಿಯಂತ್ರಿಸುವುದರೊಂದಿಗೆ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುತ್ತವೆ.

ಮಕ್ಕಳು ಮಕ್ಕಳಲ್ಲಿ ಜಗಳ ಉಂಟಾದರೆ, ಹೆಣ್ಣುಮಕ್ಕಳು ಮಾತಿನಲ್ಲಿ ವಿರಸ ಬಂದರೆ, ಕಲೆ ಪ್ರದರ್ಶನ ಮಾಡುವಾಗ ವ್ಯತ್ಯಾಸವಾದರೆ, ಗಂಡಸರು ಕುಡಿದು ಬಂದು ಬಡಿದಾಡಿದರೆ, ಉಣ್ಣುವಾಗ, ಉಡುವಾಗ ಜಗಳ ಬಂದರೆ ಕಳ್ಳು ಬಳ್ಳಿಯವರೇ ಸೇರಿ ಜಗಳ ಬಗೆ ಹರಿಸಿಕೊಳ್ಳಬೇಕು. ಇದನ್ನು ಓಣಿ ಪಂಚಾಯಿತಿ, ಒಣ ಜಗಳದ ತೀರ್ಮಾನ ಎಂದು ಕರೆಯುವರು.

ಕುಲಕಟ್ಟಳೆ ಮತ್ತು ನ್ಯಾಯ ವ್ಯವಸ್ಥೆ ಅಲೆಮಾರಿ ಸಮುದಾಯದಲ್ಲಿ ಬಹಳಷ್ಟು ಸಲ ಪರಸ್ಪರ ತೋಂಡಿ (ಮೌಖಿಕ) ಪದ್ಧತಿಯನ್ನೆ ಅವಲಂಬಿಸಿರುತ್ತವೆ. ಓದು ಬರಹ ಬಾರದಿರುವ, ಅಲೆಮಾರಿ ಸ್ಥಿತಿ ಯಲ್ಲಿರುವ ಶಿಳ್ಳೇಕ್ಯಾತರು ತಮ್ಮ ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಇದೇ ಪದ್ಧತಿಯನ್ನೇ ಅವಲಂಬಿಸಿದ್ದಾರೆ. ಪರಸ್ಪರ ನ್ಯಾಯ ವಿಚಾರಣೆಯ ನಂತರ ತಪ್ಪು ಮಾಡಿ ಶಿಕ್ಷೆಗೆ ಒಳಗಾದವರು ದೈವ ಎತ್ತಿ ಹಿಡಿದ ನ್ಯಾಯಕ್ಕೆ ತಲೆಬಾಗುತ್ತಾರೆ. ಒಂದು ವೇಳೆ ದೈವದ ತೀರ್ಪಿಗೆ ತಲೆಬಾಗದೆ, ದಂಡ ಕೊಡದವನಿಗೆ ಕುಲ ಬಹಿಷ್ಕಾರ ಹಾಕುವರು. ಈ ಸಮುದಾಯದಲ್ಲಿ ಕುಲ ಬಹಿಷ್ಕಾರ ಪ್ರಮುಖವಾದುದು.

ಓಣಿ ಪಂಚಾಯತಿಯಲ್ಲಿ ತೀರ್ಮಾನಗೊಳ್ಳದ ತೀವ್ರ ಸ್ವರೂಪದ ಜಗಳಗಳು ಇಲ್ಲಿ ವಿಚಾರಣೆಗೊಳ ಪಡುತ್ತವೆ. ವ್ಯಕ್ತಿ-ವ್ಯಕ್ತಿ ಕುಟುಂಬ-ಕುಟುಂಬಗಳ ನಡುವೆ ಉಂಟಾದ ತೀವ್ರ ಸ್ವರೂಪದ ವಿರಸ ಪ್ರಸಂಗಗಳು, ವ್ಯಭಿಚಾರಕ್ಕೆ ಸಂಬಂಧಿಸಿದ ವಿಷಯಗಳು ದೈವ ಪಂಚಾಯತಿಯ ಮುಂದೆ ಬರುತ್ತವೆ. ತಪ್ಪಿತಸ್ಥನಿಗೆ ಶಿಕ್ಷೆ ವಿಧಿಸುತ್ತಾರೆ. ದಂಡ, ಕುಲ ಬಹಿಷ್ಕಾರ, ಶುದ್ಧಗೊಳ್ಳುವುದು, ದಂಡಿಸುವುದು ಇವು ಸಾಮಾನ್ಯವಾದ ಶಿಕ್ಷೆ ವಿಧಿಸುತ್ತಾರೆ. ದಂಡ, ಕುಲ ಬಹಿಷ್ಕಾರ, ಶುದ್ಧಗೊಳ್ಳುವುದು, ದಂಡಿಸುವುದು ಇವು ಸಾಮಾನ್ಯವಾದ ಶಿಕ್ಷೆ ಗಳಾಗಿರುತ್ತವೆ. ಕೆಲವು ಸಂದರ್ಭಗಳಲ್ಲಿ ಪಿರ್ಯಾದಿ ಅಪರಾಧಿಗಳ ನಡುವೆ ರಾಜಿ ಮಾಡಿಸುವ ಪ್ರಯತ್ನವೂ ನಡೆಯುತ್ತದೆ.

೩.೪.೪. ಶಿಳ್ಳೇಕ್ಯಾತರ ರಾಜಕೀಯ ಸ್ಥಾನಮಾನ

ಅಲೆಮಾರಿಗಳಾಗಿ ಕೆಲಸವನ್ನು ಹುಡುಕಿಕೊಂಡು ಇಲ್ಲವೆ ತೊಗಲು ಗೊಂಬೆಯಾಟವನ್ನು ಪ್ರದರ್ಶಿಸುತ್ತಾ ಮತ್ತು ತಮ್ಮ ಮೂಲ ವೃತ್ತಿಯಾದ ಮೀನುಗಾರಿಕೆಯ ವೃತ್ತಿಯಿಂದ ಶಿಳ್ಳೇಕ್ಯಾತ ಸಮುದಾಯ ಒಂದೂರಿನಿಂದ ಮತ್ತೊಂದೂರಿಗೆ ಅಲೆದಾಡುತ್ತಿರುತ್ತಾರೆ. ಹಾಗಾಗಿ ಈ ಸಮುದಾಯದಲ್ಲಿ ಎಷ್ಟೊ ಜನಕ್ಕೆ ಇನ್ನು ರಾಜಕೀಯ ವೆಂಬುದು ಅರ್ಥವಾಗದೆ ವಿಷಯವಾಗಿದೆ. ರಾಜಕೀಯ ಎಂಬುವುದು ಉನ್ನತ ವರ್ಗಗಳ ಸ್ವತ್ತಾಗಿರುವುದು ಇಂದಿನ ಸಮಾಜದಲ್ಲಿ ಕಂಡುಬರುತ್ತದೆ. ಆದರೆ ಅಲೆಮಾರಿ ಸಮುದಾಯಗಳಿಗೆ ರಾಜಕೀಯವೆಂದರೆ ಗಗನ ಕುಸುಮವಾಗಿ ಕಂಡುಬರುತ್ತದೆ. ಅಲೆಮಾರಿ ಸಮುದಾಯಗಳು ಬಹುತೇಕವಾಗಿ ರಾಜಕೀಯದಿಂದ ದೂರ ವಿರುವುದು ಇಂದಿನ ಆಧುನಿಕತೆಯ ಸಮಾಜದಲ್ಲಿ ಕಾಣಬಹುದು. ಈ ಅಲೆಮಾರಿ ಸಮುದಾಯಗಳು ಬಹುತೇಕವಾಗಿ ರಾಜಕೀಯ ವ್ಯವಸ್ಥೆಯಿಂದ ನಿರ್ಲಕ್ಷಿಸಲ್ಪಟ್ಟಿವೆ. ಶಿಳ್ಳೆಕ್ಯಾತ ಸಮುದಾಯವು ಕೂಡ ಇದಕ್ಕೆ ಹೊರತಾಗಿಲ್ಲ. ಮೂಲತಃ ಅಲೆಮಾರಿಗಳಾಗಿ ಬದುಕುತ್ತಿರುವ ಶಿಳ್ಳೇಕ್ಯಾತರು ಆರ್ಥಿಕವಾಗಿ ತುಂಬಾ ಹಿಂದುಳಿದವರಾಗಿದ್ದು ತಮ್ಮ ಜೀವನವನ್ನು ನಡೆಸುವುದೇ ಇಂದಿನ ಯುಗದಲ್ಲಿ ಒಂದು ದೊಡ್ಡ ಸಮಸ್ಯೆಯಾಗಿದೆ. ಬಹುತೇಕವಾಗಿ ಈ ಸಮುದಾಯ ಬದುಕುವುದಕ್ಕಾಗಿ ವಿವಿಧ ವೃತ್ತಿಗಳನ್ನು ಅನುಸರಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ನಿರಂತರ ಅಲೆಯುವಿಕೆಯ ಈ ಸಮುದಾಯಕ್ಕೆ ರಾಜಕೀಯದ ವಾಸನೆ ತಟ್ಟಿಲ್ಲವೆಂದೇ ಹೇಳಬಹುದು.

ಶಹಾಪೂರ ನಗರದಲ್ಲಿ ವಾಸವಾಗಿರುವ ಶಿಳ್ಳೇಕ್ಯಾತ ಸಮುದಾಯವನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶಿಸಿ ಕೇಳಿದ ಪ್ರಶ್ನೆಗೆ ನೀವು ಯಾವ ರಾಜಕೀಯ ಪಕ್ಷವನ್ನು ಬೆಂಬಲಿಸುತ್ತಿರೆಂದು ಕೇಳಿದಾಗ ಮೊದಲು ನಮಗೆ ಅದರ ಬಗ್ಗೆ ಗೊತ್ತಿರಲಿಲ್ಲ ಇತ್ತೀಚಿನ ದಿನಗಳಲ್ಲಿ ರಾಜಕೀಯ ನಮ್ಮತ್ತ ಸುಳಿದಿದೆ. ಇದರಿಂದ ನಮಗೆ ಯಾರು ವಸತಿ-ಸೌಲಭ್ಯ ಮತ್ತು ಇನ್ನಿತರ ಸೌಲಭ್ಯಗಳು ಒದಗಿಸುವವರನ್ನು ನಾವು ಬೆಂಬಲಿಸುತ್ತೇವೆ ಎಂದು ಹೇಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಇಲ್ಲಿನ ಸಮುದಾಯಗಳಿಗೆ ಮತದಾನ ಮಾಡುವ ಹಕ್ಕು ಸಿಕ್ಕಾಗ ಗುರುತಿನ ಚೀಟಿಯನ್ನು ಪಡೆದುಕೊಂಡು ಮತದಾನ ಮಾಡುತ್ತಿರುವುದು ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ಈ ಸಮುದಾಯಕ್ಕೂ ಸಹ ರಾಜಕೀಯ ಗಾಳಿ ಬೀಸಿದ್ದು, ಕುಲವೊಬ್ಬರು ರಾಜಕೀಯದಲ್ಲಿ ಗುರುತಿಸಿಕೊಳ್ಳಲು ಕೆಲವೊಂದು ಪಕ್ಷಗಳ ಜೊತೆ ಗುರುತಿಸಿಕೊಳ್ಳುವುದರ ಜೊತೆಗೆ ಸಮುದಾಯದ ಅಭಿವೃದ್ಧಿ ರಾಜಕೀಯದಿಂದ ಮಾತ್ರ ಸಾಧ್ಯವಾಗುತ್ತದೆ ಎಂಬ ನಂಬಿಕೆ ಶಿಳ್ಳೇಕ್ಯಾತ ಸಮುದಾಯದ್ದಾಗಿದೆ.

೩.೪.೫. ಶಿಳ್ಳೆಕ್ಯಾತರ ಧಾರ್ಮಿಕ ಜೀವನ

ಧಾರ್ಮಿಕವಾಗಿ ಭಾರತ ದೇಶವು ವೈವಿದ್ಯತೆಯ ದೇಶವಾಗಿದ್ದು ವಿವಿಧ ಧರ್ಮಗಳ ಜನರು ವಾಸಿಸುವಂತೆ ಬುಡಕಟ್ಟು ಅಲೆಮಾರಿ ಸಮುದಾಯಗಳು ಸಹ ವಾಸವಾಗಿದ್ದಾರೆ. ಅಂತೆಯೇ ಇಲ್ಲಿ ಕಂಡುಬರುವಷ್ಟು

ಮಠ-ಮಂದಿರ, ಗುಡಿ-ಗೋಪುರಗಳು ಬೇರಾವ ರಾಷ್ಟ್ರಗಳಲ್ಲಿ ಕಂಡುಬರುವುದಿಲ್ಲ. ಇಲ್ಲಿ ಪ್ರತಿಯೊಂದು ಸಮುದಾಯಗಳಿಗೆ ದೈವಗಳಿದ್ದು, ಇದು ನಮ್ಮ ಮನೆ ದೇವರು, ಕುಲ ದೈವ ಎಂದು ಅನೇಕ ಧಾರ್ಮಿಕ ವಿಧಿ-ವಿಧಾನಗಳನ್ನು ಅನುಸರಿಸುತ್ತಾರೆ.

ಆಚರಿಸುವ ಪ್ರಮುಖ ಹಬ್ಬಗಳು

೧. **ಯುಗಾದಿ :** ಈ ಹಬ್ಬದಂದು ತಮ್ಮ ಗೊಂಬೆಗಳನ್ನು ಮತ್ತು ದೇವತೆಗಳನ್ನು ಪೂಜಿಸುತ್ತಾರೆ.

೨. **ನವರಾತ್ರಿ ದಶಮಿ :** ಶಿಳ್ಳೆಕ್ಯಾತರು ನವರಾತ್ರಿ ಹಬ್ಬವನ್ನು ಎರಡು ದಿವಸ ಆಚರಿಸುತ್ತಾರೆ.

೧. **ಖಂಡೆಪೂಜೆ ಅಥವಾ ಆಯುಧ ಪೂಜೆ :** ಖಂಡೆ ಪೂಜೆಯನ್ನು ವಿಶೇಷವಾಗಿ ಆಚರಿಸುವರು. ಅಂದು ತಮ್ಮ ವಸ್ತುಪಂಕರಗಳನ್ನು ದೇವರ ಮುಂದೆ ಇಟ್ಟು ಪೂಜಿಸುತ್ತಾರೆ.

೨. **ಬನ್ನಿ ಮುಡಿಯುವುದು :** ಈ ದಿನ ಬನ್ನಿ ಗಿಡಕ್ಕೆ ಪೂಜೆ ಸಲ್ಲಿಸಿ ಗಿಡದಿಂದ ಬನ್ನಿ ತಂದು ಹೊಸ ಬಟ್ಟೆ ತೊಟ್ಟು ಸಮುದಾಯದ ಇತರರಿಗೆ ಬನ್ನಿಯನ್ನು ವಿನಿಮಯ ಮಾಡಿಕೊಳ್ಳುತ್ತಾರೆ.

೩. **ದೀಪಾವಳಿ :** ನೀರು ತುಂಬುವ ಹಬ್ಬವನ್ನು ಹಿರೇಹಬ್ಬ ಎಂದು ದೀಪಾವಳಿ ದಿನದಂದು ಸಮುದಾಯದವರು ಈ ಹಬ್ಬವನ್ನು ಆಚರಿಸಲಾಗುತ್ತದೆ.

ಶಿಳ್ಳೆಕ್ಯಾತರು ಪೂಜಿಸುವ ದೈವಗಳು : ಎಲ್ಲಮ್ಮ, ಹುಲಿಗೆಮ್ಮ, ಮಾರೆಮ್ಮ, ಜೊತೆಗೆ ಮೈಲಾರ ಲಿಂಗ ಹಾಗೂ ಇನ್ನಿತರ ಪುರುಷ ದೈವಗಳನ್ನು ಪೂಜಿಸುವುದರ ಮೂಲಕ ಧಾರ್ಮಿಕ ನಂಬಿಕೆ-ಆಚರಣೆಗಳನ್ನು ಇಂದಿನ ಸಮಾಜದಲ್ಲಿ ಮುಂದುವರೆಸಿಕೊಂಡು ಬಂದಿದ್ದಾರೆ. ಜೊತೆಗೆ ಮೋಹರಂನಂತಹ ಮುಸ್ಲಿಂ ದೈವಗಳನ್ನು ಪೂಜಿಸುತ್ತಾ ಧಾರ್ಮಿಕವಾಗಿ ಸಮಾಜದ ಇತರ ಸಮುದಾಯಗಳ ಜೊತೆ ಅನನ್ಯತೆಯಿಂದ ಜೀವಿಸುತ್ತಿರುವರು.

೩.೪.೬. ಶಿಳ್ಳೇಕ್ಯಾತರ ಸಾಂಸ್ಕೃತಿಕ ಜೀವನ

ಸಂಸ್ಕೃತಿ ಎಂಬುವುದು ಬಹು ಅರ್ಥವ್ಯಾಪ್ತಿಯುಳ್ಳ ಕಲ್ಪನೆಯಾಗಿದೆ. ಸಂಸ್ಕೃತಿಯು ಮಾನವ ಜೀವನ ವಿಧಾನದ ಪ್ರತೀಕ ಹಾಗೂ ವಿಶಿಷ್ಟವಾದ ಆಸ್ತಿ. ಅದು ಮಾನವ ಸಮಾಜದ ಗುಣಲಕ್ಷಣಗಳಲ್ಲೊಂದಾಗಿದೆ. ಮಾನವನಿಗಿಂತಲೂ ಕೆಳಮಟ್ಟದಲ್ಲಿ ಅರ್ಥಾತ ಪ್ರಾಣಿಗಳಮಟ್ಟದಲ್ಲಿ ಸಂಸ್ಕೃತಿ ಅಸ್ತಿತ್ವದಲ್ಲಿಲ್ಲ. ಪ್ರಾಣಿಗಳು ನೈಸರ್ಗಿಕ ಪರಿಸರದಲ್ಲಿ ಬದುಕಬಹುದುದಾದರೆ ಮಾನವ ಮಾತ್ರ ಸಾಂಸ್ಕೃತಿಕ ಪರಿಸರದಲ್ಲಿ ಬದುಕುತ್ತಾನೆ. ಮಾನವನು ಸಮಾಜದಲ್ಲಿಯೇ ಹುಟ್ಟಿ ಬೆಳೆಯುವನು ಎಂಬ ಮಾತು ಮಾನವ ಸಂಸ್ಕೃತಿಯ ಅಳವಿನಲ್ಲಿ ಮಾನವನು ಸಮೂಹ ಜೀವಿ ಎನ್ನುವುದು ಮಾನವನು ಸಾಂಸ್ಕೃತಿಕ ಜೀವಿ ಎನ್ನುವುದಕ್ಕೆ ಪರ್ಯಾಯವಾಗಿ

ಪ್ರತಿಯೊಬ್ಬ ವ್ಯಕ್ತಿಯನ್ನು ಸಂಸ್ಕೃತಿಯ ಓರ್ವ ಪ್ರತಿನಿಧಿ ಎನ್ನಬಹುದು. ಅಂತೆಯೇ ಶಿಳ್ಳೇಕ್ಯಾತ ಸಮುದಾಯದಲ್ಲಿಯೂ ಕೂಡ ಸಂಸ್ಕೃತಿಯು ಬೆಳೆದುಕೊಂಡು ಬಂದಿರುವುದನ್ನು ಕಾಣಬಹುದು.

ಸಂಸ್ಕಾರಗಳು

ಜನನ : ಮಕ್ಕಳಿಂದಲೇ ಮನೆ ಎಂದು ಭಾವಿಸುವ ಶಿಳ್ಳೇಕ್ಯಾತರು ದೇವರೇ ಮಕ್ಕಳನ್ನು ದಯಪಾಲಿಸು ವನೆಂದ ನಂಬಿದ್ದಾರೆ. ಚೊಚ್ಚಲ ಬಸುರಿಯಾದಾಗ ಅವರ ಬಂಧ ಬಳಗಕ್ಕೆಲ್ಲ ಎಲ್ಲಿಲ್ಲದ ಸಂತೋಷ. ಮಗಳು ಗರ್ಭಿಣಿಯಾಗಿರುವುದನ್ನು ತಿಳಿದು ತವರಿನವರು ತುಂಬಾ ಸಂತೋಷಗೊಂಡು ಬಯಕೆ ಬುತ್ತಿ ತುರವುದು. ಕಳ್ಳ ಕುಬಸ ಮಾಡುವುದು, ಕಳ್ಳಕುಬಸ ಮಾಡುವಾಗ ಅನುಸರಿಸುವ ಎಲ್ಲ ನೆಮಗಳನ್ನು ಇಲ್ಲಿ ಅನುಸರಿಸಲಾಗುವುದು. ಸೀಮಂತಕಾರ್ಯ ಈ ಕಾರ್ಯವನ್ನು ಏಳನೆ ತಿಂಗಳಲ್ಲಿ ಮಾಡುವರು. ಸತಿ-ಪತಿಗಳನ್ನು ಕೂಡ್ರಿಸಿ ಇಬ್ಬರಿಗೂ ಹೊಸ ಬಟ್ಟೆಯನ್ನು ಧರಿಸಿ ಆರತಿ ಬೆಳಗುವರು. ಈ ಸೀಮಂತಕಾರ್ಯದ ಖರ್ಚು ವೆಚ್ಚವೆಲ್ಲ ತವರಿನವರಿಗೆ ಸೇರಿಸುತ್ತದೆ.

ಮೊದಲ ಹೆರಿಗೆ ಕಷ್ಟಕರವಾದ್ದರಿಂದ ಅದನ್ನು ಬಾಣಂತನವನ್ನು ತವರಿನವರೇ ನಿರ್ವಹಿಸಬೇಕೆಂದು ಇವರಲ್ಲಿ ಕಟ್ಟುಪಾಡಿದೆ. ಗರ್ಭಿಣಿಯು ಪ್ರಸವಕಾಲ ಸಮೀಪಿಸಿದಾಗ ಯಾವ ಕೆಲಸದಲ್ಲಿಯೂ ತೊಡಗು ವುದಿಲ್ಲ. ಅವಳ ಯೋಗ ಕ್ಷೇಮವನ್ನೆಲ್ಲ ತಾಯಿಯ ಶುಶ್ರೂಷೆ, ಧೈರ್ಯ ಹಾಗೂ ಸೂಲಗಿತ್ತಿ ನೋಡಿ ಕೊಳ್ಳುವಳು. ಪ್ರಸವವೇದನೆ ಆರಂಭವಾದಾಗ ಸೂಲಗಿತ್ತಿ ಗರ್ಭಿಣಿಯ ಹತ್ತಿರವೇ ಇರುವಳು. ಸೂಲಗಿತ್ತಿಗೆ ಸಹಾಯಕರಾಗಿ ಹಿರಿಯ ಅನುಭವಿಕ ಹೆಣ್ಣುಮಕ್ಕಳು ಅಲ್ಲಿರುವುದುಂಟು. ಹೆರಿಗೆಯಾದ ಮೇಲೆ ಐದು ದಿವಸ ಕೂಸಿಗೂ ಬಾಣಂತಿಗೂ ಎರೆದು, ಶೆಟಿಗೆವ್ವನ ಪೂಜೆ ಮಾಡುವರು. ಆ ದಿನವೇ ತೊಟ್ಟಲಿಗೆ ಕೂಸನ್ನು ಹಾಕಿ ನಾಮಕರಣ ಮಾಡಲು ಕೂಸಿನ ಸೋದರತ್ತೆಗೆ ಪ್ರಾಶಸ್ತ್ಯ ನೀಡಿರುತ್ತಾರೆ.

ಋತುಮತಿ : ಹೆಣ್ಣಿನ ದೇಹದಲ್ಲಿ ಶಾರೀರಿಕ ಬದಲಾವಣೆಯನ್ನು ಕಂಡುಬರುವುದೇ ಹೆಣ್ಣು ದೊಡ್ಡವಳಾದಳೆಂದು ಕರೆಯುತ್ತಾರೆ. ಶಿಳ್ಳೇಕ್ಯಾತ ಸಮುದಾಯದಲ್ಲಿ ದೊಡ್ಡವಳಾದ ಹೆಣ್ಣನ್ನು ಸೂತಕದ ರೂಪದಲ್ಲಿ ಮೈಲಿಗೆಯಾದವಳೆಂದು ನಂಬುತ್ತಾರೆ. ಜೊತೆಗೆ ಆಕೆಯನ್ನು ಒಂದು ಮೂಲೆಯಲ್ಲಿ ಕೆಲವು ದಿನಗಳವರೆಗೆ ಕೂರಿಸಿ. ನಂತರ ಸೂತಕ ಕಳೆದ ಮೇಲೆ ಶಾಸ್ತ್ರೋಕ್ತವಾಗಿ ಆಕೆಯನ್ನು ಮನೆಯ ಒಳಗೆ ಕರೆದುಕೊಳ್ಳುತ್ತಾರೆ. ಸೂತಕ ಎಂದರೆ ಮೈಲಿಗೆ ಎಂದರ್ಥ. ಇದರಲ್ಲಿ ಎರಡು ವಿಧ ಒಂದು ಶುಭ ಸೂತಕ, ಎರಡು ಅಶುಭ ಸೂತಕ. ಶುಭಸೂತಕದಲ್ಲಿ ಹೆಣ್ಣು ಮೈನೆರೆಯುವದು, ಹೆರುವದು ಇದ್ದರೆ, ಅಶುಭ ಸೂತಕ ಕೇವಲ ಸಾವಿಗೆ ಸಂಬಂಧಿಸಿರುತ್ತದೆ.

ವಿವಾಹ : ಪುರುಷ ಮತ್ತು ಸ್ತ್ರೀ ಪ್ರೌಢಾವಸ್ಥೆಗೆ ಬಂದಾಗ ಧರ್ಮ ಸಮ್ಮತವಾದ ನಿಯಮಗಳಿಗನು ಸಾರವಾಗಿ, ಸಮಾಜ ಬಾಂಧವರ ಒಪ್ಪಿಗೆ ಪಡೆದು, ದೈವದ ಸಮಕ್ಷಮದಲ್ಲಿ ಜೊತೆಗೂಡಿ ಗ್ರಹಸ್ಥಾಶ್ರಮ ಜೀವನಕ್ಕೆ ಕಾಲಿಡುವುದು ವಿವಾಹ ಎಂದು ಅರ್ಥೈಸಿಕೊಂಡಿದೆ. ಸಿಳ್ಳೇಕೇತರ ಮದುವೆ ಮಾಡುವಾಗ ಹೆಚ್ಚಾಗಿ

ರಕ್ತಸಂಬಂಧಿಕಲ್ಲಿಯೇ ಸಂಬಂಧ ಬೆಳೆಸುವರು. ಒಂದೇ ಬೆಡಗದವರಲ್ಲಿ ಸಂಬಂಧ ಬೆಳೆಸುವುದಿಲ್ಲ. ರಕ್ತ ಸಂಬಂಧ ಹೊರತುಪಡಿಸಿ ಹೊಸದಾಗಿ ಸಂಬಂಧ ಬೆಳೆಸುವಾಗ ಊರಿಂದೂರಿಗೆ ತಿರುಗುವಾಗ ಬೆಳೆದ ಪರಸ್ಪರ ಪರಿಚಯದಿಂದ ಮದುವೆಯ ಗಂಡು ಹೆಣ್ಣುಗಳನ್ನು ನಿರ್ಧರಿಸುವರು. ಈ ಸಮುದಾಯದಲ್ಲಿ ಏಕಪತ್ನಿತ್ವ ಪದ್ಧತಿ ಜಾರಿಯಲ್ಲಿರುವುದು. ಅದರೆ ಒಂದೊಂದು ಬಾರಿ ಹೆಂಡತಿಯು ಅಕಾಲಿಕ ಮರಣವನ್ನು ಹೊಂದಿದರೆ, ಮೊದಲ ಹೆಂಡತಿಗೆ ಮಕ್ಕಳಾಗದಿದ್ದ ಸಂದರ್ಭಗಳಲ್ಲಿ ಬೇರೆ ಮದುವೆಯಾಗುತ್ತಾರೆ. ಆದೇ ರೀತಿ ಇವರಲ್ಲಿ ವಿಧುರನ್ನು ವಿಧವೆಯನ್ನು ಮದುವೆಯಾಗುವುದು ಉಡಿಕಿ ಮದುವೆಯ ಪದ್ಧತಿ ಇವರಲ್ಲಿದೆ. ಅವರು ವಿವಾಹ ಬಂಧನಕ್ಕೆ ವಿಶೇಷ ಪ್ರಾಶಸ್ತ್ಯ ನೀಡಿದ್ದಾರೆ. ತಮ್ಮ ಮದುವೆಯಲ್ಲಿ ವಿಶಿಷ್ಟ ಸಂಪ್ರದಾಯ ಮತ್ತು ಆಚರಣೆಗಳನ್ನು ರೂಢಿಸಿಕೊಂಡು ಬಂದಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ.

ಮರಣ ಸಂಸ್ಕಾರ : ಭೂಮಿಯ ಮೇಲೆ ಹುಟ್ಟಿದ ಮನುಷ್ಯ ಸಾಯುವುದು ನಿಸರ್ಗದ ನಿಯಮ. ಮಾನವನ ಬದಕನ್ನು ಅಂತ್ಯಗೊಳಿಸುವ ಅನಿವಾರ್ಯ ಹಾಗೂ ನಿಶ್ಚಿತವಾದ ಘಟ್ಟ. ಮಾನವ ಹುಟ್ಟಿದಾಗ ಕ್ರಮಬದ್ಧವಾದ ಸಂಸ್ಕಾರಗಳಿಗೆ ಒಳಗೊಳ್ಳುವಂತೆ ಸತ್ತಗಲೂ ಕೆಲವು ವಿಧಿಕ್ರಿಯೆಗಳಿಗೆ ಒಳಗಾಗುತ್ತಾನೆ. ಆ ವಿಧಿಕ್ರಿಯೆಗಳು ಸಮಾಜದಿಂದ ಸಮಾಜಕ್ಕೆ, ಕುಲದಿಂದ ಜಲಕ್ಕೆ ಭಿನ್ನವಾಗಿರುತ್ತದೆ. ಅಲೆಮಾರಿ ಬದುಕನ್ನು ಸಾಗಿಸುವ ಶಿಳ್ಳೇಕೇತರ ಸಮಾಜದಲ್ಲಿ ಮರಣ ಸಂಸ್ಕಾರ ಬಹುವೈವಿದ್ಯಮಯವಾಗಿದೆ.

ಹಿಂದೆ ಶವವನ್ನು ಸಾಗಿಸುವ ಚಟವನ್ನು ಬಿದಿರಿನಿಂದ ಒಂದು ಸಣ್ಣ ಮಂಟಪದ ಹಾಗೆ ಕಟ್ಟಿ ಮರದ ಸೊಪ್ಪು ಹೊದಿಸುತ್ತಿದ್ದರು. ಇತ್ತೀಚೆಗೆ ಬಣ್ಣದ ಹಾಳೆ ಹಚ್ಚಿ, ಹೂಮಾಲೆ ಹಾಕಿ ಶವವನ್ನು ಅದರಲ್ಲಿ ಕೂಡ್ರಿಸಿ ಮಂಟದ ಮೇಲೆ ಕಳಸವಿಡುವರು. ಇದನ್ನು ನಾಲ್ಕು ಜನ ಹೊರುವಂತೆಯೇ ತಯಾರಿಸುತ್ತಾರೆ. ತಿಥಿಕಾರ್ಯ ಮಾಡಲು ೯, ೧೧, ೨೧ ನೆಯ ದಿನಗಳಲ್ಲಿ ಒಂದನ್ನು ನಿರ್ಧರಿಸಿ ಸಮಾಧಿಯ ಮೇಲೆಯೇ ಸಾರಿ ಹೇಳುವರು. ಹಾಗೆ ಮಣ್ಣು ಎಳೆದು ಮುಚ್ಚಿದ ನಂತರ ಸಮಾಧಿಯ ಮೇಲೆ ಮೂರು ಕಲ್ಲು, ಬಾರಿ ಗಿಡ ನೆಡುವರು. ಇದಾದ ಮೇಲೆ ವಿಧವೆಯರು ಮತ್ತು ವಯಸ್ಸಾಯ ಸ್ತ್ರೀಯರು ಮೃತನ ಪತ್ನಿಯ ತಾಳಿಯನ್ನು ಸಮಾಧಿಗೆ ಮುಟ್ಟಿಸಿ ತೆಗೆದು, ಬಳೆ ಒಡೆಯುವರು. ಅವಳ ಮುಖ ಮುತ್ತೈಯದೆಯರಿಗೆ ಕಾಣದಂತೆ ಸೀರೆ ಮರೆ ಮಾಡಿಕೊಂಡು ಹಿಂತಿರುಗುವರು. ಹೆಂಡತಿ ಸತ್ತ ಗಂಡನ ಉಡದಾರ ಹರಿಯುವರು.

೩.೫. ಸಿಂಧೋಳ್ಳು

೩.೫.೧. ಚಾರಿತ್ರಿಕ ಹಿನ್ನೆಲೆ

ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಶಹಾಪುರ ನಗರದ ಸಾಂಸ್ಕೃತಿಕ ಚರಿತ್ರೆಯಲ್ಲಿ ಸಿಂಧೊಳ್ಳು ಸಮುದಾಯ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಇತರ ಸಮುದಾಯಗಳ ಜೊತೆ ಬದುಕುತ್ತಿದ್ದರೂ, ಅಷ್ಟಾಗಿ ಯಾವುದೇ ಸಮುದಾಯದ ಪ್ರಭಾವಕ್ಕೆ ಒಳಗಾಗಿಲ್ಲ. ಇವರು ತಮ್ಮ ಪಾರಂಪರಿಕ ಸಾಂಸ್ಕೃತಿಕ ಚಹರೆಗಳನ್ನು ಈಗಲೂ ಉಳಿಸಿಕೊಂಡು ಬಂದಿದ್ದಾರೆ. ಗುಡಾರ, ಭೀಕ್ಷೆ ಬೇಡುವ ಬುಟ್ಟಿ, ಮೋರ,

ಚಾಟಿ,, ಪೆಟ್ಟಿಗೆ ದೈವ ಇವರ ಸಾಂಸ್ಕೃತಿಕ ಬದುಕಿಗೆ ಸಾಕ್ಷಿಯಾಗಿದೆ. ಭಿಕ್ಷಾಟನೆಗೆ ಬಳಸುವ ದೈವಗಳ ಕಥೆಗಳಲ್ಲಿ ತಮ್ಮ ಸಮುದಾಯದ ಮೂಲ ಹಾಗೂ ಚಾರಿತ್ರಿಕ ಹಿನ್ನಲೆ ಕುರಿತು ಹಲವಾರು ಮೌಖಿಕ ಕಥನಗಳು ಇವರಲ್ಲಿ ಕಾಣಬಹುದು.

ಮೌಖಿಕ ಕಥನಗಳು

ಸಾಮಾಜಿಕ ಸ್ತರ ವ್ಯವಸ್ಥೆ ಸ್ವರೂಪ ಪಡೆದಿರುವ ಭಾರತದಲ್ಲಿ ಎಲ್ಲಾ ಜಾತಿ ಸಮುದಾಯಗಳಿಗೂ ತಮ್ಮ ಮೂಲ ಕುರಿತಾಗಿ ಒಂದೊಂದು ಮೌಖಿಕ ಕಥನಗಳು ಚಾಲ್ತಿಯಲ್ಲಿರುತ್ತವೆ. ಅಂತೆಯೇ ಸಿಂಧೊಳ್ಳು ಸಮುದಾಯದಲ್ಲಿಯೂ ಹಲವಾರು ಮೌಖಿಕ ಕಥನಗಳಿವೆ.

“ಒಂದಾನೊಂದು ಕಾಲದಲ್ಲಿ ಒಂದು ದಿನ ಶಿವ ಪಾರ್ವತಿಯರು ನಂದಿಯ ಮೇಲೆ ಕುಳಿತುಕೊಂಡು ಭೂಲೋಕದ ಮೇಲೆ ಸಂಚಾರ ಹೊರಟಿದ್ದರು. ಅವರು ಸಂಚರಿಸುತ್ತಿದ್ದ ರಾಜ್ಯಗಳಲ್ಲಿ ರಾಜರುಗಳು ಆಳ್ವಿಕೆ ನಡೆಸುತ್ತಿದ್ದರು. ಋಷಿಮುನಿಗಳು ಕಾಡಿನಲ್ಲಿ ಆಶ್ರಮಗಳನ್ನು ಕಟ್ಟಿಕೊಂಡು ಅಲ್ಲಿನ ಶಿಷ್ಯರಿಗೆ ಶಿಕ್ಷಣ ಕಲಿಸುತ್ತಿದ್ದರು. ಯಜ್ಞ ಯಾಗಾದಿಗಳನ್ನು ನಡೆಸುತ್ತಿದ್ದರು. ಜನಸಾಮಾನ್ಯರು ದಿನನಿತ್ಯದ ಕಾರ್ಯಗಳಲ್ಲಿ ಮಗ್ನರಾಗಿದ್ದರು. ಈ ರೀತಿ ಇಡಿ ಜನತೆ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿದ್ದರು. ಸಿಂಧೊಳ್ಳನು ಏನು ಕೆಲಸ ಮಾಡದೆ ಕಾಲಹರಣ ಮಾಡುತ್ತಿದ್ದನು. ಈತನನ್ನು ನೋಡಿದ ಶಿವಪಾರ್ವತಿ ಬೇಸರ ಪಟ್ಟುಕೊಂಡರು. ಯಾವ ಕೆಲಸವನ್ನು ಮಾಡದೆ ಕಾಲಹರಣ ಮಾಡಲು ಬೇಸರ ಆಗುವುದಿಲ್ಲವೆ ಎಂದು ಬೈಯುತ್ತಾರೆ. ಮನುಷ್ಯನಾದವನು ಏನಾದರು ಕೆಲಸ ಮಾಡಿ ಜೀವಿಸಬೇಕೆಂದು ತಿಳುವಳಿಕೆ ನೀಡುತ್ತಾರೆ. ಈ ಮಾತಿಗೆ ಸಿಂಧೊಳ್ಳನ್ನು ನನಗೆ ಯಾವ ಕೆಲಸ ಗೋತ್ತಿಲ್ಲ. ಏನು ಮಾಡಲಿ ಎಂದಾಗ ಶಿವ ಪಾರ್ವತಿಯರು ರಾಜ್ಯದಲ್ಲಿ ಜನರನ್ನು ಉದ್ಧಾರ ಮಾಡು. ಜನರಿಗೆ ಬರುವ ರೋಗ ರುಜಿನಗಳು ನಿರ್ಮೂಲನೆ ಮಾಡು ಎಂದು ಹೇಳಿದರು. ಅಂದಿನಿಂದ ಆತನು ದೇವರ ಪುಟ್ಟಿಹೊತ್ತುಕೊಂಡು ಮನೆಮನೆಗೆ ಹೋದನು. ಎಲ್ಲಾ ಜನರಿಗೆ ಒಳ್ಳೆಯದನ್ನು ಮಾಡೆಂದು ಕೇಳಿಕೊಳ್ಳುತ್ತಾನೆ” (ದೊಡ್ಡಮನಿ ಲೋಕರಾಜ ರಾವುಲೋಳ ಎಸ್ ಶ್ರೀನಿವಾಸ : ೨೦೦೮-೮-೯).

ಸಾಮಾಜಿಕ ಹಾಗೂ ಐತಿಹಾಸಿಕ ಹಿನ್ನೆಲೆ

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಸ್ತರದಲ್ಲಿರುವ ಸಿಂಧೊಳ್ಳು ಸಮುದಾಯವು ಭಿಕ್ಷಾಟನೆ ಯಿಂದಾಗಿಯೇ ಜೀವನ ಸಾಗಿಸುವಂಥವರು. ಊರ ಹೊರ ಭಾಗಗಳಲ್ಲಿ ಇವರು ತಾತ್ಕಾಲಿಕವಾಗಿ ಗುಡಾರ ಗಳನ್ನು ಹಾಕಿಕೊಳ್ಳುತ್ತಾರೆ. ಅಲೆಮಾರಿ ಸಮುದಾಯದ ಸಿಂಧೊಳ್ಳರು ಸಾಮಾನ್ಯವಾಗಿ ತಮ್ಮ ದೇವರ ಪುಟ್ಟಿಗಳೊಂದಿಗೆ ಊರಿಂದೂರಿಗೆ ಅಲೆಯುತ್ತಾರೆ. ಭಿಕ್ಷಾಟನೆಯಿಂದ ಬಂದ ಪದಾರ್ಥಗಳನ್ನು ಆಹಾರವಾಗಿ ಬಳಸುತ್ತಾರೆ. ಗುಡಾರದ ಹೊರಭಾಗದಲ್ಲಿ ಕಲ್ಲುಗುಂಡುಗಳಿಂದ ಒಲೆಗಳನ್ನು ರಚಿಸಿಕೊಂಡು ಅಡುಗೆ ಮಾಡುಕೊಳ್ಳುತ್ತಾರೆ. ಗುಡಾರದ ಹೊರತಾಗಿ ಧರ್ಮಛತ್ರಗಳಲ್ಲಿ ಇವರು ನೆಲೆಸುವುದುಂಟು. ಒಂದು

ಊರಿನಲ್ಲಿ ಭಿಕ್ಷಾಟನೆ ಮಾಡುವುದು ಮುಗಿದ ನಂತರ ಮುಂದಿನ ಊರಿಗೆ ತೆರಳುತ್ತಾರೆ. ಹಾಗೆ ಸಂತೆ ಜಾತ್ರೆಗಳಲ್ಲಿಯೂ ಭಿಕ್ಷಾಟನೆ ಮಾಡುವುದು ಕಂಡುಬರುತ್ತದೆ.

"ಪೂರ್ವದಲ್ಲಿ ದಡಾರ, ಮೈಲಿ, ಕಾಲರಾ, ಪ್ಲೇಗಿನಂತಹ ಸಾಂಕ್ರಾಮಿಕ ರೋಗಗಳನ್ನು ನಿವಾರಿಸುವ ಶಕ್ತಿ ವೈದ್ಯಲೋಕಕ್ಕೆ ಇರದಂತಹ ಸಂದರ್ಭದಲ್ಲಿ ಜನತೆ ಅನಿವಾರ್ಯವಾಗಿ ದುಷ್ಟಶಕ್ತಿಯನ್ನು ನಿವಾರಿಸುವ ದೇವತೆಗಳಿಗೆ ಮೊರೆಹೋಗುತ್ತಿದ್ದರು. ಇಂತಹ ಸಾಂಕ್ರಾಮಿಕ ರೋಗಗಳನ್ನು ಗ್ರಾಮಕ್ಕೆ ಬಾರದಂತೆ ತಡೆಯುವ ಶಕ್ತಿ ಸಿಂಧೊಳ್ಳರು ಹೊತ್ತು ತರುವ ದೇವತೆಗಳಿಗೆ ಇದೇ ಎನ್ನುವ ನಂಬಿಕೆ ಜನರಲ್ಲಿತ್ತು. ಗ್ರಾಮದ ಹಿರಿಯರನ್ನು ಇಲ್ಲವೇ ಊರಿನ ಪಾಟೀಲ ಗೌಡರ ಪರವಾನಿಗೆ ಪಡೆದು ಸಿಂಧೊಳ್ಳರು ಗ್ರಾಮಗಳಲ್ಲಿ ಭಿಕ್ಷಾಟನೆ ಮಾಡುತ್ತಿದ್ದರು. ಗ್ರಾಮ ಪ್ರವೇಶಿಸಿದ ಮೊದಲ ದಿನ ಊರ ಹಿರಿಯ ಗೌಡ, ಪಾಟೀಲರು ನೀಡುವ ಪದಾರ್ಥಗಳನ್ನು ಆಹಾರವಾಗಿ ಸಿಂಧೊಳ್ಳರು ಸ್ವೀಕರಿಸುತ್ತಿದ್ದರು. ತರುವಾಯ ಇಡೀ ಗ್ರಾಮದಲ್ಲಿ ತಿರುಗಾಡಿ ಭಿಕ್ಷಾಟನೆ ಮಾಡಬಹುದಾಗಿತ್ತು. ಆದರೆ ಈ ಪದ್ಧತಿ ಈಗ ಕಂಡುಬರುವುದಿಲ್ಲ. ಇಂದು ಯಾರ ಪರವಾನಿಗೆ ಪಡೆಯದೆ ನೇರವಾಗಿ ಗ್ರಾಮಗಳಲ್ಲಿ ಬಿಕ್ಷಾಟನೆ ಮಾಡುವುದು ಕಂಡುಬರುತ್ತದೆ. ಹಾಗೆ ಹಿಂದಿದ್ದ ಎಷ್ಟೋ ಸಾಂಕ್ರಾಮಿಕ ರೋಗಗಳು ಇಂದು ಜನತೆಯಿಂದ ದೂರಾಗಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಗ್ರಾಮಗಳಿಗೆ ಬರುವ ಅನಿಷ್ಟಗಳನ್ನು ತೊಲಗಿಸುವ ಕಾರ್ಯವನ್ನು ಅವರು ತಮ್ಮ ದೇವತೆಗಳ ಮೂಲಕ ಮಾಡುತ್ತಾರೆ ಎಂಬ ನಂಬಿಕೆ ಜನಸಾಮಾನ್ಯರಲ್ಲಿ ಕಂಡುಬರುತ್ತದೆ" (ದೊಡ್ಡಮನಿ ಲೋಕರಾಜ ರಾವುಲೋಕ ಶ್ರೀನಿವಾಸ:೨೦೦೮ ೧೩-೧೪). ಹೀಗೆ ಸಿಂಧೋಳ್ಳು ಸಮುದಾಯದ ಚಾರಿತ್ರಿಕ ಹಿನ್ನೆಲೆ ಕುರಿತು ಅನೇಕ ಅಂಶಗಳಿಂದ ತಿಳಿದುಬರುತ್ತದೆ. ಈ ರೀತಿಯಾಗಿ ಅಲೆಮಾರಿ ಸಮುದಾಯಗಳ ಚಾರಿತ್ರಿಕ ಹಿನ್ನೆಲೆ ಲೇಖಕರ ಅಭಿಪ್ರಾಯದಲ್ಲಿ ವ್ಯಕ್ತವಾಗಿದ್ದುದು ಕಂಡುಬರುತ್ತದೆ.

ಹಿಂದೂ ಸಂಸ್ಕೃತಿಯ ಸಾಮಾಜಿಕ ಸಂರಚನಾ ವ್ಯವಸ್ಥೆಯಲ್ಲಿ ಇತರ ಅನೇಕ ಧರ್ಮಗಳು ತಮ್ಮದೇ ಆದ ವಿಭಿನ್ನ ಸಂಸ್ಕೃತಿಗಳನ್ನು ರೂಢಿಸಿಕೊಂಡು ನೆಲೆ ಕಂಡುಕೊಂಡಿರುವುದು ವಾಸ್ತವ. ಬಹುಕಾಲದಿಂದಲೂ ಮೇಲ್ಪಂಕ್ತಿಯಲ್ಲಿರುವ ಕೆಲವೇ ಸಮಾಜಗಳು ಪ್ರಧಾನ ಧಾರೆಯಲ್ಲಿದ್ದು ಅಂತಹ ಸಂಸ್ಕೃತಿಗಳೇ ಶ್ರೇಷ್ಠ ಎಂಬ ಮನೋಭಾವ ಒಂದು ಕಾಲದಲ್ಲಿತ್ತು. ಬದಲಾದ ಸಂದರ್ಭದಲ್ಲಿ ಮಾನವಶಾಸ್ತ್ರ, ಸಮಾಜಶಾಸ್ತ್ರ, ಜಾನಪದ ಹಾಗೂ ಇತ್ಯಾದಿ ಅಧ್ಯಯನಕಾರರ ಸೂಕ್ಷ್ಮ ದೃಷ್ಟಿಯಿಂದ ತಳಸ್ಪರ್ಶಿ ಅಧ್ಯಯನದಿಂದ ಅನೇಕ ಅನಾಥ ಮತ್ತು ಅಳಿವಿನಂಚಿನಲ್ಲಿರುವ ಸಮುದಾಯಗಳ ಮತ್ತು ಅಲೆಮಾರಿ ಬುಡಕಟ್ಟುಗಳ ಬದುಕು ಕೂಡ ವಿಶಿಷ್ಟ ಮತ್ತು ಅನನ್ಯ ಎಂಬುದನ್ನು ಹಲವಾರು ವಿದ್ವಾಂಸರು ಗುರುತಿಸಿದ್ದಾರೆ.

ಇತರ ಸಮುದಾಯಗಳೊಂದಿಗೆ ಅನ್ಯೋನ್ಯ ಸಂಬಂಧ, ನಯ, ವಿನಯಗಳ ಗುಣ, ಧಾರ್ಮಿಕ ಭಿಕ್ಷಾಟನೆಯ ಸಹಬಾಳ್ವೆ ರೂಢಿಸಿಕೊಂಡು ಕರ್ನಾಟಕದ ತುಂಬೆಲ್ಲಾ ಹರಡಿಕೊಂಡಿರುವ ಸಿಂಧೋಳ್ಳು

ಸಮುದಾಯವು ಅದರಲ್ಲೂ ಶಹಾಪೂರ ನಗರದಲ್ಲಿ ವಾಸವಾಗಿರುವ ಸಿಂಧೋಳ್ಳು ಸಮುದಾಯವು ತಮ್ಮದೇ ಆದ ಆಚಾರ-ವಿಚಾರ, ಧಾರ್ಮಿಕ-ಸಂಸ್ಕೃತಿ, ಭಿಕ್ಷಾಟನೆಯ ಜೀವನವನ್ನು ಮಾಡುತ್ತಾ ಇತರ ಸಮುದಾಯಗಳ ಮಧ್ಯೆ ಜೀವಿಸುವುದು ಕಂಡುಬರುತ್ತದೆ.

೩.೫.೨. ಸಿಂಧೋಳ್ಳು ಪದದ ನಿಷ್ಪತ್ತಿ

ಸಿಂಧೋಳ್ಳು ಸಮುದಾಯವು ಧಾರ್ಮಿಕ ಭಿಕ್ಷಾಟನೆ ಸಂದರ್ಭದಲ್ಲಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಉರುಮೆ ವಾದ್ಯದ ತಾಳಕ್ಕೆ ತಕ್ಕಂತೆ ಕುಣಿಯುತ್ತಾ ಭಿಕ್ಷಾಟನೆ ಮಾಡುವುದುಂಟು. ಈ ಕುಣಿತದಿಂದಾಗಿಯೇ ಈ ಸಮುದಾಯಕ್ಕೆ ಸಿಂಧೋಳ್ಳು ಎಂದು ಹೆಸರು ಬಂದಿದೆ.

ಪ್ರಾದೇಶೀಕವಾಗಿ ಭಿನ್ನ ಭಿನ್ನ ಹೆಸರುಗಳಿಂದ ಈ ಸಮುದಾಯವನ್ನು ಕರೆಯಲಾಗುವುದಾದರೂ ತಾವು ಚಿಂದೋಳ್ಳು, ಸಿಂಧೋಳ್ಳು ಜಾತಿಗೆ ಸೇರಿದ್ದು. ಆಂಧ್ರದಿಂದ ಕರ್ನಾಟಕಕ್ಕೆ ವಲಸೆ ಬಂದುದ್ದಾಗಿ ತಿಳಿಸುತ್ತಾರೆ. ಮಾತೃಭಾಷೆಯಾಗಿ ತೆಲುಗು ಮಾತನಾಡುತ್ತಾರೆ. ಜೊತೆಗೆ ಪ್ರಾದೇಶಿಕವಾದ ಇತರ ಭಾಷೆಗಳನ್ನು ಸಹ ಸಿಂಧೋಳ್ಳರು ಮಾತನಾಡುವುದು ಕಂಡುಬರುತ್ತದೆ.

೩.೫.೩. ಸಿಂಧೋಳ್ಳು ಸಮುದಾಯದ ಸಾಮಾಜಿಕ ಜೀವನ

ಸಾಮಾಜಿಕ ಮತ್ತು ಸಮುದಾಯಿಕ ಪರಿಕಲ್ಪನೆಯಲ್ಲಿ ನೋಡಿದಾಗ ಮಾನವ ಮತ್ತು ಸಮಾಜ ಒಂದೇ ವಾಕ್ಯದ ಅಡಿಯಲ್ಲಿ ನೋಡಲಾಗಿದೆ. ಆದಿಮಾನವ ಕಾಲದಿಂದಲೂ ಸಮಾಜವು ಅಸ್ತಿತ್ವದಲ್ಲಿರುವುದು ಕಂಡುಬರುತ್ತದೆ. ಮೊದಲು ಮಾನವ ಕಾಡಿನಲ್ಲಿ ಒಂಟಿಯಾಗಿ ಅಲೆಯುತ್ತಿದ್ದನ್ನು ನಂತರದ ದಿನಗಳಲ್ಲಿ ಸಂಘಜೀವನದ ಕಡೆಗೆ ವಾಲಿದ ನಂತರ ಸಮಾಜ ಮತ್ತು ಸಮುದಾಯಿಕ ಭಾವನೆಯನ್ನು ಬೆಳೆಸಿಕೊಂಡು ಬಂದಿರುವುದನ್ನು ಕಾಣಬಹುದು. ಸಮಾಜವನ್ನು ಬಿಟ್ಟು ವ್ಯಕ್ತಿಯು ಜೀವಿಸಲಾರ. ಇದರಿಂದಾಗಿ ಮಾನವ ಮತ್ತು ಸಮಾಜದ ನಡುವೆ ಬಿಡಿಸಲಾರದ ಸಂಬಂಧವಾಗಿದೆ. ಅಂತೆಯೇ ಸಿಂಧೋಳ್ಳು ಸಮುದಾಯವು ಕೂಡ ಸಮಾಜ ಮಧ್ಯೆ ವಾಸವಾಗಿದ್ದು ತಮ್ಮದೇ ಆದ ಸಂಸ್ಕೃತಿ ಆಚಾರ ವಿಚಾರ ಸಮುದಾಯಿಕ ಹಾಗೂ ಸಾಮಾಜಿಕವಾದ ಭಾವನೆಯನ್ನು ಬೆಳೆಸಿಕೊಂಡು ಜೀವಿಸುತ್ತಿರುವುದನ್ನು ಕಾಣಬಹುದು. ಮೂಲತಃ ಆಂಧ್ರಪ್ರದೇಶದಿಂದ ಬಂದು ಶಹಾಪೂರ ನಗರದಲ್ಲಿ ವಾಸವಾಗಿರುವ ಸಿಂಧೋಳ್ಳು ಸಮುದಾಯದವರು ತಮ್ಮ ವೃತ್ತಿ, ಸಂಪ್ರದಾಯ ಆಚರಣೆಗಳನ್ನು ಮುಂದುವರೆಸಿಕೊಂಡು ಸಮಾಜದಲ್ಲಿ ಜೀವಿಸುತ್ತಿರುವುದು ಕಂಡುಬರುತ್ತದೆ. ಇವರು ಪರಿಶಿಷ್ಟ ಜಾತಿಗೆ ಸೇರಿದ ಬುಡಕಟ್ಟು ಅಲೆಮಾರಿ ಸಮುದಾಯ. ಇವರು ತೆಲುಗು ಭಾಷೆ ಮಾತನಾಡುವುದರ ಜೊತೆಗೆ ಪ್ರಾದೇಶಿಕವಾಗಿ ಇತರ ಭಾಷೆ ಮಾತನಾಡುತ್ತಾರೆ.

ಕುಟುಂಬ ರಚನೆ

ಅಲೆಮಾರಿಗಳಲ್ಲಿ ಇತರೆ ಸಮುದಾಯಗಳಲ್ಲಿರುವಂತೆ ಇವರಲ್ಲಿಯೂ ಸಹ ಕುಟುಂಬ ವ್ಯವಸ್ಥೆ

ಕಂಡುಬರುತ್ತದೆ. ಕುಟುಂಬ ವ್ಯವಸ್ಥೆಯಲ್ಲಿ ವಿಭಕ್ತ ಕುಟುಂಬಗಳು ಹೆಚ್ಚಾಗಿ ಕಂಡುಬರುತ್ತವೆ. ಸಿಂಧೋಳ್ಳು ಸಮುದಾಯವು ತನ್ನದೇ ಆದ ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬ ರಚನೆಯನ್ನು ಹೊಂದಿರುವುದು ಕಂಡುಬರುವುದು. ಕುಟುಂಬದ ಎಲ್ಲಾ ಜವಬ್ದಾರಿಯನ್ನು ಇವರು ತಮ್ಮ ಪಾರಂಪರಿಕ ಭಿಕ್ಷಾಟನೆಯ ವೃತ್ತಿಯಿಂದ ಕುಟುಂಬ ನಿರ್ವಹಿಸುತ್ತಾರೆ. ನನ್ನ ಅಧ್ಯಯನದ ಕ್ಷೇತ್ರವಾದ ಶಹಾಪೂರ ನಗರದಲ್ಲಿ ವಾಸವಾಗಿಸುವ ಅಲೆಮಾರಿ ಸಿಂಧೋಳ್ಳು ಸಮುದಾಯದ ೧೧ ಕುಟುಂಬಗಳು ನೆಲೆಸಿದ್ದು ತಮ್ಮದೇ ಆದ ಸಂಸ್ಕೃತಿಯನ್ನು ಹೊಂದಿ ಇತರೆ ಸಮುದಾಯಗಳ ಜೊತೆ ಸಮಾಜದಲ್ಲಿ ಜೀವಿಸುತ್ತಿರುವುದು ಕಂಡುಬರುತ್ತದೆ.

ಬಳಿ, ಬೆಡಗು

ಗುಲಬರ್ಗಾ ಜಿಲ್ಲೆಯ ಶಹಾಪೂರ ನಗರದಲ್ಲಿ ನೆಲೆಸಿರುವ ಸಿಂಧೋಳ್ಳು ಸಮುದಾಯ ಸಾಮಾನ್ಯವಾಗಿ ತೆಲುಗು ಮಾತನಾಡುತ್ತಾರೆ. ಇವರ ಬೆಡಗುಗಳು ಸಿಂಧ್ಯಾಲೋಳ, ಸಿಂಧೋಳ್ಳು, ರಾವುಲೋಳ, ಪೆದ್ದ ದ್ಯಾಮನೋಳ, ದ್ಯಾಮನೋರ, ಮೊದಲಾದ ಬೆಡಗುಗಳು ಕಂಡುಬರುತ್ತವೆ. ಇವರು ತಮ್ಮ ಸಮ ಬೆಡಗುಗಳಲ್ಲಿ ವೈವಾಹಿಕ ಸಂಬಂಧ ಬೆಳಸದೆ ಬೇಸ ಬೆಡಗಿನವರೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಾರೆ. ಈ ಬೆಡಗುಗಳು ಅವರ ಸಂಬಂಧದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಆಹಾರ ಪದ್ಧತಿ

ಮಾನವ ತನ್ನ ಹೊಟ್ಟೆಪಾಡಿಗಾಗಿ ಆಹಾರದ ಹುಡುಕಾಟದಿಂದ ತನ್ನದೇ ಆದ ಆಹಾರ ಕ್ರಮವನ್ನು ಹೊಂದಿದ್ದಾನೆ. ಅದರಲ್ಲಿ ಸಿಂಧೋಳ್ಳು ಸಮುದಾಯ ಮೂಲತಃ ಅಲೆಮಾರಿಗಳಾಗಿದ್ದು ತಮ್ಮ ವೃತ್ತಿಯಿಂದ ಜನರು ನೀಡಿದ ಆಹಾರವನ್ನು ಅವರು ತಿನ್ನುತ್ತಾರೆ. ಹಾಗೆಯೇ ಭೀಕ್ಷಾಟನೆಯಿಂದ ಬಂದಂತಹ ದವಸ, ಧಾನ್ಯ, ಕಾಳುಕಡಿಗಳನ್ನು ದಿನನಿತ್ಯದ ಆಹಾರವಾಗಿ ಉಪಯೋಗಿಸುತ್ತಾರೆ. ಸಿಂಧೋಳ್ಳು ಸಮುದಾಯದಲ್ಲಿ ಸಸ್ಯಹಾರಿಗಳು ಮತ್ತು ಮಾಂಸಹಾರಿ ಎರಡನ್ನು ಸೇವಿಸುವರು. ಮಾಂಸಹಾರಿಗಳಾದ ಇವರು ಕುರಿ, ಕೋಳಿ, ಮೊಲ, ಮೀನು, ಏಡಿ, ಕೌಜುಗ, ಆಮೆ, ಬೆಕ್ಕು, ಪಾರಿವಾಳ, ಹಂದಿ ಇತರೆ ಕಾಡು ಪ್ರಾಣಿಗಳ ಮಾಂಸ ತಿನ್ನುತ್ತಾರೆ. ಹೆಂಡ ಇಲ್ಲವೆ ಸಾರಾಯಿ ಅಚ್ಚುಮೆಚ್ಚಿನ ಮಧ್ಯಾಪಾನವಾಗಿದೆ. ಇವರ ಆಹಾರ ಕ್ರಮವನ್ನು ಇತರೆ ಸಮುದಾಯಗಳಿಗಿಂತ ಭಿನ್ನವಾಗಿ ಕಂಡುಬರುತ್ತದೆ.

ವಸತಿ ವ್ಯವಸ್ಥೆ

ಸಿಂಧೋಳ್ಳು ಸಮುದಾಯವು ಮೂಲತಃ ಅಲೆಮಾರಿಯಾಗಿ ಸದಾ ಸಂಚಾರಿಗಳಾಗಿರುವುದರಿಂದ ಸ್ಥಳದಿಂದ ಸ್ಥಳಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಸಂಚರಿಸುವದರಿಂದ ಊರ ಮಧ್ಯದ ಚಾವಡಿ, ಧರ್ಮಶಾಲೆ, ಗುಡಿ ಗುಂಡಾರ ಇಲ್ಲವೆ ಊರ ಹೊರಗೆ ಕೊಳಚೆ ಪ್ರದೇಶಗಳಲ್ಲಿ ತಮ್ಮದೇ ಆದ ಗುಡಾರಗಳಲ್ಲಿ ಇವರು ವಾಸಮಾಡುತ್ತಾರೆ. ಗುಡಾರಗಳು ಪ್ಲಾಸ್ಟಿಕ್ ಅಥವಾ ಕೌದಿಗಳಿಂದ ಹೊದಿಕೆಯಾಗಿ ಮಾಡಿರುತ್ತಾರೆ. ಎಲ್ಲಾ ಸಾಮಾನು ಸರಕುಗಳನ್ನು ಗುಡಾರದಲ್ಲಿಯೆ ಇರಿಸಿರುತ್ತಾರೆ. ಗುಡಾರದ ಒಂದು ಮೂಲೆಯಲ್ಲಿ ತಮ್ಮ

ದೇವರನ್ನು ಇರಿಸುತ್ತಾರೆ. ಅದರಲ್ಲೆ ತಮ್ಮ ವಾಸವನ್ನು ಮಾಡುತ್ತಾರೆ. ಆರ್ಥಿಕವಾಗಿ ಬಹಳ ಹಿಂದುಳಿದವರಾಗಿದ್ದು ಧಾರ್ಮಿಕ ಭಿಕ್ಷಾಟನೆಯಿಂದ ತಮ್ಮ ಹೊಟ್ಟೆ ತುಂಬಿಸಿಕೊಳ್ಳುವುದೇ ಅವರಿಗೆ ದೊಡ್ಡ ಸವಾಲಾಗಿದೆ. ಇನ್ನೂ ಮನೆ ಕಟ್ಟಿಕೊಳ್ಳುವುದು ಸಾಧ್ಯವಾಗದ ಕೆಲಸ. ಕೆಲವು ಅನ್ಯ ಅಲೆಮಾರಿ ಸಮುದಾಯಗಳಿಗೆ ಸರ್ಕಾರದ ವತಿಯಿಂದ ನಿವೇಶನಗಳು ನೀಡಲಾಗಿದೆ. ಆದರೆ ಅಂತಹ ಯಾವುದೇ ಮೂಲ ಸೌಲಭ್ಯಗಳು ಈ ಸಮುದಾಯಕ್ಕೆ ಇದುವರೆಗೂ ಸಿಕ್ಕಿರುವುದಿಲ್ಲವೆಂಬುದು ಕ್ಷೇತ್ರಕಾರ್ಯದಲ್ಲಿ ತಿಳಿದುಬಂದಿದೆ.

ಕುಲಪಂಚಾಯಿತಿ

ಒಂದು ಸಮುದಾಯದ ಸ್ವಾಸ್ಥ್ಯ ಅದು ಅನುಸರಿಸುವ ಕುಲಕಟ್ಟಳೆ ಮತ್ತು ನ್ಯಾಯ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ. ಅಲೆಮಾರಿ ಸಮುದಾಯದಲ್ಲಿ ಇವು ಪ್ರಮುಖವಾದವು. ಇವು ಜನರ ವರ್ತನೆಗೆ ಒಂದು ಚೌಕಟ್ಟನ್ನು ಒದಗಿಸಿ, ದುರ್ನಡತೆಗೆ ಕಡಿವಾಣ ಹಾಕಿ ನಿಯಂತ್ರಿಸುವುದರೊಂದಿಗೆ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುತ್ತವೆ. ಸಿಂಧೋಳ್ಳು ಸಮುದಾಯದಲ್ಲಿ ಇಂದಿಗೂ ಸಹ ನ್ಯಾಯಪಂಚಾಯತಿ ಮಾಡುವ ಪದ್ಧತಿ ರೂಢಿಯಲ್ಲಿದೆ. ಇವರು ನ್ಯಾಯ ಪಂಚಾಯತಿಯನ್ನು ಮಾಡಲು ತಮ್ಮ ಸಮುದಾಯದಲ್ಲಿಯೇ ಒಬ್ಬರನ್ನು ಮುಖ್ಯಸ್ಥನನ್ನು ನೇಮಿಸುತ್ತಾರೆ. ಈತನಿಗೆ 'ಪೂಜಾರಿ' ಎಂದು ಕರೆಯುತ್ತಾರೆ. ಇವರೇ ಸಮುದಾಯದ ಎಲ್ಲಾ ಸಮಸ್ಯೆಗಳು, ಜಗಳಗಳನ್ನು ಬಗೆಹರಿಸುತ್ತಾನೆ. ಇವರಿಗೆ ಸಮುದಾಯದ ಎಲ್ಲಾ ಜನರು ವಿಧೆಯರಾಗಿರಬೇಕು. ಕರ್ನಾಟಕದಲ್ಲಿ ವಾಸಿಸುವ ಸಿಂಧೋಳ್ಳು ಸಮುದಾಯವು ಒಂದು ಪ್ರದೇಶಕ್ಕೆ ಒಬ್ಬರಂತೆ ಪೂಜಾರಿಯನ್ನು ನೇಮಿಸಿರುವುದು ಕಂಡುಬರುತ್ತದೆ. ಗುಲಬರ್ಗಾ ವಿಭಾಗದ ಪೂಜಾರಿಯಾಗಿ ಸಿಂಧೋಳ್ಳು ಸಮುದಾಯದ ಪೂಜಾರಿ ರಾಹುಲ್ ಯಲ್ಲಪ್ಪ ಎಂಬುವರು ಈ ಕೆಳಗಿನ ಪ್ರದೇಶಗಳಿಗೆ ಕುಲದ ಮುಖ್ಯಸ್ಥನಾಗಿ ಕೆಲಸ ಮಾಡುತ್ತಾನೆ. ಯಾದಗಿರಿ, ಶಹಾಪೂರ, ಜೇವರ್ಗಿ, ಸೇಡಂ ಈ ಭಾಗಗಳಿಗೆ ಪಂಚಾಯಿತಿ ಮುಖ್ಯಸ್ಥನಾಗಿ ಕೆಲಸ ಮಾಡುತ್ತಾರೆ. ಪೂಜಾರಿಯ ಆಜ್ಞಾನುಸಾರವೇ ಪಂಚಾಯಿತಿ ನಡೆಯುತ್ತದೆ. ಇವರಲ್ಲಿ ಮಹಿಳೆಯರನ್ನು ಅಪಹರಿಸಿಕೊಂಡು ಹೋದರೆ, ಅನೈತಿಕ ಸಂಬಂಧ ಹೊಂದಿದವರಿಗೆ ದಂಡ ಹಾಕುವ ಇಲ್ಲವೇ ಕುಲದಿಂದ ಬಹಿಷ್ಕಾರ ಹಾಕುವರು. ಮತ್ತೇ ಕುಲದೊಳಗೆ ಕರೆದುಕೊಳ್ಳಲು ಇವರು ಆ ವ್ಯಕ್ತಿಗೆ ಊಟ ಹಾಕಿಸುತ್ತಾರೆ. ಇದಕ್ಕೆ ಕುಲದೂಟ ಎನ್ನುತ್ತಾರೆ. ಈ ವಿಧವಾಗಿ ಸಿಂಧೋಳ್ಳು ಸಮುದಾಯದ ಕುಲಪಂಚಾಯಿತಿ ಹಿಂದನಿಂದಲೂ ಬೆಳೆದುಕೊಂಡು ಬಂದಿರುವುದು ಕಂಡುಬರುತ್ತದೆ.

೩.೫.೪. ಸಿಂಧೋಳ್ಳರ ರಾಜಕೀಯ ಸ್ಥಾನಮಾನ

ಸಿಂಧೋಳು ಸಮುದಾಯವು ಭಿಕ್ಷಾಟನೆಯನ್ನು ಮಾಡುತ್ತಾ ಅಲೆಮಾರಿಗಳಾಗಿ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುವುದರಿಂದ ಸರಿಯಾಗಿ ಅವರಿಗೆ ಇಂದಿಗೂ ಮತದಾನದ ಸೌಲಭ್ಯ ಸಿಕ್ಕಲ್ಲವೆಂದರೆ ವಿಪರ್ಯಾಸದ ಸಂಗತಿ. ಇವರು ನಿರಂತರವಾದ ಅಲೆಮಾರಿತನವ ಈ ಸಮುದಾಯ ಸೌಲಭ್ಯಗಳಿಗೆ ಸಿಗುತ್ತಿಲ್ಲ. ಹಾಗೂ ಈ ಸಮುದಾಯಕ್ಕೆ ಗುರುತಿಸಿಕೊಳ್ಳಲು ಯಾವುದೇ ವಿಧದ ಗುರುತಿನ ಚೀಟಿಯನ್ನು ನೀಡದ

ಕಾರಣ ಇವರು ಇತರ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಈ ಸಮುದಾಯವು ರಾಜಕೀಯವಾಗಿ ಯಾವುದೇ ಸ್ಥಾನ-ಮಾನಗಳನ್ನು ಪಡೆದುಕೊಂಡಿಲ್ಲ. ರಾಜಕೀಯವೇ ಏನೆಂದು ತಿಳಿಯದ ಇವರು ಆರ್ಥಿಕವಾಗಿ ಬಹಳ ಹಿಂದುಳಿದಿರುವ ಈ ಸಮುದಾಯವು ತಮ್ಮ ತುತ್ತಿನ ಚೀಲವನ್ನು ತುಂಬಿಸಿಕೊಳ್ಳುವಲ್ಲಿಯೇ ಸಂಕಷ್ಟಪಡುತ್ತಿರುವಾಗ ಇನ್ನು ರಾಜಕೀಯವೆಂಬುದು ಇವರಿಗೆ ಕೈಗೆ ಸಿಗಲಾರದಂತಹ ಪರಿಸ್ಥಿತಿಯು ಈ ಸಮುದಾಯದಲ್ಲಿ ಕಾಣಬಹುದು. ರಾಜಕೀಯ ಎಂದರೆ ಅದು ಕೇವಲ ಉಳ್ಳವರ ಸೊತ್ತು ಎಂದು ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ತಿಳಿದುಬರುವಂತಹ ಸಂಗತಿಯಾಗಿದೆ.

ಶಹಾಪೂರ ನಗರದಲ್ಲಿ ವಾಸವಾಗಿರುವ ಸಿಂಧೋಳ್ಳ ಸಮುದಾಯವು ಆರ್ಥಿಕವಾಗಿ ತುಂಬಾ ಹಿಂದುಳಿದಿರುವ ಇವರು ಗುಡಾರಗಳನ್ನು ನಿರ್ಮಿಸಿಕೊಂಡು ಜೀವಿಸುತ್ತಿರುವುದು ಕಂಡುಬರುತ್ತದೆ. ಇವರಿಗೆ ಗುರುತಿಸಿಕೊಳ್ಳಲು ಮತ್ತು ಚುನಾವಣೆಗಳಲ್ಲಿ ಮತ ಚಲಾಯಿಸಲು ಇವರಿಗೆ ಗುರುತಿನ ಚೀಟಿಯು ಇವರಲಿಲ್ಲ. ಇವರಲ್ಲಿ ಕೆಲವು ಜನರು ಮಾತ್ರ ಪಡೆದುಕೊಂಡಿರುವುದು ಕಂಡುಬರುತ್ತದೆ. ಇನ್ನು ಕೆಲವರಿಗೆ ಈ ಸೌಲಭ್ಯಗಳು ದೊರೆಯದೆ ಉಳಿದಿವೆ. ಈ ಸಮುದಾಯದ ಜನರು ಇತ್ತೀಚಿನ ದಿನಗಳಲ್ಲಿ ರಾಜಕೀಯದ ಕಡೆಗೆ ಮುಖ ಮಾಡಿರುವುದು ಕೆಲವೊಬ್ಬರು ಮಾತ್ರ ಕಂಡುಬರುತ್ತಾರೆ. ರಾಜಕೀಯವಾಗಿ ತೀರಾ ಕಡೆಗಣನೆಗೆ ಒಳಗಾಗಿರುವ ಈ ಸಮುದಾಯದವರನ್ನು ರಾಜಕೀಯ ಪ್ರತಿನಿಧಿಗಳು ಇವರ ಸಮಸ್ಯೆಗಳ ಕಡೆಗೆ ಕಿವಿಗೊಡದಿರುವುದು ಕಂಡುಬರುತ್ತದೆ. ಕೆಲವರು ಸರ್ಕಾರ ವಿತರಿಸಿದ ಜನತಾ ಮನೆಗಳಲ್ಲಿದ್ದರೆ ಬಹುತೇಕ ಜನರು ಗುಡಾರಗಳನ್ನು ಹಾಕಿಕೊಂಡು ವಾಸಿಸುತ್ತಿರುವುದನ್ನು ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿರುವುದು.

೩.೫.೫. ಸಿಂಧೋಳರ ಧಾರ್ಮಿಕ ಜೀವನ

ಸಿಂಧೋಳು ಸಮುದಾಯವು ಇತರ ಅಲೆಮಾರಿ ಸಮುದಾಯಗಳು ಆಚರಿಸುವಂತೆ ಹಬ್ಬ-ಹರಿದಿನ ಹಾಗೂ ಧಾರ್ಮಿಕವಾಗಿ ದೈವಗಳನ್ನು ಪೂಜಿಸುತ್ತಾ ಬಂದಿದ್ದಾರೆ. ಇವರ ಸಮುದಾಯದಲ್ಲಿ ಗುಡಿ-ಗೋಪುರಗಳನ್ನು ನಿರ್ಮಿಸಿಕೊಂಡು ತಮ್ಮ ಸಮುದಾಯದ ಮಧ್ಯ ಜೀವಿಸುತ್ತಿರುವುದು ಕಂಡುಬರುತ್ತದೆ. ಜೊತೆಗೆ ಧಾರ್ಮಿಕವಾಗಿ ಸಮಾಜದ ಮಧ್ಯ ಜೀವಿಸುತ್ತಿರುವುದು.

ಪೂಜಿಸುವ ದೈವಗಳು

ಇವರು ಶಕ್ತಿ ದೇವತೆಗಳಾದ ದುರ್ಗಮ್ಮ, ಮರಗಮ್ಮ, ಮಾರಮ್ಮ, ಸುಂಕಲಮ್ಮ, ಗಾಳೆಮ್ಮ, ಜಂಬಲಮ್ಮ, ಎಲ್ಲಮ್ಮ, ಕಿರಿಯಮ್ಮ, ಅಂಕಲಮ್ಮ, ಹುಲಿಗೆಮ್ಮ ಮುಂತಾದ ಸ್ತ್ರೀ ಶಕ್ತಿದೇವತೆಗಳನ್ನು ಪೂಜಿಸುತ್ತಾರೆ. ಇವರು ಮುನಿಸುವ ಶಿವ ಮೊದಲಾದ ಪುರುಷ ದೈವಗಳನ್ನು ಆರಾಧಿಸುತ್ತಾರೆ.

ಶಹಾಪೂರ ನಗರದಲ್ಲಿ ವಾಸವಾಗಿರುವ ಸಿಂಧೋಳ್ಳ ಸಮುದಾಯದವರು ತಾವು ವಾಸಿಸುವ ಬಿಡಾರದ ಮಧ್ಯೆ ಸ್ತ್ರೀ ದೇವತೆಯ ದುರುಗಮ್ಮ ಮತ್ತು ಕಾಟಮ್ಮ ದೇವತೆಯ ಗುಡಿಯನ್ನು ನಿರ್ಮಿಸಿಕೊಂಡು ಅದಕ್ಕೆ ಒಬ್ಬ ಪೂಜಾರಿಯನ್ನು ಗುಡಿಯ ಪೂಜೆ ಮಾಡುವುದು ಕಂಡುಬರುತ್ತದೆ.

ಆಚರಿಸುವ ಹಬ್ಬಗಳು

ಯುಗಾದಿ ಹಬ್ಬ : ವರ್ಷದ ಆರಂಭದ ದಿನವಾಗಿ ಯುಗಾದಿ ಹಬ್ಬ ಆಚರಿಸುತ್ತಾರೆ.

ದಸರಾ : ಭಾರತೀಯ ಹಿಂದೂ ಧರ್ಮದ ಹಬ್ಬಗಳಲ್ಲಿ ಒಂದಾದ ದಸರಾ ಹಬ್ಬವನ್ನು ಸಿಂಧೊಳ್ಳ ಸಮುದಾಯವು ಆಚರಣೆ ಮಾಡುತ್ತದೆ. ಇವರು ಹಿರಿಯರನ್ನು ನೆನಪಿಸಿಕೊಳ್ಳುವ ಹಬ್ಬವಾಗಿ ಮುನಿಸ್ವಾಮಿ, ಈರನಾಗಮ್ಮ, ಪೋತರಾಜ, ದೇವತೆಗಳಿಗೆ ವಿಶೇಷ ಪೂಜೆ ಮಾಡಿ ತಮ್ಮ ಜೊತೆಗಿರುವ ಧಾರ್ಮಿಕ ಭಿಕ್ಷಾಟನೆಯ ಪರಿಕರಗಳಾದ ಲಡ್ನು, ಖಡ್ಗ, ಉರುಮೆ, ಗೆಜ್ಜೆ ಇನ್ನು ಮುಂತಾದವುಗಳನ್ನು ಇರಿಸಿ ಆಯುಧ ಪೂಜೆಯಾಗಿ ಪೂಜಿಸುತ್ತಾರೆ. ನಂತರ ವಿಜಯದಶಮಿ ದಿನದಂದು ಬನ್ನಿಯನ್ನು ಮುಡಿಯುತ್ತಾರೆ.

ಹೀಗೆ ಸಿಂಧೊಳ್ಳ ಸಮುದಾಯದವರು ಧಾರ್ಮಿಕವಾದ ಆಚರಣೆ, ಸಂಸ್ಕೃತಿ, ಆಚಾರ-ವಿಚಾರಗಳನ್ನು ಸಾಮುದಾಯಿಕ ಭಾವನೆಯನ್ನು ಬೆಳೆಸಿಕೊಂಡು ಬಂದಿರುವುದು ಕಂಡುಬರುತ್ತದೆ.

೩.೫.೬. ಸಿಂಧೋಳ್ಳು ಸಮುದಾಯದ ಸಾಂಸ್ಕೃತಿಕ ಜೀವನ

ಸಂಸ್ಕೃತಿಯು ಮಾನವ ಸಮುದಾಯದ ವಿಶಿಷ್ಟ ಆಸ್ತಿಯಾಗಿದೆ. ಮಾನವನಿಗಿಂತಲೂ ಕೆಳಮಟ್ಟದ ಪ್ರಾಣಿವರ್ಗಗಳಲ್ಲಿ ಅದು ಕಾಣಿಸದು. ಉಳಿದ ಪ್ರಾಮಿಗಳು ನೈಸರ್ಗಿಕ ಪರಿಸರದಲ್ಲಿ ಬದುಕಿ ಬಾಳುತ್ತವೆ ಯಾದರೂ ಮಾನವ ಮಾತ್ರ ನೈಸರ್ಗಿಕ ಪರಿಸರದ ಜೊತೆ ಸಾಂಸ್ಕೃತಿಕ ಪರಿಸರವೆಂಬ ಇದೊಂದು ಬಗೆಯ ಪರಿಸರದಲ್ಲಿ ಹುಟ್ಟಿಬೆಳೆದು ತನ್ನ ಬಾಳು ನಡೆಸುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜವೊಂದರಲ್ಲಿ ಹುಟ್ಟುತ್ತಾನೆ ಎಂಬ ಮಾತು ವಾಸ್ತವಿಕವಾಗಿ ಪ್ರತಿಯೋರ್ವನೂ ಸಾಂಸ್ಕೃತಿಕ ಪರಿಸರವೊಂದರಲ್ಲಿ ಹುಟ್ಟುತ್ತಾನೆ ಎಂಬರ್ಥವನ್ನು ಧ್ವನಿಸುವುದು ಮಾನವನು ಸಮಾಜ ಜೀವಿಯಾಗಿದ್ದಾನೆ, ಎಂಬ ಮಾತು ಮಾನವನು ಸಾಂಸ್ಕೃತಿಕ ಜೀವಿಯಾಗಿದ್ದಾನೆ ಎಂಬುದಕ್ಕೆ ಸಮಾನವಾಗಿದೆ. ಸಂಸ್ಕೃತಿಯ ವ್ಯಾಖ್ಯಾನವನ್ನು ಸಮಾಜಶಾಸ್ತ್ರಜ್ಞರು ಈ ಕೆಳಗಿನಂತೆ ಹೇಳಿದ್ದಾರೆ. ಲಿಂಟನ್ ಅವರ ಪ್ರಕಾರ "ಒಂದು ನಿರ್ದಿಷ್ಟ ಸಮಾಜದ ಸದಸ್ಯರು ಹಂಚಿಕೊಳ್ಳುವ ಹಾಗೂ ಪ್ರಸಾರ ಮಾಡುವ ಜ್ಞಾನ ದೃಷ್ಟಿಕೋನ ಮತ್ತು ಸ್ವಾಭಾವಿಕ ನಡವಳಿಕೆಯ ನಮೂನೆಗಳ ಒಟ್ಟು ಮೊತ್ತವೇ ಸಂಸ್ಕೃತಿ ಎಂದು ಸಮಾಜ ಶಾಸ್ತ್ರಜ್ಞರು ಸಂಸ್ಕೃತಿಯನ್ನು ಕುರಿತು ಹೇಳಿದ್ದಾರೆ. ಸಿಂಧೋಳ್ಳು ಸಮುದಾಯವು ಸಹ ತನ್ನದೆಯಾದಂತಹ ಸಾಂಸ್ಕೃತಿಕ ಆಚರಣೆಗಳನ್ನು ಮುಂದುವರಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಸಂಸ್ಕಾರಗಳು

ಜನನ : ಸಿಂಧೋಳ್ಳು ಸಮುದಾಯದಲ್ಲಿ ಗರ್ಭಿಣಿಯಾದ ಸ್ತ್ರೀಯನ್ನು ತವರು ಮನೆಗೆ ಕರೆದುಕೊಂಡು ಹೋಗದೆ, ತಾವು ವಾಸಿಸುವ ಗುಡಾರದಲ್ಲಿಯೇ ಆಕೆಯ ಹೆರಿಗೆಯನ್ನು ಮಾಡಿಕೊಳ್ಳುವ ಸಂಪ್ರದಾಯ ಈ ಸಮುದಾಯದಲ್ಲಿದೆ. ಸಿಂಧೋಳ್ಳು ಸಮುದಾಯದಲ್ಲಿ ಹೆರಿಗೆಯ ಸಮಯದಲ್ಲಿ ಸಮುದಾಯದ ಸೂಲಗಿತ್ತಿ

ಬಂದು ಹೆರಿಗೆ ಮಾಡಿಸುತ್ತಾಳೆ. ಹೆರಿಗೆಯಾದ ನಂತರ ಮಗುವಿನ ಕಳ್ಳಬಳ್ಳಿಯನ್ನು ಕುಡುಗೋಲಿನಿಂದ ಕತ್ತರಿಸುತ್ತಾರೆ. ನಂತರ ಮಾಸನ್ನು ಒಂದು ಗಡಿಗೆಯಲ್ಲಿ ಹಾಕಿ ಗುಂಡಿತೋಡಿ ಮುಚ್ಚುತ್ತಾರೆ. ನಂತರ ತಾಯಿ ಮಗುವಿಗೆ ಬಿಸಿನೀರಿನಿಂದ ಸ್ನಾನ ಮಾಡಿಸುತ್ತಾರೆ. ಒಂಬತ್ತು ದಿನಗಳ ನಂತರ ಮಗುವಿಗೆ ನಾಮಕರಣ ಮಾಡುವ ಸಂಪ್ರದಾಯವಿದೆ. ನಂತರ ಕುಲದ ಎಲ್ಲರಿಗೂ ಸಿಹಿ-ಖಾರ ಎರಡನ್ನು ಮಾಡಿ ಉಟಮಾಡಿಸುತ್ತಾರೆ.

ಋತುಮತಿ : ಸಿಂಧೋಳ್ಳು ಸಮುದಾಯದಲ್ಲಿ ಋತುಮತಿಯಾದ ಹುಡುಗಿಯನ್ನು ಯಾರ ಮುಟ್ಟಿಸಿ ಕೊಳ್ಳದೆ ಅವಳನ್ನು ಪ್ರತೇಕವಾಗಿ ಒಂದು ಮೂಲೇಯಲ್ಲಿ ಕೂರಿಸುತ್ತಾರೆ. ಮೈನೆರದ ಹುಡುಗಿ ಮನೆಯಲ್ಲಿ ಓಡಾಡುವಂತಿಲ್ಲ. ಭಿಕ್ಷೆಬೇಡುವಂತಿಲ್ಲ. ಕೂಲಿ ಕೆಲಸ ಮಾಡುವಂತಿಲ್ಲ. ಬೇರೆಯವರನ್ನು ಆಕೆ ಮುಟ್ಟುವಂತಿಲ್ಲ. ಋತುಮತಿಯಾದ ಹುಡುಗಿಯನ್ನು ಒಂಬತ್ತುದಿನಗಳ ಕಾಲ ಪ್ರತ್ಯೇಕ ಗುಡಿಸಲಿನಲ್ಲಿಡುತ್ತಾರೆ. ಒಂಬತ್ತು ದಿನದಂದು ಬಂದುಬಾಂಧವರನ್ನು ಕರೆಸಿ ಎಬ್ಬಿಸುವ ಶಾಸ್ತ್ರ ಮಾಡುವ ಸಂಪ್ರದಾಯವಿದೆ. ಬಂದಂತ ಎಲ್ಲರಿಗೂ ಸಹಿ ಊಟವನ್ನು ಮಾಡಿಸುತ್ತಾರೆ.

ವಿವಾಹ : ಸಿಂಧೋಳ್ಳು ಸಮುದಾಯದಲ್ಲಿ ಹೆಚ್ಚಾಗಿ ಬಹಳ ಸರಳವಾದ ವಿವಾಹ ಪದ್ಧತಿ ಇರುವುದು ಕಂಡುಬರುತ್ತದೆ. ಇವರಲ್ಲಿ ಹೆಚ್ಚಾಗಿ ಸಂಬಂಧಿಕಲ್ಲಿಯ ಕನ್ಯೆಯನ್ನು ತೆಗೆದು ಮದುವೆ ಮಾಡುತ್ತಾರೆ. ಇವರಲ್ಲಿ ಹೆಚ್ಚಾಗಿ ಬಾಲ್ಯವಿವಾಹ ಮಾಡುವ ಪದ್ಧತಿಯಿದೆ. ಮದುವೆ ಮುಂಚೆ ಇವರಲ್ಲಿ ವೀಳ್ಯಾಶಾಸ್ತ್ರವಿದೆ. ಇದು ಹೆಣ್ಣನ್ನು ಖಾಯಂ ಮಾಡುವ ಶಾಸ್ತ್ರವಾಗಿದೆ. ಹಾಗೂ ಇವರಲ್ಲಿ ಹೆಣ್ಣಿಗೆ ಮುಂದೆ ನಡೆಯುತ್ತವೆ. ಇವರಲ್ಲಿ ಚಪ್ಪರ ಹಾಕುವುದರಿಂದ ತಾಳಿಕಟ್ಟುವವರೆಗೆ ವಿವಿಧ ಆಚರಣೆಗಳನ್ನು ಮಾಡುತ್ತಾರೆ. ತಾಳಿಯನ್ನು ಎಲ್ಲರ ಅಪ್ಪಣೆ ಮತ್ತು ಕುಲದವರಿಗೆ ಸಿಹಿ ಊಟವನ್ನು ಮಾಡಿಸಿ ಗುಡಾರದ ಮುಂದೆ ಉರುಮಿಭಾರಿಸಿಕೊಂಡು ಸಂಭ್ರಮದಿಂದ ಕುಣಿಯುತ್ತಾರೆ. ಸಿಂಧೋಳ್ಳರಲ್ಲಿ ಬಾಲ್ಯವಿವಾಹ ಮತ್ತು ಬಹುಪತ್ನಿತ್ವ ಪದ್ಧತಿಯು ಜಾರಿಯಲ್ಲಿರುವುದು ಕಂಡುಬರುತ್ತದೆ.

ಮರಣ ಸಂಸ್ಕಾರ : ಸಿಂಧೋಳ್ಳು ಸಮುದಾಯದಲ್ಲಿ ವ್ಯಕ್ತಿಸತ್ತರೆ ಗುಡಾರದಿಂದ ಹೆಣವನ್ನು ಹೊರಕ್ಕೆ ತಂದು ಗುಡಾರದ ಮುಂಬಾಗದಲ್ಲಿ ಚಾಪೆ ಮೇಲೆ ಮಲಗಿಸುತ್ತಾರೆ. ನಂತರ ಹತ್ತಿರದ ಬಂದು ಬಳಗಕ್ಕೆ ವ್ಯಕ್ತಿ ಸತ್ತ ಸುದ್ದಿ ತಿಳಿಸುತ್ತಾರೆ. ಸಿಂಧೋಳ್ಳರು ಅಲೆಮಾರಿಗಳಾದುದರಿಂದ ಎಷ್ಟೋ ಸಾರಿ ಇವರ ಬಂಧುಗಳು ಯಾವ ಊರಿನಲ್ಲಿ ಇದ್ದಾರೆ ಎಂಬುದೇ ತಿಳಿಯುವುದಿಲ್ಲ. ಅಂತಹ ಸಂದರ್ಭದಲ್ಲಿ ವಿಷಯ ತಿಳಿಸಲು ಹೋದವರು ಅಸಹಾಯಕರಾಗಿ ಹಿಂಗದಿರುಗುತ್ತಾರೆ. ರಾತ್ರಿಯಲ್ಲಿ ಗುಡಾರದಲ್ಲಿ ಇಟ್ಟುಕೊಳ್ಳುವಂತೆ ಸಂದರ್ಬದಲ್ಲಿ ಹೆಣದ ಮೇಲೆ ಕಬ್ಬಿಣದ ವಸ್ತು ಇಡುತ್ತಾರೆ. ಹೆಮವನ್ನು ಸ್ಮಶಾನಕ್ಕೆ ಹೊಯ್ಯುವುದಕ್ಕೆ ಕಳ್ಳಿಕಟ್ಟಿಗೆಯಿಂದ ಸಿದಿಗೆಯನ್ನು ಕಟ್ಟಿತ್ತಾರೆ. ಇವರಲ್ಲಿ ಹೆಣವನ್ನು ಮಣ್ಣುಮಾಡುವ ಸಂಪ್ರದಾಯವಿದೆ. ಮಣ್ಣುಮಾಡಿದ ಮಾರನೆ ದಿನಕ್ಕೆ ಸತ್ತವ್ಯಕ್ತಿ ತಿನ್ನುತ್ತಿದ್ದ ಪದಾರ್ಥಗಳನ್ನು ಸ್ಮಶಾನದ ಮೇಲೆ ಇಟ್ಟು ಬರುತ್ತಾರೆ. ಮರಣ ಹೊಂದಿದ ಒಂಬತ್ತೇನೆದಿನಕ್ಕೆ ತಿಥಿಕಾರ್ಯ ಮಾಡುತ್ತಾರೆ.

ಈ ರೀತಿಯಾಗಿ ಸಿಂಧೋಳ್ಳು ಸಮುದಾಯದವು ಜನನದಿಂದ ಮರಣದ ನಂತರವು ವಿವಿಧ ಸಂಸ್ಕಾರವನ್ನು ಹಿಂದಿನಿಂದಲೂ ಮಾಡಿಕೊಂಡು ಬಂದಿರುವುದು ಕಂಡುಬರುತ್ತದೆ.

ಈ ಮೇಲಿನ ಅಂಶಗಳಿಂದ ತಿಳಿದು ಬರುವುದೇನೆಂದರೆ ಅಲೆಮಾರಿ ಸಮುದಾಯಗಳು ತಮ್ಮದೇ ಆದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಯನ್ನು ಒಳಗೊಂಡು ಸಮಾಜದಲ್ಲಿ ವಿಶಿಷ್ಟವಾಗಿ ಇತರೆ ಸಮುದಾಯಗಳಿಗಿಂತ ಭಿನ್ನವಾಗಿ ಜೀವಿಸುತ್ತಿರುವುದು ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಸಂಗತಿಯಾಗಿದೆ.

೩.೬. ಬೈಲಪತ್ತಾರ

೩.೬.೧. ಚಾರಿತ್ರಿಕ ಹಿನ್ನೆಲೆ

ಸಾಮಾನ್ಯವಾಗಿ ಅಲೆಮಾರಿ ಸಮುದಾಯಗಳು ತಮ್ಮದೆಯಾದಂತಹ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಹಿನ್ನಲೆಯನ್ನು ಹೊಂದಿರುತ್ತವೆ. ತಮ್ಮ ಸಮುದಾಯವು ದೇವ ದೇವತೆಗಳ ಸಮುದಾಯ. ತಾವು ಸಾಕ್ಷಾತ್ ದೇವರ ಮಕ್ಕಳು ಎನ್ನುವ ನಂಬಿಕೆ ಹೊಂದಿರುತ್ತಾರೆ. ಅಲ್ಲದೆ ಕಥೆ, ಪುರಾಣ, ಗೀತೆ, ಕಾವ್ಯಗಳು, ಮೌಖಿಕ ಸಾಹಿತ್ಯದ ಪರಂಪರೆಯ ಮೂಲಕ ನೆಲೆಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತವೆ. ಈ ರೀತಿಯ ನಂಬಿಕೆ, ಆಚರಣೆ, ರೀತಿ ನೀತಿಯನ್ನು ಕಟ್ಟಿಕೊಂಡ ಸಮುದಾಯಗಳು ಅಷ್ಟೇ ವೈವಿಧ್ಯ ಪೂರ್ಣವಾದ ಸಾಂಸ್ಕೃತಿಕ ಸಂಪತ್ತನ್ನು ಹುಟ್ಟುಹಾಕುತ್ತವೆ. ಈ ಹಿನ್ನೆಲೆಯಲ್ಲಿ ಬೈಲಪತ್ತಾರ ಸಮುದಾಯವು ಕೂಡ ಒಂದಾಗಿದೆ.

೧. ಓರಿಸ್ಸಾ ರಾಜ್ಯದ ಪುರಿ ಜಗನ್ನಾಥ ದೇವಾಲಯದ ಸಮೀಪದಲ್ಲಿ ಸೂಜಿಗಲ್ ಎಂಬ ಪಟ್ಟಣವಿತ್ತು. ಆ ಸೂಜಿಗಲ್ ಪಟ್ಟಣದ ಸುತ್ತಲೂ ಅರಗಿನ ಕೋಟೆಯನ್ನು ಕಟ್ಟಲಾಗಿತ್ತು. ಈ ಅರಗಿನ ಕೋಟೆಯನ್ನು ಏಕಚಕ್ರಾಧಿಪತ್ಯವನ್ನು ಹೊಂದಿರುವ ರಾಜ 'ಚಕ್ರವರ್ತಿ' ಎಂಬ ಅರಸನು ಆಳುತ್ತಿದ್ದನು. ಆರಸನಿಗೆ ಸುಂದರಿಯಾದ 'ಪಂಚಾಳಿ' ಎಂಬ ಸುಂದರ ಹೆಣ್ಣು ಮಗಳಿದ್ದಳು. ಇವಳು ಕಾಳಿಯ ಭಕ್ತನಾದ ಮತ್ತು ಬೈಲಪತ್ತಾರರ ಸಾಂಸ್ಕೃತಿಕ ನಾಯಕನಾದ ದೈವಜ್ಞನಿಗೆ ಪ್ರೇಮಿಸುವಳು. ಇವರಿಬ್ಬರ ಪ್ರೇಮದ ವಿಷಯ ತಿಳಿದ ಚಕ್ರವರ್ತಿಗೆ ತನ್ನ ಮಗಳು ಒಬ್ಬ ಸಾಮಾನ್ಯ ಕಾಳಿಯ ಭಕ್ತನಾದ ದೈವಜ್ಞನಿಗೆ ಪ್ರೀತಿಸುವುದು ರಾಜನಿಗೆ ಇಷ್ಟವಿರಲಿಲ್ಲ. ಹೀಗಾಗಿ ಒಂದು ದಿನ ದೈವಜ್ಞ ಹಾಗೂ ತನ್ನ ಪ್ರೇಯಸಿಯಾದ ಪಾಂಚಾಳಿಯೊಂದಿಗೆ ಅರಗಿನ ಕೋಟೆಯಲ್ಲಿ ಏಕಾಂತದಲ್ಲಿದ್ದಾಗ ಚಕ್ರವರ್ತಿ ಇವರನ್ನು ಸಾಯಿಸುವುದಕ್ಕಾಗಿ ಕೋಟೆಗೆ ಬೆಂಕಿ ಹಚ್ಚಿಸುವನು. ಆಗ ಆ ಪ್ರೇಮಿಗಳು ಪ್ರಾಣಾಪಾಯದಿಂದ ಪಾರಾಗಿ ವಿವಿಧ ಪ್ರದೇಶಗಳಿಗೆ ವಲಸೆ ಬಂದು ಜೀವನ ಮಾಡುವರು. ಅವರಿಬ್ಬರ ಕೂಡುವಿಕೆಯಿಂದ 'ಬೈಲಪತ್ತಾರ' ಸಮುದಾಯ ಬೆಳೆದು ಬಂದಿದೆ. ಎಂಬ ಪ್ರತೀತಿ ಇದೆ.

೨. ಓರಿಸ್ಸಾ ರಾಜ್ಯದ ಪುರಿ ಜಗನ್ನಾಥ ದೇವಾಲಯಕ್ಕೆ ಸೂಜಿಗಲ್ಲ ಪಟ್ಟಣದ ಅರಗಿನ ಕೋಟೆಯನ್ನು ಮನು, ಮಯ, ಶಿಲ್ಪ, ತ್ವಷ್ಠಿ, ದೈವಜ್ಞ ಅಥವಾ ವಿಶ್ವಜ್ಞ ಎಂಬ ಐದು ಜನ ದೈವೀ ಮಹಾರಾಜರು ಆಳುತ್ತಿದ್ದರು. ಈ ಐದು ಜನ ಮಹಾರಾಜರಲ್ಲಿ ದೈವಜ್ಞ ಕಿರಿಯವನ್ನಾಗಿದ್ದನು. ಇವನು ತನ್ನ ಆಸ್ಥಾನದಲ್ಲಿ ರಾಜ ನರ್ತಕಿಯಾಗಿದ್ದ ಪಾಂಚಾಳಿಯೊಂದಿಗೆ ಪ್ರೇಮ ಬೆಳೆದು ಓರಿಸ್ಸಾ ರಾಜ್ಯವನ್ನು ಬಿಟ್ಟು ವಿವಿಧ ಪ್ರದೇಶಗಳಿಗೆ ಆಕೆಯೊಂದಿಗೆ ಓಡಿ ಹೋಗಿ ಸಂಸಾರ ನಡೆಸುತ್ತಾನೆ. ಇವರಿಬ್ಬರ ಕೂಡುವಿಕೆಯಿಂದಲೇ ಬೈಲಪತ್ತಾರ ಸಮುದಾಯವು ಬೆಳೆದು ಬಂದಿದ್ದು. ದೈವಜ್ಞ ಮತ್ತು ಪಾಂಚಾಳಿ ಮಕ್ಕಳೆಂದು ಹೇಳಿಕೊಳ್ಳುವರು.

೩. ವಿಶ್ವಕರ್ಮನ ಐದು ಜನ ದೈವೀ ಮಕ್ಕಳಾದ ಮನು, ಮಯ, ತ್ವಷ್ಠಿ, ಶಿಲ್ಪಿ, ದೈವಜ್ಞ ಎಂಬ ದೈವೀ ಭಕ್ತರು ಅರಗಿನ ಕೋಟೆಯಲ್ಲಿ ವಾಸವಾಗಿದ್ದರು. ಈ ಅರಗಿನ ಕೋಟೆಯ ಬಾಗಿಲನ್ನು ಮುಚ್ಚುವ ತೆರೆಯುವ ಗುಟ್ಟು ಈ ಐದು ಜನರಿಗೆ ಮಾತ್ರ ತಿಳಿದಿತ್ತು. ಈ ಅರಗಿನ ಕೋಟೆಯು ಸಂಪತ್ತಿನಿಂದ ಕೂಡಿತ್ತು. ಪಕ್ಕದ ಸಾಮಂತ ಅರಸನಾದ ರಾಜ ಚಕ್ರವರ್ತಿಯು ಈ ಅರಗಿನ ಕೋಟೆಯ ಬಾಗಿಲು ತೆರೆಯುವ ಗುಟ್ಟನ್ನು ತಿಳಿದುಕೊಳ್ಳಲು ಒಬ್ಬ ಸುಂದರ ಮಹಿಳೆ ಪಾಂಚಾಳಿ ಅರಗಿನ ಕೋಟೆಯ ಎದುರಿನಲ್ಲಿ ಗುಡಿಸಲನ್ನು ಹಾಕಿ ಬೀಡಾರ ಹೂಡಿದಳು. ಆಕೆಯು ಅವರನ್ನು ಪ್ರೇಮಿಸಲು ಪ್ರಯತ್ನಿಸುತ್ತಾಳೆ. ಅದಕ್ಕೆ ಚಿಕ್ಕವನಾದ ದೈವಜ್ಞ ಮಾತ್ರ ಅವಳ ಪ್ರೇಮಕ್ಕೆ ಬೆರಗಾಗುವನು. ಅದು ಹೇಗೆ ಎಂದರೆ ಒಂದು ದಿನ ಚೆಂಡಿನ ಆಟವಾಡುವಾಗ ಆ ಚೆಂಡು ಆಕೆಯ ಗುಡಿಸಲಿನ ಎದುರಿಗೆ ಬಂದು ಬೀಳುತ್ತದೆ. ಆಗ ಆಕೆ ಆ ಚೆಂಡನ್ನು ಎತ್ತಿಕೊಂಡು ದೈವಜ್ಞನಿಗೆ ಕೊಡುವಾಗ ಪ್ರೇಮ ಸಲ್ಲಾಪವಾಗುತ್ತದೆ. ಅನಂತರ ಇವರಿಬ್ಬರ ನಡುವೆ ಗಾಢವಾದ ಪ್ರೇಮ ಬೆಳೆಯುತ್ತದೆ. ಆಗ ಬಾಗಿಲು ತೆಗೆಯುವ ಗುಟ್ಟನ್ನು ತಿಳಿದುಕೊಳ್ಳುವಳು. ಆದರೆ ರಾಜ ಚಕ್ರವರ್ತಿಗೆ ಬಾಗಿಲು ತೆಗೆಯುವ ಗುಟ್ಟನ್ನು ತಿಳಿಸುವುದಿಲ್ಲ. ದೈವಜ್ಞ ಎಲ್ಲಾ ಅಣ್ಣಂದಿರನ್ನು ಬಿಟ್ಟು ಪಾಂಚಾಳಿಯೊಂದಿಗೆ ಓಡಿ ಹೋಗಿ ಸಂಸಾರಿಕ ಜೀವನ ನಡೆಸುತ್ತಾನೆ. ಪಾಂಚಾಳಿಯು ಮಾಂಸಹಾರಿ ಯಾಗಿರುತ್ತಾಳೆ. ದೈವಜ್ಞ ದೈವ ಭಕ್ತನಾಗಿ ಜನಿವಾರ ಹಾಕಿಕೊಂಡು ಸಸ್ಯಹಾರಿಯಾಗಿರುತ್ತಾನೆ. ಇವರಿಬ್ಬರ ಕೂಡುವಿಕೆಯೇ ಬೈಲಪತ್ತಾರ ಸಮುದಾಯವಾಗಿದೆ. ಎಂಬ ಪ್ರತೀತಿ ಇರುವುದು. ಆದ್ದರಿಂದ ಈ ಸಮುದಾಯದಲ್ಲಿ ತಂದೆಯ ಜನಿವಾರ ತಾಯಿಯ ಮಾಂಸಹಾರ ಚಾಲ್ತಿಯಲ್ಲಿ ರೂಢಿಯಿರುವುದೆಂಬ ಕಥೆಗಳು ಬೈಲಪತ್ತಾರರಲ್ಲಿ ಇಂದಿಗೂ ಇವೆ. ಇವು ಆ ಸಮುದಾಯದ ಹುಟ್ಟಿನ ಕುರಿತು ತಿಳಿಸಿಕೊಡುತ್ತದೆ.

ಸಾಮಾಜಿಕ ಹಿನ್ನೆಲೆ

ಭಾರತೀಯ ವರ್ಣ ವ್ಯವಸ್ಥೆಯ ಸಂದರ್ಭದಲ್ಲಿ ಬೈಲಪತ್ತಾರರು ಶೂದ್ರರಾಗಿದ್ದು ಇತರೆ ಮೇಲ್ಜಾತಿಯವರ ಮನೆ ಮಠಗಳಲ್ಲಿ ಸಹಪಂಕ್ತಿ ಬೋಜನಕ್ಕೆ ಅವಕಾಶವಿರುವುದಿಲ್ಲ. ಹಾಗೂ ತಮ್ಮ ಭಾಂದವರೆಂದು ಹೇಳಿಕೊಳ್ಳುವ ವಿಶ್ವಕರ್ಮರೊಂದಿಗೆ ಕೂಡಿಕೊಳ್ಳುವಂತಹ ಸಂಬಂಧ ಮಾಡುವಂತಿಲ್ಲ.

ಈ ಸಮುದಾಯ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಸ್ತರದವರೆಂದು ಗುರುತಿಸಲ್ಪಟ್ಟಿದ್ದಾರೆ. ಆದುದರಿಂದ ಬೈಲಪತ್ತಾರ ಸಮುದಾಯವು ತುಂಬಾ ಕಷ್ಟ ಸ್ಥಿತಿಯಲ್ಲಿದೆ. ಅದು ಅಲೆಮಾರಿ ವೃತ್ತಿ ಸಮುದಾಯವಾಗಿದೆ. ಇವರು ಊರಿಂದ ಊರಿಗೆ ದುಡಿಮೆಯನ್ನು ಅರಸಿ ಸಂಚಾರಿಸುವ ಸಮುದಾಯವಾಗಿದ್ದು. ಹೆಚ್ಚಾಗಿ ನಗರದ ಹೊರ ಭಾಗದ ಕೊಳಚೆ ಪ್ರದೇಶ ಅಥವಾ ಗ್ರಾಮದ ವಿಶಾಲವಾದ ಬಯಲು, ಮೈದಾನಗಳಲ್ಲಿ ತಾತ್ಕಾಲಿಕವಾಗಿ ಗುಡಾರಗಳನ್ನು ಹಾಕಿಕೊಂಡು ಅಲ್ಲಿ ಸಿಗುವಂತಹ ಪತ್ತಾರಿಕೆ ಕೆಲಸವನ್ನು ಮುಗಿಸಿಕೊಂಡು ಮುಂದಿನ ಊರುಗಳಿಗೆ ಅಲೆಮಾರಿಗಳಾಗಿ ಅಲೆಯುತ್ತಾ ಹೋಗುವರು (ವಿಶ್ವನಾಥ ಎನ್., ಜಗನ್ನಾಥ ಎಂ. ಬೈಲಪತ್ತಾರ: ೨೦೦೮:೫೬) ಎಂದು ಬೈಲಪತ್ತಾರ ಕುರಿತು ಹೇಳಿದ್ದಾರೆ.

ಮಾನವ ಮೂಲತಃವಾಗಿ ಕಾಡಿನಲ್ಲಿ ವಾಸಿಸುತ್ತಿದ್ದು, ಗೆಡ್ಡೆ-ಗೆಣಸುಗಳನ್ನು ಹಣ್ಣು-ಹಂಪಲಗಳನ್ನು ತಿಂದು ಬದುಕುತ್ತಿದ್ದನು. ಬೇಟೆಯನ್ನು ಆಡುವ ಮೂಲಕ ಆಹಾರವನ್ನು ಸಂಗ್ರಹಿಸುತ್ತಿದ್ದನು. ಮಾನವನಿಗೆ ಬೇಟೆಯೆ ಅಂದಿನ ಆಹಾರೋತ್ಪಾದನೆಯ ಪ್ರಮುಖ ಸಾಧನವಾಗಿತ್ತು. ಕಾಡಿನಲ್ಲಿದ್ದ ಮಾನವ ಪ್ರಾಣಿಗಳ ಜೊತೆ ಬದುಕುತ್ತ ಕೆಲವನ್ನು ಕೊಲ್ಲುತ್ತಾ, ಕೆಲವನ್ನು ಸಾಕುತ್ತ ಜೀವನ ನಡೆಸುತ್ತಿದ್ದ. ಕ್ರಮೇಣ ಬೇಟೆ, ಪಶುಪಾಲನೆ, ಕೃಷಿ ಹಂತಗಳು ಮಾನವ ಬೆಳವಣಿಗೆಯ ವಿವಿಧ ಮಜಲುಗಳಾದವು. ಪ್ರಮುಖ ಉತ್ಪಾದನಾ ವಿಧಾನವಾದ ಬೇಟೆ ಮುಂದೆ ಒಂದು ಪ್ರಾಸಂಗಿಕ ಕ್ರಿಯೆಯಾಯಿತು. ಒಂದು ಕಾಲದಲ್ಲಿ ರಾಜ-ಮಹಾರಾಜರಿಗೆ ಬೇಟೆಯಾಡುವುದು ಮನೋರಂಜನಾ ಕ್ರಿಯೆಯಾಗಿ ಪರಿವರ್ತನೆ ಹೊಂದುವುವಷ್ಟರ ಮಟ್ಟಿಗೆ ಬದಲಾವಣೆ ಯಾಯಿತು. ಮಾನವ ಸಮೂಹದಲ್ಲಿನ ವ್ಯಕ್ತಿಗಳು ತಮ್ಮದೆ ಆದ ಅನುಭವ ಜ್ಞಾನ ಶಿಸ್ತುಗಳನ್ನು ಬೆಳೆಸಿ ಕೊಳ್ಳಲು ಪ್ರಾರಂಭಿಸಿ ಅಂದರೆ ಮಣ್ಣಿನಿಂದ ಮಡಿಕೆ, ಇಟ್ಟಿಗೆಗಳು, ಕಟ್ಟಿಗೆಯಿಂದ ಕಿಟಕಿ, ಬಾಗಿಲುಗಳು, ಕಲ್ಲಿನಿಂದ ಆಯುಧಗಳು, ಹಿತ್ತಾಳೆ ತಾಮ್ರ ಕಂಚುಗಳಿಂದ ಅಲಂಕಾರಿಕ ವಸ್ತುಗಳನ್ನು, ಅದೇ ರೀತಿ ಕಬ್ಬಿಣ ಮತ್ತು ಉಕ್ಕಗಳಿಂದ ಕೃಷಿ ಸಲಕರಣೆಗಳನ್ನು, ನೂಲಿನಂತಹ ವಸ್ತುಗಳಿಂದ ನೇಯ್ಗೆಯಂತಹ ಕೆಲಸಗಳು. ಮಂದಿರ, ಮನೆ, ಕೋಟೆ, ಕಟ್ಟಡಗಳ ರಚನೆಗಳು ಚಿತ್ರಕಲೆ ಇತ್ಯಾದಿ ಹೀಗೆ ಮಾನವ ತನ್ನದೆ ಆದಂತಹ ಜ್ಞಾನ ಶಿಸ್ತುಗಳನ್ನು ಬೆಳೆಸಿಕೊಳ್ಳುತ್ತಾ ಬುಡಕಟ್ಟು ಅಲೆಮಾರಿ ಸಮುದಾಯಗಳು ಹುಟ್ಟಿ ಕೊಂಡಿರುವುದು ಐತಿಹಾಸಿಕವಾದಂತಹ ಸತ್ಯವಾಗಿದೆ. ಇಂತಹ ಅನೇಕ ಬುಡಕಟ್ಟು ಅಲೆಮಾರಿ ಸಮುದಾಯಗಳ ಮಧ್ಯದಲ್ಲಿಯೆ 'ಬೈಲಪತ್ತಾರ' ಸಮುದಾಯವು ಒಂದು. ಈ ಸಮುದಾಯವು ತನ್ನ ವಿಶಿಷ್ಟ ಪತ್ತಾರಿಕೆಯ ಕೆಲಸ ಮಾಡುವುದರ ಮೂಲಕ ಕುಶಲಕರ್ಮಿ ಸಮುದಾಯವಾಗಿ ಸಮಾಜದ ಇತರ ಅಲೆಮಾರಿ ಸಮುದಾಯ ಗಳಂತೆ ಜೀವಿಸುತ್ತಿದೆ.

ಈ ಬೈಲಪತ್ತಾರ ಸಮುದಾಯವು ಅಲೆಮಾರಿ ಜೀವನ ನಡೆಸುವುದರೊಂದಿಗೆ ತಮ್ಮದೇ ಆದಂಥ ಭಾಷೆ ಮತ್ತು ಸಂಸ್ಕೃತಿಯನ್ನು ಹೊಂದಿದ್ದು. ತಾಮ್ರ, ಬೆಳ್ಳಿ, ಕಲ್ಲುಬೆಳ್ಳಿ ಹಿತ್ತಾಳೆಗಳಿಂದ ವಿವಿಧ ಆಭರಣಗಳನ್ನು ತಯಾರಿಸಿ ಸಂತೆ ಜಾತ್ರೆ, ಬಸ್‌ನಿಲ್ದಾಣ, ರೈಲ್ವೆ ನಿಲ್ದಾಣಗಳಲ್ಲಿ ತಾವು ತಯಾರಿಸಿದ

ವಸ್ತುಗಳನ್ನು ಅಲ್ಪ ಬೆಲೆಗೆ ಮಾರಾಟ ಮಾಡಿ ತಮ್ಮ ದಿನನಿತ್ಯದ ಜೀವನವನ್ನು ನಡೆಸುತ್ತಿರುವರು. ಬೈಲಪತ್ತಾರರು ನಗರದ ಕೊಳಚೆ ಪ್ರದೇಶಗಳಲ್ಲಿ, ಮಸೀದಿ, ಶಾಲೆಯ ಮೈದಾನಗಳಲ್ಲಿ ಇದ್ದುಕೊಂಡು ಹಾಗೆಯೇ ಊರಿನ ಹೊರಗಡೆ ಬಯಲು ಪ್ರದೇಶದಲ್ಲಿ ತಾತ್ಕಾಲಿಕವಾಗಿ ಗುಡಾರಗಳನ್ನು ಹಾಕಿಕೊಂಡು ತಾವು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಿ ದಿನನಿತ್ಯದ ಬದುಕನ್ನು ಸಾಗಿಸುತ್ತಿರುವರು.

ಭಾರತೀಯ ಸಮಾಜದಲ್ಲಿ ಮುಂದುವರೆದ ಇತರ ಸಮುದಾಯಗಳೊಂದಿಗೆ ಹೋಲಿಸಿ ನೋಡಿದಾಗ ಬಡುಕಟ್ಟು ಮತ್ತು ಅಲೆಮಾರಿ ಬುಡಕಟ್ಟು ಸಮುದಾಯಗಳ ಬೆಳವಣಿಗೆಯು ಸಹಜವಾಗಿಯೇ ಅತ್ಯಂತ ಹಿಂದುಳಿದಿರುವುದು ಕಂಡುಬರುತ್ತದೆ. ಪ್ರಾಚೀನ ಆದಿವಾಸಿ ಮಾನವರಂತೆ ಅವರ ಶಾರೀರಿಕ ಚಹರೆಗಳು ವೇಷ-ಭೂಷಣ ಗುಡಿಸಲುಗಳು, ಗುಡಾರಗಳು ತಮ್ಮದೇಯಾದ ಸಾಂಪ್ರದಾಯಿಕ ಆಚರಣೆಗಳು ವಿಧಿ-ನಿಷೇದಗಳು, ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಚರಣೆಗಳು, ಕೌಟುಂಬಿಕ ರಚನೆಗಳಲ್ಲಿ ಭಿನ್ನವಾದ ಜೀವನ ವಿಧಾನವನ್ನು ಅನುಸರಿಸುವ ಅಲೆಮಾರಿ ಬುಡಕಟ್ಟು ಸಮುದಾಯ ಇದಾಗಿದೆ.

ಭಾರತ ದೇಶವು ವಿವಿಧ ಬುಡಕಟ್ಟು ಸಮುದಾಯಗಳು ಹಾಗೂ ಅಲೆಮಾರಿ ಬುಡಕಟ್ಟು ಸಮುದಾಯಗಳು ವಾಸಿಸುವ ನಾಡಾಗಿದ್ದು, ಕರ್ನಾಟಕವು ಅದರ ಮಗುವಾಗಿ ಇಲ್ಲಿ ಹತ್ತು ಹಲವು ಜಾತಿ, ಧರ್ಮ ಪಂಥ ಹಾಗೂ ವಿವಿಧ ವೃತ್ತಿಗಳಿಗೆ ಸೇರಿದ ಜನಸಮುದಾಯಗಳನ್ನು ತನ್ನ ಒಡಲಾಳದಲ್ಲಿರಿಸಿಕೊಂಡಿದೆ. ಕರ್ನಾಟಕದಲ್ಲಿ ಸಂವಿಧಾನಾತ್ಮಕವಾಗಿ ೫೦ ಸಮುದಾಯಗಳನ್ನು ಪರಿಶಿಷ್ಟ ಬುಡಕಟ್ಟುಗಳು ಎಂದು ಪರಿಗಣಿಸಲಾಗಿದೆ. ಆದರೆ ಇನ್ನೂ ಅನೇಕ ಬುಡಕಟ್ಟುಗಳು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರದೇ ಇರುವುದು ಕಂಡುಬರುತ್ತಿದ್ದು, ಅವುಗಳನ್ನು ಪರಿಶಿಷ್ಟ ಬುಡಕಟ್ಟು ಸಮುದಾಯಗಳ ಪಟ್ಟಿಗೆ ಸೇರಿಸಲು ಯಾವುದೇ ಪ್ರಯತ್ನಗಳು ಇದುವರೆಗೂ ಆಗಿಲ್ಲ. ಅವುಗಳಲ್ಲಿ ಬೈಲಪತ್ತಾರ ಅಲೆಮಾರಿ ಸಮುದಾಯವೂ ಸಹ ಒಂದಾಗಿದೆ. ಸದ್ಯಕ್ಕೆ ಈ ಸಮುದಾಯವನ್ನು ಹಿಂದುಳಿದ ವರ್ಗಗಳ ಪ್ರವರ್ಗ ೧ ರಲ್ಲಿ ಇರಿಸಲಾಗಿದೆ.

೩.೬.೨. ಬೈಲಪತ್ತಾರ ಹೆಸರಿನ ಔಚಿತ್ಯ

ಪ್ರಪಂಚದ ದಿನ ನಿತ್ಯದ ವ್ಯವಹಾರಿಕ ಬದುಕಿನಲ್ಲಿ ಅಲೆಮಾರಿ ಸಮುದಾಯಗಳಿಗೆ ಅವರ ಹೆಸರೇ ಮೂಲ ಕಾರಣವಾಗಿರುತ್ತದೆ. ಅಲ್ಲದೆ ಆ ಸಮುದಾಯದ ಹೆಸರಿನಲ್ಲಿ ತಮ್ಮದೇ ಆದಂತಹ ಸತ್ಯಾಂಶಗಳನ್ನು ಒಳಗೊಂಡಿರುತ್ತದೆ. ಪ್ರಪಂಚದಲ್ಲಿ ನೈಸರ್ಗಿಕ ವಸ್ತುಗಳಿಂದ ಹಿಡಿದು ಪ್ರಾಣಿ ಪಕ್ಷಿಗಳಿಂದ ವ್ಯಕ್ತಿ ಮತ್ತು ಅವರ ಸಮುದಾಯದ ಬದುಕಿನವರೆಗೂ ಆವರಿಸಿಕೊಂಡಿರುತ್ತದೆ.

ಒಬ್ಬ ವ್ಯಕ್ತಿ ಅಥವಾ ಒಂದು ಪದವನ್ನು ಅನ್ವಯಿಸಿಕೊಂಡಾಗ ಆ ವ್ಯಕ್ತಿಯ ಜಾತಿ ಪಂಥ ಧರ್ಮಗಳ ಬಗ್ಗೆ ಸಮಗ್ರ ಮಾಹಿತಿ ಕೊಡುತ್ತದೆ. ಇದನ್ನು ಒಂದು ಸಮುದಾಯಕ್ಕೆ ಹೋಲಿಸಿಕೊಂಡಾಗ ಆ ಸಮುದಾಯದ ವೃತ್ತಿ-ಭಾಷೆ-ಸಂಸ್ಕೃತಿ ಸಂಪ್ರದಾಯ ರೀತಿ-ನೀತಿಗಳನ್ನು ಕಲೆಹಾಕಿ ಆ ಸಮುದಾಯದ ಚಿತ್ರಣವನ್ನು ಬಿಂಬಿಸುತ್ತದೆ.

ಪ್ರಸ್ತುತವಾಗಿ ಬೈಲಪತ್ತಾರ ಸಮುದಾಯವು ವಾಸಿಸುವಂತಹ ಪ್ರದೇಶದಲ್ಲಿ ಆ ಸಮುದಾಯವನ್ನು ವಿವಿಧ ಹೆಸರುಗಳಿಂದ ಗುರುತಿಸಲ್ಪಡುವರು. ಅವು ಈ ಕೆಳಗಿನಂತಿವೆ.

೧. ಬೈಲುಪತ್ತಾರರು (ಬೈಲಪತ್ತಾರ್)

೨. ಬೈಲು ಅಕ್ಕಸಾಲಿಗರು

೩. ಗಾಡಿ ಸೋನಾರ

೪. ಬೈಟ ಕಂಶುಲವಾರ್

೫. ಪರದೇಶಿ ಸೋನಾರ

೬. ಪಂದೆಶಿ ಪೋದಾರ

೭. ಜೋಹಾರಿ ಸೋನಾರ

ಬೈಲುಪತ್ತಾರರು ಎಂಬ ಪದವು ಎರಡು ಸಂಯುಕ್ತ ಪದಗಳ ಗುಂಪು, ಬೈಲು ಎಂಬುದು ಬಯಲು ಪ್ರದೇಶ, ಮೈದಾನ, ವಿಶಾಲವಾದ ಪ್ರದೇಶ ಎಂಬ ಅರ್ಥವನ್ನು ಸೂಚಿಸುವುದು. ಪತ್ತಾರರು ಎಂದರೆ ಅಕ್ಕ ಸಾಲಿಗರು ಎಂಬ ಅರ್ಥ ಸೂಚಿಸುತ್ತದೆ ಎಂದು ತಿಳಿಸಿದ್ದಾರೆ (ಬೈಲಪತ್ತಾರ ಎಲ್ ವಿಶ್ವನಾಥ: ೨೦೦೮:೪).

ಒಂದು ಸಮುದಾಯವು ತನ್ನದೆಯಾದ ಮೂಲ ನೆಲೆಯನ್ನು ಹೊಂದಿದ್ದು ಸಮಾಜದಲ್ಲಿನ ಆರ್ಥಿಕ ರಾಜಕೀಯ ಧಾರ್ಮಿಕ ಏರುಪೇರುಗಳಿಂದ ಒಂದು ನೆಲೆಯಿಂದ ಮತ್ತೊಂದು ನೆಲೆಗಳಿಗೆ ಸಾಗುವುದು. ಪ್ರಸ್ತುತ ಬೈಲುಪತ್ತಾರ ಸಮುದಾಯವು ಮೂಲತಃ ಓರಿಸ್ಸಾದಿಂದ ಕರ್ನಾಟಕಕ್ಕೆ ಯಾವುದೋ ಒಂದು ಕಾಲದಲ್ಲಿ ವಲಸೆ ಬಂದಿರುವ ಸಮುದಾಯವಾಗಿದೆ. ಈ ಸಮುದಾಯವು ಓರಿಸ್ಸಾ ಮೂಲದವರೆಂದೂ ಕರೆದುಕೊಳ್ಳುವರು. ಇವರ ಭಾಷೆ ಮತ್ತು ಕುಲಗೋತ್ರ, ಬೆಡಗು ಇವರ ಭಾಷೆ, ಓರಿಸ್ಸಾ ಭಾಷೆಯ ಉಪ ಭಾಷೆಯಾಗಿದೆ. ಇದರಿಂದ ಇವರು ಓರಿಸ್ಸಾ ಮೂಲಕ್ಕೆ ಸೇರಿವದರಾಗಿದ್ದಾರೆ ಎಂದು ಗುರುತಿಸಬಹುದು. ಬೈಲಪತ್ತಾರ ಸಮುದಾಯವು ಓರಿಸ್ಸಾದ 'ಪುರಿ ಜಗನ್ನಾಥ' ದೇವಾಲಯದ ಸಮೀಪದ 'ಸೂಜಿಗಲ್ಲಿ' ಪಟ್ಟಣದಲ್ಲಿ ಕುಲ ಕಸುಬಿನೊಂದಿಗೆ ಆರಾಮವಾಗಿ ಜೀವಿಸುತ್ತಿದ್ದರು. ಆಕ್ರಮಣಕಾರರು 'ಜಗನ್ನಾಥ' ದೇವಾಲಯವನ್ನು ಕೊಳ್ಳೆಹೊಡೆದರು. ಹೀಗಾಗಿ ತಮ್ಮ ಮೂಲ ನೆಲೆಯನ್ನು ಕಳೆದುಕೊಂಡ ಬೈಲಪತ್ತಾರರು ಅಲೆಮಾರಿತನಕ್ಕೆ ಒಳಗಾಗುವಂತಾಯಿತು ಎಂಬುದು ಸಮುದಾಯದ ಬಹುತೇಕ ಜನರ ಅಭಿಪ್ರಾಯವಾಗಿದೆ.

೩.೬.೩. ಬೈಲಪತ್ತಾರ ಸಮುದಾಯದ ಸಾಮಾಜಿಕ ಜೀವನ

ಮಾನವನು ಮೂಲತಃ ಸಮಾಜ ಜೀವಿ. ಸಮಾಜವನ್ನು ಬಿಟ್ಟು ಆತ ಬದುಕಲಾರ ಸಮಾಜ ಸಂಪರ್ಕ ರಹಿತವಾದ ಜೀವನ ಮಾಡುವ ಸ್ಥಿತಿ ಬಂದರೆ ಹೆಚ್ಚಿನ ತೊಂದರೆಗಳನ್ನು ಅನುಭವಿಸುತ್ತಾನೆ. ಆದ್ದರಿಂದ ಮಾನವರು ಯಾವಾಗಲೂ ಸಮುದಾಯಿಕವಾಗಿ ಅಥವಾ ಸಾಂಘಿಕವಾಗಿ ಸಮಾಜದಲ್ಲಿ ಜೀವಿಸುತ್ತಾರೆ.

ವ್ಯಕ್ತಿ ಮತ್ತು ಸಮಾಜದ ನಡುವೆ ಒಡನಾಟದ ಬದುಕು ಬಹುಮುಖ್ಯ ಪಾತ್ರವಹಿಸುತ್ತದೆ. ಸಾಮಾಜಿಕ ವ್ಯವಸ್ಥೆಯು ವ್ಯಕ್ತಿ ವ್ಯಕ್ತಿಗಳ ನಡುವೆ ಸಾಮಾಜಿಕ ಕ್ರಿಯೆ ಅಂತರ ಕ್ರಿಯಗಳಿಂದ ಸಮಾಜವು ರಚನೆಯಾಗಿರುತ್ತದೆ. ಮಾನವನು ತನ್ನದೆ ಆದಂತಹ ಸಮುದಾಯಿಕ ಭಾವನೆಗಳಿಗೆ ಸ್ಪಂದಿಸುವ ಜನಸಮೂಹಗಳ ಚೌಕಟ್ಟಿನಲ್ಲಿ ಸುಖ ಸಂತೋಷದಿಂದ ಜೀವನ ಮಾಡಲು ಸಾಮಾಜಿಕ ವ್ಯವಸ್ಥೆಯನ್ನು ರಚನೆ ಮಾಡಿಕೊಂಡು ಜೀವಿಸುತ್ತಿದ್ದಾನೆ.

ಬೈಲಪತ್ತಾರ ಸಮುದಾಯವು ಕೂಡ ತಮ್ಮದೆಯಾದಂತಹ ಸಾಮಾಜಿಕ ಜೀವನ ನಡೆಸುತ್ತಿದ್ದಾರೆ. ಇವರು ಅಲೆಮಾರಿ ಜೀವನ ನಡೆಸುವುದರೊಂದಿಗೆ ತಮ್ಮ ಸಂಸ್ಕೃತಿ ಆಚಾರ ವಿಚಾರಗಳು ನಡೆ-ನುಡಿಗಳು ನೈತಿಕ ನಿಯಮಗಳು ಸಂಪ್ರದಾಯಗಳು ಯಾವಾಗಲೂ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆದಾಡುತ್ತಿರುತ್ತವೆ. ಅಲೆಮಾರಿ ಸಮುದಾಗಳು ಯಾವಾಗಲೂ ಅಲೆದಾಡುತ್ತಿರುತ್ತವೆ. ಅವರು ಮಾಡುವ ಸಂಪ್ರದಾಯಿಕ ರೀತಿ-ನೀತಿಗಳಲ್ಲಿ ಹೆಚ್ಚಿನ ಪ್ರಮಾಣದ ಏಕತೆ ಮತ್ತು ಆಯಾ ಪ್ರದೇಶದ ಪ್ರಭಾವದಿಂದ ಕಡಿಮೆ ಪ್ರಮಾಣದ ಭಿನ್ನತೆಯನ್ನು ಬೈಲುಪತ್ತಾರ ಸಮುದಾಯದಲ್ಲಿ ಕಂಡುಬರುತ್ತದೆ.

ಕುಟುಂಬ ರಚನೆ

ಗಂಡು ಹೆಣ್ಣುಗಳ ಲೈಂಗಿಕ ಬಯಕೆಯನ್ನು ನಿಯಂತ್ರಿಸಲು ಮತ್ತು ಸಮಾಜ ಚೌಕಟ್ಟಿನಲ್ಲಿ ತಮ್ಮ ಬಯಕೆಯನ್ನು ಈಡೇರಿಸಿಕೊಳ್ಳಲು ಅನುಮತಿ ಕೊಡುವ ಸಾಂಸ್ಕೃತಿಕ ಹಿನ್ನೆಲೆಗಳಿಂದ ಕೂಡಿರುವ ಸಾಮಾಜಿಕ ಒಪ್ಪಂದವೆ ವಿವಾಹ ಎಂದು ಹೇಳಬಹುದು. ಬೈಲಪತ್ತಾರ ಸಮುದಾಯದಲ್ಲಿ ವಿವಾಹಕ್ಕೆ 'ಸಂಗಾ' ಎಂದು ಕರೆಯುತ್ತಾರೆ. ವಿವಾಹದ ನಂತರ ಮುಂದೆ ಜನ್ಮತಾಳುವುದೆ ಕುಟುಂಬ. ವಿವಾಹ ವ್ಯವಸ್ಥೆ ಇರದಿದ್ದರೆ ಕುಟುಂಬಕ್ಕೆ ಯಾವುದೇ ಅರ್ಥವಿರುವುದಿಲ್ಲ. ಕುಟುಂಬವು ಸಮಾಜದ ನಿರಂತರ ಚಲನೆಗೆ ಕಾರಣವಾಗಿದೆ. ಪ್ರತಿಯೊಂದು ಕುಟುಂಬ ಮತ್ತು ಸಮುದಾಯಗಳು ತಮ್ಮದೆ ಆದಂತಹ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಹೊಂದಿದ್ದು ಅದು ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತದೆ.

ಬೈಲಪತ್ತಾರ ಸಮುದಾಯಗಳಲ್ಲಿ ಹೆಚ್ಚಾಗಿ ಅವಿಭಕ್ತ ಕುಟುಂಬಗಳು ಕಂಡುಬರುತ್ತವೆ ಹಾಗೂ ಇವರು ಸಂಯುಕ್ತವಾಗಿ ಜೀವನ ಮಾಡುವುದು ಕಂಡುಬರುತ್ತದೆ. ಪಿತೃಪ್ರಧಾನವಾದ ವ್ಯವಸ್ಥೆಯನ್ನು ಹೊಂದಿರುವ ಬೈಲಪತ್ತಾರ ಕುಟುಂಬಗಳ ಜವಬ್ದಾರಿ ಮತ್ತು ಆಗುಹೋಗುಗಳನ್ನು ಮುಖ್ಯಸ್ಥನೆ ನೋಡಿಕೊಳ್ಳುತ್ತಾನೆ. ಕುಟುಂಬದಲ್ಲಿ ಪ್ರತಿಯೊಬ್ಬ ಸದಸ್ಯರು ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ಜವಾಬ್ದಾರಿಯುತವಾಗಿ ನೆರವೇರಿಸಿಕೊಂಡು ಹೋಗುವುದರೊಂದಿಗೆ ಪ್ರತಿಯೊಬ್ಬ ಸದಸ್ಯರು ತಮ್ಮ ಬೈಲಪತ್ತಾರಿಕೆಯಿಂದ ತಯಾರಿಸಿದ ವಸ್ತುಗಳ ಮಾರಾಟದಿಂದ ಬಂದ ಹಣವನ್ನು ಕುಟುಂಬದ ಹಿರಿಯರ ಕೈಗೆ ಕೊಡುತ್ತಾರೆ. ಇದರಿಂದ ಹಬ್ಬ-ಹರಿದಿನಗಳಲ್ಲಿ ಅಗತ್ಯವಾದ ವಸ್ತುಗಳನ್ನು ಕೊಂಡುಕೊಳ್ಳುತ್ತಾರೆ. ಹಾಗೂ ಇತರ ಧಾರ್ಮಿಕ ಕಾರ್ಯಕ್ಕೆ ಉಪಯೋಗಿಸುತ್ತಾರೆ. ಕುಟುಂಬದ ಯಜಮಾನ ತೀರಿಕೊಂಡರೆ ಹಿರಿಯ ಮಗನೆ ಜವಾಬ್ದಾರಿ

ಹೋರುತ್ತಾನೆ. ಇತ್ತೀಚಿನ ದಿನಗಳಲ್ಲಿ ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ಬೈಲಪತ್ತಾರ ಸಮುದಾಯಗಳು ವಿಭಕ್ತ ಕುಟುಂಬದ ಕಡೆಗೆ ಮುಖಮಾಡಿರುವುದು ಕಂಡುಬರುತ್ತದೆ. ಬೈಲಪತ್ತಾರ ಸಮುದಾಯಗಳಲ್ಲಿ ಇತ್ತೀಚಿನ ವರಮಾನ ಕಡಿಮೆಯಾಗಿರುವುದರಿಂದ ಕುಟುಂಬ ಸಮಸ್ಯೆಗಳು ತಲೆದೋರುತ್ತಿದ್ದು ವಿಭಕ್ತ ಕುಟುಂಬ ವ್ಯವಸ್ಥೆಗೆ ಇದು ಕಾರಣವಾಗಿದೆ. ಬೈಲಪತ್ತಾರ ಸಮುದಾಯದ ಜನರಿಗೆ ತಾವು ಮಾಡುವ ವೃತ್ತಿಯೇ ತಮಗೆ ಆಸ್ತಿಯೆಂದು ನಂಬಿಕೊಂಡಿದ್ದಾರೆ.

ಬಳಿ, ಬೆಡಗು

ಬೈಲಪತ್ತಾರ ಸಮುದಾಯದವರು ತಮ್ಮ ಕುಲಗೋತ್ರಗಳನ್ನು ಪಾಂಚಸೋಲ್ ಸಾತಬೆಡಗುಗಳು ಎಂದು ಹೇಳುವರು.

ದೈವ	ಮೂಲ ಪುರುಷ	ಗೋತ್ರ	ವೃತ್ತಿ
ರುದ್ರ	ಮನು	ಸಾಗನ	ಲೋಹ
ವಿಷ್ಣು	ಮಯ	ಸನಾತನ	ಬಡಿಗ
ಬ್ರಹ್ಮ	ತ್ವಷ್ಟಿ	ಅಹಭೋನ	ಕಂಚು
ಇಂದ್ರ	ಶಿಲ್ಪಿ	ಪ್ರತ್ನ	ಶಿಲ್ಪಿ
ಸೂರ್ಯ	ದೈವಜ್ಞ	ಸುಪರ್ನಾಸ್ಯ	ಬಂಗಾರ

ಈ ಮೇಲೆ ತಿಳಿಸಿದ ೫ ಗೋತ್ರಗಳಲ್ಲಿ ಕೊನೆಯಗೊತ್ರವೆ ದೈವಜ್ಞ ಗೊತ್ರವಾಗಿರುವುದು. ದೈವಜ್ಞನೇ ಬೈಲುಪತ್ತಾರ ಸಮುದಾಯದ ಮೂಲಪುರುಷನಾಗಿದ್ದಾನೆ. ಅವರ ಬೆಡಗುಗಳು ಈ ಕೆಳಗಿನಂತಿವೆ.

ದೈವಜ್ಞ (ಮೂಲಪುರುಷ)

೧. ಸಪೋಠ (ಸುರ್ವೊಣಿ)

೨. ಪರದನವಾಡ (ಪ್ರಧಾನಿ)

೩. ಕಬಸ್ತೋಡ (ಅಂಕೋಶಿ)

೪. ಗೌಡ್ಯಾ (ಗರಪ)

೫. ಬಾಂಜೋಡ (ಬಾಂಗಿ)

೬. ಪಂಚಮಹಾಲ (ಪಚಮೆ)

೭. ಮೊಕಲವಾಡ (ಮೊಕಲಾಚಿ)

ಬೈಲಪತ್ತಾರ ಸಮುದಾಯಗಳಲ್ಲಿ ಈ ಮೇಲಿನ ಬೆಡಗುಗಳು ಚಾಲ್ತಿಯಲ್ಲಿದ್ದು. ಶಹಾಪೂರ ನಗರದಲ್ಲಿ ಅಂಕೋಶಿ, ಪರದಾನಿ, ಗರಪ, ಎನ್ನುವ ಬೆಡಗಿನವರು ವಾಸವಾಗಿದ್ದಾರೆ. ಇವರು ಸಮ ಬೇಡಗುಗಳಲ್ಲಿ ಮದುವೆಯಾಗದೆ, ವಿರುದ್ಧದ ಬೆಡಗಿನವರ ಜೊತೆ ವಿವಾಹ ಕಾರ್ಯವನ್ನು ಮಾಡುತ್ತಾರೆ.

ಆಹಾರ ಪದ್ಧತಿ

ಭೂಮಿ ಮೇಲೆ ಬದುಕುವ ಪ್ರತಿಯೊಂದು ಜೀವಿಗೂ ಆಹಾರ ಅತ್ಯವಶ್ಯವಾಗಿದೆ. ಹಾಗೆ ಬೈಲಪತ್ತಾರ ಸಮುದಾಯದವರು ಮಾಂಸಹಾರಿಗಳು ಹಾಗೂ ಸಸ್ಯಹಾರಿಗಳಾಗಿದ್ದು, ಇವರು ಕುರಿ, ಕೋಳಿ, ಮೀನು, ಮೊಲ, ಕೌಜುಗ ತಿನ್ನವರು. ಸಾಮಾನ್ಯವಾಗಿ ದಿನನಿತ್ಯ ರೊಟ್ಟಿ, ಬೇಳೆ, ತರಕಾರಿಗಳನ್ನು ಊಟ ಮಾಡುತ್ತಾರೆ. ಇವರು ತಮ್ಮ ಗುಡಾರದ ಮುಂದೆ ಗುಂಡುಗಳಿಂದ ಒಲೆ ಹೂಡಿ ಅಡವಿಯಲ್ಲಿ ಸಂಗ್ರಹಿಸಿದ ಕಟ್ಟಿಗೆಗಳಿಂದ ಅಡುಗೆ ಮಾಡುತ್ತಾರೆ. ಹಬ್ಬ-ಹರಿದಿನಗಳಲ್ಲಿ ಹೋಳಿಗೆ, ಹುಗ್ಗಿ, ಮಾಡುತ್ತಾರೆ. ಹಬ್ಬದ ಮರುದಿನ ಕರಿಗೆ ಅಥವಾ ಯಾರಾದರೂ ಭೀಗರು ಬಂದರೆ ಕುರಿ ಅಥವಾ ಕೋಳಿ ಮಾಂಸವನ್ನು ತಂದು ಜೊತೆಗೆ ಹೆಂಡ-ಸಾರಾಯಿಯನ್ನು ತಂದು ಗಂಡು-ಹೆಣ್ಣು ಇಬ್ಬರು ಸೇರಿ ಕುಡಿದು ಮಾಂಸವನ್ನು ತಿನ್ನುತ್ತಾರೆ. ರಾತ್ರಿ ಉಳಿದ ಆಹಾರವನ್ನು ಹಂದಿನಾಯಿಗಳು ತಿನ್ನುತ್ತವೆಂದು ಗುಡಾರದಲ್ಲಿ ಬಿದುರಿನ ಕೋಲಿಗೆ ನೆಲವಿಯನ್ನು ಕಟ್ಟಿ ಆ ರಾತ್ರಿ ಉಳಿದ ಆಹಾರವನ್ನು ಅದರಲ್ಲಿಟ್ಟು ಸಂರಕ್ಷಿಸುತ್ತಾರೆ.

ಉಡುಗೆ ತೊಡುಗೆ

ಬೈಲುಪತ್ತಾರ ಸಮುದಾಯವು ಆರ್ಥಿಕವಾಗಿ ತುಂಬಾ ಹಿಂದುಳಿದವರಾಗಿರುವುದರಿಂದ ಇವರು ಸಾಮಾನ್ಯವಾದ ಬಟ್ಟೆಗಳನ್ನು ಹಾಕುತ್ತಾರೆ. ಇವರಲ್ಲಿ ಹಿರಿಯರು ಪಂಚೆ (ದೋತ್ರ) ಹಾಗೂ ಶರ್ಟನ್ನು ಹಾಕಿಕೊಳ್ಳುತ್ತಾರೆ. ಇವರು ಲೋಹದ ಕೆಲಸವನ್ನು ಬೆಂಕಿಯ ಮುಂದೆ ಕುಳಿತು ಮಾಡುವುದರಿಂದ ಇವರ ಬಟ್ಟೆಗಳ ಮೇಲೆ ತುತುಗಳು ಬಿದ್ದಿರುತ್ತವೆ. ಹಾಗೆ ಹೆಣ್ಣು ಮಕ್ಕಳು ಲಂಗ, ದಾವಣಿ, ಚುಡಿದಾರಗಳನ್ನು ಹಾಕುತ್ತಾರೆ. ಹಾಗೆ ಯುವಕರು ಇತ್ತೀಚೆಗೆ ಪ್ಯಾಂಟು ಶರ್ಟಗಳನ್ನು ಆಧುನಿಕತೆಗೆ ತಕ್ಕಂತೆ ಉಡುಗೆಗಳನ್ನು ತೊಡುತ್ತಿದ್ದಾರೆ. ಅಲೆಮಾರಿಗಳಾದ ಇವರು ಒಂದು ಪ್ರದೇಶದಲ್ಲಿ ನೆಲೆ ನಿಲ್ಲದೆ ವಿವಿಧ ಪ್ರದೇಶಗಳಿಗೆ ಸಂಚರಿಸುತ್ತಾರೆ. ಇದರಿಂದ ಆಯಾ ಪ್ರದೇಶಗಳಿಗೆ ತಕ್ಕಂತೆ ಅವರ ಉಡುಗೆ ತೊಡುಗೆಗಳಲ್ಲಿ ಭಿನ್ನತೆಯನ್ನು ಕಾಣಬಹುದು. ಜೊತೆಗೆ ಹೆಣ್ಣುಮಕ್ಕಳು ತಮ್ಮ ಆಭರಣಗಳಾಗಿ ರೋಲ್ಡಗೊಲ್ಡ ಚೈನಗಳು ಸೀಮೆ ಬೆಳ್ಳಿಯಿಂದ ಮಾಡಿದ ಇತರೆ ವಸ್ತುಗಳನ್ನು ಧರಿಸುತ್ತಾರೆ. ಇದರಿಂದ ಇತರ ಸಮುದಾಯಗಳಿಗಿಂತ ಬೈಲಪತ್ತಾರರು ಭಿನ್ನತೆಯಿಂದ ಇರುವುದು ಕಂಡುಬರುತ್ತದೆ.

ವಸತಿ ವ್ಯವಸ್ಥೆ

ಬೈಲಪತ್ತಾರ ಸಮುದಾಯಗಳು ಅಲೆಮಾರಿಗಳಾಗಿದ್ದು, ತಾವು ಸಂಚರಿಸುವ ಪ್ರದೇಶಗಳಲ್ಲಿ ತಾತ್ಕಾಲಿಕ ವಾಗಿ ನೆಲೆ ನಿಲ್ಲಲು ಗುಡಾರಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಆ ಗುಡಾರದ ಮುಂದೆಯೇ ತಮ್ಮ ವೃತ್ತಿಯನ್ನು ಮಾಡುತ್ತಾರೆ. ಶಹಾಪೂರ ನಗರದಲ್ಲಿ ವಾಸಿಸುವವಂತಹ ಬೈಲಪತ್ತಾರ ಸಮುದಾಯದವರು ಸರ್ಕಾರದಿಂದ ಮನೆಗಳನ್ನು ಪಡೆದುಕೊಂಡು ಸುಮಾರು ೨೦-೩೦ವರ್ಷಗಳಿಂದ ವಾಸಿಸುತ್ತಿದ್ದಾರೆ. ಹಾಗೆ ಕೆಲವೊಂದು ಕುಟುಂಬದವರಿಗೆ ಮನೆಗಳಿಲ್ಲದೆ ಗುಡಾರ-ಗುಡಿಸಲುಗಳನ್ನು ಹಾಕಿಕೊಂಡು ವಾಸಿಸುವುದನ್ನು ಕ್ಷೇತ್ರಕಾರ್ಯ ದಿಂದ ತಿಳಿದುಬಂದಿದೆ.

ಕುಲ ಪಂಚಾಯ್ತಿ

ಬೈಲಪತ್ತಾರ ಸಮುದಾಯದವರು ನ್ಯಾಯ ಪಂಚಾಯಿತಿ ಅಥವಾ ಕುಲ ಪಂಚಾಯ್ತಿಗಳನ್ನು ರಚನೆ ಮಾಡಿಕೊಂಡಿದ್ದು ಆ ನ್ಯಾಯ ಪಂಚಾಯ್ತಿಗೆ "ಬೈಲಪತ್ತಾರ ಒಂತ್ತುಂಗ ಸಬಾ" ಅಥವಾ ಬೈಲಪತ್ತಾರ ಪಂಚಸಭಾ ಎಂದು ಕರೆಯುವರು. ತಮ್ಮ ಕುಲದಲ್ಲಿ ನ್ಯಾಯವನ್ನು ತಿರ್ಮಾನ ಮಾಡಲು ಸಮುದಾಯದ ಹಿರಿಯ ವ್ಯಕ್ತಿಯನ್ನು ಮುಖ್ಯಸ್ಥನಾಗಿ ನೇಮಿಸುವರು. ಜೊತೆಗೆ ಇತರ ನಾಲ್ಕು ಜನಸಮುದಾಯದವರು ಸೇರಿ ಪಂಚರ ಸಭೆ ಮಾಡಿ ಸಮುದಾಯದಲ್ಲಿ ಪ್ರತಿಯೊಂದು ವಾಜ್ಯಗಳು ಹಾಗೂ ಯಾವುದೇ ವ್ಯಕ್ತಿಗಳು ತಪ್ಪು ಮಾಡಿದರೆ ಒಂದು ಮನೆಯಲ್ಲಿ ಅಥವಾ ಗುಡಿ ಇನ್ನಿತರ ಸ್ಥಳಗಳಲ್ಲಿ ಮೂರು ಬೆಡಗಿನವರು ಸೇರಿ ಪಂಚಾಯಿತಿ ಮಾಡುವರು. ತಮ್ಮ ಸಮುದಾಯದಲ್ಲಿ ಯಾವುದೇ ವ್ಯಕ್ತಿಗೆ ಸಮಸ್ಯೆ ಬಂದಾಗ ಇಬ್ಬರು ಮುಖ್ಯಸ್ಥನ ಹತ್ತಿರ ಬಂದು ಹೇಳಬೇಕು. ಇಬ್ಬರ ಹತ್ತಿರ ಹತ್ತು ರೂಪಾಯಿ ತೆಗೆದುಕೊಳ್ಳುವರು. ನ್ಯಾಯ ಬಗೆಹರಿದ ನಂತರ ಎಲ್ಲರು ಸೇರಿ ಸಕ್ಕರೆ ತಿನ್ನುವರು. ಆಗ ಚಹಾ ತರಿಸಿ ಕುಡಿಯುವರು. ಬೈಲಪತ್ತಾರ ಸಮುದಾಯದ ಮುಖ್ಯಸ್ಥನ ಮಾತೇ ಅಂತಿಮ. ಆತನ ಮಾತನ್ನು ಮೀರಿದರೆ ಕುಲದಿಂದಲೆ ಹೊರಹಾಕುವ ಪದ್ಧತಿಯಿದೆ. ಬೈಲಪತ್ತಾರ ಸಮುದಾಯದಲ್ಲಿ ಪುರುಷನೇ ಆಗಲೀ ಸ್ತ್ರೀಯ ಆಗಲೀ ತಪ್ಪು ಮಾಡಿದರೆ ಕುಲದಿಂದ ಹೊರಹಾಕುವ ಹಾಗೂ ದಂಡವನ್ನು ವಿಧಿಸುವ ಪದ್ಧತಿಯಿದೆ. ಇತ್ತಿಚೀನ ದಿನಗಳಲ್ಲಿ ಇಂತಹ ಪದ್ಧತಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ ಎಂದು ಸಮುದಾಯದ ಜನರು ಹೇಳುತ್ತಾರೆ.

೩.೬.೪. ಬೈಲಪತ್ತಾರರ ರಾಜಕೀಯ ಸ್ಥಾನಮಾನ

ಬೈಲಪತ್ತಾರ ಸಮುದಾಯವು ಅಲೆಮಾರಿ ಸಮುದಾಯವಾಗಿರುವುದರಿಂದ ಬಹುದಿನಗಳಿಂದ ತಮ್ಮ ಹೊಟ್ಟೆಪಾಡಿಗಾಗಿಯೇ ಜೀವಿಸಿದವರಾಗಿದ್ದಾರೆ. ಅಲೆಮಾರಿತನದಿಂದ ಶಿಕ್ಷಣ ವಂಚಿತರಾಗಿ ಬಡತನದಿಂದ ಕೂಡಿದ ಅಂದಕಾರದ ಜೀವನ ನಡೆಸುತ್ತಿದ್ದಾರೆ. ಪತ್ತಾರಿಕೆಯ ಕೆಲಸದಿಂದ ಬಂದ ಅಲ್ಪಸ್ವಲ್ಪ ಕಾಳು ಕಡಿಗಳಿಂದ ಹಣದಿಂದ ಜೀವನ ನಡೆಸುತ್ತಾ ಬದುಕಿನ ಬಂಡಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರು ರಾಜಕೀಯ ಅಧಿಕಾರವನ್ನು ಪಡೆಯುವಂತಹ ಶಕ್ತಿವಂತರಾಗಿಲ್ಲ. ಇತ್ತೀಚಿನ ದಿನಗಳಲ್ಲಿ ಕೆಲವೊಂದು ಊರುಗಳಲ್ಲಿ ನೆಲೆನಿಲ್ಲಲು ಪ್ರಯತ್ನಿಸುತ್ತಿರುವ ಇವರು ತೀರಾ ಅಲ್ಪಸಂಖ್ಯಾತರಾಗಿದ್ದಾರೆ. ಯಾವುದೇ ಒಂದು ರಾಜಕೀಯ ಅಧಿಕಾರ ಪಡೆಯಬೇಕಾದರೆ ಅಲ್ಲಿನ ಪ್ರಬಲ ಜಾತಿಯ ಸಮುದಾಯದವರಿಗೆ ಮಾತ್ರ ಸಾಧ್ಯ. ಆದರೆ ಬೈಲಪತ್ತಾರ ಸಮುದಾಯದವರು ಊರಿಗೆ ಬಂದು ಅಥವಾ ಎರಡು ಕುಟುಂಬಗಳು ಮಾತ್ರ ನೆಲೆಸಿರುತ್ತವೆ ಆದ್ದರಿಂದ ಇದು ಅವರಿಗೆ ರಾಜಕಾರಣ ಗಗನ ಕಸುಮವಾಗಿದೆ.

ಬೈಲಪತ್ತಾರ ಸಮುದಾಯದವರು ಕರ್ನಾಟಕದಲ್ಲಿಯೆ ಅಲ್ಪಸಂಖ್ಯಾತರಾಗಿದ್ದು ಆರ್ಥಿಕ ತೊಂದರೆಯನ್ನು ಎದುರಿಸುತ್ತಿದ್ದು ರಾಜಕೀಯ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ. ಪ್ರಮುಖವಾಗಿ ಶಹಾಪೂರ ನಗರದಲ್ಲಿ

ವಾಸಿಸುವಂತಹ ಬೈಲಪತ್ತಾರ ಸಮುದಾಯದವರನ್ನು ನಾನು ಕ್ಷೇತ್ರಕಾರ್ಯದಲ್ಲಿ ಪ್ರಶ್ನಿಸಿದಾಗ ನಮಗೆ ರಾಜಕೀಯವೇ ಗೊತ್ತಿಲ್ಲವೆಂಬ ಉತ್ತರವನ್ನು ನೀಡುತ್ತಾರೆ. ಶಹಾಪೂರದಲ್ಲಿ ಇಲ್ಲಿಯವರಿಗೂ ಒಬ್ಬ ವ್ಯಕ್ತಿಯೂ ರಾಜಕೀಯದಲ್ಲಿ ಕಾಣಿಸಿಕೊಂಡಿಲ್ಲ ಹಾಗೂ ಪ್ರಬಲವಾದ ಜಾತಿಯ ಜನ ಇವರನ್ನು ತುಳಿತಕ್ಕೆ ಒಳಪಡಿಸಿದ್ದಾರೆ. ಇದರಿಂದ ಬೈಲಪತ್ತಾರರು ರಾಜಕೀಯವನ್ನು ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ. ಇವರಿಗೆ ರಾಜಕೀಯದಲ್ಲಿ ಅವಕಾಶ ದೊರೆಯಬೇಕಾದರೆ ಸಂವಿಧಾನದಲ್ಲಿ ತಿದ್ದುಪಡಿ ತಂದು ಮೀಸಲಾತಿಯನ್ನು ಕಲ್ಪಿಸಿದರೆ ಮಾತ್ರ ಇವರು ರಾಜಕೀಯವನ್ನು ಪ್ರವೇಶಿಸಿ ತಮ್ಮ ಸಮುದಾಯದ ಏಳಿಗೆ ಜೊತೆ ಸಮುದಾಯಗಳು ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ೩

೩.೬.೫. ಬೈಲಪತ್ತಾರರ ಧಾರ್ಮಿಕ ಜೀವನ

ಬೈಲಪತ್ತಾರ ಸಮುದಾಯದವರು ಸಾಮಾನ್ಯವಾಗಿ ಎಲ್ಲಾ ಹುಣ್ಣಿಮೆ ಅಮವಾಸ್ಯೆಗಳಲ್ಲಿ ಕೆಲವೊಂದಕ್ಕೆ ಮಹತ್ವ ಕೊಡುವರು. ಇವರು ಪ್ರತಿವರ್ಷ ಮಹಾನವಮಿ ಹಬ್ಬ ಹಾಗೂ ಯುಗಾದಿ ಹಬ್ಬ ಮೊಹರಂ ಹಬ್ಬಗಳನ್ನು ಚಾಚೂ ತಪ್ಪದೆ ಮಾಡುವರು. ಈ ಹಬ್ಬಗಳ ಸಂದರ್ಭಗಳಲ್ಲಿ ಮನೆ, ಗುಡಾರಗಳನ್ನು ಸ್ವಚ್ಛಗೊಳಿಸಿ ನಂತರ ತಮ್ಮ ಕಾವಿ ಬಟ್ಟೆ ಬರೆಗಳನ್ನು ಸೂಚಿಗೊಳಿಸುವರು. ಮಹಾನವಮಿ ಹಬ್ಬಕ್ಕೆ ದುರ್ಗಾದೇವಿಗೆ ಒಂಭತ್ತು ದಿನಗಳವರೆಗೆ ದೀಪವನ್ನು ಹಾಕಿ ಪೂಜಿಸುವರು. ನಂತರ ಹೋಳಿಹುಣ್ಣಿಮೆಯ ದಿನದಂದು ಈ ಸಮುದಾಯದ ಜನ ಯಲ್ಲಮ್ಮ ದೇವಿಗೆ ಹಡಗಿಲನ್ನು ತುಂಬಿಸುವರು. ಹಾಗೂ ಹಿಂದೂ ಮುಸ್ಲಿಂ ಬಾವಕ್ಯತೆಯ ಸಂಕೇತವಾದ ಮೊಹರಂ ಹಬ್ಬವನ್ನು ಆಚರಿಸುವರು. ಸಮುದಾಯದ ಕೆಲವರು ಹರಕೆ ಹೊತ್ತುಕೊಂಡಿದ್ದರೆ ಕುರಿ ಬಲಿಯನ್ನು ಕೊಡುವುದರ ಮೂಲಕ ತಮ್ಮ ಹರಕೆ ತೀರಿಸುವರು ಬಂಧುಬಳಗದವರಿಗೆ ಊಟ ಮಾಡಿಸುವರು.

ಆಚರಣೆಗಳು

ಬೈಲಪತ್ತಾರ ಸಮುದಾಯದವರು ತಮ್ಮ ಶಕ್ತಿದೇವತೆಗಳನ್ನು ಆರಾಧಿಸುವರು. ಪ್ರಮುಖವಾಗಿ ೧. ಕಾಳಮ್ಮ ೨. ಯಲ್ಲಮ್ಮ ೩. ಅಂಭಾ ಭವಾನಿ ದೇವಿಯರನ್ನು ಪ್ರತಿವರ್ಷ ಜಾತ್ರೆಯ ಸಂದರ್ಭದಲ್ಲಿ ಅಲ್ಲಿಗೆ ಹೋಗಿ ತಮ್ಮ ಹರಕೆಗಳನ್ನು ತಿರಿಸುವರು. ಈ ದೇವತೆಗಳ ಜಾತ್ರೆಗಳಲ್ಲಿ ವಿವಿಧ ಕಾರ್ಯಗಳನ್ನು ಮಾಡುವುದರ ಮೂಲಕ ವಿವಿಧ ರೀತಿಯ ಹರಕೆ ಬಲಿ ಜಾವಳ ತೀರಿಸಿ ದೇವತೆಗಳ ಆಶಿರ್ವಾದ ಪಡೆಯುವರು.

ಧಾರ್ಮಿಕ ಕೇಂದ್ರಗಳು

ಬೈಲಪತ್ತಾರ ಸ್ತ್ರೀ ಶಕ್ತಿದೇವತೆಗಳ ಧಾರ್ಮಿಕ ಕೇಂದ್ರಗಳು

ಸ್ತ್ರೀ ಶಕ್ತಿ ದೈವಗಳು	ನೆಲೆಗಳು
೧. ಕಾಳಮ್ಮ	ಸಿರಸಂಗಿ
೨. ಯಲ್ಲಮ್ಮ	ಸವದತ್ತಿ (ಬೆಳಗಾವಿ ಜಿಲ್ಲೆ)
೩. ಅಂಬಾ ಭವಾನಿ	ಸಗರ (ಶಹಾಪುರ ತಾಲೂಕು)
	ತುಳಜಾಪೂರ (ಮಹಾರಾಷ್ಟ್ರ)

ಇದಲ್ಲದೆ ಇನ್ನಿತರ ಸ್ತ್ರೀದೇವತೆಗಳನ್ನು ಸಹ ಬೈಲಪತ್ತಾರರು ಪೂಜಿಸುತ್ತಾರೆ.

ಪುರಾಣ ದೈವಗಳು

೧. ವಡ್ಡಿ ಜಗನ್ನಾಥ (ಪೂರಿಜನ್ನಾಥ)

೨. ನರಸಿಂಹ

೩. ತಿಮ್ಮಪ್ಪ (ತಿರುಪತಿ)

೪. ಆಂಜನೇಯ ಸ್ವಾಮಿ

೫. ದಾವಲಮಲಿಕ

ಬೈಲಪತ್ತಾರ ಸಾಂಸ್ಕೃತಿಕ ವೀರನಾಯಕರು ಮಹತ್ಕಾರ್ಯಗಳನ್ನು ಸಾಧಿಸಿದ ಸಿದ್ಧಿ ಪುರುಷರು ಕಂಡುಬರುವುದಿಲ್ಲ. ಆದರೆ ಬಹುಕಾಲದಿಂದಲೂ ದೈವಜ್ಞ ವಿಶ್ವಜ್ಞಿ ಮತ್ತು ಪೂರಿ ಜಗನ್ನಾಥ ದೇವತೆಗಳನ್ನು ತಮ್ಮ ಸಮುದಾಯದ ಸಾಂಸ್ಕೃತಿಕ ನಾಯಕರೆಂದು ಈ ಸಮುದಾಯದವರು ಪೂಜಿಸುವರು.

೩.೬.೬. ಬೈಲಪತ್ತಾರ ಸಮುದಾಯದ ಸಾಂಸ್ಕೃತಿಕ ಜೀವನ

ಪ್ರತಿಯೊಂದು ಸಂಸ್ಕೃತಿಯು ತನ್ನ ಸಮುದಾಯದ ಅಗತ್ಯಕ್ಕೆ ಅನುಗುಣವಾಗಿ ವಿಕಾಸಗೊಳ್ಳುತ್ತದೆ. ನೈಸರ್ಗಿಕವಾಗಿ ವಿಕಾಸ ಹೇಗೆ ಅನಿವಾರ್ಯವೋ ಸಂಸ್ಕೃತಿಯ ವಿಚಾರವೂ ವಿಕಾಸ ಪ್ರಕ್ರಿಯೆ ನಿರಂತರವಾಗಿ ಸಾಗಿ ಬಂದಿರುತ್ತದೆ. ಸಂಸ್ಕೃತಿ ಯಾವುದೇ ಒಂದು ನಿಸರ್ಗದ ಮಧ್ಯದಲ್ಲಿ ಬದುಕುವ ಮಾನವ ಜೀವಿಯಲ್ಲಿ ಕಂಡುಬರುವುದು ಅಂತೆಯೇ ಬೈಲಪತ್ತಾರ ಸಮುದಾಯವು ಒಂದಾಗಿರುವುದು ಕಾಣಬಹುದು.

ಸಂಸ್ಕಾರಗಳು

ವಿವಾಹ : ಭಾರತೀಯ ಸಮಾಜದಲ್ಲಿ ಅದರಲ್ಲಿಯೂ ಹಿಂದೂ ಸಮಾಜದಲ್ಲಿ ವಿವಾಹವು ಒಂದು ಪವಿತ್ರವಾದ ಬಂಧನವಾಗಿದೆ. ವಿವಾಹವು ಸಮಾಜ ಮತ್ತು ಸಮುದಾಯಗಳಲ್ಲಿ ಅನೈತಿಕತೆಯನ್ನು ತಡೆಗಟ್ಟುವಲ್ಲಿ ವಿವಾಹವು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಬೈಲುಪತ್ತಾರರು ವಿವಾಹಕ್ಕೆ

'ಸಂಗಾ' ಎಂದು ಕರೆಯುವರು. ಇವರು ಪರಸ್ಪರ ವಿರುದ್ಧ ಬೆಡಗುಗಳಲ್ಲಿ ಸಂಬಂಧ ಬೆಳೆಸುವರು. ಈ ಮೊದಲು ಬಾಲ್ಯ ವಿವಾಹ ಪದ್ಧತಿ ರೂಢಿಯಲ್ಲಿದ್ದು, ಇತ್ತೀಚಿನ ದಿನಗಳಲ್ಲಿ ಬಾಲ್ಯವಿವಾಹ ಕಡಿಮೆಯಾಗಿರುವುದು ಕಂಡುಬರುತ್ತವೆ. ಇವರ ಮಾತುಕತೆಯ ಪ್ರಕಾರ ವಿವಾಹ ಹೆಣ್ಣಿನ ಮನೆಯಲ್ಲಾದರೂ ನಡೆಯಬಹುದು. ಇಲ್ಲವೆ ಗಂಡಿನ ಮನೆಯಲ್ಲಾದರು ನಡೆಯಬಹುದು. ಬೈಲಪತ್ತಾರ ಸಮುದಾಯದಲ್ಲಿ ಎರಡೂ ಪ್ರಕಾರದ ಮದುವೆ ಪದ್ಧತಿಗಳು ರೂಢಿಯಲ್ಲಿವೆ.

೧. ಸಂಗಾ (ಮುತ್ತೈದಿ ಮದುವೆ)

೨. ದರಾ (ಉಡಕಿ ಮದುವೆ)

ಜನನ : ಬೈಲಪತ್ತಾರ ಸಮುದಾಯದಲ್ಲಿ ಮಗುವಿನ ಜನನದ ಸಂದರ್ಭದಲ್ಲಿ ಅನೇಕ ವಿಧಿ-ವಿಧಾನ ಸಂಪ್ರದಾಯಗಳನ್ನು ಅನುಸರಿಸುತ್ತಾರೆ. ಹೆರಿಗೆಯಾದ ಮೇಲೆ ಹೆಂಗಸರು ತಮ್ಮ ಗುಡಿಸಲಿನ ಒಂದು ಮೂಲೆಯಲ್ಲಿ ಹಾಕಿ. ಬಟ್ಟೆ ಇಲ್ಲವೆ ಕೌದಿಗಳಿಂದ ಕಂಬಳಿಗಳಿಂದ ಬಾಣಂತಿಯರಿಗೆ ಪುತ್ಯೇಕವಾದ ವ್ಯವಸ್ಥೆ ಮಾಡುವರು. ಬಾಣಂತಿಯರಿಗೆ ಸಮುದಾಯದ ಹಿರಿಯ ಹೆಂಗಸರು ಅಥವಾ ನುರಿತ ಸೂಲಗಿತ್ತಿಯರು ಬಾಣಂತಿಗೆ ಉಪಚಾರ ಮಾಡುವರು. ಮಗುವಿನ ಜನನವಾದ ನಂತರ ಹೊಕ್ಕಳ ಹುರಿಕೊಯ್ದು ಮಾಸನ್ನು ಹೊಸ ಮಡಿಕೆಯಲ್ಲಿ ಹಾಕಿ ಮುಚ್ಚುವರು. ನಂತರ ಹೆರಿಗೆಯಾದ ಐದು ದಿನಕ್ಕೆ ಸೈಟಿವಾಯಿ ಎಂಬ ಪೂಜೆಮಾಡುವರು. ಅನ್ನ ಶಾವಿಗೆ ಹಾಕಿ ಪೂಜೆಮಾಡಿ ನಂತರ ಹೂವು, ಕಾಯಿಗಳನ್ನು ನದಿ ಅಥವಾ ಹಳ್ಳಕ್ಕೆ ಬಿಡುವರು.

ನಾಮಕರಣ (ದುಲ್ಲಿ) : ಮಗು ಜನಿಸಿದ ಒಂಭತ್ತು ಇಲ್ಲಿವೆ ಹನ್ನೆರಡನೆ ದಿನಕ್ಕೆ ನಾಮಕರಣ ಮಾಡುವ ಕಾರ್ಯಕ್ರಮ ಮಾಡುವರು. ಅಂದು ಮನೆ ಅಥವಾ ಗುಡಾರಗಳನ್ನು ಸ್ವಚ್ಛಗೊಳಿಸಿ ಸೋದರತ್ತವನ್ನು ಕರೆಸಿ ಮಗುವಿಗೆ ತೊಟ್ಟಲಿಗೆ ಹಾಕಿ ಹೆಸರನ್ನು ಇಡುವರು.

ಜಾವಳ ಕಾರ್ಯಕ್ರಮ : ಬೈಲಪತ್ತಾರ ಸಮುದಾಯದಲ್ಲಿ ಹುಟ್ಟಿದ ಮಗು ಹೆಣ್ಣಾಗಲಿ ಗಂಡಾಗಲಿ ಮೊದಲನೆಯ ಸಲ ಕೂದಲು ಕತ್ತರಿಸುವ ಜಾವಳ ಕಾರ್ಯಕ್ರಮವನ್ನು ಆಚರಿಸುತ್ತಾರೆ. ಇವರು ಜಾವಳಿ ತೆಗೆದುಸುವುದನ್ನು ಪಂಚಾಂಗ ಕೇಳಿ ದಿನಗೋತ್ತು ಮಾಡಿಕೊಂಡ ನಂತರ ಸೋದರ ಮಾವನನ್ನು ಕರೆಸಿ ಅಂದು ಮಗುವಿಗೆ ಹೊಸ ಬಟ್ಟೆಗಳನ್ನು ತೊಡಸಿ ಮಾವನ ಕೈಯಿಂದಲೇ ಕೂದಲನ್ನು ತೆಗೆಸುತ್ತಾರೆ. ನಂತರ ಆತನಿಗೆ ಮತ್ತು ಇತರರಿಗೆ ಸಿಹಿ ಊಟವನ್ನು ಹಾಕುತ್ತಾರೆ. ಹಾಗೂ ದೇವರಿಗೆ ಹರಕೆಯನ್ನು ಹೊತ್ತಿದ್ದರೆ ಜಾವಳವನ್ನು ದೇವರ ಮುಂದೆ ತೆಗೆಸುತ್ತಾರೆ.

ಬಾಂಡ್ರಿಕೋಡಿ (ಮುಂಜಿ ಕಾರ್ಯ) : ಬೈಲಪತ್ತಾರ ಸಮುದಾಯದಲ್ಲಿ ಹೆಣ್ಣುಮಕ್ಕಳನ್ನು ಹೊರತುಪಡಿಸಿ ಗಂಡುಮಕ್ಕಳಿಗೆ ಆರು ವರ್ಷದಿಂದ ಹದಿನಾರು ವರ್ಷಗಳ ಒಳಗಡೆ ಬಾಂಡ್ರಿಕೋಡಿ

ಅಥವಾ ಮುಂಜಿಕಾರ್ಯ ಮಾಡುವ ಪದ್ಧತಿ ರೂಢಿಯಲ್ಲಿದೆ. ಮುಂಜಿಕಾರ್ಯ ಸಂದರ್ಭದಲ್ಲಿ ಮೂರು ಎಳೆಯ ಧಾರವನ್ನು ದೇವತೆಗಳ ಸಂಕೇತವಾಗಿ ಜನಿವಾರವನ್ನು ಹಾಕುವರು ಅಂದು ತಂದೆಯಿಂದ ಮಗನಿಗೆ ಪದ್ಧತಿಗಳನ್ನು ಮಾಡುತ್ತಾರೆ. ನಂತರ ಮನೆಯಲ್ಲಿ ಸಿಹಿಮಾಡಿಸಿ ಎಲ್ಲರು ಊಟಮಾಡುವರು.

ಮಾಟಮುಟ್ಟಿ (ಮರಣ) : ಬೈಲಪತ್ತಾರ ಸಮುದಾಯದಲ್ಲಿ ಯಾವುದೇ ವ್ಯಕ್ತಿ ಸತ್ತರೆ ಶವಸಂಸ್ಕಾರ ಸಂದರ್ಭದಲ್ಲಿ ತಮ್ಮದೆಯಾದಂತಹ ವಿಧಿ-ವಿಧಾನಗಳನ್ನು ಅನುಸರಿಸುವರು. ಇವರಲ್ಲಿ ವಿವಾಹವಾದವರು ಸತ್ತರೆ ಮಾಟ ಮುಟ್ಟಿ ಎಂದು ಕರೆಯುವರು. ವಿವಾಹವಾಗದೆ ಇರುವವರು ಸತ್ತರೆ ಪೂಟಮುಟ್ಟಿ ಎಂದು ಕರೆಯುವರು. ಬೈಲಪತ್ತಾರ ಸಮುದಾಯದಲ್ಲಿ ಶವವನ್ನು ಹೂಳುವ ಪದ್ಧತಿ ರೂಢಿಯಲ್ಲಿದೆ. ಇವರ ಸಮುದಾಯದ ಯಾರಾದರೂ ಸತ್ತರೆ ತಕ್ಷಣ ಇತರರಿಗೆ ಸುದ್ದಿ ಮುಟ್ಟಿಸುವರು. ಅವರಿಗೆ ಒಂಭತ್ತು ರೂಪಾಯಿ ಚಾರ್ಜಕೊಡುವರು. ಈ ಚಾರ್ಜ ತೆಗೆದುಕೊಂಡು ವ್ಯಕ್ತಿಗೆ ಬತ್ತೊಂಗ ಎಂದು ಕರೆಯುವರು. ಶವವನ್ನು ಸ್ಮಶಾನಕ್ಕೆ ಹೊತ್ತುಕೊಂಡು ಹೋಗುವಾಗ ದಾರಿಯುದ್ದಕ್ಕೂ "ರಾಮನಾಮಸತ್ಯಹೈ" ಎಂದು ಎಲ್ಲರು ಹೇಳುವರು.

೩.೭. ಘಿಸಾಡಿ

೩.೭.೧. ಚಾರಿತ್ರಿಕ ಹಿನ್ನೆಲೆ

ಮೂಲತಃ ರಾಜಸ್ಥಾನದ ಚಿತ್ತೋಡಗಡ ಹಾಗೂ ಮೇವಾಡ ಪ್ರದೇಶದವರಾದ ನಾವು ಮೇವಾಡ ಪ್ರಾಂತ್ಯದ ರಜಪೂತ ರಾಜವಂಶದ ಆಡಳಿತಕ್ಕೆ ಒಳಪಟ್ಟಿದ್ದೆವು. ಆಗಿನ ಕಾಲದಲ್ಲಿ ಅಂದರೆ ಕ್ರಿ.ಶ. ೧೧೦೦ರಲ್ಲಿ ರಜಪೂತ ರಾಜವಂಶಸ್ಥರಿಂದ ನಮಗೆ ಸಂಪೂರ್ಣ ರಾಜಾಶ್ರಯವಿದ್ದು ನಾವು ರಜಪೂತ ವಂಶಕ್ಕೆ ಸೇರಿದವ ರಾಗಿದ್ದೆವು ಮತ್ತು ಮುಖ್ಯವಾಗಿ ರಾಣಾಪ್ರತಾಪಸಿಂಹನು ನಮ್ಮ ರಾಜನಾಗಿದ್ದನು. ನಮಗೆ ಸಂಪೂರ್ಣವಾಗಿ ಬೆಂಬಲ ನೀಡುವುದರೊಂದಿಗೆ ರಾಜಾಶ್ರಯವನ್ನು ನೀಡಿದ್ದನು. ನಾವು ಕೂಡಾ ರಾಜ ರಾಣಾಪ್ರತಾಪಸಿಂಹನ ಸೈನ್ಯಕ್ಕೆ ಯುದ್ಧ ಸಾಮಗ್ರಿಗಳನ್ನು ಮಾಡಿಕೊಡುವುದರೊಂದಿಗೆ ಅಲ್ಲಿಯ ಸ್ಥಳೀಯ ರೈತರ ಕೃಷಿ ಸಲಕರಣೆ ಗಳನ್ನು ರಿಪೇರಿ ಮತ್ತು ತಯಾರಿ ಮಾಡಿ ಜೀವನ ನಡೆಸುತ್ತಿದ್ದೆವು. ಆದ್ದರಿಂದ ರಾಣಾ ಪ್ರತಾಪಸಿಂಹನು ನಮಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿ ಕೊಳ್ಳುತ್ತಿದ್ದನು.

ಮುಂದೆ ೧೫೭೬ರಲ್ಲಿ ಮೊಗಲರ ಅರಸನಾದ ಅಕ್ಬರನಿಗೂ ಮತ್ತು ರಾಣಾ ಪ್ರತಾಪಸಿಂಹನಿಗೂ ಅನೇಕ ಬಾರಿ ಯುದ್ಧ ನಡೆದು ಕೊನೆಗೆ ರಾಣಾಪ್ರತಾಪಸಿಂಹನು ಸೋಲನ್ನು ಅನುಭವಿಸಿ ಅಡವಿಯನ್ನು ಸೇರಿದನು. ಆಗ ರಾಜನೊಂದಿಗೆ ನಾವು ಅಡವಿ ಸೇರಿದೆವು. ಕೆಲವು ದಿನಗಳ ನಂತರ ರಾಜನು ಮರಣ ಹೊಂದಿದ. ನಂತರ ಸಂಪೂರ್ಣ ರಾಜಾಶ್ರಯ ತಪ್ಪಿ ಅಲೆಮಾರಿ ಜೀವನ ನಡೆಸಲು ಆರಂಭಿಸಿದೆವು.

ಅಲೆಮಾರಿ ಜೀವನ ನಡೆಸುತ್ತಾ ಮುಂದೆ ಮಹಾರಾಷ್ಟ್ರದ ಶಿವಾಜಿ ಮಹಾರಾಜನ ಸೈನ್ಯದ ಆಡಳಿತದಲ್ಲಿ ಯುದ್ಧ ಸಾಮಗ್ರಿಗಳನ್ನು ತಯಾರು ಮಾಡುವುದು ಮತ್ತು ಕೃಷಿ ಸಲಕರಣೆಗಳನ್ನು ಮಾಡಿ ಜೀವನ ನಡೆಸುತ್ತಿದ್ದರು. ನಂತರ ಕಾಲಘಟ್ಟಗಳು ಉರಿಳಿದಂತೆ ಬ್ರಿಟೀಷರ ರೈಲ್ವೆ ಯೋಜನೆಗಳಿಂದ ದೇಶದ ವಿವಿಧ ಪ್ರದೇಶಗಳಲ್ಲಿ ಸಂಚಾರಿಗಳಾಗಿ ಜೀವನ ನಡೆಸಿಕೊಂಡು ಬಂದವರಾಗಿದ್ದೇವೆ ಎಂದು ಹೇಳುವರು.

ಮೂಲತಃ ರಾಜಸ್ಥಾನದ ಚಿತ್ತೂರ ಘಡ, ಮೇವಾಡ, ಉದಯಪುರ, ಜೋದಪುರ ಪ್ರದೇಶಗಳಲ್ಲಿ ರಜಪೂತ ವಂಶಕ್ಕೆ ಸೇರಿದ ಅನೇಕ ಚಿಕ್ಕಪುಟ್ಟ ಸಾಮ್ರಾಜ್ಯಗಳಿದ್ದು ಅವುಗಳನ್ನು ರಜಪೂತರು ಆಳುತ್ತಿದ್ದರು. ಚಿಕ್ಕಪುಟ್ಟ ರಾಜರಲ್ಲಿ ರಾಣಾಪ್ರತಾಪಸಿಂಹ ಮತ್ತು ರಾಜಾಮಾನಸಿಂಗ ಬಹಳ ಪ್ರಖ್ಯಾತಿಯನ್ನು ಪಡೆದರು. ಆಗ ಮೊಘಲರ ಅರಸನಾದ ಅಕ್ಬರನು ಇವರ ಮೇಲೆ ದಾಳಿ ಮಾಡಲು ದಂಡೆತ್ತಿ ಬರುತ್ತಾನೆ. ಆಗ ರಾಜಾಮಾನಸಿಂಗನು ಅಕ್ಬರನಿಗೆ ಕಪ್ಪಕಾಣಿಕೆಗಳನ್ನು ನೀಡಿ ತನ್ನ ತಂಗಿಯಾದ ಜೋದಾಬಾಯಿಯನ್ನು ಅಕ್ಬರನಿಗೆ ಕೊಟ್ಟು ಮದುವೆ ಮಾಡಿ ಅಕ್ಬರನಿಂದ ಉದಯಪುರ ಪ್ರಾಂತ್ಯದ ಪ್ರದೇಶವನ್ನು ಉಂಬಳಿಯಾಗಿ ಆಡಳಿತ ಮಾಡಲು ಪಡೆಯುತ್ತಾನೆ.

ಇದನ್ನು ರಾಣಾಪ್ರತಾಪಸಿಂಹನು ಘೋರವಾಗಿ ಖಂಡಿಸುತ್ತಾನೆ. ಈ ಸಂದರ್ಭದಲ್ಲಿ ಸುಮಾರು ೫೬ ಚಿಕ್ಕಪುಟ್ಟ ರಾಜ್ಯ ಸಂಸ್ಥಾನಗಳು ಎರಡು ಭಾಗಗಳಾಗುತ್ತವೆ. ಮೊಘಲರ ಪರ ಒಂದು ಗುಂಪಾದರೆ ಇನ್ನೊಂದು ಗುಂಪು ಮೊಘಲರ ವಿರೋಧಿಯಾಗಿ ರಾಣಾಪ್ರತಾಪಸಿಂಹನಿಗೆ ಬೆಂಬಲಿಸುತ್ತದೆ. ಘಿಸಾಡಿ ಸಮುದಾಯದವರು ಪ್ರತಾಪಸಿಂಹನಿಗೆ ಯುದ್ಧದ ಸಲಕರಣೆಗಳನ್ನು ಮಾಡಿ ಕೊಡುತ್ತಾ ಆ ಪ್ರದೇಶದಲ್ಲಿ ಉತ್ತಮ ಜೀವನ ನಿರ್ವಹಿಸುತ್ತಿದ್ದರು.

ಮುಂದೆ ೧೫೭೬ರಲ್ಲಿ ಮೊಘಲ ಅರಸನಾದ ಅಕ್ಬರನಿಗೂ ಮತ್ತು ರಾಣಾಪ್ರತಾಪಸಿಂಹನಿಗೂ ಯುದ್ಧ ನಡೆದು ಕೊನೆಗೆ ಹಲದಿಘಾಟಿ ಯುದ್ಧದಲ್ಲಿ ಅಕ್ಬರನಿಂದ ರಾಣಾಪ್ರತಾಪಸಿಂಹನು ಸೋಲನ್ನು ಅನುಭವಿಸಿ ಅಡವಿಯನ್ನು ಸೇರುತ್ತಾನೆ. ಆಗ ರಾಣಾ ಪ್ರತಾಪಸಿಂಹನ ರಾಜಾಶ್ರಯ ತಪ್ಪಿ ಘಿಸಾಡಿ ಸಮುದಾಯವು ಅಲೆಮಾರಿಗಳಾಗಿ ಹೋಗುತ್ತಾರೆ.

ಯಾವುದೇ ಒಂದು ಸಮುದಾಯವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಬರುವುದಕ್ಕೆ ತನ್ನದೆಯಾದ ಅನೇಕ ಕಾರಣಗಳನ್ನು ಆ ಸಮುದಾಯ ಹೊಂದಿರುತ್ತದೆ. ಇದಕ್ಕೆ ಉದಾಹರಣೆ ಎಂಬಂತೆ ಘಿಸಾಡಿ ಸಮುದಾಯವು ಇಂತಹ ಸಂಕೋಲೆಯಲ್ಲಿ ಸಿಲುಕಿ ಹಾಕಿಕೊಂಡು ಅಲೆಮಾರಿತನಕ್ಕೆ ಕಾರಣವಾಗಿದೆ (ಹಿರೇಮಠ ಎಸ್. ಬಸವರಾಜ, ಸಾಳುಂಕಿ ಅಂಜಲಿ:೨೦೦೮:೧೦-೧೧).

ಹಿಮಾಲಯದ ದಕ್ಷಿಣಕ್ಕೆ ಹಬ್ಬಿರುವ ವಿಶಾಲವಾದ ಪರ್ಯಾಯ ದ್ವೀಪವೇ ಭರತಖಂಡ. ಈ ಪ್ರದೇಶಕ್ಕೆ ಹಿಂದುಸ್ತಾನ. ಇಂಡಿಯಾಗಳೆಂಬ ಹೆಸರುಗಳು ಇವೆ. ಭಾರತೀಯರು ಈ ಪ್ರದೇಶಕ್ಕೆ ಹಿಂದುಸ್ತಾನ

ಭರತಖಂಡ ಎಂದು ಕರೆದರೆ ಬ್ರಿಟೀಷರು ಇಂಡಿಯಾ ಎಂದು ಗುರುತಿಸಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ರಾಜಕೀಯ ಕಾರಣಗಳಿಗಾಗಿ ಇದರ ಗಡಿ ರೇಖೆಗಳು ಏನೇ ಇರಲಿ ಸಾಂಸ್ಕೃತಿಕವಾಗಿ ಪಶ್ಚಿಮದ ಸಿಂಧೂ ನದಿಯ ಬಯಲಿನಿಂದ ಪೂರ್ವದ ಬ್ರಹ್ಮಪುತ್ರದವರೆಗೆ ಉತ್ತರದ ಹಿಮಾಲಯದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೆ ಭರತಖಂಡವು ವಿಸ್ತಾರವಾದ ಹರವು ಪಡೆದಿದೆ(ಹಿರೇಮಠ ಬಸವರಾಜ: ೨೦೦೮:೧).

ಭಾರತ ದೇಶವು ವಿವಿಧ ಬುಡಕಟ್ಟು ಸಮುದಾಯಗಳು ವಾಸಿಸುವ ನಾಡಾಗಿದ್ದು ಕರ್ನಾಟಕವು ಅದರ ಒಂದು ಭಾಗವಾಗಿ ಇಲ್ಲಿ ಹತ್ತು ಹಲವು ಭಾಷೆ, ಜಾತಿ, ಧರ್ಮಪಂಥ ಹಾಗೂ ವೃತ್ತಿಗಳಿಗೆ ಸೇರಿದ ಜನ ಸಮುದಾಯಗಳನ್ನು ತನ್ನ ಒಡಲಿನಲ್ಲಿರಿಸಿಕೊಂಡಿದೆ. ಕರ್ನಾಟಕದಲ್ಲಿ ಸಂವಿಧಾನಾತ್ಮಕವಾಗಿ ಇಂದು ೫೦ ಸಮುದಾಯಗಳಿಗೆ "ಪರಿಶಿಷ್ಟ ಬುಡಕಟ್ಟುಗಳು" ಎಂದು ಪರಿಗಣಿಸಿ ಮಾನ್ಯತೆ ನೀಡಲಾಗಿದೆ. ಆದರೆ ಇನ್ನೂ ಅನೇಕ ಬುಡಕಟ್ಟುಗಳು ನೆಲೆಸಿರುವುದು ಕಂಡುಬರುತ್ತಿದ್ದು ಅವುಗಳನ್ನು ಪರಿಶಿಷ್ಟ ಬುಡಕಟ್ಟು ಪಟ್ಟಿಯಲ್ಲಿ ಸೇರಿಸುವ ಯಾವುದೇ ಪ್ರಯತ್ನಗಳಾಗಿಲ್ಲ. ಅವುಗಳಲ್ಲಿ ಅಡವಿಗೊಲ್ಲ, ಗೋಸಂಗಿ, ಗೋಂದಲಿಗರು, ಹೆಳವರು, ನೆಕ್ಕಲಗಾರರು, ಕಂಜರಭಟ್ಟರು, ಬೈಲಪತ್ತಾರರು ಹೀಗೆ ಹಲವಾರು ಬುಡಕಟ್ಟಿನ ಮತ್ತು ಅಲೆಮಾರಿ ಬುಡಕಟ್ಟಿನ ಜನರು ಕರ್ನಾಟಕದ ವಿವಿಧ ಭೌಗೋಳಿಕ ಪರಿಸರದಲ್ಲಿ ವಾಸವಾಗಿರುವುದು ಕಂಡುಬರುತ್ತದೆ. ಅವುಗಳಲ್ಲಿ ಘಿಸಾಡಿ ಅಲೆಮಾರಿ ಸಮುದಾಯ ಸಹ ಒಂದಾಗಿದೆ.

ಘಿಸಾಡಿ ಸಮುದಾಯವು ಅಲೆಮಾರಿ ಜೀವನ ನಡೆಸುವುದರೊಂದಿಗೆ ತಮ್ಮದೇಯಾದ ಭಾಷೆ ಮತ್ತು ಸಂಸ್ಕೃತಿಯನ್ನು ಹೊಂದಿದ್ದು, ಕಂಬಾರಿಕೆಯು ಇವರ ಪ್ರಮುಖವಾದ ವೃತ್ತಿಯಾಗಿದೆ. ಈ ಸಮುದಾಯದವರು ರೈತರಿಗೆ ಕೃಷಿಗೆ ಉಪಯೋಗವಾಗುವಂತಹ ಪರಿಕರಗಳನ್ನು ಮಾಡಿಕೊಡುತ್ತಾರೆ. ಇವರು ನಗರ ಪ್ರದೇಶದ ಕೊಳಚೆ ಪ್ರದೇಶಗಳನ್ನು ಗುಡಾರಗಳನ್ನು ಹಾಕಿ ಅದರ ಮುಂದೆ ಕಬ್ಬಿಣದ ಕೆಲಸವನ್ನು ಮಾಡಿ ಜೀವನ ನಡೆಸುತ್ತಾ ಬದುಕನ್ನು ನಡೆಸುತ್ತಿದ್ದಾರೆ.

೩.೭.೨. ಘಿಸಾಡಿ ಪದದ ಔಚಿತ್ಯ

ಘಿಸಾಡಿ ಎಂಬ ಪದವು ಜಾತಿ ಅಥವಾ ಒಟ್ಟು ಸಮುದಾಯದ ಹೆಸರನ್ನು ಪ್ರತಿನಿಧಿಸಿದರೆ, ಸಮುದಾಯ ಮತ್ತು ಸಮಾಜ ಎಂಬುದು ಈ ಜನವರ್ಗದ ಒಟ್ಟು ಚೌಕಟ್ಟನ್ನು ಸಂಕೇತಿಸುತ್ತದೆ.

1. 'ಘಿಸಾಡಿ' ಎಂದರೆ ಗಟ್ಟಿ ಮುಟ್ಟಾದ ಕಬ್ಬಿಣದ ಕೆಲಸ ಮಾಡುವ ಒಂದು ಕೆಳಜಾತಿ. ಈ ಸಮುದಾಯವು ಒಂದು ಊರಿನಲ್ಲಿ ನೆಲೆನಿಂತುಕೊಳ್ಳುವುದಿಲ್ಲ. ಈ ಜಾತಿ ಮನುಷ್ಯನಿಗೆ ಲೋಹಾರಿ ಎಂದು ಕೂಡಾ ಕರೆಯುತ್ತಾರೆ.

೨. 'ಘಿಸಾಡಿ' ಎಂದರೆ ಕಬ್ಬಿಣದ ಕೆಲಸ ಮಾಡುವಾಗ ಕೆಂಪಗೆ ಕಾಯಿಸಿ ಕಬ್ಬಿಣ ತಣ್ಣಗೆ ಆಗುವುದರಂತ ಮೊದಲೇ ಘನದಿಂದ 'ಘಿಸ್ ಘಿಸ್' ಎಂಬ ಶಬ್ದದೊಂದಿಗೆ ಲಘುವಾಗಿ ವೇಗದಿಂದ ಸತತವಾಗಿ

ಬಡಿಯುತ್ತಿರುತ್ತಾನೆ. ಈ 'ಘಿಸ್ ಘಿಸ್' ಎಂಬ ಶಬ್ದ ಮತ್ತು ಅತಿಯಾದ ವೇಗದಿಂದಗಿಯೇ 'ಘಿಸಾಡಿ' ಎಂಬ ಶಬ್ದದ ಪರಿಕಲ್ಪನೆ ಬಂದಿರಬಹುದು.

೩. 'ಘಿಸಾಡಿ' ಎಂಬುದು 'ಘರ್ಷಣೆ' ಎಂಬ ಧಾತುವಿನಿಂದ ಉತ್ಪತ್ತಿಯಾಗಿದೆ. ಈ ಜನರು ಮಹಾರಾಷ್ಟ್ರ ಮತ್ತು ಕರ್ನಾಟಕ, ಆಂಧ್ರ ಪ್ರದೇಶದಲ್ಲಿ ಕಂಡುಬರುತ್ತಾರೆ.

೩.೭.೩. ಘಿಸಾಡಿ ಸಮುದಾಯದ ಸಾಮಾಜಿಕ ಜೀವನ

ಮಾನವ ಮೂಲತಃ ಸಮಾಜ ಜೀವಿ. ಅವನು ಸಮಾಜದಿಂದ ದೂರವಾಗಿ ಬದುಕಲು ಇಚ್ಛಿಸುವುದಿಲ್ಲ. ಮಾನವರು ಯಾವಾಗಲೂ ಸಮುದಾಯಿಕವಾಗಿ ಸಾಂಘಿಕವಾಗಿ ಸಮಾಜದಲ್ಲಿ ಜೀವಿಸುತ್ತಾರೆ. ಪ್ರತಿಯೊಬ್ಬ ಮಾನವ ತನ್ನ ಬೇಡಿಕೆಗಳನ್ನು ಸಮಾಜದ ಚೌಕಟ್ಟಿನಲ್ಲಿಯೇ ಪೂರೈಸಿಕೊಳ್ಳುವ ಮತ್ತು ತಿಳುವಳಿಕೆ ಹೇಳುವ ಶಕ್ತಿ ಆತನಿಗಿದೆ. ಮಾತನಾಡುವ ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ಶಕ್ತಿಯಿದೆ. ಮಾನವನಿಗೆ ಅನೇಕ ಸಂದರ್ಭಗಳಲ್ಲಿ ಸಂತೋಷ ಪಡುವ ಮತ್ತು ದುಃಖಪಡುವ ಶಕ್ತಿಯನ್ನು ರೂಪಿಸಿಕೊಂಡಿದ್ದಾನೆ. ಇಂತಹ ಆಲೋಚನಾಶಕ್ತಿ ಪ್ರಾಣಿಗಳಿಗಿಂತ ಮಾನವನಲ್ಲಿ ಹೆಚ್ಚಾಗಿರುವುದರಿಂದ ಮಾನವ ಸಮಾಜದಲ್ಲಿ ಶ್ರೇಷ್ಠ ಜೀವಿ ಎನಿಸಿಕೊಳ್ಳಲು ಸಾಧ್ಯವಾಗಿದೆ.

ಸಮಾಜ ಎಂಬ ಪದವು ಸೊಸೈಟಿ (Socity) ಎಂಬ ಇಂಗ್ಲೀಷ್ ಪದದ ಅನುವಾದವಾಗಿದೆ. 'ಸೊಸೈಟಿ' ಎಂಬ ಪದವು ಸೋಷಿಯಸ್ (Socious) ಎಂಬ ಲ್ಯಾಟಿನ್ ಭಾಷೆ ಪದದಿಂದ ಅವಿರ್ಭವಿಸಿದೆ. 'ಶೋಶಿಯಸ್' ಎಂದರೆ ಒಡನಾಡಿ ತನ (CompanionShip) ಅಥವಾ ಗೆಳೆತನ ಒಡನಾಡಿಗಳಿಂದ ಕುಡಿರುವುದೇ ಸಮಾಜ.

ಘಿಸಾಡಿ ಸಮುದಾಯವು ತಮ್ಮದೆಯಾದಂತಹ ಸಾಮಾಜಿಕ ಸಮುದಾಯಿಕ ಜೀವನ ಸಾಗಿಸುತ್ತಾ ಅಲೆಮಾರಿ ಜೀವನ ನಡೆಸುವುದರೊಂದಿಗೆ ತಮ್ಮ ಸಂಸ್ಕೃತಿ, ಆಚಾರ-ವಿಚಾರ-ನಡೆ-ನುಡಿ-ನೈತಿಕ-ನಿಮಯಗಳು, ಸಂಪ್ರದಾಯಗಳನ್ನು ಉಳಿಸಿಕೊಂಡು ತಮ್ಮ ಘಿಸಾಡಿ ವೃತ್ತಿಯಿಂದ ಸಮಾಜದಲ್ಲಿ ಇತರ ಅಲೆಮಾರಿ ಸಮುದಾಯಗಳಂತೆ ಜೀವನ ನಡೆಸುತ್ತಿರುವುದು ಕಂಡುಬರುತ್ತದೆ.

ಕುಟುಂಬ ರಚನೆ

ಸಮಾಜದಲ್ಲಿ ಗಂಡು ಹೆಣ್ಣಿನ ಲೈಂಗಿಕ ಬಯಕೆ ನಿಯಂತ್ರಿಸಲು ಮತ್ತು ಸಮಾಜದ ಚೌಕಟ್ಟಿನಲ್ಲಿ ಅದನ್ನು ಇಡೇರಿಸಿಕೊಳ್ಳಲು ಅವರಿಗೆ ಅನುಮತಿ ಕೊಡುವ ಸಾಮಾಜಿಕ ಹಿನ್ನೆಲೆಗಳಿಂದ ಕೂಡಿದ ಒಪ್ಪಂದವೇ ವಿವಾಹ. ವಿವಾಹದ ನಂತರ ಜನ್ಮತಾಳುವುದೇ ಕುಟುಂಬ. ಒಂದು ಕುಟುಂಬದ ಸಂಸ್ಕೃತಿಯು ಇನ್ನೊಂದು ಕುಟುಂಬದ ಜೊತೆಗೆ ಹೋಲಿಸಿದರೆ ಭಿನ್ನವಾಗಿ ಕಾಣುತ್ತವೆ. ಕುಟುಂಬ ವ್ಯವಸ್ಥೆಯಲ್ಲಿ 'ವಿಭಕ್ತ' ಕುಟುಂಬ ಮತ್ತು ಅವಿಭಕ್ತ ಕುಟುಂಬ ಎಂದು ಎರಡು ಪ್ರಕಾರಗಳಲ್ಲಿ ನೋಡುತ್ತೇವೆ. ಘಿಸಾಡಿ ಸಮುದಾಯವು

ಕೂಡ ಹೆಚ್ಚಾಗಿ ವಿಭಕ್ತ ಕುಟುಂಬದಿಂದ ಕೂಡಿದೆ. ಕುಟುಂಬದ ಜವಬ್ದಾರಿ ಎಲ್ಲವೂ ಯಜಮಾನ ನಿರ್ವಹಿಸುತ್ತಾನೆ. ಕುಟುಂಬದ ಎಲ್ಲಾ ಸದಸ್ಯರು ಕಂಬಾರಿಕೆ ಕೆಲಸವನ್ನು ಮಾಡುತ್ತಾರೆ. ಬಂದ ಹಣವನ್ನು ಯಜಮಾನ ಕೈಯಲ್ಲಿ ಕೊಡುತ್ತಾರೆ. ಇವರು ಶ್ರಮ ಜೀವಿಗಳಾಗಿದ್ದು ನಿರಂತರವಾಗಿ ದುಡಿಯುವ ಜನರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕೈಗಾರಿಕೆಗಳ ಪ್ರಭಾವದಿಂದ ಇವರ ವೃತ್ತಿಯ ಮೇಲೆ ಪ್ರಭಾವಬೀರಿ ಕೆಲಸಗಳು ಕಡಿಮೆಯಾಗಿವೆ. ಇದರಿಂದ ವಲಸೆಯನ್ನು ಅವಲಂಬಿಸಿ ವಿಭಕ್ತೆ ಕುಟುಂಬಗಳಾಗುತ್ತವೆ. ಇವರಲ್ಲಿ ವೃತ್ತಿಸಂಬಂಧಿಸಿದ ಸಲಹೆಗಳು ಗಂಡನಿಗೆ ಸೇರುತ್ತವೆ. ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡುವ ಹಾಗೂ ಸೊಸೆಯನ್ನು ಕರೆತರುವ ಸಂಪ್ರದಾಯ ಇವರಲ್ಲಿದೆ.

ಬಳಿ, ಬೆಡಗು

ಸಮಾಜದ ವ್ಯವಸ್ಥೆಯಲ್ಲಿ ಮುಂದುವರೆದ ಸುಸಂಸ್ಕೃತರಾದ ಜನರು ಬೆಡಗುಗಳಿಗೆ ಗೋತ್ರಗಳೆಂದು ಕರೆದರೆ ಅಲೆಮಾರಿ ಜನರು ಬಳಿ ಅಥವಾ ಬೆಡಗುಗಳೆಂದು ಕರೆಯುವುದನ್ನು ಕಾಣಬಹುದು. ಅಲೆಮಾರಿ ಸಮುದಾಯಗಳು ಬಳಿಯನ್ನು ಬಳ್ಳಿ, ಎಂದು ಕರೆಯುವುದು ಕಂಡುಬರುತ್ತದೆ. ಇವರು ಪಶು, ಪಕ್ಷಿ, ಪ್ರಾಣಿ, ಗಿಡ, ಬಳ್ಳಿ, ಸೂರ್ಯ, ಚಂದ್ರರಲ್ಲದೆ. ಪ್ರಕೃತಿಯ ವಿವಿಧ ವಸ್ತುಗಳಿಂದ ಗುರುತಿಸಿಕೊಳ್ಳುವುದು ಕಂಡುಬರುತ್ತದೆ. 'ಘಿಸಾಡಿ' ಸಮುದಾಯದವರು ರಾಜಸ್ಥಾನ ಮೇವಾಡದ ಸಾಳುಂಕೆ, ಚವ್ಹಾಣ, ಪವಾರರ ವಂಶದವರೆಂದು ಹೇಳಿಕೊಳ್ಳುತ್ತಾರೆ. ೧. ಸರ್ವೇಸಿ ೨. ಸೋಳುಂಕಿ, ೩.ಚವ್ಹಾಣ, ೪. ಪವಾರ, ೫. ಪಡವಲಕರ್, ೬. ದುಬೆಜಿ ಇವು ಶಹಾಪುರದಲ್ಲಿ ನೆಲೆಸಿರುವ ಘಿಸಾಡಿ ಸಮುದಾಯದಲ್ಲಿ ಕಂಡುಬರುತ್ತವೆ.

ಆಹಾರ ಪದ್ಧತಿ

ಸಮಾಜದಲ್ಲಿ ಬದುಕಿರುವ ಪ್ರತಿಯೊಂದು ಜೀವಿಗೆ ಆಹಾರ ಅಗತ್ಯವಾಗಿ ಬೇಕು. ಆದಿಕಾಲದಿಂದಲೂ ಮಾನವ ತನ್ನ ಹೊಟ್ಟೆಪಾಡಿಗಾಗಿ ಆಹಾರ ಅನ್ವೇಷಣೆ ಕೂಡ ತಮ್ಮದೆಯಾದ ಆಹಾರ ಪದ್ಧತಿಯನ್ನು ಹೊಂದಿದ್ದಾರೆ. ಈ ಜನರು ಸಸ್ಯಹಾರಿಗಳು ಮತ್ತು ಮಾಸಹಾರಿಗಳು, ಮೀನು, ಕುರಿ, ಕೋಳಿ, ಮೊಲವಡಿ, ಕೌಜುಗ, ಆಮೆ, ಪಾರಿವಾಳ ಇತರ ಪ್ರಾಣಿಗಳ ಮಾಂಸ ತಿನ್ನುತ್ತಾರೆ. ದಿನನಿತ್ಯದ ಆಹಾರವಾಗಿ ರೊಟ್ಟಿ, ಬ್ಯಾಳಿ, ಕಾಯಿಪಲ್ಲೆ, ಕಾಳುಕಡಿಗಳನ್ನು ಊಟ ಮಾಡುತ್ತಾರೆ. ತಾವು ವಾಸಿಸುವ ಗುಡಾರ ಮುಂದೆ ಒಲೆಹೂಡಿ ಅಡಿಗೆ ಮಾಡಿಕೊಳ್ಳುತ್ತಾರೆ. ಹಬ್ಬ-ಹರಿದಿನಗಳಲ್ಲಿ ಹೋಳಿಗೆ, ಹುಗ್ಗಿ ಸಜ್ಜಕ ಚಕ್ಕೊಲಿ ಕಡಬು ಹಪ್ಪಳ ಮಾಡುತ್ತಾರೆ. ಹಬ್ಬದ ನಂತರ ದಿವಸ ಕರಿಮಾಡುತ್ತಾರೆ. ಬಿಗರು ಅಥವಾ ಸಂಬಂಧಿಕರು ಬಂದಾಗ ಕುರಿ, ಕೋಳಿಯ ಮಾಂಸ ತಂದು ಹೆಂಡ ಇಲ್ಲವೆ ಸಾರಾಯಿ ತಂದು ಎಲ್ಲರು ಸೇರಿ ಕುಡಿದು ಊಟಮಾಡುತ್ತಾರೆ. ಶ್ರಮಜೀವಿಗಳಾದ ಇವರು ತಮ್ಮ ದಣಿವನ್ನು ನಿವಾರಿಸಿಕೊಳ್ಳಲು ಗಂಡು ಹೆಣ್ಣು ಇಬ್ಬರು ಸಾರಾಯಿ ಕುಡಿಯುತ್ತಾರೆ.

ವಸತಿ ವ್ಯವಸ್ಥೆ

ಘಿಸಾಡಿ ಸಮುದಾಯವು ಮೂಲತಃ ಅಲೆಮಾರಿಯಾಗಿರುವುದರಿಂದ ತಮ್ಮ ಕೆಲಸ ಎಲ್ಲಿ ನಡೆಯುವುದೋ ಅಂಥಲ್ಲಿ ತಾತ್ಕಾಲಿಕವಾಗಿ ಗುಡಾರಗಳನ್ನು ನಿರ್ಮಿಸಿಕೊಂಡು ಕೆಲಸ ಮಾಡುತ್ತಾರೆ. ಅದರಲ್ಲೆ ತಮ್ಮ ಎಲ್ಲಾ ವಸ್ತುಗಳನ್ನು ಇಡುತ್ತಾರೆ. ಶಹಾಪೂರ ನಗರದ ಪುರಸಭೆ ಹಿಂದುಗಡೆ ಜಾಗದಲ್ಲಿ ೧೦-೧೨ ಕುಟುಂಬಗಳು ವಾಸವಾಗಿದ್ದು ಇನ್ನು ಗುಡಾರ ಮಾದರಿಯಲ್ಲೆ ಜೀವನ ನಡೆಸುತ್ತಿದ್ದಾರೆ. ಸರ್ಕಾರದ ವತಿಯಿಂದ ಯಾವುದೇ ನಿವೇಶನ ಮನೆಗಳು ಇವರಿಗೆ ದೊರೆತ್ತಿಲ್ಲವಾದ್ದರಿಂದ ಗುಡಾರಗಳಲ್ಲೆ ವಾಸಮಾಡುತ್ತಿದ್ದಾರೆ.

ಉಡುಗೆ-ತೊಡುಗೆ

ಘಿಸಾಡಿ ಸಮುದಾಯದವರು ಸಮಾಜದಲ್ಲಿ ಕೆಳಸ್ತರದ ಜೀವನ ನಡೆಸುತ್ತಿದ್ದು ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಕುಲುಮೆ ಮುಂದೆ ಕುಳಿತು ಕೆಲಸ ಮಾಡುವುದಿರಂದ ಅವರ ಬಟ್ಟೆಗಳು ಯಾವಾಗಲೂ ತೂತು ಬಿದ್ದಿರುತ್ತವೆ. ಹಬ್ಬ-ಹರಿದಿನಗಳಲ್ಲಿ ಮಾತ್ರ ಹೊಸಬಟ್ಟೆ ತೊಡುತ್ತಾರೆ. ಹೆಂಗಸರು ಸೀರೆ, ಕುಪ್ಪಸ, ನಡು ಡಾಬು ಹಾಕಿಕೊಳ್ಳುತ್ತಾರೆ. ಮೂಗಿಗೆ ಮೂಗುತಿ, ಕೈಗೆ ಬಳೆ ಹಾಕಿಕೊಳ್ಳುತ್ತಾರೆ. ಈ ಸಮುದಾಯದ ಹೆಂಗಸರು ಕಚ್ಚೆಹಾಕಿ ಸೀರೆ ಉಡುತ್ತಾರೆ. ಯುವತಿಯರು ಲಂಗ, ದಾವಣಿ, ಕೆಲವರು ರಾಜಸ್ಥಾನಿ ಬಟ್ಟೆ ಹಾಕಿಕೊಳ್ಳುತ್ತಾರೆ. ಗಂಡಸರು ಪ್ಯಾಂಟು ಶರ್ಟ್‌ಗಳನ್ನು ತೊಡುತ್ತಾರೆ. ಚಿಕ್ಕ ಮಕ್ಕಳು ಅಂಗಿ ಚಡ್ಡಿಹಾಕುತ್ತಾರೆ. ಕೆಲವೊಂದು ಮಕ್ಕಳು ಬರಿ ಮೈಯಲ್ಲಿ ಇರುವುದು ಕಂಡುಬರುತ್ತದೆ.

ಕುಲ ಪಂಚಾಯ್ತಿ

ಕುಲ ಪಂಚಾಯ್ತಿಗಳು ಆದಿಕಾಲದಿಂದಲೂ ಬೆಳೆದುಕೊಂಡು ಬಂದಂತಹ ಪದ್ಧತಿಯಾಗಿದೆ. ಘಿಸಾಡಿ ಸಮುದಾಯದಲ್ಲಿಯು ಕುಲ ಪಂಚಾಯ್ತಿ ಕಂಡುಬರುತ್ತದೆ. ಇವರಲ್ಲಿ ನ್ಯಾಯಗಳನ್ನು ಬಗೆಹರಿಸಲು ಕುಲದ ಒಬ್ಬ ಬುದ್ಧಿವಂತ ವ್ಯಕ್ತಿಯನ್ನು ಮುಖ್ಯಸ್ಥನಾಗಿ ನೇಮಕ ಮಾಡುತ್ತಾರೆ. ಈತನಿಗೆ 'ಪುಡಾರಿ' ಎಂದು ಕರೆಯುತ್ತಾರೆ. ಕುಲದಲ್ಲಿ ಈತನ ಮಾತೆ ಅಂತಿಮವಾಗಿರುತ್ತದೆ. ಈತನ ಮಾತನ್ನು ಸಮುದಾಯದ ಎಲ್ಲಾ ಜನರು ಕೇಳಲೇ ಬೇಕಾಗಿರುತ್ತದೆ. ಇವರ ಜಗಳ ಇನ್ನಿತರ ಸಮಸ್ಯೆಗಳನ್ನು ಬೇರೆ ಜನರಿಗೆ ತಿಳಿಯಬಾರದೆಂದು ಪ್ರಶಾಂತವಾದ ಸ್ಥಳದಲ್ಲಿ ಕುಳಿತು ನ್ಯಾಯ ಮಾಡುತ್ತಾರೆ. ಈ ಸಮುದಾಯದಲ್ಲಿ ತಪ್ಪು ಮಾಡಿದ ವ್ಯಕ್ತಿಗೆ ದಂಡ ಹಾಕುವುದು ಮತ್ತು ಸಮುದಾಯದಿಂದ ಬಹಿಷ್ಕಾರ ಹಾಕುವ ಪದ್ಧತಿಯಿದೆ. ಪಂಚಾಯ್ತಿಯಲ್ಲಿ ಮೂರು ಬೆಡಗಿನ ವ್ಯಕ್ತಿಗಳನ್ನು ಕರೆಸುತ್ತಾರೆ. ಗುಂಪಾಗಿ ಕುಳಿತು ನ್ಯಾಯವನ್ನು ಮಾಡುತ್ತಾರೆ. ಇದರಲ್ಲಿ ಇತರ ಸಮುದಾಯದವರಿಗೆ ಅವಕಾಶವಿಲ್ಲ. ತಪ್ಪು ಮಾಡಿದ ವ್ಯಕ್ತಿಯಿಂದ ಠೇವಣಿ ರೂಪದಲ್ಲಿ ಹಣವನ್ನು ತೆಗೆದುಕೊಳ್ಳುತ್ತಾರೆ. ನ್ಯಾಯ ಮುಗಿದ ನಂತರ ಅವರಿಗೆ ಆ ಹಣ ಹಿಂದಿರುಗಿಸುತ್ತಾರೆ. ಈ ಸಮುದಾಯದಲ್ಲಿ ವ್ಯಭಿಚಾರ, ಬೇರೆ ಸಮುದಾಯದವರ ಜೊತೆ ಹೆಣ್ಣು ಓಡಿಹೋಗಿದ್ದರೆ, ಕಳ್ಳತನ, ಅನೈತಿಕ ಸಂಬಂಧವನ್ನು ಹೊಂದಿದ್ದರೆ, ಕುಲದಿಂದ ಬಹಿಷ್ಕಾರ ಹಾಕುವ

ಪದ್ಧತಿ ಇದೆ. ಇಲ್ಲವೆ ದಂಡ ವಿಧಿಸುವದು ದಂಡ ಕಟ್ಟಲಾಗದಿದ್ದರೆ ಅವರ ಮನೆಯ ಕಾರ್ಯಗಳು ನಡೆದಾಗ ಯಾರೂ ಅವರ ಮನೆಗೆ ಹೋಗುಹಾಗಿಲ್ಲ. ಆದ್ದರಿಂದ ಈ ಸಮುದಾಯದಲ್ಲಿ ನ್ಯಾಯ ಪಂಚಾಯ್ತಿಗಳು ಬಹಳ ಕಟ್ಟುನಿಟ್ಟಾಗಿ ಇರುವುದು ಕಂಡು ಬರುತ್ತದೆ.

೩.೭.೪. ಘಿಸಾಡಿ ಸಮುದಾಯದ ರಾಜಕೀಯ ಸ್ಥಾನಮಾನ

ರಾಜ್ಯದಲ್ಲಿ ಪ್ರತಿಯಂದು ಸಮುದಯಾದವರು ತಮ್ಮ ಸಮುದಾಯದ ರೀತಿ- ನೀತಿಗಳು, ಸಂಪ್ರದಾಯ ಗಳನ್ನು ಕಾಪಾಡಿಕೊಂಡು ಬರಲು ತಮ್ಮ ಸಮುದಾಯದಲ್ಲಿಯೇ ಒಬ್ಬ ನಾಯಕನನ್ನು ಗೊತ್ತುಪಡಿಸಿಕೊಂಡು ಆತನ ಆಡಳಿತದ ನಿರ್ದೇಶನದಲ್ಲಿ ಸಮುದಾಯದ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಹಾಗೇ ಪ್ರತಿಯೊಂದು ಗ್ರಾಮ ಇಲ್ಲವೇ ಗುಂಪಿನ ಆಡಳಿತ ನೋಡಿಕೊಳ್ಳಲು ಗ್ರಾಮ ಪಂಚಾಯ್ತಿಗಳನ್ನು ಪುರಾತನ ಕಾಲದಿಂದ ಸ್ಥಾಪಿಸಿಕೊಂಡು ಬಂದಿದ್ದು ಇಡೀ ರಾಜ್ಯದ ಅಥವಾ ಆಯಾ ದೇಶದ ಜನರ ಸ್ವಾತಂತ್ರ್ಯ ಸಮಾನತೆ ಆರ್ಥಿಕ ಸ್ಥಿರತೆಗಳನ್ನು ಕಾಪಾಡಿಕೊಂಡು ಬರಲು ಸರ್ಕಾರ ಕಾನೂನುಗಳೆಂಬ ಚೌಕಟ್ಟುಗಳ ಅಡಿಯಲ್ಲಿ ಇಡೀ ಜನರ ಹಿತಾಸಕ್ತಿಗಳನ್ನು ಕಾಪಾಡುವುದು ಒಳಗೊಂಡಿವೆ. ಇಂತಹ ರಾಜಕೀಯ ಹಿತಾಸಕ್ತಿ ಗಳಿಗೆ ಅಧಿಕಾರ ಎಂದು ಕರೆಯುತ್ತಾರೆ.

ಶಹಾಪೂರ ನರದಲ್ಲಿ ವಾಸವಾಗಿರುವ ಘಿಸಾಡಿ ಅಲೆಮಾರಿ ಸಮುದಾಯವು ತೀರಾ ಅಲ್ಪಸಂಖ್ಯಾತ ರಾಗಿದ್ದು, ಯಾವುದೆ ಸೌಲಭ್ಯಗಳು ದೊರೆಯದೆ ಅದರಿಂದ ವಂಚಿತರಾಗಿದ್ದಾರೆ. ಗುರುತಿಸಿಕೊಳ್ಳಲು ಒಂದು ಗುರುತಿನ ಚೀಟಿಯು ಸಹ ಅವರು ಪಡೆದುಕೊಂಡಿಲ್ಲ. ಇದರಿಂದ ಈ ಸಮುದಾಯವು ಚುನಾವಣೆಯಲ್ಲಿ ಮತದಾನದಿಂದ ವಂಚಿತವಾಗಿದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ನೀವು ಯಾಕೆ ಚುನಾವಣೆಯಲ್ಲಿ ಮತಚಲಾಯಿಸಿಲ್ಲ ಎಂದು ಕೆಳಿದರೆ ನಮಗೆ ಯಾರು ಬಂದು ಕೇಳುವುದಿಲ್ಲವೆಂದು ಉತ್ತರ ನೀಡುತ್ತಾರೆ. ನಾವು ಅಲ್ಪಸಂಖ್ಯಾತ ಜನ ನಮ್ಮನ್ನು ಯಾರು ಕೆಳುತ್ತಾರೆ ಸರ್ ಎಂದು ಉತ್ತರ ನೀಡುತ್ತಾರೆ. ಇವರಿಗೆ ಸ್ಥಳೀಯ ಶಾಸಕರಾಗಲಿ ಇತರ ಪಕ್ಷದ ಕಾರ್ಯಕರ್ತರಾಗಲಿ ಇವರ ಹತ್ತಿರ ಸುಳಿಯುವುದಿಲ್ಲ. ಇವರ ಸಮಸ್ಯೆ ಏನು ಎಂಬುದನ್ನು ಹರಿಯಲು ಒಬ್ಬರು ಆಸಕ್ತಿವಹಿಸುತ್ತಿಲ್ಲ. ಇದರಿಂದ ಇವರು ರಾಜಕೀಯವಾಗಿ ಹಿಂದೆ ಉಳಿದ್ದಿದ್ದಾರೆ. ಘಿಸಾಡಿ ಸಮುದಾಯವು ರಾಜಕೀಯ ಸೌಲಭ್ಯ ಪಡೆದುಕೊಳ್ಳಬೇಕಾದರೆ ತಮ್ಮಲ್ಲೆ ಒಬ್ಬ ವ್ಯಕ್ತಿಯನ್ನು ಯಾವುದಾದರೊಂದು ಸ್ಥಾನಕ್ಕೆ ಕುರಿಸಿದಾಗ ಮಾತ್ರ ಅವರ ಹೇಳಿಗೆಯ ಜೊತೆಗೆ ಸಮುದಾಯದ ಏಳಿಗೆಯು ಸಾಧ್ಯವಾಗುತ್ತದೆ.

೩.೭.೫. ಘಿಸಾಡಿ ಸಮುದಾಯದ ಧಾರ್ಮಿಕ ಜೀವನ

ಭಾರತ ದೇಶವು ಧಾರ್ಮಿಕವಾಗಿ ವೈವಿಧ್ಯತೆಯ ದೇಶವಾಗಿದ್ದು ವಿವಿಧ ಧರ್ಮದ ಜನರು ಇಲ್ಲಿ ವಾಸಿಸುತ್ತಾರೆ. ಅಂತೆಯೆ ಇಲ್ಲಿ ಕಂಡುಬರುವ ಮಠ ಮಂದಿರ, ಧಾರ್ಮಿಕ ಸ್ಥಳಗಳು ಬೇರಾವ ರಾಷ್ಟ್ರಗಳಲ್ಲಿ ಕಂಡುಬರುವುದಿಲ್ಲ. ಇಲ್ಲಿಯ ಜನರು ಇದು ನಮ್ಮ ಮನೆದೇವರು, ಕುಲದೈವ ಎಂದು ಅನೇಕ ವಿಧವಾದ

ಧಾರ್ಮಿಕ ವಿಧಿ-ವಿಧಾನವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಅಂತೆಯೇ ಘಿಸಾಡಿ ಸಮುದಾಯವು ಸಹ ಇವುಗಳಿಂದ ಹೊರತಾಗಿಲ್ಲ. ಇವರು ಪೂಜಿಸುವ ದೇವರುಗಳು ೧. ಅಂಬಾಭವಾನಿ, ೨. ಕಾಳಮ್ಮ, ೩. ಎಲ್ಲಮ್ಮ, ೪. ಭಾಗಮ್ಮಘುತ್ತರನಿ, ೫. ಸೀಮೆ ಮಾರಮ್ಮ ದುರುಗಮ್ಮ, ೬. ಜೊರಿ ಖಂಡೋಬಾ, ೭. ಆಂಜನೇಯ, ೮. ಘಿಸಾಡಿ ಬಾಬಾ ಜೊತೆಗೆ ಇಸ್ಲಾಂ ದೇವರನ್ನು ಪೂಜಿಸುತ್ತಾರೆ.

ಹಬ್ಬಗಳು

ಘಿಸಾಡಿ ಸಮುದಾಯದವರು ಹಬ್ಬಗಳನ್ನು ಬಹಳ ಸೌಹಾರ್ಧದಿಂದ ಆಚರಿಸುತ್ತಾರೆ. ಪ್ರಮುಖವಾಗಿ ಇವರು ಯುಗಾದಿ, ಹಬ್ಬ ಈ ಹಬ್ಬ ಅತ್ಯಂತ ವಿಶೇಷವಾಗಿ ಆಚರಿಸುತ್ತಾ ಸಿಹಿ ಪದಾರ್ಥ ಮಾಡುವುದರ ಜೊತೆಗೆ ಬೆವು ಬೆಲ್ಲವನ್ನು ಮಾಡಿಕುಡಿಯುತ್ತಾರೆ.

ಮಹಾನವಮಿ ಈ ಸಮುದಾಯಕ್ಕೆ ಅತ್ಯಂತ ಮುಖ್ಯವಾದ ಹಬ್ಬ ಶಕ್ತಿದೇವತೆಯುದ ದುರ್ಗಾದೇವಿಯನ್ನು ಇವರು ಅಂಬಾಭವಾನಿಯಾಗಿ ಪೂಜಿಸುತ್ತಾರೆ. ಒಂಬತ್ತು ದಿನಗಳವರೆಗೆ ದೀಪವನ್ನು ಹಾಕುತ್ತಾರೆ. ಒಂಬತ್ತು ದಿನಗಳು ಮುಗಿದ ನಂತರ ನವರಾತ್ರಿ ಹಬ್ಬ ಆಚರಿಸುತ್ತಾರೆ. ಕೊನೆದಿನ ಬನ್ನಿಗಿಡದಿಂದ ಎಲೆಯನ್ನು ತಂದು ಬಂಗಾರ ವಂತೆಳಿ ಹಂಚುತ್ತಾರೆ.

ಆಯುಧ ಪೂಜೆ ನವರಾತ್ರಿಯ ಕೊನೆಯ ದಿನದಂದು ಆಯುಧ ಪೂಜೆ ಮಾಡುತ್ತಾರೆ. ತಾವು ಕಂಬಾರಿಕೆಗೆ ಉಪಯೋಗಿಸುತ್ತಿದ್ದ ಎಲ್ಲಾ ವಸ್ತುಗಳನ್ನು ಮತ್ತು ಶುಚಿಮಾಡಿದ ಕುಲುಮೆ ಮುಂದೆ ಇಟ್ಟು ಅದಕ್ಕೆ ಕುರಿ ಅಥವಾ ಕೋಳಿಯನ್ನು ಬಲಿ ಕೊಡುವುದರ ಮೂಲಕ ಆಚರಿಸುತ್ತಾರೆ. ಈ ಹಬ್ಬಗಳ ಜೊತೆಗೆ ದೀಪಾವಳಿ, ನಾಗರ ಪಂಚಮಿ, ಸಂಕ್ರಾಂತಿ, ಮುಸ್ಲಿಂ ಮತ್ತು ಹಿಂದುಗಳ ಭಾವೈಕ್ಯತೆಯ ಹಬ್ಬವಾದ ಮೋಹರಂ ಕೂಡ ದೇವಿಗೆ ಗೊಂದಳಿಯನ್ನು ಹಾಕಿಸುವ ಸಂಪ್ರಾದಯ ಈ ಸಮುದಾಯದಲ್ಲಿದೆ. ಘಿಸಾಡಿ ಸಮುದಾಯದವರು ಮೂಲತಃ ಅಲೆಮಾರಿಗಳಾಗಿದ್ದರು ತಮ್ಮ ಆಚರಣೆ ಧಾರ್ಮಿಕ ನಂಬಿಕೆಗಳು ಬದಲಾಗದೆ ಇರುವುದನ್ನು ಜೊತೆಗೆ ಅವುಗಳನ್ನು ಮುಂದುವರೆಸಿಕೊಂಡು ಬಂದಿರುವುದು ಕಂಡುಬರುತ್ತದೆ.

೩.೭.೬. ಘಿಸಾಡಿ ಸಮುದಾಯದ ಸಾಂಸ್ಕೃತಿಕ ಜೀವನ

ಸಂಸ್ಕೃತಿ ಎಂಬುದು ಸಮಾಜ ವಿಜ್ಞಾನಗಳ ಪ್ರಮುಖ ಪರಿಕಲ್ಪನೆಗಳಲ್ಲೊಂದು ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರಗಳಲ್ಲಿ ಅದಕ್ಕೆ ಬಹಳ ವಿಸ್ತಾರವಾದಿ ಅರ್ಥವನ್ನು ನೀಡಲಾಗಿದೆ. ಸಮಾಜ ಅಧ್ಯಯನವೆಂದರೆ ಸಂಸ್ಕೃತಿಯ ಅಧ್ಯಯನ ಆಗಿದೆ ಎನ್ನುವ ಏಷ್ಮರಮಟ್ಟಿಗೆ ಅದು ಸಮಾಜ ಶಾಸ್ತ್ರೀಯ ಅಧ್ಯಯನಗಳೊಂದಿಗೆ ಸೇರಿಕೊಂಡಿದೆ. ಸಂಸ್ಕೃತಿಯು ಮಾನವ ಸಮಾಜದ ಉಸಿರು ಅದು ಮಾನವ ಸಮೂಹ ಜೀವನದ ಅಭಿವ್ಯಕ್ತಿ ಸಂಸ್ಕೃತಿ ಮತ್ತು ಸಮಾಜ ಇವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

ಸಂಸ್ಕೃತಿಯು ಬಹು ಅರ್ಥವ್ಯಾಪ್ತಿಯುಳ್ಳ ಪರಿಕಲ್ಪನೆಯಾಗಿದೆ. ಅದು ಮಾನವ ಜೀವನ ವಿಧಾನ

ಪ್ರತೀಕ. ಅದು ನಮ್ಮ ನಡೆತೆಯನ್ನು ನಮ್ಮ ಧಾರ್ಮಿಕ ಮೌಲ್ಯಗಳನ್ನು ಆಚರಣೆ ಆದರ್ಶಗಳನ್ನು ಆರ್ಥಿಕ, ರಾಜಕೀಯ ಅಂಶಗಳಂತಹ ಮೊದಲಾದ ಚಟುವಟಿಕೆಗಳನ್ನು ಒಳಗೊಂಡಿದೆ. ತನ್ನ ವ್ಯಕ್ತಿಗತ ಮತ್ತು ಸಮಾಜಿಕ ಜೀವನದಲ್ಲಿ ಮಾನವನು ಸಂಪಾದಿರಸಿರುವ ಎಲ್ಲ ಅಂಶಗಳನ್ನು ಸಂಸ್ಕೃತಿಯು ಒಳಗೊಂಡಿರುತ್ತದೆ(ಹಿರೇಮಠ ಬಸವರಾಜ್: ೨೦೦೭:೯೯).

ಘಿಸಾಡಿ ಸಮುದಾಯವು ಸಹ ಸಾಂಸ್ಕೃತಿಕವಾದ ಜೀವನ ವಿಧಾನಗಳನ್ನು ಇನ್ನು ಪಾಲಿಸಿಕೊಂಡು ಬರುತ್ತಿರುವುದನ್ನು ಕಾಣಬಹುದು.

ಸಂಸ್ಕಾರಗಳು

ಚೋಳಿಶಾಸ್ತ್ರ ಸೀಮಂತ ಚೊಟ್ಟಲಶಾಸ್ತ್ರ : ಸಾಮಾನ್ಯವಾಗಿ ಪ್ರತಿಯೊಂದು ಅಲೆಮಾರಿ ಬುಡಕಟ್ಟು ಸಮುದಾಯಗಳು ಹೆಣ್ಣು ಮೊದಲ ಭಾರಿ ಗರ್ಭವಾದಾಗ ಮಾಡುವ ಶಾಸ್ತ್ರವಾಗಿದೆ. ಈ ಸಂಪ್ರದಾಯವು ಗಂಡನ ಮನೆಯಲ್ಲಿ ತವರು ಮನೆಯವರು ಬಂದು ಮಾಡುತ್ತಾರೆ. ಗಂಡ-ಹೆಂಡತಿ ಇಬ್ಬರಿಗೂ ಹೊಸ ಬಟ್ಟೆತಂದು ಗರ್ಭವತಿಯಾದ ಸ್ತ್ರೀಗೆ ಹಣ್ಣು-ಕಾಯಿ ಹೂವುಗಳಿಂದ ಉಡಿ ತುಂಬಿ ಹರಸುತ್ತಾರೆ. ನಂತರ ದೇವರಿಗೆ ನಮಸ್ಕರಿಸಿ ಯಾವುದೇ ಆತಂಕಗಳಿಲ್ಲದೆ ಹೆರಿಗೆಯಗಾಲಿ ಎಂದು ಬೇಡಿಕೊಳ್ಳುತ್ತಾರೆ.

ವೈದಾಶಾಸ್ತ್ರ (ಜನನ) : ಬಹುತೇಕ ಅಲೆಮಾರಿ ಸಮುದಾಯದಲ್ಲಿ ಮೊದಲನೆ ಹೆರಿಗೆ ತವರು ಮನೆಯಲ್ಲಿ ಆಗುವ ಸಂಪ್ರದಾಯವಿದೆ ಆದರೆ ಘಿಸಾಡಿ ಸಮುದಾಯದಲ್ಲಿ ಗಂಡನ ಮನೆಯಲ್ಲಿ ಮೊದಲನೆ ಹೆರಿಗೆಯಾಗುವ ಪದ್ಧತಿಯಿದೆ. ಹೆರಿಗೆ ನೋವು ಕಾಣಿಸಿಕೊಂಡಾಗ ಸೂಲಗಿತ್ತಿಯನ್ನು ಕರೆಸಿ ಬಾಣಂತನ ಮಾಡಿಸುತ್ತಾರೆ. ನಂತರ ಮಗುವಿನ ಹೊಕ್ಕಳ ಬಳ್ಳಿಯನ್ನು ಬ್ಲೇಡಿನಿಂದ ಕತ್ತರಿಸುತ್ತಾಳೆ. ಮಾಸನ್ನು ಒಂದು ಗಡಿಗೆಯಲ್ಲಿ ಹಾಕಿ ಒಂದು ಮೂಲೆಯಲ್ಲಿ ಹಾಕಿ ಮುಚ್ಚುತ್ತಾರೆ. ಗುಡಾರದ ಒಂದು ಮೂಲೆಯಲ್ಲಿ ಹೊರಸನ್ನು ಹಾಕಿ ತಾಯಿಮಗು ಮಲಿಗಿಸುತ್ತಾರೆ. ಭೂತಪಿಶಾಚಿಗಳು ಸುಳಿಯದಂತೆ ಹೊರಸಿನ ಕೆಳಗೆ ಕಬ್ಬಿಣ ನಿಂಬೆಕಾಯಿಗಳನ್ನು ಇಡುತ್ತಾರೆ.

ನಾಮಕರಣ : ಘಿಸಾಡಿ ಸಮುದಾಯದಲ್ಲಿ ಮಗುವನ್ನು ತೊಟ್ಟಿಲಿನಲ್ಲಿ ಹಾಕಿ ಹೆಸರಿಡುವ ಶಾಸ್ತ್ರಕ್ಕೆ "ಪಾಳನ್ಶ್ಯೋಶಾಸ್ತ್ರ" ಎಂದು ಕರೆಯುತ್ತಾರೆ. ಮಗುಜನಿಸಿದ ಏಳು ದಿನಕ್ಕೆ ನಾಮಕರಣವನ್ನು ಮಾಡುವ ಕಾರ್ಯಕ್ರಮ ಮಾಡುತ್ತಾರೆ. ಮಗುವಿನ ಸೊದರತ್ತೆ ಬಂದು ಮಗುವಿಗೆ ಹೆಸರನ್ನು ಹಿಡುತ್ತಾಳೆ. ನಂತರ ತಮ್ಮ ಮನೆ ದೇವರಿಗೆ ನಮಸ್ಕರಿಸುತ್ತಾರೆ.

ಜಾವೋಳ (ಜವಳ) : ಘಿಸಾಡಿ ಸಮುದಾಯದಲ್ಲಿ ಜನಿಸಿದ ಮಗು ಹೆಣ್ಣಾಗಲಿ ಗಂಡಾಗಲಿ ಮಕ್ಕಳಿಗೆ ಮೊದಲನೆ ಸಲ ಕೂದಲು ಕತ್ತರಿಸುವುದಕ್ಕೆ ಜವಳ ಪದ್ಧತಿ ಅನುಸರಿಸುವ ಪದ್ಧತಿಯಿದೆ. ಇವರು ಸಾಮಾನ್ಯವಾಗಿ ದೇವರಿಗೆ ಹರಕೆ ಹೊತ್ತಿದ್ದರೆ, ದೇವರ ಪೂಜಾರಿಯಿಂದ ಜಾವಳಿ ತೆಗೆದುಸುತ್ತಾರೆ. ಇಲ್ಲದಿದ್ದರೆ ಸೊದರ ಮಾವನೆ ಜವಳವನ್ನು ತೆಗೆಯುತ್ತಾನೆ. ಕತ್ತರಿಸಿದ ಕೂದಲನ್ನು ತಾಯಿಯ ಉಡಿಯಲ್ಲಿ ಇಡುತ್ತಾರೆ. ನಂತರ

ಒಂದು ಬಿಳಿ ಬಟ್ಟೆಯಲ್ಲಿ ಕಟ್ಟಿ ನದಿಗೆ ಹಾಕುತ್ತಾರೆ. ಕೂದಲು ಕತ್ತರಿಸಿದ ಸೋದರ ಮಾವನಿಗೆ ಹೊಸ ಬಟ್ಟೆ ಮಾಡುತ್ತಾರೆ. ಹಾಗೂ ಸಿಹಿ ಊಟಮಾಡಿಸುತ್ತಾರೆ. ಅನುಕೂಲವಿದ್ದರೆ ಕುಲದವರಿಗೆ ಊಟವನ್ನು ಹಾಕಿಸುತ್ತಾರೆ.

ವೋಟಿ ಬರ್ಸ್ಹೋನು (ಋತುಮತಿ) : ಫಿಸಾಡಿ ಸಮುದಾಯದಲ್ಲಿ ಹೆಣ್ಣು ಮಗಳು ಋತುಮತಿ ಯಾದಳೆಂದರೆ ಆಕೆಯನ್ನು ಒಂದು ಮೂಲೆಯಲ್ಲಿ ಕೂರಿಸಿ ಐದುದಿನಗಳವರೆಗೆ ಸೂತಕವನ್ನು ಆಚರಿಸುತ್ತಾರೆ. ಹುಡಿಗಿಯ ಸೊದರತ್ತೆ ಬಂದು ದಿನವು ಹುಡುಗಿಗೆ ಸ್ನಾನ ಮಾಡಿಸುತ್ತಾಳೆ. ನಂತರ ಒಂಬತ್ತು ಇಲ್ಲವೆ ಅನ್ನೊಂದು ದಿನಗಳವರೆಗೆ ಕುರಿಸಿ ಪದವನ್ನು ಹಾಡುತ್ತಾರೆ. ನಂತರ ಎಬ್ಬಿಸುವ ಕಾರ್ಯಕ್ರಮ ವಿರುತ್ತದೆ. ಈ ಹುಡುಗಿಯನ್ನು ಎಬ್ಬಿಸುವ ದಿವಸ ಹುಡುಗಿಗೆ ಹೊಸ ಬಟ್ಟೆ ಹಾಗೂ ಸೊದರತ್ತೆಗೆ ಹೊಸ ಬಟ್ಟೆ ಹುಡುಗಿಯನ್ನು ಹಾಗೂ ಸಿಹಿ ಊಟವನ್ನು ಎಲ್ಲರಿಗೂ ಹಾಕುವ ಪದ್ಧತಿ ಇವರಲ್ಲಿದೆ.

ಲಗೀನ್ (ವಿವಾಹ) : ಭಾರತೀಯ ಹಿಂದೂ ಸಮಾಜದಲ್ಲಿ ವಿವಾಹವು ಒಂದು ಪವಿತ್ರವಾದ ಬಂಧನವಾಗಿದೆ. ವಿವಾಹವು ಸಮಾಜದಲ್ಲಿ ಮತ್ತು ಸಮುದಾಯಗಳಲ್ಲಿ ನೈತಿಕತೆಗಳನ್ನು ತಡೆಗುಟ್ಟುವಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. 'ವಿವಾಹ' ಎಂಬ ಪದವು ಸಂಸ್ಕೃತ ಭಾಷೆಯ ಶಬ್ದವಾಗಿದೆ. ಇದು 'ವಿ' ಮತ್ತು 'ವಾಹ' ಎಂಬ ಎರಡು ಶಬ್ದಗಳ ಸಂಯೋಗವಾಗಿರುತ್ತದೆ. 'ವಿ' ಹೋಗು 'ವಾಹ' ಹೊತ್ತು ಕೊಂಡುಹೋಗು ಎಂದರ್ಥೈಸಲಾಗುತ್ತದೆ. ಅಂದರೆ ಹೆಣ್ಣಿನ ಮನೆಯಿಂದ ಗಂಡನಾದವನು ವಿವಾಹವಾದ ಮೇಲೆ ತನ್ನ ಮನೆಗೆ ಕರೆದುಕೊಂಡು ಹೋಗುವುದರ ಹಿನ್ನೆಲೆಯನ್ನು ವಿವಾಹ ಎನ್ನಬಹುದು. ಫಿಸಾಡಿಗಳು ವಿವಾಹಕ್ಕೆ ಲಗೀನ್ ಎಂದು ಕರೆಯುತ್ತಾರೆ.

ಫಿಸಾಡಿಗಳು ಮದುವೆಯನ್ನು ಗಂಡಿನ ಮನೆಯಲ್ಲಿ ಮತ್ತು ಹೆಣ್ಣಿನ ಮನೆಗಳಲ್ಲಿ ಎರಡುಕಡೆ ನೇರವೇರುತ್ತವೆ. ವಿವಾಹ ಕಾರ್ಯಕ್ಕೆ ಬಂದುಭಾಂಧವರೆಲ್ಲ ಕಿನ್ನ ಕರೆಸುತ್ತಾರೆ. ತಾಳಿ ಕಾರ್ಯವಾದ ನಂತರ ಎಲ್ಲರಿಗೂ ಊಟ ಹಾಕಿಸುತ್ತಾರೆ. ಈ ಸಮುದಾಯದಲ್ಲಿ ವಿವಾಹ ವಿಚ್ಛೇಧನಕ್ಕೆ ಅವಕಾಶವಿದೆ ಹಾಗೂ ಮರುವಿವಾಹಕ್ಕೂ ಅವಕಾಶವಿದೆ. ಇವರಲ್ಲಿ ಕೆಲವೊಬ್ಬರು ಬಹುಪತ್ನಿತ್ವವನ್ನು ಹೊಂದಿದ್ದಾರೆ. ಅದೇ ರೀತಿ ಇವರ ಸಮುದಾಯದಲ್ಲಿ ಉಡುಕಿ ವಿವಾಹಗಳು ನಡೆಯುತ್ತವೆ. ಮದುವೆಯಲ್ಲಿ ಈ ಸಮುದಾಯದವರು ಕುರಿಯನ್ನು ಕಡೆದು ಬಂದ ಬೀಗರಿಗೆ ಮಾಂಸದ ಊಟ ಹಾಕುತ್ತಾರೆ.

ಶವಸಂಸ್ಕಾರ : ಭೂಮಿ ಮೇಲೆ ಹುಟ್ಟಿದ ಪ್ರತಿಯೊಂದು ಜೀವಿಯು ಒಂದಿಲ್ಲಾ ಒಂದು ಸಮಯದಲ್ಲಿ ಸಾಯಲೆ ಬೇಕು. ಮಾನವ ಇದಕ್ಕೆ ಹೊರತಾಗಿಲ್ಲ ಹುಟ್ಟಿದ ಮಾನವ ಸಾಯಲೇ ಬೇಕು. ದೇಶದ ಪ್ರತಿ ಯೊಂದು ಜಾತಿ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ವ್ಯಕ್ತಿ ಹುಟ್ಟಿದ ಕೂಡಲೆ ಕೆಲವೊಂದು ಆಚರಣೆಗಳು ವಿಧಿವಿಧಾನಗಳು ಅನುಸರಿಸುವಂತೆ ವ್ಯಕ್ತಿಸತ್ತಾಗಲೂ ಕೆಲವು ವಿಧಿ-ವಿಧಾನಗಳನ್ನು ಅನುಸರಿಸುತ್ತಾರೆ.

ಘಿಸಾಡಿ ಸಮುದಾಯದಲ್ಲಿ ಗಂಡಾಗಲಿ ಹೆಣ್ಣಾಗಲಿ ಸತ್ತರೆ ಹೆಣವನ್ನು ಸುಡುವ ಸಂಪ್ರಾದಯವಿದೆ. ಚಿಕ್ಕಮಕ್ಕಳು ಸತ್ತರೆ ಹೂಳುವ ಪದ್ಧತಿಯಿದೆ. ಇವರಲ್ಲಿ ವ್ಯಕ್ತಿ ಸತ್ತರೆ ಸಂಬಂಧಿಕರಿಗೆ ವಿಷಯ ತಿಳಿಸಿ ನಂತರ ಹೆಣಕ್ಕೆ ಸ್ನಾನಮಾಡಿಸಿ ಚಟ್ಟವನ್ನು ತಯಾರಿಸಿ ಹೆಣವನ್ನು ಅದರ ಮೇಲೆ ಮಲಗಿಸಿ ಸ್ಮಶಾನಕ್ಕೆ ಹೋಗುವ ದಾರಿಯುದ್ದಕ್ಕೂ "ರಾಮನಾಮ ಸತ್ಯಹೈ" ಎನ್ನುತ್ತಾ ದಾರಿಯುದ್ಧಕ್ಕೂ ಹೆಳುತ್ತಾ ಹೋಗುತ್ತಾರೆ. ಹೆಣವನ್ನು ಸುಟ್ಟನಂತರ ಮೂರು ದಿನಗಳು ಕಳೆದನಂತರ ವ್ಯಕ್ತಿಯು ಇಷ್ಟಪಡುತ್ತಿದ್ದ ಆಹಾರ, ಇತರ ಪದಾರ್ಥಗಳನ್ನು ಹೆಣವನ್ನು ಸುಟ್ಟ ಜಾಗದಲ್ಲಿ ಇಟ್ಟು ಬರುತ್ತಾರೆ. ಅದನ್ನು ಯಾವುದಾದರು ಪಕ್ಷಿಯಾಗಲಿ ಪ್ರಾಣಿಯಾಗಲಿ ಮುಟ್ಟಿದರೆ ಅವರ ಆತ್ಮಕ್ಕೆ ಶಾಂತಿ ಸಿಕ್ಕು ಇನೊಂದು ಜೀವಿಯಲ್ಲಿ ಜನಿಸುವರೆಂದು ನಂಬಿಕೆ ಈ ಸಮುದಾಯದವರಲ್ಲಿದೆ.

೩.೮. ಹೆಳವರು

೩.೮.೧. ಚಾರಿತ್ರಿಕ ಹಿನ್ನೆಲೆ

ಒಕ್ಕಲಿಗ ತಂದೆ ತಾಯಿಗಳಿಗೆ ಏಳು ಜನ ಗಂಡು ಮಕ್ಕಳಿದ್ದು ಏಳನೆಯವನು ಕಾಲಿಲ್ಲದವನಾಗಿರುವುದ ರಿಂದ ಹೆಳವನೆಂದು ಕರೆಯಲಾಗುತ್ತಿತ್ತು. ಏಳನೆಯವನಿಗೆ ಕಾಲಿಲ್ಲವಾದ್ದರಿಂದ ತಾಯಿ ಅವನ ಬಗ್ಗೆ ಹೆಚ್ಚು ಕಾಳಜಿವಹಿಸುತ್ತಿದ್ದಳು. ಉಳಿದ ಆರು ಜನ ಅಣ್ಣಂದಿರು ಈ ಬಗ್ಗೆ ಅಸೂಯೆ ಪಡುತ್ತಿದ್ದರು. ಎಷ್ಟೋ ಸಲ ಕುಂಟ ತಮ್ಮನನ್ನು ಮುಗಿಸಿ ಬಿಡಬೇಕೆಂದು ಪ್ರಯತ್ನ ಪಟ್ಟಿದ್ದರು. ಆದರೆ ಪ್ರತಿ ಪ್ರಸಂಗದಲ್ಲಿಯೂ ಸಹ ಮನೆಯಲ್ಲಿ ಸಾಕಿದ ಹೋರಿ ಕುಂಟ ಹೆಳವನ ರಕ್ಷಣೆಗೆ ಬಂದು ಅವನನ್ನು ಕಾಪಾಡುತ್ತಿತ್ತು. ದೇವರು ಸಹ ಈ ಕಾಲಿಲ್ಲದ ನಿಸ್ಸಾಹಯಕನಾದ ಹೆಳವನ ಬಗ್ಗೆ ಕನಿಕರಪಟ್ಟು ಕೊನೆಗೊಂದು ತೀರ್ಮಾನ ಮಾಡಿ ಕುಂಟನ ಪಾಲಿಗೆ ಬರುವ ಸ್ವತ್ತನ್ನು ಅವನ ಬಳಿ ಆರು ಜನ ಅಣ್ಣಂದಿರು ತಮ್ಮಲ್ಲೆ ಹಂಚಿಕೊಳ್ಳಬೇಕೆಂದು ನಿಸ್ಸಾಯಕನಾದ ಕುಂಟನಿಗೆ ಎತ್ತನ್ನು ಕೊಡುವುದೆಂದು ತೀರ್ಮಾನಿಸಿದರು. ಹಾಗೂ ಎತ್ತಿನ ಮೇಲೆ ಕುಳಿತು ಕೊಂಡು ತನ್ನ ಕೈಯಲ್ಲಿದ್ದ ಗಂಟೆಯನ್ನು ಬಾರಿಸಿಕೊಂಡು ಮನೆಗೆ ಬಂದಾಗ ಆ ಆರು ಜನ ಅಣ್ಣಂದಿರು ಕುಂಟನ ಉಪಜೀವನಕ್ಕಾಗಿ ಬೇಕಾಗುವ ದವಸಧಾನ್ಯ ಮತ್ತು ಹಣ ಕೊಡಬೇಕೆಂದು ತೀರ್ಮಾನವಾಗುತ್ತದೆ. ಮುಂದೆ ಈ ಕುಂಟನು ವೃತ್ತಿಯಿಂದ ಭಿಕ್ಷುಕ ಹೆಳವನಾದನು. ಆ ಹೆಳವನದೇ ಒಂದು ಜಾತಿಯಾಗಿ ಅವನ ವಂಶಜರು ಹೆಳವ ಜಾತಿಯವರಾದರು.

ಕಾಲಿಲ್ಲದವನಿಗೆ ತೆಲುಗಿನಲ್ಲಿ ಪಿಚ್ಚಗುಂಟಲು ಎಂದು ಕರೆಯುತ್ತಾರೆ. ಪಿಚ್ಚೆ ಕುಂಟಲು ವಂಶದವರು. ಆಂಧ್ರಪ್ರದೇಶದ ಕಾಪು ಮತ್ತು ಇತರೆ ರೆಡ್ಡಿ ಸಮುದಾಯದವರ ವಂಶಾವಳಿಗಳನ್ನು ಬರೆಯುತ್ತಿದ್ದರು. ಅವರ ಮನೆಗಳಿಗೆ ಹೋಗಿ ಭಕ್ತಿಪೂರ್ವಕವಾದ ಹಾಡುಗಳನ್ನು ಹೇಳಿ ಅವರಿಗೆ ದೇವರು ಸಕಲ ಸಂಪತ್ತು ನೀಡಲೆಂದು ಹರಸುತ್ತಿದ್ದರು. ಹೀಗಾಗಿ ಹೆಳವರು ಹೊಗಳು ಭಟ್ಟಂಗಿಗಳೂ ಆದರೂ. ಇದನ್ನೇ ಉಪಜೀವನಕ್ಕೆ ವೃತ್ತಿ ಮಾಡಿಕೊಂಡರು.

ತೆಲುಗಿನಲ್ಲಿ ಪಿಚ್ಚಗುಂಟಲ ಮೂಲ ಪುರುಷ ಹೆಳವನಾಗಿದ್ದನೆಂದು ಹೇಳುವ ಕತೆಗಳಿವೆ.

೧. ತ್ರಿಮೂರ್ತಿಗಳ ವಿವಾಹ ಸಂದರ್ಭದಲ್ಲಿ ಅವರ ಗೋತ್ರಗಳನ್ನು ಹೇಳಬಲ್ಲವನೊಬ್ಬ ಬೇಕಾಗಿತ್ತು. ಆದ್ದರಿಂದ ಅವರು ಒಂದು ಮಣ್ಣಿನಿಂದ ಗೊಂಬೆ ಮಾಡಿ ಅದಕ್ಕೆ ಜೀವಕಳೆ ತುಂಬಿದರು. ಆದರೆ ಆ ಗೊಂಬೆಗೆ ಒಂದು ಕಾಲು ಕುಂಟಾಗಿತ್ತು. ಈ ಕಾರಣ ಅವರ ಸಂತತಿಯವರೆಲ್ಲಾ ಪಿಚ್ಚಗುಂಟಲರಾದರು.

೨. ಇನ್ನೊಂದು ಕಥೆಯ ಪ್ರಕಾರ ಏಳು ಮಂದಿ ಗೊಲ್ಲತಿಯರು ಸಂತಾನಕ್ಕಾಗಿ ಶಿವನನ್ನು ಕುರಿತು ತಪಸ್ಸು ಮಾಡಲಾಗಿ ಶಿವನು ಅವರಿಗೊಬ್ಬ ಕುಂಟ ಬಾಲಕನನ್ನು ಕೊಟ್ಟು ಸಾಕಬೇಕೆಂದು ತಿಳಿಸಿದನು. ಕಾಲಾಂತರ ಆ ಗೊಲ್ಲತಿಯರು ಗರ್ಭಿಣಿಯರಾಗಿ ಏಳು ಮಂದಿ ಹೆಳವ ಹೆಣ್ಣು ಮಕ್ಕಳಿಗೆ ಜನ್ಮನೀಡಿದರು. ಆ ಹುಡುಗಿಯರನ್ನು ಕುಂಟನಿಗೆ ಕೊಟ್ಟು ಮದುವೆ ಮಾಡಿದರು. ಶಿವನು ಕುಂಟನಿಗೆ ಶಂಖ, ಗಂಟೆ, ತ್ರಿಶೂಲ, ಕೊಟ್ಟು ಭಿಕ್ಷೆ ಬೇಡುವಂತೆ ಹೇಳಿದ ಮುಂದೆ ಅವನ ಸಂತಾನವೇ ಪಿಚ್ಚಕುಂಟರಂತೆ (ಹೆಳವರ ಎಂ ಎಸ್: ೨೦೦೮-೪೫).

ಹೆಳವರ ಹುಟ್ಟಿನ ಬಗ್ಗೆ ವಿಶೇಷವಾದ ಜನಪದ ಪ್ರತೀತಿ ಇದೆ. ಹನ್ನೆರಡನೇ ಶತಮಾನದ ಪ್ರಾರಂಭದಲ್ಲಿ ವಿಶ್ವಗುರು ಬಸವಣ್ಣನವರು ತ್ರಿದಾಸೋಹಗಳಲ್ಲಿ ಒಂದಾದ ಕಾಯಕವೇ ಕೈಲಾಸ ಎಂಬ ಮೂಲತತ್ವಗಳನ್ನು ಶರಣರಲ್ಲಿ ಪ್ರಚಾರಪಡಿಸಿದರು. ಕಾಯಕ ಮಾಡಿದವನಿಗೆ ಉಣ್ಣುವ ಹಕ್ಕು ಇದೆ ಎಂಬ ಮೂಲತತ್ವದಂತೆ ಶರಣರೆಲ್ಲರೂ ಕಾಯಕ ಮಾಡಿ ಊಟ ಮಾಡುತ್ತಿದ್ದರು.

ಬಸವಣ್ಣನವರು ಭಕ್ತಿ ಭಂಡಾರಿ ಅಷ್ಟೇ ಅಲ್ಲದೆ ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಕಾಳಜಿ ಉಳ್ಳವರಾಗಿದ್ದರು. ಅದಕ್ಕೆ ಈಗಿರುವ ಜನಗಣತಿ ಬಗ್ಗೆ ಆವಾಗಲೇ ತಿಳಿದುಕೊಂಡಿದ್ದರು. ಅದನ್ನು ಈ ಹೆಳವರ ಮುಖಾಂತರ ಜಾರಿಗೊಳಿಸಿದರು. ಹೆಳವನಿಗೆ ಶರಣರ ಮನೆಗಳಿಗೆ ಹೋಗಿ ಅವರ ಮನೆಯಲ್ಲಿರುವ ಜನರ ಹೆಸರುಗಳು ಸಂಬಂಧಗಳು ಜನಸಂಖ್ಯೆ, ಆರ್ಥಿಕ ಸ್ಥಾನಮಾನಗಳು, ಸಾಮಾಜಿಕ ಸ್ಥಾನಮಾನಗಳ ಬಗ್ಗೆ ಅಂಕಿಸಂಖ್ಯೆಗಳ ಸಂಗ್ರಹ ಮಾಡಿ ತಮಗೆ ಒಪ್ಪಿಸಬೇಕೆಂದು ಕುಂಟ ಹೆಳವನನ್ನು ಈ ಕಾಯಕಕ್ಕೆ ನೇಮಿಸಿದರು. ಅವನಿಗೆ ಹಳ್ಳಿ ಹಳ್ಳಿಗೆ ಹೋಗಲು ಅನುಕೂಲಕ್ಕಾಗಿ ಅವರ ಪ್ರೀತಿಯ ವಾಹನವಾದ ನಂದಿಯ ಮೇಲೆ ಕುಳಿತುಕೊಂಡು ಹೋಗುವ ಅವಕಾಶವನ್ನು ಮಾಡಿಕೊಟ್ಟರು.(ಹೆಳವರ ಎಂ.ಎಸ್: ೨೦೦೮: ೭-೮)

ಇಲ್ಲಿ ಮುಖ್ಯವಾಗಿ ನೆನಪಿಡಬೇಕಾದ ಸಂಗತಿ ಏನೆಂದರೆ ಅಂದಿನಿಂದ ಈವರೆಗೂ ಸಹ ಉತ್ತರ ಕರ್ನಾಟಕದ ಯಾವುದೇ ಹಳ್ಳಿಯಲ್ಲಿ, ಎತ್ತಿನ ಮೇಲೆ ಕುಳಿತುಕೊಂಡು ಗ್ರಾಮದಲ್ಲಿ ಪ್ರವೇಶಿಸಲು ಹೆಳವರ ಹೊರತಾಗಿ ಬೇರೆಯಾರನ್ನು ಗ್ರಾಮ ಪ್ರವೇಶಕ್ಕೆ ಬಿಡುವುದಿಲ್ಲ. ಇವರು ಪ್ರತಿ ಕುಟುಂಬದ ತಲೆತಲಾಂತರದ ವಂಶಾವಳಿಯನ್ನು ನಮೂದಿಸಿದ ಕಡತಗಳಿವೆ. ಅವುಗಳಿಗೆ ಚಿಪ್ಪೋಡುಳೆಂದು ಕರೆಯುತ್ತಾರೆ. ಅಂತಹ ದಾಖಲೆಗಳು ನೂರಾರು ವರ್ಷಗಳಿಂದ ಕುಟುಂಬಗಳ ವಂಶಾವಳಿಗಳನ್ನು ಚಾಚು ತಪ್ಪದೆ ಬರೆದುಕೊಂಡು

ಬಂದದ್ದರಿಂದ ವಾರಸುದಾರಿಕೆ ತೀರ್ಮಾನಿಸಲು ಹೆಳವರು ಬರೆದ ವಂಶಾವಳಿಗಳು ಅತ್ಯಮೂಲ್ಯ ದಾಖಲೆಗಳಾಗಿವೆ. ಕೇವಲ ಓದಲು ಬರೆಯಲು ಕಲಿತ ಹೆಳವ ಸಮುದಾಯದವರು ಸೃಷ್ಟಿಸಿದ ಕುಟುಂಬದ ವಂಶಾವಳಿಗಳು ಕುಟುಂಬದ ಕೀರ್ತಿಯನ್ನು ಹೆಚ್ಚಿಸಿವೆ. ಹೀಗಾಗಿ ಹೆಳವರು ಮನೆಗೆ ಬಂದರೆ ತಮ್ಮ ಮನೆಗೆ ಮಗಳು ಬಂದಳೆಂದು ಪ್ರೀತಿಯಿಂದ ಆಧರಿಸಿ ಗೌರವಿಸಿ ತಮ್ಮ ಕುಟುಂಬದ ವಂಶಾವಳಿ ಬರೆಯಿಸಿ ಊಟ ಉಡುಗೆ ನೀಡುತ್ತಾರೆ. ಮತ್ತು ಮನೆಯಲ್ಲಿರುವ ಹಸು ಕರುಗಳನ್ನು ದಾನವಾಗಿ ಕೊಡುತ್ತಾರೆ. ಒಕ್ಕಲು ಕುಟುಂಬಗಳಲ್ಲಿ ಮದುವೆಗೆ ಮುಂಚಿನ ಸಮಾರಂಭಗಳಿಗೆ ಇವರನ್ನು ಕರೆಯಿಸಿ ಹೊಸ ಬಟ್ಟೆ ಬರೆ ಕೊಟ್ಟು ಗೌರವಿಸುತ್ತಾರೆ. ಇಂದಿನ ಆಧುನಿಕ ಯುಗದಲ್ಲಿ ಹೆಳವರು ವಂಶಾವಳಿಯನ್ನು ಹಳ್ಳಿಯಲ್ಲಿನ ಕುಟುಂಬಗಳಿಗೆ ಹೋಗಿ ಹೇಳುತ್ತಿರುವುದು ಅವರ ವೃತ್ತಿ ನಿಷ್ಠೆಯ ಬಗ್ಗೆ ತಿಳಿಸುತ್ತದೆ.

ಪ್ರಾಚೀನ ಕಾಲದಲ್ಲಿ ಮಾನವನು ತನ್ನ ಹೊಟ್ಟೆಪಾಡಿಗಾಗಿ ಕಾಡುಮೇಡುಗಳಲ್ಲಿ ಅಲೆಯುತ್ತಿದ್ದಾಗ ಹೇರಳವಾಗಿ ದೊರೆಯುತ್ತಿದ್ದ ಹಣ್ಣು ಹಂಪಲು ಗಡ್ಡೆ ಗೆಣಸುಗಳನ್ನು ತಿನ್ನುತ್ತಿದ್ದನು. ಹಳೆ ಮತ್ತು ಹೊಸ ಶಿಲಾಯುಗದ ಮಾನವರು ಪ್ರಾಣಿ ಬೇಟೆಯಾಡಲು ಮತ್ತು ಕ್ರೂರ ಮೃಗಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಕಲ್ಲಿನ ಆಯುಧಗಳನ್ನು ಉಪಯೋಗಿಸುತ್ತಿದ್ದರು. ಕಲ್ಲಿನ ಆಯುಧಗಳಿಂದ ಸಣ್ಣ ಪ್ರಾಣಿಗಳ ಬೇಟೆಯಾಡಿ ಹಸಿ ಮಾಂಸವನ್ನು ತಿನ್ನತೊಡಗಿದರು. ಎಲೆಗಳನ್ನು ಪಕ್ಷಿಗಳ ಗರಿಗಳನ್ನು, ಪ್ರಾಣಿಗಳ ಚರ್ಮವನ್ನು ಮೈಗೆ ಸುತ್ತಿಕೊಳ್ಳುತ್ತಿದ್ದರು. ಗುಹೆಗಳಲ್ಲಿ, ಬಂಡೆಗಳ ಸಂದುಗಳಲ್ಲಿ, ಮರದ ಪೊಟರೆಗಳಲ್ಲಿ ವಾಸವಾಗುತ್ತಿದ್ದರು. ಅವರಿಗೆ ನಿಗದಿತ ನೆಲೆಯಿರಲಿಲ್ಲ. ಆಹಾರ ಹುಡುಕುತ್ತಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಲೆಮಾರಿಗಳಾಗಿ ಅಲೆದಾಡುತ್ತಿದ್ದರು. ಇದು ಅವರಿಗೆ ಅನಿವಾರ್ಯವು ಆಗಿತ್ತು. ನಾಗರೀಕತೆ ಮತ್ತು ಸಂಸ್ಕೃತಿ ಬೆಳೆದಂತೆಲ್ಲ ಭೂಮಿಯನ್ನು ಉತ್ತಿ ಬಿತ್ತಿ ಬೆಳೆಯುವ ಕೃಷಿ ವಿಧಾನಗಳನ್ನು ಕರಗತ ಮಾಡಿಕೊಂಡ ಬಳಿಕ ನೀರು, ನೆಲ, ಸಮೃದ್ಧವಾಗಿರುವ ಕಡೆಯಲ್ಲಿ ಈಚಲುಗರಿ ಕಟ್ಟಿಕೊಂಡು ತಮ್ಮ ಗುಂಪಿನವರ ಜೊತೆಗೆ ವಾಸಿಸಲು ಆರಂಭಿಸಿದರು. ಮತ್ತೇ ಕೆಲವರು ಅಲೆಮಾರಿ ಬದುಕನ್ನೆ ಜೀವನ ವಿಧಾನವನ್ನಾಗಿ ರೂಪಿಸಿಕೊಂಡರು.

ಹೆಳವ ಸಮುದಾಯವು ಮೂಲತಃ ಅಲೆಮಾರಿ ಸಮುದಾಯವಾಗಿದ್ದು ತಮ್ಮದೇ ಆದಂತಹ ಭಾಷೆ ಮತ್ತು ಸಂಸ್ಕೃತಿಯನ್ನು ಹೊಂದಿದ್ದು. ಇವರು ಕೆಲವು ಭಾಗಗಳಲ್ಲಿ ವಂಶಾವಳಿಯನ್ನು ಹೇಳಿ ಜೀವನವನ್ನು ಸಾಗಿಸಿದ್ದಾರೆ. ಇನ್ನೂ ಕೆಲವು ಕಡೆಗಳಲ್ಲಿ ಚಾಪೆಗಳನ್ನು ತಯಾರಿಸಿ ಮಾರಾಟ ಮಾಡಿ ಬದುಕುವ ಹೆಳವರನ್ನು ಕಾಣಬಹುದು. ಇವರು ನಗರದ ಕೊಳಚೆ ಪ್ರದೇಶದ ಪಕ್ಕದಲ್ಲಿ ವಾಸವಾಗಿದ್ದಾರೆ, ಮತ್ತು ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ವಾಸವಾಗಿದ್ದಾರೆ. ಅಲೆಮಾರಿ ಜೀವನ ನಡೆಸುವ ಇವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆಯುತ್ತಾ ಊರಿನ ಬಯಲು ಪ್ರದೇಶಗಳಲ್ಲಿ ತಾತ್ಕಾಲಿಕವಾಗಿ ಗುಡಾರಗಳನ್ನು ನಿರ್ಮಿಸಿಕೊಂಡು ತಾವು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇವರು ಕೆಳಸ್ತರದ ಜನರು ಬದುಕುವಂತೆ ಬದುಕುವುದನ್ನು ಕಾಣಬಹುದು.

೩.೮.೨. ಹೆಳವ ಪದದ ಔಚಿತ್ಯ

"ಹೇಳುವರು ಎನ್ನುವ ಪದದಿಂದಾಗಿ ಹೆಳವ ಎಂಬ ಪದ ಬಂದಿರಬೇಕು. ವಂಶದ ವೃತ್ತಾಂತ ಹೇಳುವ ಇವರು ತೆಲುಗು ನಾಡಿನಿಂದ ಬಂದವರಾಗಿರಬೇಕೆಂದು ಮಸ್ತಿಯವರು ಅಭಿಪ್ರಾಯಪಟ್ಟಿದ್ದಾರೆ. ಬಿಜ್ಜಳನ ರಾಜ್ಯ ಅವನತಿಯಾದ ಮೇಲೆ ಜನರು ಬೇರೆ ಬೇರೆ ಕಡೆ ಹೊರಟರು. ಹೆಳವ ಅಲ್ಲಿಯೇ ಉಳಿದ. ಆಗ ಪರಮಾತ್ಮ ದರ್ಶನ ನೀಡಿ ಹೆಳವನ ನಾಲಿಗೆಯ ಮೇಲೆ ನಾಲ್ಕಕ್ಷರ ಬರೆದು ನಿನ್ನ ಬಾಯಲ್ಲಿ ಏನು ವಚನ ಬರುತ್ತದೆ ಅದು ಸುಳ್ಳಾಗಬಾರದು ಎಂದು ಹರಿಸಿದ. ಈ ಹೆಳವನಿಂದಲೇ ಹೆಳವ ಸಂತತಿ ಬೆಳೆಯಿತು ಎನ್ನುವ ಮಾತು ಹೆಳವರಲ್ಲಿ ಪ್ರಚಲಿತವಿದೆ.(ಹೆಳವರ ಎಂ.ಎಸ್:೨೦೦೮:೧-೨)

ಹೆಳವರು ಮೂಲತಃ ಅಲೆಮಾರಿ ಸಮುದಾಯದವರಾಗಿದ್ದಾರೆ. ಬೇರೆ ಬೇರೆ ಸಮುದಾಯಗಳ ಕುಲಗಳನ್ನು ಕೊಂಡಾಡಿ ಪ್ರಭಾವಶಾಲಿ ಮನೆತನಗಳ ವಂಶಾವಳಿಯನ್ನು ಕಾಲಾಂತರದಲ್ಲಿ ಚಪ್ಪೋಡುಗಳಲ್ಲಿ ದಾಖಲೆಗೊಳಿಸಿ ಕಾಪಾಡಿಕೊಂಡು ಬಂದ ಹಿರಿಮೆ ಹೆಳವರದ್ದಾಗಿದೆ.

ಕರ್ನಾಟಕದಲ್ಲಿ ವಾಸಿಸುತ್ತಿರುವ ಹೆಳವರು ಮೂಲತಃ ಆಂಧ್ರ ಪ್ರದೇಶದ ಪಿಚ್ಚಕುಂಟಲ ಜಾತಿಗೆ ಸೇರಿದವರು. ಇವರು ೧೧ನೇ ಅಥವಾ ೧೨ನೇ ಶತಮಾನದಲ್ಲಿ ಆಂಧ್ರದಿಂದ ಕನ್ನಡ ನಾಡಿಗೆ ವಲಸೆ ಬಂದಿರುತ್ತಾರೆ. ಇವರನ್ನು ಹೆಳವ, ಹೆಳವರು, ಹೇಳುವವರು, ಹೆಳವಯ್ಯ, ಹೆಳವಮಲ್ಲರು, ಒಕ್ಕಲು ಭೃಂಗಿ, ಮುಂತಾದ ಹೆಸರುಗಳಿಂದ ಕರೆಯುತ್ತಾರೆ. (ಪವಾರ ಕೆ. ಹರಿಲಾಲ್ ೧೯೯೩:೭)

ಗುಲಬರ್ಗಾ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ವಾಸಿಸುವ ಹೆಳವರಲಿ ಚಾಪೆ ಹೆಳವ, ಹಂದಿ ಹೆಳವ, ದೂದಿ ಹೆಳವ ಈ ಕಾಯಕದವರು ಹೆಚ್ಚಾಗಿ ಕಂಡುಬರುತ್ತಾರೆ. ಶಹಾಪೂರ ನಗರದಲ್ಲಿ ವಾಸವಾಗಿರುವ ಹೆಳವರು ನಾವು ಚಾಪೆ ಹೆಳವರು ನಮ್ಮ ಮೂಲ ವೃತ್ತಿ ಚಾಪೆ ಮಾಡುವುದು ಎಂದು ಹೇಳುತ್ತಾರೆ. ಇವರು ಗುಲಬರ್ಗಾ ಜಿಲ್ಲೆಯ ಇತರ ಭಾಗಗಳಿಂದ ಇಲ್ಲಿಗೆ ತಾವು ವಲಸೆ ಬಂದಿದ್ದಾಗಿ ಹೇಳುತ್ತಾರೆ. ಇವರ ಮಾತೃಭಾಷೆ ತೆಲುಗು, ಕನ್ನಡವನ್ನು ಕೂಡ ಮಾತನಾಡುತ್ತಾರೆ.

೩.೮.೩. ಹೆಳವ ಸಮುದಾಯದ ಸಾಮಾಜಿಕ ಜೀವನ

ಸಮಾಜವು ಮಾನವ ಸಮುದಾಯದ ವಿಕಾಸದ ಮೂಲವಾಗಿದೆ. ಸಮಾಜವಿಲ್ಲದೆ ಮಾನವನಿಲ್ಲ. ಸಮಾಜ ಮತ್ತು ಮಾನವನ ನಡುವೆ ಅತ್ಯಂತ ಅನ್ಯೋನ್ಯತೆ ಇರುವುದು ಕಂಡುಬರುತ್ತದೆ. ಹೀಗಾಗಿ ಮಾನವನು ಸಮಾಜದ ಹೊರಗೆ ಜೀವಿಸಲು ಸಾಧ್ಯವಿಲ್ಲ. ಅವನು ಸಮಾಜದ ಹೊರಗೆ ಇರಬೇಕಾದರೆ ಅವನು ದೇವರಾಗಿರಬೇಕು, ಇಲ್ಲವೇ ದೆವ್ವವಾಗಿರಬೇಕು. ಹುಟ್ಟಿದ ಮಗುವಿನ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗಳು ಸಮಾಜದಲ್ಲಿಯೆ ಆಗುತ್ತವೆ. ಅದರ ನಡೆ ನುಡಿ, ಆಚಾರ ವಿಚಾರಗಳು, ಸುಸಂಸ್ಕೃತ ಜೀವನ ಸಾಮಾಜೀಕರಣ ಸಮಾಜದಲ್ಲಿಯೆ ಸಾಧ್ಯವಾಗುತ್ತದೆ. ಮಗುವು ಮಾನವ ಸಮಾಜದಲ್ಲಿ ಬೆಳೆದಾಗ ಮಾನವಿಯ ಗುಣಗಳನ್ನು ಹೊಂದಿ ನಿಜ ಮಾನವನಾಗಿ ಬೆಳೆಯಲು ಸಾಧ್ಯವಾಗುತ್ತದೆ.

ಹೆಳವ ಸಮುದಾಯವು ಕೂಡ ತಮ್ಮದೇ ಆದಂತಹ ಸಮುದಾಯಿಕ ಸಾಮಾಜಿಕ ಜೀವನ ಸಾಗಿಸುತ್ತಿದ್ದಾರೆ. ಇವರು ಅಲೆಮಾರಿ ಜೀವನ ನಡೆಸುವುದರೊಂದಿಗೆ ತಮ್ಮ ಸಂಸ್ಕೃತಿ ಆಚಾರ ವಿಚಾರಗಳು, ನಡೆ ನುಡಿಗಳು, ನೈತಿಕ ನಿಯಮಗಳು, ಸಂಪ್ರದಾಯಗಳು, ಅವರು ಮಾಡುವ ಸಂಪ್ರದಾಯದ ರೀತಿ ನೀತಿಗಳಲ್ಲಿ ಭಿನ್ನತೆಗಳು ಕಂಡುಬರುತ್ತವೆ. ಹೆಳವ ಸಮುದಾಯ ಆರ್ಥಿಕವಾಗಿ ತುಂಬಾ ಹಿಂದುಳಿದ ಸಮುದಾಯವಾಗಿದ್ದು ಇದು ಹಿಂದುಳಿದ ಪಟ್ಟಿಯಲ್ಲಿರುವುದು ಕಂಡುಬರುತ್ತದೆ. ತಾವು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡುವುದು, ಒಕ್ಕಲು ಮನೆಗೆ ಭಿಕ್ಷಾಟನೆಗೆ ಹೋಗುವುದು, ಅವರ ವಂಶಾವಳಿಯನ್ನು ಹೇಳುವುದು, ಇಲ್ಲವೇ ಹಂದಿಗಳನ್ನು ಸಾಕುವುದರ ಮೂಲಕ, ಅನೇಕ ಕೆಲಸಗಳನ್ನು ಮಾಡುವುದರ ಮೂಲಕ ಸಮಾಜದ ಕೆಳಸ್ತರದ ಜನರಂತೆ ಹೆಳವ ಸಮುದಾಯವು ಸಮಾಜದಲ್ಲಿ ಜೀವಿಸುತ್ತಿದ್ದಾರೆ.

ಕುಟುಂಬ ರಚನೆ

ಸಮಾಜದಲ್ಲಿ ಬದುಕುವ ಪ್ರತಿಯೊಬ್ಬ ಮಾನವ ಜೀವಿಗೆ ತನ್ನದೇ ಆದ ಕುಟುಂಬ ವ್ಯವಸ್ಥೆ ಇರಲೇಬೇಕು. ಮಾನವನ ವಿವಾಹದ ನಂತರ ಜನ್ಮತಾಳುವುದೇ ಕುಟುಂಬ. ಇದರಿಂದಲೇ ಮಾನವ ಎಲ್ಲಾ ಕೆಲಸ ಕಾರ್ಯಗಳನ್ನು ಪೂರೈಸಿಕೊಳ್ಳುತ್ತಾನೆ. ಮಾನವನ ವಿಕಾಸ ಕುಟುಂಬದಿಂದಲೇ ಸಾಧ್ಯವಾಗುತ್ತದೆ. ಹೆಳವ ಸಮುದಾಯದ ಕುಟುಂಬ ವ್ಯವಸ್ಥೆಯಲ್ಲಿ 'ವಿಭಕ್ತ' ಕುಟುಂಬ ಮತ್ತು ಅವಿಭಕ್ತ ಕುಟುಂಬಗಳೆರಡು ಪ್ರಕಾರಗಳಲ್ಲಿ ನೋಡುತ್ತೇವೆ. ಆದರೆ ಹೆಚ್ಚಾಗಿ ಹೆಳವ ಸಮುದಾಯವು ಅವಿಭಕ್ತ ಕುಟುಂಬದಿಂದ ಕೂಡಿರುತ್ತವೆ. ಕುಟುಂಬದ ಜವಬ್ದಾರಿ ಎಲ್ಲವೂ ಯಜಮಾನ ನಿರ್ವಹಿಸುತ್ತಾನೆ. ಕುಟುಂಬದ ಎಲ್ಲಾ ಸದಸ್ಯರು ಅವನಿಗೆ ವಿಧೇಯಕರಾಗಿರುತ್ತಾರೆ. ಮನೆಯ ಸದಸ್ಯರು ದುಡಿಮೆಯಿಂದ ಬಂದ ಹಣವನ್ನು ಯಜಮಾನ ಕೈಯಲ್ಲಿ ಕೊಡುತ್ತಾರೆ. ಇದರಿಂದ ಕುಟುಂಬ ನಿರ್ವಹಣೆಯನ್ನು ಮನೆಯ ಯಜಮಾನ ಮಾಡುತ್ತಾನೆ. ಇತ್ತೀಚೆಗೆ ಹೆಳವ ಸಮುದಾಯದವರು ತಮ್ಮ ಮೂಲ ವೃತ್ತಿಗಳನ್ನು ಬಿಟ್ಟು ಇತರೆ ವೃತ್ತಿಗಳ ಕಡೆಗೆ ಮುಖ ಮಾಡಿರುವುದು ಕಂಡುಬರುತ್ತದೆ. ಇದರಿಂದಾಗಿ ವಿಭಕ್ತ ಕುಟುಂಬಗಲಾಗಿ ಒಡೆದಿರುವುದು ಕಂಡುಬರುತ್ತದೆ. ಶಹಾಪೂರ ನಗರಲ್ಲಿ ವಾಸವಾಗಿರುವ ಹೆಳವರು ನಾಲ್ಕು ಐದು ಕುಟುಂಬಗಳು ಮಾತ್ರ ಕಂಡುಬರುತ್ತವೆ. ಇವರು ತಮ್ಮ ಮೂಲ ವೃತ್ತಿಯಾದ ಚಾಪೆನೆಯುವುದು ಬಿಟ್ಟು ವ್ಯಾಪಾರ, ಕೂಲಿ ಕೆಲಸವನ್ನು ಮಾಡಿ ಜೀವಿಸುತ್ತಿರುವುದು ಕಂಡುಬರುತ್ತದೆ.

ಬಳಿ, ಬೆಡಗು

ಕರ್ನಾಟಕದಲ್ಲಿ ವಾಸವಾಗಿರುವ ಹೆಳವ ಸಮುದಾಯಗಳಲ್ಲಿ ೧೫೦ ಬೆಡಗುಗಳು ಕಂಡುಬರುತ್ತವೆ. ಸಮುದಾಯದವರು ತಮ್ಮ ಸಮುದಾಯದವರನ್ನೆ ಗುರುತಿಸಲು ಅವರ ವೃತ್ತಿಗಾಗಿ ಉಪಯೋಗಿಸುವ

ಪರಿಕರ ಮತ್ತು ಹೊಟ್ಟೆ ಪಾಡಿಗಾಗಿ ಕೈಕೊಂಡ ವೃತ್ತಿಯಂತೆ ಒಂದೊಂದು ಗುಂಪಿನವರನ್ನು ಗುರುತಿಸುತ್ತಾರೆ. ಬೆಡಗು ಮೂಲಗಳಿಂದಲೂ ಗುರುತಿಸುವ ಪರಿಪಾಠ ಉಂಟು. ಪೂರ್ವದಲ್ಲಿ ಈ ಸಮುದಾಯದವರು ಆಯಾ ಕುಲದವರೆಂದು ಗುರುತಿಸಲು ಪ್ರಾಣಿ ಪಕ್ಷಿಗಳನ್ನು ಸಾಕುವುದು, ತಾವು ವಾಸಿಸುವಲ್ಲಿ ಗಿಡಮರಗಳನ್ನು ಹಚ್ಚಿ ಬೆಳೆಸುವುದು. ಎಮ್ಮೆ ಸಾಕಿದವರಿಗೆ ಎಮ್ಮಲವ ಬೆಡಗಿನವರೆಂದು ಕರೆದರು. ಔಡಲ ಗಿಡ ಹಾಕಿದವರು ಔಡಲದವರು, ಬನ್ನಿಗಿಡ ಹಚ್ಚಿದವರು ಬನ್ನಿಲವರು, ಹೀಗೆ ಗಿಡಮರ, ಪಶುಪಕ್ಷಿ, ಹಣ್ಣು, ಹೂವು, ವಿವಿಧ ಮನೆಗಳು, ನದಿ-ಹಳ್ಳ, ಗುಡ್ಡ-ಬೆಟ್ಟ, ದಿನ್ನೆಗಳು ಇವುಗಳ ಸಂಪರ್ಕದಿಂದ ಮತ್ತು ಅಲ್ಲಿ ವಾಸಿಸುವುದರಿಂದ ಮತ್ತು ಇವೆಲ್ಲವುಗಳನ್ನು ಪೂಜಿಸುತ್ತಿದ್ದುದರಿಂದ ಕುಲದಲ್ಲಿ ಈ ಹೆಸರುಗಳನ್ನೇ ಕುಲದ ಬೆಡಗುಗಳನ್ನಾಗಿ ಮಾಡಿಕೊಂಡಂತೆ ಕಾಣುತ್ತದೆ. ಗುಲಬರ್ಗಾ ಜಿಲ್ಲೆಯ ಶಹಾಪೂರ ನಗರದಲ್ಲಿ ವಾಸವಾಗಿರುವ ಹೆಳವ ಸಮುದಾಯಗಳಲ್ಲಿ ಈ ಕೆಳಗಿನ ಬೆಡಗುಗಳು ಕಂಡುಬರುತ್ತವೆ. ೧. ಮುದ್ದುವೀರರು ೨. ಪುರವಂತರು ೩. ಸಂಜಲರು ೪. ಹೂವಿನವರು ೫. ಎಲಿಯವರು ಹೀಗೆ ವಿವಿಧ ಬೆಡಗುಗಳು ಇವರಲ್ಲಿ ಕಂಡುಬರುತ್ತವೆ.

ಆಹಾರ ಪದ್ಧತಿ

ಹೆಳವ ಸಮುದಾಯದವರು ಸಸ್ಯಹಾರಿಗಳು ಮತ್ತು ಮಾಸಹಾರಿಗಳು. ಮೂಲತಃ ಮಾಂಸಹಾರಿಗಳಾಗಿದ್ದು ಕುರಿ, ಕೋಳಿ, ಮೊಲ, ಮೀನು, ಏಡಿ, ಕೌಜುಗ ಜೊತೆಗೆ ಹಂದಿ ಮಾಂಸ ತಿನ್ನುತ್ತಾರೆ. ದಿನನಿತ್ಯದ ಆಹಾರವಾಗಿ ರೊಟ್ಟಿ, ಬೇಳೆ, ಕಾಯಿಪಲ್ಲೆ, ಕಾಳುಕಡಿಗಳನ್ನು ಊಟ ಮಾಡುತ್ತಾರೆ. ಹಬ್ಬ-ಹರಿದಿನ ಅಥವಾ ಜಾತ್ರೆಗಳಲ್ಲಿ ಹೋಳಿಗೆ, ಪಾಯಸ, ಹುಗ್ಗಿ ಸಜ್ಜಕ ಇನ್ನಿತರ ಸಿಹಿ ಪದಾರ್ಥಗಳನ್ನು ಮಾಡಿ ತಿನ್ನುತ್ತಾರೆ. ಕರಿ ದಿವಸ ಕುರಿ, ಕೋಳಿ, ಮೊಲ, ಮೀನು, ಹಂದಿ ಮಾಂಸ ಮಾಡುತ್ತಾರೆ. ಮಾಂಸದ ಜೊತೆಗೆ ಸಾರಾಯಿಯನ್ನು ಸೇವಿಸುವರು. ಇತರೆ ಸಮುದಾಯಗಳಲ್ಲಿರುವಂತೆ ಇವರಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ ಆಹಾರದಲ್ಲಿ ಕಾಣಬಹುದು.

ಉಡುಗ ತೊಡುಗೆ

ಹೆಳವರ ಉಡುಗೆ-ತೊಡುಗೆಗಳಲ್ಲಿ ಸಾಮಾನ್ಯವಾಗಿ ಸರಳ ರೀತಿಯ ಬಡವರ ಉಡುಗೆ ತೊಡಿಗೆಗಳಾಗಿವೆ. ಆದರೆ ಒಕ್ಕಲು ಮನೆಗಳಿಗೆ ಹೊಗಳಲು ಹೋಗುವಾಗ ಅವರದ್ದೇ ಆದ ವೇಷ-ಭೂಷಣ ಧರಿಸುತ್ತಾರೆ. ಯಾರಿಂದಲೋ ದಾನವಾಗಿ ಪಡೆದ ಕಪ್ಪು ಕೋಟು, ಶರ್ಟ್, ಬಿಳಿಧೋತರ ಹಾಕಿಕೊಳ್ಳುತ್ತಾರೆ. ಹೆಗಲ ಮೇಲೆ ಕೆಂಪು ಶಾಲು, ತಲೆಗೆ ಹಳದಿ ರುಮಾಲು ಧರಿಸುತ್ತಾರೆ. ಒಕ್ಕಲು ಮನೆ ಕಡತಗಳನ್ನು ಕಟ್ಟಿಕೊಂಡಿರುತ್ತಾರೆ. ಮಹಿಳೆಯರು ಸೀರೆ, ರವಿಕೆ ಇಲ್ಲವೆ ಕುಬುಸ ತೊಡುತ್ತಾರೆ. ಕೈತುಂಬಾ ಬಳೆಗಳು ಯಾವಾಗಲೂ ಹಣೆಗೆ ವಿಭೂತಿ ಕುಂಕುಮ ಧರಿಸುತ್ತಾರೆ. ಯುವಕರು ವ್ಯಾಪಾರ ಮಾಡಲು ವಿವಿಧ ಕಡೆಗೆ

ಸುತ್ತಾಡುವುದರಿಂದ ಅವರು ಸಾಮಾನ್ಯವಾಗಿ ಪ್ಯಾಂಟು ಶರ್ಟ್‌ಗಳನ್ನು ಧರಿಸುತ್ತಾರೆ. ಇತರೆ ಸಮುದಾಯದವರಿಗಿಂತ ಹೆಳವರು ಭಿನ್ನವಾಗಿ ಕಾಣುತ್ತಾರೆ. ದೈವ ಸಂಬಂಧಿ ಯಾವುದೇ ಉಡುಗೆಗಳ ಬಗ್ಗೆ ನಿಷೇಧ ಇಲ್ಲ. ಆದರೆ ಯಾವುದೇ ಸಮಾರಂಭಗಳಲ್ಲಿ, ಧರ್ಮ ಕಾರ್ಯಗಳಲ್ಲಿ ಕರಿಕಂಬಳಿ ಹಾಸಲು ಹೊದೆಯಲು ಇರಲೇಬೇಕು ಎಂಬ ನಿಯಮವಿದೆ.

ವಸತಿ ವ್ಯವಸ್ಥೆ

ಹೆಳವ ಸಮುದಾಯವು ಇತರೆ ಅಲೆಮಾರಿ ಸಮುದಾಯಗಳಂತೆ ಮೂಲತಃ ಅಲೆಮಾರಿಯಾಗಿ ಸದಾ ಸಂಚಾರಿಗಳಾಗಿರುವುದರಿಂದ ಸ್ಥಳದಿಂದ ಸ್ಥಳಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಸಂಚರಿಸುವದರಿಂದ ಊರ ಮಧ್ಯದ ಚಾವಡಿ ಧರ್ಮಶಾಲೆ, ಗುಡಿ ಗುಂಡಾರ ಇಲ್ಲವೆ ಊರ ಹೊರಗೆ ತಮ್ಮದೇ ಆದ ಗುಡಾರಗಳಲ್ಲಿ ಇವರು ವಾಸಮಾಡುತ್ತಾರೆ. ತಮ್ಮ ಕಾಯಕ ಮುಗಿಸಿದ ನಂತರ ಮುಂದಿನ ಊರುಗಳಿಗೆ ಪ್ರಯಾಣಿಸುತ್ತಾರೆ. ಈ ಸಮುದಾಯಗಳು ಹೆಚ್ಚಾಗಿ ಗುಡಿಸಲುಗಳಲ್ಲಿ ವಾಸ ಮಾಡುವುದನ್ನು ಕಾಣಬಹುದು. ಪ್ರಸ್ತುತ ಶಹಾಪೂರ ನಗರದಲ್ಲಿ ವಾಸವಾಗಿರುವ ಹೆಳವ ಸಮುದಾಯದವರು ಬಹುತೇಕ ಮನೆಗಳು ಗುಡಾರ ಹಾಗೂ ಗುಡಿಸಲುಗಳಿಂದ ಕೂಡಿರುವುದು ಕ್ಷೇತ್ರಕಾರ್ಯದಿಂದ ಕಂಡುಬರುತ್ತದೆ. ವಿಚಾರಿಸಿದರೆ ನಮಗೆ ಯಾವುದೇ ರೀತಿಯ ನಿವೇಶನ ಅಥವಾ ಮನೆಗಳು ಸರ್ಕಾರದವರು ನೀಡಿಲ್ಲವೆಂದು ಸಂದರ್ಶನದಲ್ಲಿ ಹೇಳುತ್ತಾರೆ. ಇದರಿಂದ ಈ ಸಮುದಾಯವು ಬಹಳ ಹಿಂದುಳಿದಿರುವುದು ತಿಳಿದುಬರುತ್ತದೆ.

ಕುಲಪಂಚಾಯತಿ

ಕುಲಪಂಚಾಯತಿಯಲ್ಲಿ ಎಲ್ಲರ ಅಹವಾಲುಗಳನ್ನು ತಿಳಿದುಕೊಂಡು ಪಂಚಾಯತಿ ತೀರ್ಮಾನವಾಗುತ್ತದೆ. ಸಾಮಾನ್ಯವಾಗಿ ಆರು ಕೊಟ್ಟರೆ ಅತ್ತೆ ಕಡೆಗೆ, ಮೂರು ಕೊಟ್ಟರೆ ಸೊಸೆ ಕಡೆಗೆ ಎಂಬ ನ್ಯಾಯ ಪಂಚಾಯತಿ ಈ ಸಮುದಾಯದಲ್ಲಿ ಅಷ್ಟೊಂದು ಕಂಡುಬರುವುದಿಲ್ಲ. ನ್ಯಾಯ ಪಂಚಾಯತಿ ಒಂದು ಸ್ಥಳದಲ್ಲಿ ವಾಸಿಸುವ ಇಡೀ ಸಮೂಹದ ಒಪ್ಪಿಗೆಯನ್ನು ಸೂಚಿಸುವುದರಿಂದ ಸಾಮಾನ್ಯವಾಗಿ ಧರ್ಮ ನ್ಯಾಯವಾಗಿರುತ್ತದೆ.

ಹೆಳವ ಸಮುದಾಯದಲ್ಲಿ ಸಮುದಾಯದ ಒಬ್ಬರನ್ನು ಕಟ್ಟೆ ಮನೆಗೌಡ, ಇಬ್ಬರು ಬುದ್ದಿವಂತರು, ಒಬ್ಬ ಭಂಡಾರಿ, ಒಬ್ಬ ಕೋಲಕಾರ ಈ ರೀತಿ ಐದು ಜನ ಸಮಿತಿಯಿದ್ದು ಸಮುದಾಯದ ಆಗುಹೋಗುಗಳನ್ನು ನೋಡುತ್ತಾರೆ. ಪರಸ್ಪರ ನ್ಯಾಯ ವಿಚಾರಣೆಯ ನಂತರ ತಪ್ಪು ಮಾಡಿ ಶಿಕ್ಷೆಗೆ ಒಳಗಾದವರು ನ್ಯಾಯಕ್ಕೆ ತಲೆಬಾಗುತ್ತಾರೆ. ದಂಡ, ಬಹಿಷ್ಕಾರ ಹಾಕುವ ಪದ್ಧತಿ ಜಾರಿಯಲ್ಲಿದೆ. ಇತ್ತೀಚಿನ ದಿನಗಳಲ್ಲಿ ಕೆಲವೊಂದು ಶಿಕ್ಷೆಕಗಳಿಗೆ ನೀಡುವ ನಿಯಮಗಳಲ್ಲಿ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಯಾರಾದರೂ ಅಸಭ್ಯವಾಗಿ ಬೇರೆಯವರೊಂದಿಗೆ ಅನೈತಿ ಸಂಬಂಧವನ್ನು ಇಟ್ಟುಕೊಂಡರೆ ಅವರನ್ನು ಸಮುದಾಯಿಂದ ಹೊರಹಾಕುವುದರ ಜೊತೆಗೆ ದಂಡವನ್ನು ವಿಧಿಸುವುದು ಇವರಲ್ಲಿ ಕಂಡುಬರುತ್ತದೆ.

೩.೮.೪. ಹೆಳವ ರಾಜಕೀಯ ಸ್ಥಾನಮಾನ

ಕರ್ನಾಟಕದ ಮಟ್ಟಿಗೆ ನೋಡಬೇಕಾದರೆ ಹೆಳವರ ರಾಜಕೀಯವಾಗಿ ಇವರ ಸ್ಥಿತಿಯು ಅಷ್ಟೊಂದು ಹೇಳಿಕೊಳ್ಳುವಂತಿಲ್ಲ. ಹೆಳವ ಸಮುದಾಯದವರು ರಾಜಕೀಯ ಕ್ಷೇತ್ರದ ಪ್ರಾಬಲ್ಯ ಶೂನ್ಯಕ್ಕಿಂತಲೂ ಕಡಿಮೆಯೆಂದೇ ಹೇಳಬಹುದಾಗಿದೆ. ಕಾರಣ ಈ ಸಮುದಾಯದ ಪ್ರಬಲತೆ ಹಿಂದುಳಿದ ವರ್ಗಗಳಲ್ಲಿ ಅಲ್ಪ ಸಂಖ್ಯಾತರಲ್ಲಿ, ಅಲ್ಪ ಸಂಖ್ಯಾತರಾದ ಕಾರಣ ಮತ್ತು ಪರಿಶಿಷ್ಟ ಪಂಗಡಗಳಿಗೆ ಇದ್ದಂತೆ ಮೀಸಲಾತಿಯಿಲ್ಲದ ಕಾರಣ ಬಹುಸಂಖ್ಯಾರಾಗಿರುವ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿಯೇ ಸೇರಿರುವುದರಿಂದ ರಾಜಕೀಯ ಪ್ರಾಬಲ್ಯತೆಯ ಬಗ್ಗೆ ಮಾತನಾಡಲು ಅಪ್ರಸ್ತುತ. ಈ ಪ್ರಜಾಪ್ರಭುತ್ವದಲ್ಲಿ ರಾಜಕೀಯವಾಗಿ ತೀರಾ ಕನಿಷ್ಠ ಜನಸಂಖ್ಯೆಯುಳ್ಳ ಜಾತಿಯವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು ಬರುವುದು ಕನಸಿನ ಮಾತು. ಏಕೆಂದರೆ ಬರಿ ಶೂನ್ಯಕ್ಕೂ ಒಂದು ಸ್ಥಾನವಿದೆ. ಆರ್ಥಿಕವಾಗಿ ಈ ಸಮುದಾಯದವರು ಸರ್ಕಾರದ ಬಡತನದ ರೇಖೆಗಿಂತ ಕೆಳಗಿನವರೇ ಆಗಿದ್ದು ಸ್ವಂತ ಜಮೀನು ಹೊಂದಿದವರು ವಿರಳ ಮತ್ತು ಅಪರೂಪ. ಸ್ವಂತ ಮನೆ ಇದ್ದವರು ಕಡಿಮೆ. ಗುಡಿಸಲುಗಳು, ಗುಡಾರ ಡೇರೆಗಳು ಇವರ ಆಸ್ತಿ ಅಡುವುಗಳು. ಸರ್ಕಾರದ ನೌಕರಿಯಲ್ಲೂ ಬೆರಳೆಣಿಕೆಯಷ್ಟಿರಬಹುದು, ಅದು ಕೂಡ ಸಣ್ಣಪುಟ್ಟ ಕೆಲಸಗಳಲ್ಲಿ. ಈ ಸಮುದಾಯವನ್ನು ಅನ್ಯ ಸಮುದಾಯಗಳಿಗೆ ಹೋಲಿಸಿದಾಗ ಹೋಲಿಕೆ ಮಾಡುವ ಯಾವ ಸ್ಥಾನಮಾನಗಳು ಈ ಸಮುದಾಯದಲ್ಲಿ ಕಂಡುಬರುವುದಿಲ್ಲ.

ಶಹಾಪೂರ ನಗರದಲ್ಲಿ ವಾಸವಾಗಿರುವ ಅಲೆಮಾರಿ ಹೆಳವ ಸಮುದಾಯದವರನ್ನು ವಿಚಾರಿಸಿದರೆ ರಾಜಕೀಯ ನಮ್ಮಂಥವರಿಗೆ ಏಕೆ. ನಾವು ದುಡಿದು ತಿನ್ನುವ ಜನರು ಸ್ವಾಮಿ ಎಂದು ಹೇಳುತ್ತಾರೆ. ಇಲ್ಲಿಯ ಜನಕ್ಕೆ ಗುರುತಿಸಿಕೊಳ್ಳಲು ಒಂದು ಮತದಾನದ ಚೀಟಿ ಇಲ್ಲ. ಹಾಗೂ ಪಡಿತರ ಚೀಟಿಗಳಿಲ್ಲ. ಇವರತ್ತ ಯಾವ ರಾಜಕಾರಣಿಯು ಕಣ್ಣು ತೆರೆದು ನೋಡಿಲ್ಲ. ಇವರು ಆರ್ಥಿಕವಾಗಿ ಹಿಂದುಳಿದ ಜನಾಂಗ ವಾಗಿರುವುದರಿಂದ ಈ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಈ ಸಮುದಾಯದವರು ಪರಿಶಿಷ್ಟ ಜಾತಿಯಲ್ಲಿ ಸೇರಲು ಎಲ್ಲಾ ಲಕ್ಷಣಗಳನ್ನು ಹೊಂದಿದ್ದು ರಾಜಕೀಯ ಹಿತಾಸಕ್ತಿಯಿಂದ ಸಾಧ್ಯವಾಗುತ್ತಿಲ್ಲ.

ಅಲೆಮಾರಿ ಹೆಳವರನ್ನು ಪರಿಶಿಷ್ಟ ವರ್ಗದಲ್ಲಿ ಅಥವಾ ಪ್ರತ್ಯೇಕ ಅಲೆಮಾರಿ ಪಟ್ಟಿಯಲ್ಲಿ ಸೇರಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮುಂದಾಗಬೇಕು. ಮೀಸಲಾತಿಯ ಲಾಭ ಈ ಸಮುದಾಯಕ್ಕೆ ಸಮರ್ಪಕವಾಗಿ ಮುಟ್ಟುವಂತಾಗಬೇಕು. ಆಗ ಅಲೆಮಾರಿಗಳ ಸರ್ವತೋಮುಖ ಅಭಿವೃದ್ಧಿಗೆ ಫಲಾನುಭವಿ ಗಳನ್ನಾಗಿ ಗುರುತಿಸಿ ಮತದಾರರ ಯಾದಿಗೆ ಸೇರಿಸಿ, ಪಡಿತರ ಚೀಟಿ ನೀಡಿ, ನಿವೇಶನ ಹಾಗೂ ಮನೆಗಳನ್ನು ಮಂಜೂರು ಮಾಡಿ ಈ ಸಮುದಾಯದವರಿಗೆ ಔದ್ಯೋಗಿಕ ತರಬೇತಿ ನೀಡುವುದರ ಜೊತೆಗೆ ಉದ್ಯೋಗಕ್ಕೆ ದಾರಿ ಮಾಡಿ ಕೊಡಬೇಕು. ಅಂದಾಗ ಮಾತ್ರ ಈ ಸಮುದಾಯವು ಅಭಿವೃದ್ಧಿ ಪಥದಲ್ಲಿ ಮುನ್ನಡೆಯಲ್ಲು ಸಾಧ್ಯವಾಗುತ್ತದೆ.

೩.೮.೫. ಹೆಳವರ ಧಾರ್ಮಿಕ ಜೀವನ

ಧಾರ್ಮಿಕವಾದ ನಂಬಿಕೆ ಪ್ರತಿಯೊಂದು ಸಮುದಾಯಗಳಲ್ಲಿ ಇರುವಂತೆ ಅಲೆಮಾರಿ ಹೆಳವ ಸಮುದಾಯ ದಲ್ಲಿಯೂ ಧಾರ್ಮಿಕವಾದ ನಂಬಿಕೆ ಮತ್ತು ಆಚರಣೆಗಳಿರುವುದು ಕಂಡುಬರುತ್ತದೆ. ದೇವರಿಗೆ ಸಂಬಂಧ ಪಟ್ಟಂತೆ ಈ ಸಮುದಾಯದಲ್ಲಿ ಬಹಳ ಭಯ-ಭಕ್ತಿ, ನಂಬಿಕೆಯುಳ್ಳವರಾಗಿದ್ದಾರೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಅಣ್ಣ ಬಸವಣ್ಣನ ಅನುಯಾಯಿಗಳಾಗಿದ್ದಾರೆ. ಹೆಳವರು ತಾವು ವಾಸಿಸುವ ಸ್ಥಳಗಳಲ್ಲೇ ದೇವರ ಗುಡಿಗಳನ್ನು ಮಾಡಿಕೊಂಡು ಪೂಜಿಸುವುದು ಕಾಣಬಹುದು. ತಾವು ವಾಸಿಸುವ ಗ್ರಾಮಗಳಲ್ಲಿರುವ ಗ್ರಾಮ ದೇವತೆಯನ್ನು ನಿಷ್ಠೆಯಿಂದ ಪೂಜಿಸುತ್ತಾರೆ. ಅಲ್ಲದೆ ಗ್ರಾಮದಲ್ಲಿರುವ ಈಶ್ವರ ದೇವರು, ಬಸವಣ್ಣದೇವರು, ಮಾರುತಿ ಮುಂತಾದ ದೇವರುಗಳಿಗೂ ನಡೆದುಕೊಳ್ಳುತ್ತಾರೆ. ಆಯಾ ಪ್ರದೇಶಗಳಲ್ಲಿ ಪ್ರಸಿದ್ಧಿಯಾಗಿರುವ ದೇವರುಗಳನ್ನು ತಮ್ಮ ಕುಲದೇವರುಗಳನ್ನಾಗಿ ಮಾಡಿಕೊಳ್ಳುತ್ತಾರೆ. ಉತ್ತರ ಕರ್ನಾಟಕ ದಲ್ಲಿ ವೀರಶೈವ ಲಿಂಗಾಯತರ ಪ್ರಭಾವವಿರುವದರಿಂದ ಕರ್ನಾಟಕದಲ್ಲಿ ವೀರಶೈವ ಲಿಂಗಾಯತರ ಪ್ರಭಾವ ವಿರುವುದರಿಂದ ಶ್ರೀಶೈಲ ಮಲ್ಲಿಕಾರ್ಜುನನ್ನೇ ಕುಲದೈವ ಮಾಡಿಕೊಂಡಿದ್ದಾರೆ. ಈ ಸಮುದಾಯಕ್ಕೆ ಸೇರಿದ ಒಂದು ಮಠವು ಶ್ರೀಶೈಲದಲ್ಲಿ ಇತ್ತೆಂದು ಪ್ರತೀತಿ ಇದೆ.

ತಾವು ವಾಸಿಸುವ ಹಟ್ಟಿ, ಹುಂಡಿ, ಸಂಧ್ರ ಗ್ರಾಮಗಳಲ್ಲಿರುವ ದೇವರನ್ನು ಪೂಜಿಸುವ ಜೊತೆಗೆ ಶ್ರೀಶೈಲ ಕಡೆಯವರು ಶ್ರೀ ಮಲ್ಲಿಕಾರ್ಜುನ ದೇವರನ್ನು ಪಂಚಪೀಠಗಳ ಸುತ್ತಲೂ ಹರಡಿ ಅಲ್ಲಲ್ಲಿ ವಾಸವಾಗಿರುವವರು. ಶ್ರೀ ರೇವಣ ಸಿದ್ದೇಶ್ವರರನ್ನು, ಸವದತ್ತಿ ಯಲ್ಲಮ್ಮ, ಮಲ್ಲಮ್ಮ ದೇವರುಗಳನ್ನು ಆರಾಧಿಸುವರು. ಇವರಿಗೆ ಜಂಗಮರೇ ಪುರೋಹಿತರು. ಯಲ್ಲಮ್ಮ, ರಾಜರಾಜೇಶ್ವರಿ, ದುರ್ಗಮ್ಮ ಹೆಸರುಗಳ ಮೇಲೆ 'ಬಸವಿ' ಬಿಡುವರು.

ಹಿಂದೂ ಧರ್ಮದಲ್ಲಿ ಇರುವ ವರ್ಣಾಶ್ರಮದ ಪದ್ಧತಿಯಿಂದ ಬ್ರಾಹ್ಮಣರು ಕ್ಷತ್ರಿಯರ, ವೈಶ್ಯರ ಅಷ್ಟೇ ಅಲ್ಲ; ಶೂದ್ರ ಸಮುದಾಯದ ದೇವರುಗಳಿಗಿಂತಲೂ ಕಟ್ಟಕಡೆ, ಸಾಲಿನಲ್ಲಿಈ ಸಮುದಾಯದ ದೇವರುಗಳಿಗೆ ಸ್ಥಾನ ಕೊಡಲಾಗಿದೆ. ಹೆಳವ ಸಮುದಾಯದವರಿಗೆ ಅವರ ಮನೆದೇವರುಗಳು, ಕುಲದೇವರುಗಳು, ಗ್ರಾಮದೇವರುಗಳು ಮತ್ತು ಇತರೆ ದೈವಗಳಾದ ತಿರುಪತಿ ವೆಂಕಟೇಶ್ವರ, ಧರ್ಮಸ್ಥಳದ ಮಂಜುನಾಥ, ಶ್ರೀಶೈಲ ಮಲ್ಲಿಕಾರ್ಜುನ, ಸವದತ್ತಿ ಯಲ್ಲಮ್ಮ, ಚೌಡೇಶ್ವರಿ, ದುರ್ಗಾದೇವಿ ಮುಂತಾದ ದೇವರುಗಳಲ್ಲಿ ಭಯಭಕ್ತಿ ಇಟ್ಟುಕೊಂಡಿದ್ದಾರೆ. ಕೆಲವು ಕಡೆ ಬೇರೆಯವರಿಗೆ ತೊಂದರೆ ಮಾಡುವ ಇಚ್ಛೆಯಿಂದ ಕೆಲವು ಕ್ಷುದ್ರ ದೇವತೆಗಳಿಗೆ ಮೊರೆ ಹೋಗುತ್ತಾರೆ. ಮಾಟಮಂತ್ರಗಳಲ್ಲಿ ನಂಬಿಕೆ ಇಟ್ಟಿರುತ್ತಾರೆ. ಆದರೆ ಯಾವುದೂ ಅತಿರೇಕವಾಗಿಲ್ಲ.

ಉತ್ತರ ಕರ್ನಾಟಕದವರು ಸವದತ್ತಿ ಯಲ್ಲಮ್ಮ ದೇವರಿಗೆ ಈ ಜನರು ನಡೆದುಕೊಳ್ಳುತ್ತಾರೆ.

ವರ್ಷಕ್ಕೆ ಒಂದು ಬಾರಿಯಾದರು ಸವದತ್ತಿಗೆ ಹೋಗಿ ಕಾಯಿ ಕರ್ಪೂರವನ್ನು ಮಾಡಿಸಿ ಬರುತ್ತಾರೆ. ಮದುವೆಗಳಲ್ಲಿ ಯಲ್ಲಮ್ಮ ಹಬ್ಬವನ್ನು ಮೊದಲು ಮಾಡಿ ಕುರಿ ಬಲಿ ಕೊಟ್ಟ ನಂತರವೇ ಮದುವೆ ಮಾಡುತ್ತಾರೆ. ಧಾರ್ಮಿಕತೆಗೆ ಸಂಬಂಧಪಟ್ಟಂತೆ ತಮ್ಮ ತಮ್ಮ ಮನೆಗಳಲ್ಲಿ ಮನೆದೇವರುಗಳ ಕಂಚಿನ ಮತ್ತು ಬೆಳ್ಳಿ ಮೂರ್ತಿಯನ್ನು ಇಟ್ಟುಕೊಂಡು ಪೂಜಿಸುವುದನ್ನು ಹೆಳವ ಸಮುದಾಯದವರಲ್ಲಿ ಕಾಣಬಹುದು.

ಹಬ್ಬಹರಿದಿನಗಳು

ಹಿಂದೂಗಳಲ್ಲಿ ಪ್ರಚಲಿತವಿರುವ ಅನೇಕ ಹಬ್ಬ ಹರಿದಿನಗಳನ್ನು ಹೆಳವರು ಆಚರಿಸುತ್ತಾರೆ. ಅವುಗಳ ಜೊತೆಗೆ ಹಿರಿಯರಹಬ್ಬ ಮತ್ತು ಮಾರಮ್ಮನ ಹಬ್ಬ, ಸಾಂಪ್ರದಾಯಿಕವಾಗಿ ಆಚರಿಸುತ್ತಾರೆ. ಜೊತೆಗೆ ಕಾರಹುಣ್ಣಿಮೆ, ನಾಗರಪಂಚಮಿ, ದಸರಾ, ದೀಪಾವಳಿ, ಹೋಳಿ, ಯುಗಾದಿ ಇವುಗಳು ಹೆಳವ ಸಮುದಾಯ ದವರು ಆಚರಿಸುವ ಪ್ರಮುಖ ಹಬ್ಬಗಳಾಗಿವೆ. ಈ ಹಬ್ಬಗಳಲ್ಲಿ ತಮ್ಮ ಮನೆದೇವರಿಗೆ ಮತ್ತು ಇತರೆ ದೇವರಿಗೆ ಹೋಳಿಗೆ ಸಜ್ಜಕ ಇನ್ನಿತರ ಪದಾರ್ಥಗಳನ್ನು ಮಾಡಿ ನೈವೇದ್ಯವನ್ನು ಮಾಡಿ ಕಾಯಿ ಕರ್ಪೂರವನ್ನು ಬೆಳಗಿ ದೇವರಲ್ಲಿ ನಮಸ್ಕರಿಸಿ ಒಳ್ಳೆಯದಾಗಲೆಂದು ಬೇಡಿಕೊಳ್ಳುತ್ತಾರೆ.

೩.೮.೬. ಹೆಳವರ ಸಾಂಸ್ಕೃತಿಕ ಜೀವನ

ಮನುಷ್ಯನ ಸಾಮಾಜಿಕ ಜೀವನಕ್ಕೆ ಪ್ರೇರಕ ಶಕ್ತಿಯನ್ನು ನೀಡುವ ಭಾವನಾತ್ಮಕ ಅರಿವಿನ ಅಮೂರ್ತ ಸ್ವರೂಪಕ್ಕೆ 'ಸಂಸ್ಕೃತಿ' ಎನ್ನುವುದುಂಟು. ಸಂಸ್ಕೃತಿ ಬಾವನಾತ್ಮಕವಾಗಿದ್ದರು ಸುಸಂಬದ್ಧವಾಗಿ ವ್ಯಕ್ತಗೊಳ್ಳುವ ಸಾಮಾಜಿಕ ಗುಣ, ಸಂಸ್ಕೃತಿ, ಪಾಲನೆಯಿಂದ ಮನುಷ್ಯ ತನ್ನ ಬದುಕಿಗೆ ಬೇಕಾಗುವ ಎಲ್ಲಾ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತದೆ. ನಿಸರ್ಗದತ್ತ ಜೀವನಕ್ಕೆ ಅಗತ್ಯವಾದ ವಸ್ತುಗಳನ್ನು ಹೊಂದಲು ಸಂಸ್ಕೃತಿ ಬಹಳ ಮುಖ್ಯವಾದುದ್ದಾಗಿದೆ. ಹೆಳವ ಸಮುದಾಯವು ಸಹ ತಮ್ಮದೇ ಆದ ಸಂಸ್ಕೃತಿ, ಆಚಾರ-ವಿಚಾರ, ನೀತಿ-ನಿಯಮಗಳನ್ನು ಹಾಗೂ ಸಂಸ್ಕಾರಗಳನ್ನು ಬೆಳೆಸಿಕೊಂಡು ಬಂದಿರುವುದು ಕಾಣಬಹುದು.

ಸಂಸ್ಕಾರಗಳು

ವಿವಾಹ : ಹೆಳವ ಸಮುದಾಯದಲ್ಲಿ ಮದುವೆಯ ವಿಧಿ-ವಿಧಾನಗಳು ಹಿಂದೂ ಸಂಪ್ರದಾಯದಂತೆ ನಡೆಯುತ್ತದೆ. ಆಯ್ಕೆ ಪ್ರಕ್ರಿಯೆ ಈ ಸಮುದಾಯದಲ್ಲಿ ಪುರುಷ ಪ್ರಧಾನ ಕುಟುಂಬ ಇರುವುದರಿಂದ ಗಂಡಿನವರೇ ಹೆಣ್ಣು ಹುಡುಕುತ್ತಾರೆ. ಸಮಾಜದ ಹಿರಿಯರು ಹಾಗೂ ವಧುವನ್ನು ನೋಡಿ ಗಂಡು ಮತ್ತು ಗಂಡಿನ ಮನೆಯವರು ಒಪ್ಪಿದರೆ ಹಾಗೆಯೇ ಹೆಣ್ಣು ಮತ್ತು ಹೆಣ್ಣಿನ ಮನೆಯವರು ವರನನ್ನು ನೋಡಿ ಪರಸ್ಪರ ಎರಡು ಕುಟುಂಬಗಳ ಸಮ್ಮತಿಯೂ ಅವಶ್ಯಕವಾಗಿರುತ್ತದೆ. ಕಡಿಮೆ ಪ್ರಮಾಣದ ಜನಸಂಖ್ಯೆಯ ಸಮುದಾಯವಾದ್ದರಿಂದ ಸಂಬಂಧಿಕರ ಸಂಬಂಧದಲ್ಲಿ ಹೆಚ್ಚು ಮದುವೆಗಳು ಆಗುತ್ತವೆ.

ಗಂಡಿನ ಮತ್ತು ಹೆಣ್ಣಿನ ಮನೆಯವರು ಒಪ್ಪಿದ ನಂತರ ಹೆಣ್ಣಿನ ಮನೆಯಲ್ಲಿಯೇ ನಿಶ್ಚಯ

ಕಾರ್ಯಕ್ರಮ ಇಟ್ಟುಕೊಂಡು ಹಿರಿಯರ ಸಮ್ಮುಖದಲ್ಲಿ ಚಿಕ್ಕ ಸಮಾರಂಭ ಏರ್ಪಡಿಸಿ ಗಂಡು ಹೆಣ್ಣು ಕೂರಿಸಿ ನಿಶ್ಚಯ ಕಾರ್ಯಕ್ರಮ ಏರ್ಪಡಿಸುತ್ತಾರೆ. ವೀಳ್ಯೆಯನ್ನು ಬದಲಿಸಿಕೊಳ್ಳುತ್ತಾರೆ. ಸಕ್ಕರೆ ಹಂಚುತ್ತಾರೆ. ಹೆಣ್ಣು ಗಂಡಿನ ಮದುವೆಯ ಚರ್ಚೆಗೆ ಮೊದಲು ಎರಡೂ ಕುಟುಂಬದವರು ಸಮ ಬೆಡಗಿಗೆ ಸೇರಿದ್ದರೆ ಸಾಮಾನ್ಯವಾಗಿ ಮದುವೆಗೆ ಒಪ್ಪುವುದಿಲ್ಲ.

ಹೆಳವರಲ್ಲಿ ಸಾಂಪ್ರದಾಯಿಕವಾದ ಮದುವೆ ಮೂರು ದಿನಗಳ ಕಾಲ ಹಂದರ ಹಾಕುವ ಶಾಸ್ತ್ರ, ಎದುರುಗೊಳ್ಳುವುದು, ಅರಿಷಿಣಶಾಸ್ತ್ರ, ಹಾಲುಗಂಬ ತರುವ ಶಾಸ್ತ್ರ, ಐರಾಣಿ ತರುವ ಶಾಸ್ತ್ರ, ನೀರು ತರುವ ಶಾಸ್ತ್ರ, ವಧುವರರನ್ನು ಹಂದರಕ್ಕೆ ಕರೆತರುವ ಶಾಸ್ತ್ರ, ನೂಲು ಸುತ್ತುವ ಶಾಸ್ತ್ರ, ನೈಯೇಣ್ಣಿ ಮತ್ತು ಅರಿಷಿಣ ಕಾರ್ಯ, ತಾಳಿಕಟ್ಟುವ ಮತ್ತು ಅಕ್ಷತೆ ಹಾಕುವುದರೊಂದಗೆ ವಿವಾಹ ಕಾರ್ಯಗಳು ಈ ಸಮುದಾಯದಲ್ಲಿ ನೆರವೇರುತ್ತದೆ. ವಿಧವಾ ವಿವಾಹಕ್ಕೂ ಮನ್ನಣೆ ಈ ಸಮುದಾಯದಲ್ಲಿದೆ. ಮೊದಲ ಪತ್ನಿಗೆ ಮಕ್ಕಳಾಗದಿದ್ದಾಗ ಎರಡನೇ ಮದುವೆ ಮಾಡಿಕೊಳ್ಳುತ್ತಾರೆ. ಇವರು ಬಹಳ ಅಪರೂಪವಾಗಿ ಹೆಳವ ಸಮುದಾಯದಲ್ಲಿ ಕಂಡುಬರುತ್ತದೆ.

ಸೀಮಂತ ಕಾರ್ಯ : ಹೆಳವ ಸಮುದಾಯದಲ್ಲಿ ಬಸುರಿಯಾದ ಐದು ತಿಂಗಳಲ್ಲಿ ಅಥವಾ ಏಳು ತಿಂಗಳಲ್ಲಿ ಸೀಮಂತ ಶುಭಕಾರ್ಯವನ್ನು ತವರಿನವರು ಬಹುವಿಜೃಂಭಣೆಯಿಂದ ನೆರವೇರಿಸುತ್ತಾರೆ. ಮಗಳಿಗೆ ಶೃಂಗಾರ ಮಾಡಿ ಹೊಸಬಟ್ಟೆ ತೊಡಿಸುತ್ತಾರೆ. ಅವಳು ಕೂರುವ ಸ್ಥಳದಲ್ಲಿ ಮಂಟಪ ಕಟ್ಟಿರುತ್ತಾರೆ. ಮುತ್ತೈದೆಯರು ಸೋಬಾನ ಹಾಡುಗಳನ್ನು ಹಾಡುತ್ತಾರೆ. ಮಂಗಳಾರತಿ ಮಾಡಿ ಹರಸುತ್ತಾಳೆ. ಸಾಮಾನ್ಯ ಸ್ಥಿತಿಯವರು ತಮಗೆ ತಿಳಿದಂತೆ ಮುತ್ತೈದೆಯರಿಂದ ಆರತಿ ಮಾಡಿಸಿ ಕಾರ್ಯ ಮುಗಿಸುತ್ತಾರೆ.

ಜನನ : ಹೆಳವ ಸಮುದಾಯದಲ್ಲಿ ಹೆರಿಗೆ ಪೂರ್ವದಲ್ಲಿ ಗರ್ಭಿಣಿ ಸ್ತ್ರೀಯರನ್ನು ಬಹಳಷ್ಟು ಕಾಳಜಿಯಿಂದ ನೋಡಿಕೊಳ್ಳುತ್ತಾರೆ. ಅವರಿಗೆ ಸೀಮಂತ ಕಾರ್ಯಮಾಡಿ ಸಂತೋಷಗೊಳಿಸುತ್ತಾರೆ. ಉಡುಗೆ ತೊಡುಗೆ ತರುತ್ತಾರೆ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಪೌಷ್ಠಿಕ ಆಹಾರವನ್ನು ನೀಡುತ್ತಾರೆ. ಹುಟ್ಟುವ ಮಗು ಆರೋಗ್ಯವಾಗಿರಲೆಂದು ತಾಯಿಯು ಆರೋಗ್ಯಗದ ಕಡೆ ಹೆಚ್ಚು ಲಕ್ಷ್ಯವಹಿಸುತ್ತಾರೆ.

ಹೆಳವರ ಸಮುದಾಯದಲ್ಲಿ ಜನನದ ಬಗ್ಗೆ ಕೆಲವೊಂದು ವಿಚಿತ್ರವಾದ ನಂಬಿಕೆಗಳನ್ನು ಇಟ್ಟು ಕೊಂಡಿದ್ದಾರೆ. ದೈವಶಕ್ತಿಯೆ ಜನನಕ್ಕೆ ಕಾರಣ ಎನ್ನುವ ಮೂಢನಂಬಿಕೆ ಹೆಚ್ಚಾಗಿದ್ದು ಮಕ್ಕಳಾಗದಿದ್ದರೂ, ಮಕ್ಕಳನ್ನು ಪಡೆಯಲು ದೇವರಿಗೆ ಹರಕೆ ಹಾಕುತ್ತಾರೆ. ಆದರೆ ಈ ಸಮುದಾಯದಲ್ಲಿ ಲಿಂಗ ತಾರತಮ್ಯ ಬಹಳ ಕಡಿಮೆ.

ನಾಮಕರಣ : ಹೆಳವ ಸಮುದಾಯದವರಿಗೆ ಮಕ್ಕಳ ನಾಮಕರಣವು ವಿಶೇಷ ಸಮಾರಂಭ. ೧೧-೧೫ ದಿನಗಳಿಗೆ ಅಥವಾ ಒಂದು ತಿಂಗಳಿಗೆ ನಾಮಕರಣವನ್ನು ಇಟ್ಟುಕೊಳ್ಳುತ್ತಾರೆ. ಮನೆಯನ್ನು ಸ್ವಚ್ಛ

ಮಾಡಿ ಬಳಿದು ವಿಶೇಷವಾಗಿ ಅಲಂಕಾರ ಮಾಡಿ ನಾಮಕರಣದಂದು ಬಂಧುಬಳಗದವರು ಬರುತ್ತಾರೆ. ನಾಮಕರಣಕ್ಕೆ ತೊಟ್ಟಿಲನ್ನು ಅಲಂಕರಿಸಿರುತ್ತಾರೆ. ಇದರಲ್ಲಿ ಸೋದರತ್ತೆಯೇ ನಾಮಕರಣ ಮಾಡುವ ಮುಖ್ಯಸ್ಥೆ. ಈ ನಾಮಕರಣ ಸಮಾರಂಭವು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಒಂದೊಂದು ರೀತಿಯಿಂದ ನಡೆಯುತ್ತದೆ. ನಂತರ ಬಂದಂತಹ ಎಲ್ಲಾ ಸಂಬಂಧಿಕರನ್ನು ಸಿಹಿ ಪದಾರ್ಥಗಳಿಂದ ಊಟ ಮಾಡಿಸಿ ಕಳುಹಿಸುತ್ತಾರೆ.

ಋತುಮತಿ : ಹೆಳವ ಸಮುದಾಯದವರಿಗೆ ಹೆಣ್ಣು ಮಗಳು ಮೈನೇರೆದರೆ ಸಂಭ್ರಮ ಪಡುತ್ತಾರೆ. ಕಾರಣ ಹೊಸ ಜೀವನಕ್ಕೆ ಕಾಲಿಡುವ ಹಾಗೂ ಮದುವೆಯಾಗಿ ತಾಯಿ ಆಗುವ ಅವಕಾಶವನ್ನು ಹೊಂದುತ್ತಾಳೆ. ಹೆಣ್ಣು ಮೈನೆರೆಯುವುದನ್ನು 'ಋತುಮತಿ' ಮತ್ತು 'ದೊಡ್ಡವಳಾಗುವುದು' ಎಂದು ಕರೆಯುತ್ತಾರೆ. ಈ ಸಮುದಾಯದವರು ಋತುಮತಿ ಆದ ಹೆಣ್ಣನ್ನು ಯಾರೂ ಮುಟ್ಟಿಸಿಕೊಳ್ಳುವುದಿಲ್ಲ. ಅವಳನ್ನು ಅಶುದ್ಧ ಅಥವಾ ಮೈಲಿಗಿ ಆದವಳೆಂದು ಭಾವಿಸುತ್ತಾರೆ. ಋತುಮತಿಯಾದ ಯುವತಿಯನ್ನು ನಿತ್ಯವೂ ಸ್ನಾನ ಮಾಡಿಸುತ್ತಾರೆ. ಆದರೆ ನಾಲ್ಕು ದಿನದ ನಂತರ ಪ್ರತಿದಿನ ಎಣ್ಣೆ ಸ್ನಾನ ಮಾಡಿಸಿ ಮುತ್ತೈದೆಯರೆಲ್ಲರು ಮಂಗಳಾರತಿ ಮಾಡಿ ಹರಸುತ್ತಾರೆ. 'ಎಬ್ಬಿಸುವ ದಿನ'ದಂದು ಸಂಬಂಧಿಕರನ್ನು ಕರೆಯಿಸಿ ಎಲ್ಲರಿಗೂ ಸಿಹಿ ಊಟ ಮಾಡಿಸುತ್ತಾರೆ. ಅವಳಿಗೆ ಎಲ್ಲಾ ರೀತಿಯ ಅಲಂಕಾರಮಾಡಿ ಹೊಸಬಟ್ಟೆ ಉಡಿಸಿ ಮುತ್ತೈದೆಯರೆಲ್ಲರೂ ಹಾಡುವುದು ಮತ್ತು ಮಂಗಳಾರತಿ ಮಾಡುತ್ತಾರೆ. ಈ ಸಮುದಾಯದಲ್ಲಿ ಬಹು ಅಚ್ಚುಕಟ್ಟಾಗಿ ಋತುಮತಿ ಕಾರ್ಯವನ್ನು ನಡೆಸುತ್ತಾರೆ.

ಮರಣ : ಸತ್ತವನ ದೇಹಕ್ಕೆ ಕೊನೆಯ ಗೌರವವೇ 'ಶವಸಂಸ್ಕಾರ'. ಸರಿಯಾದ ಸಂಸ್ಕಾರವಾಗದಿದ್ದರೆ ಅವರ ಆತ್ಮಕ್ಕೆ ಸದ್ಗತಿ ದೊರೆಯುವುದಿಲ್ಲವೆಂದು ಇವರ ನಂಬಿಕೆ. "ಮೃತ್ಯು ಲೋಕವೆಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವವರು ಅಲ್ಲಿ ಸಲ್ಲುವರು, ಇಲ್ಲಿ ಸಲ್ಲದವರು ಅಲ್ಲಿ ಸಲ್ಲರಯ್ಯ" ಎಂಬ ಶರಣರ ವಚನದಂತೆ ಈ ಸಮುದಾಯದ ಜನ ದುಷ್ಕೃತ್ಯಕ್ಕೆ ಪಾಪಗಳಿಗೆ ಹೆದರುತ್ತಾರೆ. ಈ ಸಮುದಾಯದವರು ಇಡೀ ಮುಂದುವರಿದ ಸಮಾಜದೊಂದಿಗೆ ಸ್ನೇಹ ಸಂಪರ್ಕ ಇಟ್ಟುಕೊಂಡಿರುತ್ತಾರೆ. ಯಾವುದಕ್ಕೂ ಧೈರ್ಯಶಾಲಿಗಳಲ್ಲ. ಬಹುಶಃ ಅವರ ವೃತ್ತಿಯೇ ಸರಿದಾರಿಯಲ್ಲಿ ಇಡಲು ಕಾರಣವಾಗಿದೆ.

ಬೇರೆ ಬೇರೆ ಪ್ರದೇಶಗಳಲ್ಲಿ ಒಂದೊಂದು ರೀತಿಯ ನಡುವಳಿಕೆ ಇದೆ. ಸತ್ತಮನೆ ಸೂತಕವೆಂದು ಭಾವನೆ ಇದೆ. ಸತ್ತನಂತರ ಉತ್ತರ ಕರ್ನಾಟಕದಲ್ಲಿ ಮನೆ ಒಳಗಿನಿಂದ ಶವವನ್ನು ಹೊರಗೆ ತಂದು ಸ್ನಾನ ಮಾಡಿಸಿ ಕೂಡಿಸುತ್ತಾರೆ. ಸತ್ತ ಸುದ್ದಿಯನ್ನು ತಮ್ಮ ಸಂಬಂಧಿಕರಿಗೆಲ್ಲಾ ತಿಳಿಸುತ್ತಾರೆ. ಎಲ್ಲರು ಬರುವವರೆಗೆ ಹೆಣವನ್ನು ಹಾಗೆಯೆ ಇಟ್ಟಿರುತ್ತಾರೆ. ಶವಸಂಸ್ಕಾರಕ್ಕೆ ಹೊರಡುವ ಮುಂಚೆ ಅನುಭವಿಕ ಹಿರಿಯರು ಬಿದಿರುಗಳಿಂದ ಶವದ ಚಟ್ಟು ಕಟ್ಟುತ್ತಾರೆ. ಶವದ ಚಟ್ಟ ತಯಾರಾದ ಮೇಲೆ ಶವವನ್ನು ಅಂಗಾತ ಮಲಗಿಸಿ ಸುತ್ತಲೂ ಹೂವಿನಮಾಲೆ ಕಟ್ಟುತ್ತಾರೆ. ಮೈತುಂಬಾ ಹೂವುಮಾಲೆಗಳಿಂದ ಮುಚ್ಚುತ್ತಾರೆ. ನಾಲ್ಕು ಜನರು

ಹೊರುತ್ತಾರೆ. ಇದು ಸಾಮಾನ್ಯವಾಗಿ ಈ ಸಮುದಾಯದವರು ಸರಳ ರೀತಿಯಲ್ಲಿ ಮಾಡುವ ವ್ಯವಸ್ಥೆ. ಹೆಗಲು ಬದಲಿಸಿ ಚಟ್ಟ ಹೊರುತ್ತಾರೆ. ವಿವಾಹವಾದವರಿದ್ದರೆ ಸುಡುತ್ತಾರೆ. ದಹನಕ್ರೀಯೆ ವಿವಾಹವಾಗದವರಿದ್ದರೆ ಹೂಳುತ್ತಾರೆ. ಮಾಡುತ್ತಾರೆ.

ಆಧಾರಗಳು

ಕರದಳ್ಳಿ ಚಂದ್ರಕಾಂತ, ೨೦೦೮, *ದರ್ಶನ ಮಾಲಿಕೆ ಶಹಾಪೂರ,* ಬಸವ ಪ್ರಕಾಶನ, ಗುಲಬರ್ಗಾ

ದೊಡ್ಡಮನಿ ಸಣ್ಣವೀರಣ್ಣ ಸಾಸನಿಕ್ ಮಹೇಂದರರಾವ್ ಪಿ, ೨೦೦೮, '*ಶಿಳ್ಳೇಕ್ಯಾತ*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ದೊಡ್ಡಮನಿ ಲೋಕರಾಜ ರಾವುಲೋಳ ಎಸ್ ಶ್ರೀನಿವಾಸ, ೨೦೦೮, '*ಸಿಂಧೊಳ್ಳು*' ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಬರಗೂರು, ರಾಮಚಂದ್ರಪ್ಪ., ಉಪ ಸಂಸ್ಕೃತಿ ಅಧ್ಯಯನ ಮಾಲೆ, ೧೯೯೩, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಬಾಲಗುರುಮೂರ್ತಿ ಪ್ರತಾಪ ರಾ. ಬಹುರೂಪಿ, ೨೦೦೮, '*ಬುಡ್ಗಜಂಗಮ*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಮಾನ್ವಡೆ ಬಿ. ಮಲ್ಲಿಕಾರ್ಜುನ, ೨೦೦೮,'*ಕೊರಮ*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಮೇತ್ರಿ, ಕೆ ಎಂ., ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ೨೦೦೮, ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ವಿಶ್ವನಾಥ ಎಲ್. ಬೈಲಪತ್ತಾರ ಜಗನ್ನಾಥ. ಎಂ. ಬೈಲಪತ್ತಾರ, ೨೦೦೮, '*ಬೈಲಪತ್ತಾರ*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಶಂಕರರಾವ್, ಚ ನ., *ಭಾರತೀಯ ಸಮಾಜ,* ೧೯೯೮, ಜೈಭಾರತ ಪ್ರಕಾಶನ, ಮಂಗಳೂರು

ಹಕ್ಕಿ ಡಿ.ಎನ್. ೧೯೮೬, ಶಹಾಪೂರ ತಾಲ್ಲೂಕು ದರ್ಶನ, ಐಬಿಹೆಚ್ ಪ್ರಕಾಶನ, ಬೆಂಗಳೂರು

ಹಿಮ್ಮಡಿ ಬಿ. ಯಲ್ಲಪ್ಪ, ೨೦೦೮, '*ಚೆನ್ನದಾಸರ*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಹಿರೇಮಠ ಎಸ್ ಬಿಸವರಾಜ್ ಸಾಳುಂಕಿ ಅಂಜಲಿ, ೨೦೦೮, '*ಘಿಸಾಡಿ*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಹೆಳವರ ಎಂ ಎಸ್, ೨೦೦೯,'*ಹೆಳವರು*', ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು

ಅಧ್ಯಾಯ ೪

ಅಲೆಮಾರಿಗಳ ಇತರೆ ಸಮುದಾಯಗಳೊಂದಿಗಿನ ಸಂಬಂಧ

ವ್ಯಕ್ತಿ ಮತ್ತು ಸಮಾಜಗಳ ನಡುವಿನ ಸಂಬಂಧ ಅವಿಭಜನೀಯವಾದುದು. ಮಾನವನು ಸಮಾಜದ ಸೃಷ್ಟಿಯಾಗಿರುವಂತೆ ಸಮಾಜವು ಮಾನವನ ಸೃಷ್ಟಿಯಾಗಿದೆ. ಎಂತಲೇ ಸಮಾಜದಲ್ಲಿ ಮಾನವನಿರುವಂತೆ ಮಾನವನಲ್ಲಿ ಸಮಾಜವಿದೆ ವ್ಯಕ್ತಿ-ವ್ಯಕ್ತಿಗಳ ಒಪ್ಪಂದದಿಂದ ಸಮಾಜ ನಿರ್ಮಾಣವಾಯಿತೆನ್ನುವುದು ಅಥವಾ ವ್ಯಕ್ತಿ ಮತ್ತು ಸಮಾಜಗಳ ನಡುವಿನ ಸಂಬಂಧವು ಪ್ರಾಣಿ ಜೀವಿಗೂ ಮತ್ತು ಅಂಗಾಂಗಗಳಿಗೂ ನಡುವೆ ಇರುವ ಸಂಬಂಧದಂತಿದೆ. ಅಂತೆಯೇ ಸಮಾಜದಲ್ಲಿ ಬದುಕುತ್ತಿರುವ ಪ್ರತಿಯೊಂದು ಸಮುದಾಯವು ಸ್ವತಂತ್ರವಾಗಿ ತಮ್ಮಷ್ಟಕ್ಕೆ ತಾವು ಬದುಕಲು ಸಾಧ್ಯವಾಗುವುದಿಲ್ಲ. ಅವು ಇನ್ನೊಂದು ಸಮುದಾಯಗಳೊಂದಿಗೆ ಒಂದಲ್ಲಾ ಒಂದು ರೀತಿಯ ಸಂಬಂಧವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಆದಿಮಾನವನ ಕಾಲಘಟ್ಟವನ್ನು ನೋಡಿದಾಗ ಮಾನವ ತಾನು ಬದುಕುವುದುಗೋಸ್ಕರ ಇನ್ನೊಂದು ಪ್ರಾಣಿಯನ್ನು ಬೇಟೆಯಾಡಿ ತಿನ್ನುತ್ತಿದ್ದನು. ಅದರಂತೆ ಸಮಾಜದಲ್ಲಿ ಸಮುದಾಯಗಳು ಬದುಕುವುದಕ್ಕೆ ಇನ್ನೊಂದು ಸಮುದಾಯವನ್ನು ಆಶ್ರಯಿಸಿ ಬದುಕುವುದು ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ವಿಷಯವಾಗಿದೆ.

ಅಲೆಮಾರಿ ಸಮುದಾಯಗಳು ಸಹ ತಮ್ಮ ಜೀವನ ನಿರ್ವಹಣೆಗೆ ಮತ್ತು ಸಮಾಜದಲ್ಲಿ ಬದುಕಿ ಬಾಳಲಿಕ್ಕೆ ಇನ್ನೊಂದು ಸಮುದಾಯವನ್ನು ಆಶ್ರಯಿಸಿ ಬದುಕುತ್ತಿರುವುದು ಕಂಡುಬರುತ್ತದೆ. ಬಹುತೇಕ ಅಲೆಮಾರಿ ಸಮುದಾಯಗಳು ಇತರ ಸಮುದಾಯಗಳ ಜೊತೆಗೆ ಸಂಬಂಧವನ್ನು ಹೊಂದಲು ಅವರ ಮೂಲ ಕಸುಬುಗಳು ಮುಖ್ಯವಾಗಿದೆ. ಇತರ ಸಮುದಾಯದವರಿಗೆ ತಮ್ಮ ಕುಲಕಸುಬಿನ ಮೂಲಕ ಸಂಬಂಧವನ್ನು ಹೊಂದಿರುವುದು ಕಂಡುಬರುತ್ತದೆ.

ಅಲೆಮಾರಿ ಸಮುದಾಯವಾದ ಬೈಲಪತ್ತಾರ ಸಮುದಾಯವು ಇತರೆ ಸಮುದಾಯದೊಂದಿಗೆ ಸಂಬಂಧವನ್ನು ಹೊಂದಿರಲು ಮುಖ್ಯ ಕಾರಣ, ಅವರ ಪತ್ತಾರಿಕೆ ಕೆಲಸದಿಂದ ಬೇರೆ ಸಮುದಾಯದ ಜನರಿಗೆ ಬೇಕಾಗುವ ಆಭರಣಗಳನ್ನು ತಯಾರಿಸಿ ಕೊಡುವುದರ ಮೂಲಕ. ಬಂದ ಹಣದಿಂದ ತಮ್ಮ ಜೀವನವನ್ನು ನಡೆಸುತ್ತಿರುವುದು ಕಂಡುಬರುತ್ತದೆ. ತಾವು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡುವುದರ ಮೂಲಕ ಬೇರೆ-ಬೇರೆ ಸಮುದಾಯಗಳ ಪರಿಚಯವು ಈ ಸಮುದಾಯಗಳಲ್ಲಿ ಬೇರೂರಿದೆ. ಈ ರೀತಿಯ ಆಭರಣಗಳ ಮಾರಾಟದಿಂದ ಇವರು ಇತರೆ ಸಮುದಾಯದವರೊಂದಿಗೆ ಒಳ್ಳೆಯ ಸಂಪರ್ಕ ಹೊಂದಿರುವುದನ್ನು ಕಾಣಬಹುದು.

ಬುಡ್ಗ ಜಂಗಮ ಸಮುದಾಯವು ಸಹ ಸಮಾಜದ ಇತರ ಸಮುದಾಯಗಳ ಜೊತೆಗೆ ತಮ್ಮ ಪಾರಂಪರಿಕ ವೇಷಗಾರ ವೃತ್ತಿಯಿಂದ ಸಮಾಜದ ಜನರ ವಿಶ್ವಾಸವನ್ನು ಹೊಂದಿರುವುದು ಕಾಣಬಹುದು. ಇವರು ತಮ್ಮ ವೃತ್ತಿ ಕಸುಬಾದ ವೇಷಗಾರ ವೃತ್ತಿಯಿಂದ ಮಹಾಭಾರತ, ರಾಮಾಯಣದ ಕಥೆಗಳಲ್ಲಿನ ಪಾತ್ರಗಳಂತೆ ಅಭಿನಯಿಸಿ ಸಮಾಜದ ಜನರ ಮನ್ನಣೆಯನ್ನು ಗಳಿಸಿರುವುದು ಕಂಡುಬರುತ್ತದೆ. ಸಮಾಜದಲ್ಲಿ ಮೇಲಸ್ತರದ ಜನರಿಗೆ ಇವರ ವೃತ್ತಿಯಿಂದ ಸಂತೋಷವಾಗಿ ಕಾಣಿಕೆಯನ್ನು ಹಣದ ರೂಪದಲ್ಲಿ ಮತ್ತು ದವಸ-ಧಾನ್ಯಗಳ ರೂಪದಲ್ಲಿ ಕೊಡುತ್ತಿದ್ದರು. ಈ ರೀತಿಯ ವೃತ್ತಿಯಿಂದಲೇ ಬುಡ್ಗಜಂಗಮ ಸಮುದಾಯ ಜೀವನ ನಡೆಸುತ್ತಿದೆ. ಅಂತೆಯೇ ಈ ಸಮುದಾಯದಲ್ಲಿ ಕೆಲವೊಬ್ಬರು ಭಿಕ್ಷಾಟನೆ ಮಾಡುವುದು ಸಹಜವಾಗಿ ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ಕೃಷಿಕ ಸಮುದಾಯದವರ ಹೊಲಗಳಿಗೆ ಕೂಲಿಕಾರ್ಮಿಕರಾಗಿ ಕೆಲಸ ಮಾಡುವುದರ ಮೂಲಕ ಇತರೆ ಸಮುದಾಯದವರ ಜೊತೆಗೆ ಸಂಬಂಧ ಹೊಂದಿರುವುದು ಕಂಡುಬರುತ್ತದೆ.

ಚೆನ್ನದಾಸರ ಸಮುದಾಯವು ತಮ್ಮ ಪಾರಂಪರಿಕ ವೃತ್ತಿಯಾದ ತತ್ವ ಪದಗಳನ್ನು ಹಾಡುತ್ತಾ ಧಾರ್ಮಿಕವಾಗಿ ಭಿಕ್ಷೆಯನ್ನು ಬೇಡಲು ಇತರ ಮೇಲಸ್ತರದ ಸಮುದಾಯದವರ ಮನೆಗಳಿಗೆ ಭಿಕ್ಷೆಗೆ ಹೋಗುವರು. ಅವರು ನೀಡುವ ಆಹಾರ, ದವಸ-ಧಾನ್ಯಗಳನ್ನು ತಂದು ಕುಟುಂಬದಲ್ಲಿ ಎಲ್ಲರು ಬದುಕುವುದು ಕಂಡುಬರುತ್ತಿದೆ. ಜೊತೆಗೆ ಇತ್ತೀಚಿನ ದಿನಗಳಲ್ಲಿ ಈ ಸಮುದಾಯದವರು ವಿವಿಧ ವ್ಯಾಪಾರ ವೃತ್ತಿಯನ್ನು ಕೈಗೊಂಡಿರುವುದರ ಮೂಲಕ ಸಮಾಜದ ಇತರೆ ಸಮುದಾಯದವರ ಜೊತೆ ವ್ಯವಹಾರಿಕ ಸಂಬಂಧವನ್ನು ಬೆಳೆಸಿಕೊಂಡಿದ್ದಾರೆ.

ಘಿಸಾಡಿ ಸಮುದಾಯವು ಮೂಲತಃ ಅಲೆಮಾರಿ ಸಮುದಾಯವಾಗಿದ್ದು, ತಮ್ಮ ಮೂಲ ಕಸುಬಾದ ಕಂಬಾರಿಕೆ ಕೆಲಸವನ್ನು ಮಾಡುತ್ತಾ ಸಮಾಜದ ಇತರೆ ಸಮುದಾಯದವರ ಜೊತೆಗೆ ವ್ಯವಹಾರಿಕ ಸಂಬಂಧವನ್ನು ಹೊಂದಿದ್ದಾರೆ. ಇವರು ರೈತಾಪಿ ಜನರಿಗೆ, ಕೃಷಿಗೆ ಬೇಕಾಗುವ ಉಪಕರಣಗಳನ್ನು ಮಾಡಿಕೊಡುವುದರ ಮೂಲಕ ಬಂದ ಹಣದಿಂದ ತಮ್ಮ ಜೀವನ ನಿರ್ವಹಣೆ ಮಾಡಿಕೊಂಡು ಇತರರನ್ನು ನಂಬಿಕೊಂಡು ಬದುಕುತ್ತಿರುವ ಸಮುದಾಯವಾಗಿ ಇವರ ಜೊತೆ ಇತರೆ ಸಮುದಾಯಗಳು ವಿಶ್ವಾಸದಿಂದ ಇರುವರು.

ಹೆಳವ ಸಮುದಾಯವು ತಮ್ಮ ಕುಲಕಸುಬಾದ ವಂಶಾವಳಿಯನ್ನು ಹೇಳುವುದರ ಮೂಲಕ ಇತರ ಸಮುದಾಯಗಳ ಜೊತೆಗಿನ ಸಂಬಂಧಗಳು ಬಹಳ ವಿಶ್ವಾಸದಿಂದ ಕೂಡಿವೆ. ಇವರು ತಾವು ವಂಶಾವಳಿ

ಹೇಳುವ ಸಮುದಾಯದವರಿಂದ ಹೆಚ್ಚಿನ ಪ್ರೋತ್ಸಾಹವನ್ನು ದೊರೆಯುವುದರ ಜೊತೆಗೆ ತಮ್ಮ ಜೀವನಕ್ಕೆ ಬೇಕಾಗುವ ಅವಶ್ಯಕ ವಸ್ತುಗಳನ್ನು ವಂಶಾವಳಿ ಹೇಳುವುದರ ಮೂಲಕ ಪಡೆದುಕೊಳ್ಳುತ್ತಿದ್ದರು. ತಲೆ ತಲಾಂತರದಿಂದ ಬೇರೆ ಸಮುದಾಯದವರ ವಂಶಾವಳಿ ಇವರು ಬರೆದಿಡುವುದರಿಂದ ಕೆಲವು ಸಮುದಾಯಗಳಿಗೆ ತಮ್ಮ ಪೂರ್ವಜರು ಎಲ್ಲಿಂದ ಬಂದರೂ ಮತ್ತು ಮೂಲ ಯಾವುದೆಂದು ಎಲ್ಲವು ದಾಖಲಿಸಿಕೊಂಡಿರುತ್ತಾರೆ. ಇದರಿಂದಲೇ ಇವರಿಗೆ ಪ್ರೀತಿ ಆದಾರದ ಭಾವನೆ ಬೇರೆ ಸಮುದಾಯದವರು ತೋರಿಸುತ್ತಿರುವುದು ಕಂಡುಬರುತ್ತದೆ. ಅಂತೆಯೇ ಇವರಲ್ಲಿಯೇ ಚಾಪೆ ಹೆಳವರು ತಮ್ಮ ವೃತ್ತಿ ಕಸುಬಾದ ಚಾಪೆ ನೇಯ್ಗೆ ಮಾಡಿ ಮಾರಾಟ ಮಾಡುವುದರಿಂದ ಇತರೆ ಸಮುದಾಯಗಳ ಜೊತೆ ಸಂಬಂಧವನ್ನು ಇಟ್ಟುಕೊಂಡು ಅವರನ್ನು ಅವಲಂಬಿತರಾಗಿ ಬದುಕುತ್ತಿರುವುದು ಕಂಡುಬರುತ್ತದೆ.

ಕೊರಮ ಸಮುದಾಯವು ಅಲೆಮಾರಿ ಸಮುದಾಯವಾಗಿದ್ದು, ಇವರು ಸಮಾಜದ ಇತರ ಸಮುದಾಯಗಳ ಜೊತೆ ತಮ್ಮ ಕುಲಕಸುಬಿನಿಂದ ಉತ್ತಮವಾದ ಒಡನಾಟದಿಂದ ಬದುಕುತ್ತಿರುವುದು ನೋಡಬಹುದು. ಇವರು ತಮ್ಮ ವೃತ್ತಿಯಾದ ಬಾರಿಗೆ ಕಟ್ಟಿ ಮಾರಾಟ ಮಾಡಿ ಬದುಕುತ್ತಿರುವರು. ಇವರು ಸಹ ಬೇರೆ ಸಮುದಾಯಗಳನ್ನು ನಂಬಿಕೊಂಡು ಬದುಕುತ್ತಿರುವ ಸಮುದಾಯವಾಗಿದೆ. ಬೇರೆ ಸಮುದಾಯವು ಇವರು ತಯಾರಿಸಿದ ಬಾರಿಗೆ, ಬುಟ್ಟಿ ಇನ್ನಿತರ ಗೃಹ ಉಪಯೋಗಿ ವಸ್ತುಗಳನ್ನು ಕೊಂಡುಕೊಳ್ಳುವುದರ ಮೂಲಕ ಬೇರೆಯವರು ಕೊರಮ ಸಮುದಾಯದವರ ಮೇಲೆ ಅವಲಂಬನೆಯಾಗಿರುವುದು ಕಂಡುಬರುತ್ತದೆ. ಹೀಗೆ ಪರಸ್ಪರ ಸಂಬಂಧವನ್ನು ಹೊಂದಿರುವುದನ್ನು ಈ ಸಮುದಾಯದಲ್ಲಿ ಕಾಣಬಹುದು.

ಶಿಳ್ಳೆಕ್ಯಾತ ಸಮುದಾಯವು ಮೂಲತಃ ಮೀನುಗಾರಿಕೆಯ ಕೆಲಸವನ್ನು ಮಾಡುವುದರ ಜೊತೆಗೆ ತೊಗಲು ಗೊಂಬೆ ಕಲೆ, ಹಚ್ಚೆ ಹಾಕುವ ಕಲೆಯಿಂದ ಜನರಲ್ಲಿ ಒಡನಾಟದಿಂದ ಬದುಕುತ್ತಿದ್ದಾರೆ. ಅಲ್ಲದೆ ಇತರ ಸಮುದಾಯಗಳನ್ನು ನಂಬಿಕೊಂಡು ಬದುಕುತ್ತಿವೆ. ಇವರ ಕಲೆಯನ್ನು ಇತರ ಸಮುದಾಯಗಳಿಗೆ ಮೆಚ್ಚುಗೆಯಾಗುವುದರಿಂದ ಅವರು ಈ ಸಮುದಾಯದವರಿಗೆ ಕಾಣಿಕೆಯ ರೂಪದಲ್ಲಿ ಹಣವನ್ನು ಹಾಗೂ ಇತರ ವಸ್ತುಗಳನ್ನು ನೀಡುವುದರಿಂದ ಇದನ್ನು ನಂಬಿಕೊಂಡಿರುವ ಶಿಳ್ಳೆಕ್ಯಾತರು ಇತರ ಸಮುದಾಯದವರಿಗೆ ವಿಧೇಯರಾಗಿರುತ್ತಾರೆ. ಮೀನುಗಾರಿಕೆ ವೃತ್ತಿಯನ್ನು ಮಾಡುವ ಶಿಳ್ಳೆಕ್ಯಾತ ಸಮುದಾಯದವರ ಹತ್ತಿರ ಅವರು ಹಿಡಿದ ಮೀನುಗಳನ್ನು ಕೊಳ್ಳಲು ಬೇರೆ ಸಮುದಾಯದವರು ಇವರ ಹತ್ತಿರ ಬರುತ್ತಾರೆ. ಇದರಿಂದ ಇತರ ಸಮುದಾಯಗಳ ಜೊತೆಗೆ ವ್ಯವಹಾರಿಕ ಸಂಬಂಧವನ್ನು ಶಿಳ್ಳೆಕ್ಯಾತರು ಹೊಂದಿರುವುದು ಕಂಡುಬರುತ್ತದೆ. ಆದ್ದರಿಂದ ಶಿಳ್ಳೆಕ್ಯಾತ ಸಮುದಾಯವು ತಮ್ಮ ಜೀವನ ನಿರ್ವಹಣೆಗಾಗಿ ಇತರೆ ಸಮುದಾಯಗಳ ಜೊತೆ ಸಾಮಾಜಿಕ ಸಂಬಂಧವನ್ನು ಹೊಂದಿರುವುದು ಕಾಣಬಹುದಾಗಿದೆ.

ಸಿಂಧೋಳ್ಳು ಸಮುದಾಯವು ಮೂಲತಃ ಭಿಕ್ಷಾಟನೆಯನ್ನು ಮಾಡುತ್ತಾ ಇತರ ಸಮುದಾಯಗಳನ್ನು ಅವಲಂಬಿಸಿರುವುದು. ಹಿಂದೆ ಈ ಸಮುದಾಯಕ್ಕೆ ಬಹಳ ಮನ್ನಣೆ ಇತ್ತು. ಇವರು ಊರಿನಲ್ಲಿ ತಮ್ಮ

ದೇವತೆಯಾದ ಮಾರೆಮ್ಮ, ದುರುಗಮ್ಮ ದೇವತೆಗಳನ್ನು ಒಂದು ಬುಟ್ಟಿಯಲ್ಲಿ ಇಟ್ಟು ಅದರ ಸುತ್ತ ಬೇವಿನ ತಪ್ಪಲನ್ನು ಇಟ್ಟುಕೊಂಡು, ಬೇವಿನ ತಪ್ಪಲನ್ನು ಕೈಯಲ್ಲಿ ಹಿಡಿದುಕೊಂಡು ಜನರ ಮುಖದ ಮೇಲೆ ಸವರುತ್ತಿದ್ದರು. ಇದರಿಂದ ಯಾವ ರೋಗವಿದ್ದರೂ ದೂರವಾಗುತ್ತಿತ್ತು ಎಂಬ ನಂಬಿಕೆ ಇತರ ಸಮುದಾಯದವರಲ್ಲಿತ್ತು. ಇದರಿಂದಾಗಿ ಬೇರೆ ಸಮುದಾಯದವರು ಇವರಿಗೆ ಹಣ, ದವಸ-ಧಾನ್ಯವನ್ನು ನೀಡುತ್ತಿದ್ದರು. ಇದರಿಂದಲೆ ಸಿಂಧೋಳ್ಳರ ಜೀವನ ನಡೆಯುತ್ತಿದ್ದರೂ ಇವರಲ್ಲಿ ಭಿಕ್ಷಾಟನೆಯು ಇನ್ನು ಕಂಡುಬರುತ್ತದೆ. ಭಿಕ್ಷಾಟನೆ ಮಾಡುವ ಸಂದರ್ಭದಲ್ಲಿ ಇತರೆ ಸಮುದಾಯದವರ ಹತ್ತಿರ ಹಣವನ್ನು ಪಡೆಯಲು ಅವಲಂಬನೆಯಾಗುವುದು ಕಂಡುಬರುತ್ತದೆ.

ಈ ರೀತಿಯಾಗಿ ಅಲೆಮಾರಿ ಸಮುದಾಯಗಳು ತಾವು ಮಾಡುವ ವೃತ್ತಿಗಳಿಂದ ಸಮಾಜದ ಇತರೆ ಸಮುದಾಯದವರನ್ನು ಅವಲಂಬಿಸಿದರೂ ಸಮಾಜದ ಇತರೆ ಸಮುದಾಯದವರು ಇವರು ಮಾಡುವ ಪರಿಕರಗಳನ್ನು ಅವಲಂಬಿಸಿಕೊಂಡು ಅಲೆಮಾರಿ ಸಮುದಾಯದವರ ಜೊತೆ ಸಾಮಾಜಿಕ ಸ್ತರ ವ್ಯವಸ್ಥೆಯಲ್ಲಿ ಸಂಬಂಧವನ್ನು ಹೊಂದಿರುವುದು ಕಂಡುಬರುತ್ತದೆ.

೪.೧ ಅಲೆಮಾರಿ ಸಮುದಾಯಗಳ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು

ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾಜವು ನಿತ್ಯ ಪರಿವರ್ತನೆಯಾಗುವುದರ ಜೊತೆಗೆ ಅದು ಒಂದು ಜೀವಂತ ವ್ಯವಸ್ಥೆಯಾಗಿರುವುದಕ್ಕೆ ಮಾನವನ ಬುದ್ಧಿ ರಚನಾತ್ಮಕ ಶಕ್ತಿ ನೈಸರ್ಗಿಕ ಅಂಶಗಳು ಕಾರಣವಾಗಿವೆ. ಸಮಾಜದ ಒಂದು ಕ್ಷೇತ್ರ ಪ್ರಭಾವ ಬೀರುತ್ತವೆ. ಬಹುದಿನಗಳ ಕೆಳಗೆ ಸಾಮಾಜಿಕ ರಚನೆ ಹಾಗೂ ಸಮುದಾಯಗಳು ತೀರಾ ಸರಳವಾಗಿದ್ದು, ಆಗ ಬದಲಾವಣೆಗೆ ಅವಕಾಶ ಕಡಿಮೆ ಇದ್ದವು. ಕಾಲ ಬದಲಾದಂತೆ ವಿಜ್ಞಾನ ಮತ್ತು ತಂತ್ರ ಜ್ಞಾನಗಳ ಬೆಳವಣಿಗೆಗಳಾದವು. ಇಂದು ಮಾನವ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಬದಲಾವಣೆಗಳಾಗುತ್ತಿವೆ. ಕಾಲಕಾಲಕ್ಕೆ ಎಲ್ಲೆಡೆ ನೂತನ ನಿಯಮಗಳು ಕಾಣಿಸಿಕೊಳ್ಳುತ್ತವೆ. ಹಳೆಯ ಆಚಾರ ವಿಚಾರ ಮತ್ತು ಹೊಸ ಬದಲಾವಣೆಗಳ ನಡುವೆ ಸಂಘರ್ಷಗಳು ತಲೆದೋರಿವೆ. ಸಾಮಾಜಿಕ ಬದಲಾವಣೆಯ ವೇಗವು ಬಹಳ ತೀವ್ರವಾಗಿದ್ದು, ಅದರ ಜೊತೆಯಲ್ಲಿ ಸೂಕ್ತವಾಗಿ ಸ್ಪಂಧಿಸಲು ಬಹುತೇಕ ಮಾನವರು ವಿಫಲರಾದರೆ ಸಾಮಾಜಿಕ ರಚನೆಯಲ್ಲಿ ಏರಿಳಿತಗಳಾಗುತ್ತವೆ. ಇದರಿಂದಾಗಿ ಸಮಾಜದಲ್ಲಿ ಸಾಮಾಜಿಕ ವಿಘಟನೆಗಳು ಸಂಭವಿಸುತ್ತದೆ.

ಇಂದು ನಾಗರೀಕ ಸಮಾಜದಲ್ಲಿ ಸಮಸ್ಯೆಗಳು ಸಾಮಾನ್ಯವಾಗಿ ಹಲವು ವ್ಯಕ್ತಿಗಳಿಗೆ ಏಕಕಾಲದಲ್ಲಿ, ಏಕ ಪ್ರಕಾರವಾಗಿ ಕಂಡುಬಂದರೆ ಅವುಗಳನ್ನು ಸಾಮಾಜಿಕ ಸಮಸ್ಯೆಗಳೆಂದು ಕರೆಯಬಹುದು. ಅವು ಬಹಳಷ್ಟು ಜನರಿಗೆ ಕಂಡುಬರುತ್ತಿರುವ ಸಮಸ್ಯೆಗಳಾಗಿರುವುದರಿಂದ ಸಾಮಾಜಿಕ ಸಮಸ್ಯೆಗಳೆನಿಸುತ್ತವೆ. ಅಲ್ಲದೆ ಯಾವುದೊ ತೊಂದರೆ ನಿರಂತರವಾಗಿ ಕಾಡುತ್ತಿದ್ದು, ಅದನ್ನು ಅನಿವಾರ್ಯವಾಗಿ ಅನುಭವಿಸುವಂತಹ

ವಾತಾವರಣ ನಿರ್ಮಾಣವಾದರೆ ಅದನ್ನು ಸಮಸ್ಯೆ ಎಂದು ಪರಿಗಣಿಸಲಾಗುತ್ತಿದೆ. ಸಮಸ್ಯೆಗಳು ಬಹುಮಟ್ಟಿಗೆ ಕಣ್ಣಿನಿಂದ ನೋಡಬಹುದು. ಆದರೆ ಕೈಯಿಂದ ಹಿಡಿಯಲು ಸಾಧ್ಯವಾಗದು. ಸಮಸ್ಯೆಯ ಇರುವಿಕೆಯನ್ನು ಸಾಮಾನ್ಯವಾಗಿ ಎರಡು ವಿಧಗಳಾಗಿ ಗುರುತಿಸಬಹುದು. ಮೊದಲನೆದಾಗಿ ಆ ಸಮಸ್ಯೆಯನ್ನು ನೇರವಾಗಿ ತಿಳಿಯಪಡಿಸಿದಾಗ ಹಾಗೂ ಎರಡನೆಯದಾಗಿ ಅಧ್ಯಯನಕಾರರು ಆ ಸಮಸ್ಯೆಯ ಹಲವು ಲಕ್ಷಣಗಳ ವಿವಿಧ ಮುಖಗಳು ಹಾಗೂ ಅದರ ಪರಿಣಾಮಗಳ ಆಧಾರದ ಮೇಲೆ ಪರಿಸ್ಥಿತಿಗಳನ್ನು ತಿಳಿಸಿಕೊಂಡು ವಿವರಿಸಿದಾಗ ಅಲ್ಲಿ ಅಧ್ಯಯನಕಾರರು ಸಮಸ್ಯೆಗಳನ್ನು ಅರಿತುಕೊಳ್ಳಲು ಅವುಗಳನ್ನು ಅನುಭವಿಸುವುದರೊಂದಿಗೆ ನಿಕಟವಾದ ಸಂಪರ್ಕ ಹೊಂದಿರಬೇಕಾದದ್ದು ಬಹಳ ಅಗತ್ಯವಾಗಿರುತ್ತದೆ.

ಪ್ರಸ್ತುತ ಅಲೆಮಾರಿ ಸಮುದಾಯಗಳು ಕೂಡಾ ಇಂದಿನ ಆಧುನಿಕ ಜಗತ್ತಿನ ಕೊಳಗೇರಿ ನಿವಾಸಿಗಳಾಗಿ ಅಲೆಮಾರಿಗಳಾಗಿ ಮತ್ತು ಆಧುನಿಕತೆಯ ತಂತ್ರಜ್ಞಾನದಿಂದ ಇವರ ಪಾರಂಪರಿಕ ಕುಲವೃತ್ತಿಗಳು ಮೂಲೆಗುಂಪಾಗಿ ಇವರು ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಅಧ್ಯಯನದ ಕ್ಷೇತ್ರಕಾರ್ಯದಿಂದ ತಿಳಿದು ಬರುತ್ತದೆ.

ಮಾನವನಿಗೆ ಮೂಲಭೂತ ಅವಶ್ಯಕತೆಗಳಾದ ಆಹಾರ, ವಸತಿ, ಬಟ್ಟೆ, ಗಾಳಿ, ಬೆಳಕು ಇವು ಮುಖ್ಯ ವಾಗಿರುತ್ತವೆ. ಇಂತಹ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಇಂದು ಅಲೆಮಾರಿ ಸಮುದಾಯಗಳು ಪರಿಚಿತವೆನಿಸುವುದು ಕಂಡುಬರುತ್ತದೆ. ಅವುಗಳಲ್ಲಿ ಇವರ ಕೆಲವು ಪ್ರಮುಖವಾದ ಸಮಸ್ಯೆಗಳನ್ನು ಮಾತ್ರ ಇಲ್ಲಿ ಚರ್ಚಿಸಿ ವಿವರಿಸಲಾಗಿದೆ.

೧. ವಸತಿ ಸಮಸ್ಯೆ

ಅಲೆಮಾರಿ ಸಮುದಾಯಗಳು ನೆಲೆನಿಂತುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಇವರಿಗೆ ವಾಸಿಸಲು ಯೋಗ್ಯವಾದ ವಾಸದ ಮನೆಗಳಲ್ಲದೆ ವಸತಿ ವಂಚಿತರಾಗಿದ್ದು ಇಂದು ಸಹ ಗುಡಾರ-ಗುಡಿಸಲುಗಳಲ್ಲಿಯೇ ವಾಸಿಸುತ್ತಿದ್ದಾರೆ. ನಗರ ಅಥವಾ ಪಟ್ಟಣ ಪ್ರದೇಶಗಳ ಕೊಳಚೆ ಸ್ಥಳಗಳು ಮತ್ತು ಸಾರ್ವಜನಿಕ ಸ್ಥಳಗಳೇ ಇವರಿಗೆ ಗತಿಯಾಗಿವೆ. ಕೊಳಚೆ ಪ್ರದೇಶಗಳಲ್ಲಿ ಸರಿಯಾಗಿ ರಸ್ತೆಗಳಿರುವುದಿಲ್ಲ. ಚರಂಡಿ ವ್ಯವಸ್ಥೆ, ಬೀದಿ ದೀಪಗಳಿರುವುದಿಲ್ಲ. ಇನ್ನು ಮಳೆಗಾಲದಲ್ಲಿ ಗುಡಾರದ ತುಂಬೆಲ್ಲಾ ನೀರು ನಿಂತು ಮಲಗಿಕೊಳ್ಳಲು ಪರಿತಪಿಸುತ್ತಾರೆ. ಒಪ್ಪತ್ತಿನ ಊಟ ಮಾಡಲು ಪರಿತಪಿಸುವ ಪ್ರಸಂಗಗಳು ಇವರಿಗೆ ಬಂದೊದಗುತ್ತವೆ. ಜೊತೆಗೆ ಇತರ ಜನರಿಂದಲೂ ತೊಂದರೆಗಳನ್ನು ಅನುಭವಿಸುತ್ತಾರೆ. ಪ್ರಸ್ತುತ ಶಹಾಪುರ ನಗರದಲ್ಲಿ ವಾಸವಾಗಿರುವ ಅಲೆಮಾರಿ ಸಮುದಾಯಗಳಿಗೆ ವಾಸಿಸಲು ಸೂಕ್ತವಾದ ನಿವೇಶನಗಳನ್ನು ಇಲ್ಲಿ ಇತ್ತೀಚೆಗೆ ಸರ್ಕಾರದ ವತಿಯಿಂದ ಕೆಲವೊಂದು ಸಮುದಾಯಗಳಿಗೆ ನೀಡಿದ್ದಾರೆ. ಆ ಪ್ರದೇಶ ತಗ್ಗು-ದಿನ್ನೆಗಳಿಂದ ಕೂಡಿದ್ದರಿಂದ ಅಲ್ಲಿ ಹೋಗಿ ವಾಸಿಸಲು ಅಲೆಮಾರಿಗಳು ಹಿಂಜರಿಯುತ್ತಿದ್ದಾರೆ. ಇನ್ನು ಕೆಲವು ಸಮುದಾಯ ಗಳಿಗೆ ನಿವೇಶನ ಪಡೆಯುವಲ್ಲಿ ವಿಫಲವಾಗಿವೆ. ಜೊತೆಗೆ ನಿವೇಶನ ಹಕ್ಕು ಸಿಗದೆ ಪರಿತಪಿಸುತ್ತಿದ್ದಾರೆ.

೨. ವೃತ್ತಿ ಸಮಸ್ಯೆ

ಆಧುನಿಕತೆಯ ಕಾಲದಲ್ಲೂ ಅಲೆಮಾರಿ ಸಮುದಾಯಗಳು ತಮ್ಮ ಜೀವನಕ್ಕೆ ಆಧಾರವಾದ ವೃತ್ತಿಯಿಂದಲೇ ಬದುಕುತ್ತಿದ್ದಾರೆ. ಆದರೆ ಆ ವೃತ್ತಿಗಳು ಇತರರ ಪ್ರಭಾವದಿಂದಾಗಿ ಮಾಯವಾಗುತ್ತಿರುವುದು. ಅಲೆಮಾರಿ ಸಮುದಾಯಗಳ ಮೂಲ ವೃತ್ತಿಗೆ ಕೈಗಾರೀಕರಣದ ಪ್ರಭಾವವು ತೀವ್ರವಾದ ಪೆಟ್ಟು ನೀಡಿದೆ. ಇಂದು ಅಲೆಮಾರಿ ಸಮುದಾಯಗಳ ವೃತ್ತಿಗಳಿಂದ ವಂಚಿತರಾಗುತ್ತಿದ್ದಾರೆ. ಇಂದಿನ ಆಧುನಿಕ ತಂತ್ರಜ್ಞಾನದಿಂದ ತಯಾರಿಸಿದ ಬೃಹತ್ ಯಂತ್ರಗಳು ಕೆಲವೇ ಗಂಟೆಗಳಲ್ಲಿ ಮಾನವನ ಜೀವನಾವಶ್ಯಕ ವಸ್ತುಗಳನ್ನು ತಯಾರಿಸುತ್ತಿರುವುದರಿಂದ ಇದರ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ. ಇದರಿಂದ ಅಲೆಮಾರಿ ಸಮುದಾಯಗಳ ನೈಸರ್ಗಿಕ ವೃತ್ತಿಗಳ ಮೇಲೆ ತೀವ್ರವಾದ ಪರಿಣಾಮ ಬೀರಿರುವುದು ಕಂಡುಬರುತ್ತದೆ. ಕಾಡಿನಲ್ಲಿ ಬೇಟೆಯಾಡಿ ಬದುಕುತ್ತಿದ್ದ ಅಲೆಮಾರಿಗಳು ಬೇಟೆಯಾಡುವುದು ನಿಷೇಧಿಸಿರುವುದರಿಂದ ಹೊಟ್ಟೆಪಾಡಿಗಾಗಿ ಪರಿತಪಿಸುತ್ತಿರುವುದು ಕಂಡುಬರುತ್ತದೆ. ಅಲೆಮಾರಿಗಳಲ್ಲಿ ಬಹುತೇಕರು ಭಿಕ್ಷಾಟನೆ ಮಾಡಿ ಬದುಕುತ್ತಾರೆ. ಸರ್ಕಾರವು ಭಾಕ್ಷಾಟನೆಯನ್ನು ನಿಷೇಧಿಸಿರುವುದರಿಂದ ಇವರು ತೊಂದರೆಗಳನ್ನು ಎದುರಿಸುತ್ತಿರುವರು. ಹಾಗಾಗಿ ಬಹುತೇಕ ಅಲೆಮಾರಿ ಸಮುದಾಯಗಳು ವೃತ್ತಿಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

೩. ಜಾತಿ ಪ್ರಮಾಣಪತ್ರ ಪಡೆಯುವಲ್ಲಿನ ಸಮಸ್ಯೆ

ಬಹುತೇಕ ಅಲೆಮಾರಿ ಸಮುದಾಯಗಳಲ್ಲಿ ತಮ್ಮ ಜಾತಿ ಯಾವುದು ಎಂದು ಅವರಿಗೆ ಗೊತ್ತಿರುವುದಿಲ್ಲ. ತಾವು ಮಾಡುವ ವೃತ್ತಿಗಳ ಆಧಾರದ ಮೇಲೆ ಗುರುತಿಸಿಕೊಂಡಿದ್ದಾರೆ. ಇವರಲ್ಲಿ ಜಾತಿಯ ಕಲ್ಪನೆಯು ಇರುವುದಿಲ್ಲ. ಮೂಲತಃವಾಗಿ ಸಮುದಾಯಗಳಿಂದ ದೂರವಿರುವುದು ಕಂಡುಬರುತ್ತದೆ. ಇಂದು ಬಹುತೇಕ ಅಲೆಮಾರಿ ಸಮುದಾಯಗಳು ಒಂದು ಕಡೆ ನೆಲೆ ನಿಲ್ಲಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ ಸೌಲಭ್ಯಗಳನ್ನು ಪಡೆದುಕೊಳ್ಳಲು ಜಾತಿ ಪ್ರಮಾಣ ಪತ್ರ ಮುಖ್ಯವಾಗಿದೆ. ಇದರಿಂದ ಅಲೆಮಾರಿ ಸಮುದಾಯಗಳು ತಮ್ಮ ವೃತ್ತಿಯನ್ನು ಜಾತಿ ಎಂದು ಹೇಳುವುದರಿಂದ ತೊಂದರೆಗೆ ಒಳಗಾಗುತ್ತಿದ್ದಾರೆ. ಬಹುತೇಕ ಅಲೆಮಾರಿ ಸಮುದಾಯಗಳು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಬರುತ್ತಿದ್ದರೂ ಪ್ರಮಾಣಪತ್ರ ನೀಡುವ ಅಧಿಕಾರಿಗಳಿಂದ ಪ್ರಮಾಣ ಪತ್ರ ಪಡೆಯುವಲ್ಲಿ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಶಹಪೂರ ನಗರದಲ್ಲಿ ವಾಸವಾಗಿರುವ ಬಹುಸಂಖ್ಯಾತ ಅಲೆಮಾರಿ ಸಮುದಾಯಗಳು ಜಾತಿ ಪ್ರಮಾಣ ಪತ್ರ ಪಡೆಯುವಲ್ಲಿ ವಂಚಿತರಾಗಿರುವರು. ಈ ತರಹದ ತೊಂದರೆಗಳು ಬಹುತೇಕ ಕಡೆ ವಾಸಿಸುವ ಅಲೆಮಾರಿ ಸಮುದಾಯಗಳಲ್ಲಿ ಕಂಡುಬರುವ ಪ್ರಮುಖ ಸಮಸ್ಯೆಯಾಗಿದೆ.

೪. ಶೈಕ್ಷಣಿಕ ಸಮಸ್ಯೆ

ಅಲೆಮಾರಿ ಸಮುದಾಯಗಳಲ್ಲಿ ಶೈಕ್ಷಣಿಕ ಸಮಸ್ಯೆಯು ಬಹುಮುಖ್ಯವಾದ ಸಮಸ್ಯೆಗಳಲ್ಲಿ ಒಂದಾಗಿದೆ. ಈ ಸಮುದಾಯಗಳು ದಿನನಿತ್ಯದ ಹೊಟ್ಟೆಪಾಡಿಗಾಗಿ ಪರಿತಪಿಸುತ್ತಿದ್ದು, ಕುಟುಂಬದ ಎಲ್ಲರು ತಮ್ಮ

ಜೀವನಕ್ಕಾಗಿ ಭಿಕ್ಷಾಟನೆ ಇಲ್ಲವೆ ತಮ್ಮ ಕುಲವೃತ್ತಿ ಮಾಡಿ ಬದುಕುವುದೇ ಕಷ್ಟಕರ. ಇನ್ನು ಮಕ್ಕಳನ್ನು ಶಾಲೆಗೆ ಕಳುಹಿಸುವುದು ಹೇಗೆ ಸಾಧ್ಯ. ಇವರಲ್ಲಿ ಕಿತ್ತು ತಿನ್ನುತ್ತಿರುವ ಬಡತನ ಮುಖ್ಯ ಕಾರಣವಾಗಿದೆ. ಜೊತೆಗೆ ನಿರಂತರ ಅಲೆಮಾರಿತನದಿಂದ ಇವರ ಮಕ್ಕಳು ಶಿಕ್ಷಣ ಪಡೆಯುವಲ್ಲಿ ಸಮಸ್ಯೆ ಎದುರಿಸುತ್ತಿದ್ದಾರೆ. ಇವರು ನೆಲೆಸಿರುವ ಪರಿಸರ ಮತ್ತು ವಾತಾವರಣ ಸೂಕ್ತವಾಗಿರುವುದಿಲ್ಲ. ಇವರು ನೆಲೆಸಿರುವ ಪ್ರದೇಶ ಬಹುತೇಕ ಅನಕ್ಷರಸ್ಥರಿಂದ ಕೂಡಿರುತ್ತದೆ. ಇದರಿಂದ ಇವರ ಮಕ್ಕಳನ್ನು ಶಾಲೆಗೆ ಕಳುಹಿಸದಿರುವುದು ಕಂಡುಬರುತ್ತದೆ. ಅಲೆಮಾರಿ ಸಮುದಾಯದವರು ವಾಸಿಸುವ ಕೆಲವು ಕಡೆಗಳಲ್ಲಿ ಸರ್ಕಾರ ಟೆಂಟ್‌ಶಾಲೆಗಳನ್ನು ತೆರೆದು ಶಿಕ್ಷಣ ನೀಡಲು ಸರ್ಕಾರದಿಂದ ಶಿಕ್ಷಕರನ್ನು ನೇಮಿಸಿದರೂ ಅಲೆಮಾರಿ ಮಕ್ಕಳಿಗೆ ಭಾಷೆಯ ಸಮಸ್ಯೆಯು, ಶಿಕ್ಷಣ ಪಡೆದುಕೊಳ್ಳಲು ಸಮಸ್ಯೆಯಾಗಿದೆ. ಪಾಲಕರು ಮಕ್ಕಳನ್ನು ಶಾಲೆಗೆ ಕಳಿಸಲು ಪ್ರೋತ್ಸಾಹ ತೋರದೆ ಇರುವುದು ದೊಡ್ಡ ಸಮಸ್ಯೆಯಾಗಿ ಕಂಡುಬರುತ್ತದೆ.

ಙ. ಸಂಘಟನೆಗಳ ಕೊರತೆ

ಗುಲಬರ್ಗಾ ಜಿಲ್ಲೆಯ ಶಹಾಪುರ ನಗರದಲ್ಲಿ ವಾಸವಾಗಿರುವ ಎಂಟು ಸಮುದಾಯಗಳು ನೆಲೆಸಿರುವ ಪ್ರದೇಶಗಳಿಗೆ ಅಧ್ಯಯನ ಸಂದರ್ಭದಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಇವರು ತಮ್ಮ ಸಮುದಾಯಗಳ ಇತ್ತೀಚಿನ ತೀವ್ರ ತರಹದ ಸಮಸ್ಯೆ ಹಾಗೂ ಕೊರತೆಗಳ ಬಗ್ಗೆ ಸಾಮೂಹಿಕವಾಗಿ ಚರ್ಚಿಸಲು ತಮ್ಮ ತಮ್ಮ ಸಂಘಟನೆಗಳನ್ನು ರಚನೆ ಮಾಡಿಕೊಂಡಿಲ್ಲದಿರುವುದು ಕಂಡುಬರುತ್ತದೆ. ಆದರೆ ಇತ್ತೀಚಿನ ಕೆಲವು ದಿನಗಳ ಹಿಂದೆ ಮಾತ್ರ ಶಹಾಪುರ ನಗರದ ಅಲೆಮಾರಿ ಸಮುದಾಯಗಳ ಕೆಲವು ಜನ ಹಿರಿಯರು ಮತ್ತು ಕಿರಿಯ ಉತ್ಸಾಹಿ ಯುವಕರು ಸೇರಿ ತಮ್ಮದೇಯಾದಂತ ಒಂದು ಸಂಘವನ್ನು ರಚಿಸಿಕೊಂಡು ನೊಂದಾಯಿಸಿದ್ದಾರೆ.

ಇವರ ಈ ಸಂಘಟನೆಯಲ್ಲಿ ಕೇವಲ ಒಂದೇ ಸಮುದಾಯಗಳು ಭಾಗವಹಿಸುತ್ತಿದೆ. ಅಲ್ಲಿಯ ಜನರ ಸಮಸ್ಯೆಗಳಿಗೆ ಮಾತ್ರ ಸೀಮಿತವಾಗಿದೆ. ಆದರೆ ಒಟ್ಟಾರೆಯಾಗಿ ಇಡೀ ಶಹಾಪುರ ನಗರದ ಒಟ್ಟು ಅಲೆಮಾರಿ ಸಮುದಾಯದ ಸದಸ್ಯರನ್ನು ಪ್ರತಿನಿಧಿಸಿ ಚರ್ಚೆ ಮಾಡಲು ಹಾಗೂ ಜಿಲ್ಲೆಯ ಇತರ ಸಮುದಾಯಗಳನ್ನು ಒಟ್ಟುಗೂಡಿಸಿ ಸಲಹೆ ಸೂಚನೆ ನೀಡುವುದರಲ್ಲಿ ಹೆಚ್ಚಿನ ಕೊರತೆ ಅಲೆಮಾರಿಗಳಲ್ಲಿ ಕಂಡುಬರುತ್ತವೆ.

ಅಭಿವೃದ್ಧಿಗಾಗಿ ಪರಿಹಾರೋಪಾಯಗಳು

ಅ. ವಸತಿ ಸೌಲಭ್ಯಗಳು

ಅಲೆಮಾರಿ ಸಮುದಾಯಗಳು ವಸತಿ ವಂಚಿತರಾಗಿ ಬದುಕುತ್ತಿರುವ ಈ ಸಂದರ್ಭದಲ್ಲಿ ಗುಡಿಸಲು ಗುಡಾರ ನಿವಾಸಿಗಳಾಗಿರುವುದರಿಂದ ಸರ್ಕಾರ ಇವರಿಗೆ ಅನೇಕ ರೀತಿಯಿಂದ ಸಹಾಯ ಸಹಕಾರ ನೀಡುವುದು ಅಗತ್ಯವಾಗಿದೆ.

೧. ಉಚಿತ ನಿವೇಶನಗಳು ಒದಗಿಸಬೇಕು.

೨. ಜನತಾ ಮನೆಗಳನ್ನು ಕಟ್ಟಿಕೊಡುವ ಯೋಜನೆ.

೩. ಮನೆಗಳಿಗೆ ಉಚಿತವಾಗಿ ವಿದ್ಯುತ್, ನೀರಿನ ಕೊಳವೆಗಳು ಹಾಗೂ ಬಿ.ಪಿ.ಎಲ್ ಪಡಿತರ ಚೀಟಿ ವ್ಯವಸ್ಥೆ ಕಲ್ಪಿಸಬೇಕು.

೪. ಕೊಳಚೆ ಪ್ರದೇಶದಿಂದ ವಿಮುಕ್ತಗೊಳಿಸಬೇಕು.

ಆ. ಶೈಕ್ಷಣಿಕ ಸೌಲಭ್ಯಗಳು

೧. ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ, ವಿದ್ಯಾರ್ಥಿನಿಲಯಗಳಲ್ಲಿ ಅವಕಾಶ, ವಿದ್ಯಾರ್ಥಿ ಮೇಲೆ ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸೌಲಭ್ಯ ನೀಡಬೇಕು. ಇವುಗಳನ್ನು ಪಡೆದುಕೊಳ್ಳುವುದರಲ್ಲಿ ಸರಳತೆ ಇರಬೇಕು.

೨. ಟೆಂಟ್ ಶಾಲೆಗಳು ತೆರೆಯಬೇಕು.

೩. ಆಶ್ರಮ ಮಾದರಿ ಶಾಲೆಗಳು ತೆರೆಯಬೇಕು.

೪. ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣವರೆಗೂ ಹಾಸ್ಟೆಲ್, ಧನಸಹಾಯ ಪ್ರತಿಯೊಂದು ಸೌಲಭ್ಯವನ್ನು ನೀಡಬೇಕಾಗಿದೆ.

ಇ. ಆರ್ಥಿಕ ಸೌಲಭ್ಯಗಳು

ಅಲೆಮಾರಿಸಮುದಾಯಗಳು ಆರ್ಥಿಕ ಸ್ಥಿತಿಯು ತೀರಾ ಚಿಂತಾಜನಕವಾಗಿರುವುದರಿಂದ ಇವರ ಆರ್ಥಿಕ ಅಭಿವೃದ್ಧಿಗೆ ಸರ್ಕಾರವು ಹಲವಾರು ಯೋಜನೆಗಳನ್ನು ರೂಪಿಸಬೇಕು.

೧. ರಾಷ್ಟ್ರೀಕೃತ ಬ್ಯಾಂಕುಗಳು ಅಲೆಮಾರಿ ಸಮುದಾಯಗಳ ಸ್ವ ಉದ್ಯೋಗಕ್ಕಾಗಿ ಸಾಲ ನೀಡುವುದರಲ್ಲಿ ವಿಳಂಬ ಧೋರಣೆ ತಳೆಯುತ್ತಿವೆ. ಈ ಸಮುದಾಯಕ್ಕೆ ಸಾಲ ವ್ಯವಸ್ಥೆಗಾಗಿ ಪರ್ಯಾಯ ವ್ಯವಸ್ಥೆ ಕಲ್ಪಿಸುವುದು ಸೂಕ್ತ. ಇದರಿಂದ ಭಿಕ್ಷಾಟನೆ ಕಡಿಮೆಯಾಗಬಹುದು.

೨. ಅಲೆಮಾರಿಗಳ ಕುಲಕಸುಬಿನ ವೃತ್ತಿ ಸಲಕರಣೆಗಳ ಖರೀದಿಗೆ ಸಾಲ ಸೌಲಭ್ಯ ಹಾಗೂ ಪ್ರೋತ್ಸಾಹಗಳನ್ನು ನೀಡಬೇಕು.

೩. ಅಲೆಮಾರಿ ಸಮುದಾಯಗಳಿಗೆ ತಮ್ಮ ವ್ಯಾಪಾರ ದೃಷ್ಟಿಯಿಂದ ವಿವಿಧ ಪ್ರದೇಶಗಳಿಗೆ ಹೋಗಿಬರಲು ರೈಲ್ವೇ, ಬಸ್‌ಗಳಲ್ಲಿ ಸಂಚರಿಸಲು ನಿರ್ದಿಷ್ಟ ರಿಯಾಯ್ತಿ ಪಾಸ್‌ಗಳನ್ನು ಒದಗಿಸುವುದು.

೪. ನಿರ್ಲಕ್ಷಿತ ವೃದ್ಧರು, ಅಂಗವಿಕಲರು ಹಾಗೂ ವಿಧವೆಯರಿಗೆ ಮಾಸಿಕ ವೇತನ ಕಲ್ಪಿಸಬೇಕು.

ಈ. ಮೀಸಲಾತಿ ಸೌಲಭ್ಯಗಳು

ಅಲೆಮಾರಿ ಸಮುದಾಯಗಳಲ್ಲಿ ಕೆಲವೊಂದು ಸಮುದಾಯಗಳು ಮೀಸಲಾತಿ ಪಟ್ಟಿಯಲ್ಲಿರುವುದು. ಆದರೆ ಎಲ್ಲಾ ಅಲೆಮಾರಿ ಸಮುದಾಯಗಳನ್ನು ಮೀಸಲಾತಿ ಪಟ್ಟಿಯಲ್ಲಿ ಸೇರಿಸಿ ವಿಶೇಷ ಸೌಲಭ್ಯಗಳನ್ನು ನೀಡಬೇಕು. ಹಾಗೂ ಈ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾದ ಮೀಸಲಾತಿ ಕಲ್ಪಿಸಿ ಕೊಡುವುದರಲ್ಲಿ ಸರ್ಕಾರ ಗಮನಹರಿಸಬೇಕು.

೧. ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ ನೀಡುವುದು.

೨. ಶೈಕ್ಷಣಿಕವಾಗಿ ವಿಶೇಷ ಮೀಸಲಾತಿ ನೀಡುವುದು.

೩. ಉದ್ಯೋಗದಲ್ಲಿ ಮೀಸಲಾತಿ ನೀಡುವುದು.

ಅಧ್ಯಾಯ ೫

ಸಮಾರೋಪ

ಸಮುದಾಯಗಳೆಂಬ ಒಟ್ಟಾರೆಯಾದ ಚೌಕಟ್ಟನ್ನು ಸಮಾಜಶಾಸ್ತ್ರವು ತನ್ನ ಮಡಿಲಿನಲ್ಲಿರಿಸಿಕೊಂಡಿದ್ದು, ಈ ಸಮಾಜಶಾಸ್ತ್ರೀಯ ಅಧ್ಯಯನಗಳಿಗೆ ಇಡೀ ಪ್ರಪಂಚವೇ ಪ್ರಯೋಗಶಾಲೆ ಇದ್ದಂತೆ ಎಂಬುದು ಅನೇಕ ಸಮಾಜಶಾಸ್ತ್ರಜ್ಞರ ಅಭಿಮತವಾಗಿದೆ. ಅಲ್ಲದೆ ಸಮಾಜವೆಂಬುದು ಅದು ನಿಂತ ನೀರಲ್ಲ ಅದು ನಿತ್ಯನಿರಂತರ ಚಲನಶೀಲತೆ ಹೊಂದಿರುವುದರಿಂದ ಸಮಾಜಶಾಸ್ತ್ರವು ಇಂದು ದಿನದಿಂದ ದಿನಕ್ಕೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಬಂದಿದೆ. ಇಂದು ಇದರ ಆಳ ಅಗಲ ಬಹಳ ವಿಸ್ತಾರಗೊಂಡಿರುವುದರಿಂದ ಅಷ್ಟು ಸುಲಭವಾಗಿ ಹಿಡಿತಕ್ಕೆ ಸಿಕ್ಕುವಂತದಲ್ಲ. ಆದುದರಿಂದ ಸಮಾಜವೆಂಬ ಒಟ್ಟು ಘಟಕವನ್ನು ಅನೇಕ ಭಾಗ ವಿಭಾಗಗಳಾಗಿ ವಿಂಗಡಿಸಿಕೊಂಡು ಅದರ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಅವ್ಯಾಹತವಾಗಿ ಅಧ್ಯಯನಗಳು ನಡೆಯುತ್ತಲೇ ಬಂದಿವೆ. ಮುಖ್ಯವಾಗಿ ಅಧ್ಯಯನದ ನಿಖರತೆಗೆ ಸೂಕ್ತವಾದ ಸಮಯದ ಹಿನ್ನೆಲೆಯಲ್ಲಿ ಸೀಮಿತವಾದ ಚೌಕಟ್ಟನ್ನು ನಿರ್ಮಿಸಿಕೊಂಡು ಸಮಾಜಶಾಸ್ತ್ರವು ಇಂದು ಯಶಸ್ವಿ ಅಧ್ಯಯನಗಳ ಫಲಿತಗಳನ್ನು ಈ ಸಮಾಜಕ್ಕೆ ಸಾಧರಪಡಿಸುತ್ತಿದೆ.

ಪ್ರಸ್ತುತ ಗುಲಬರ್ಗಾ ಜಿಲ್ಲೆಯ ಶಹಾಪುರದ ಅಲೆಮಾರಿ ಸಮುದಾಯಗಳ ಸಾಮಾಜಿಕ ಅಧ್ಯಯನವನ್ನು ಸಮಾಜಶಾಸ್ತ್ರೀಯವಾಗಿ ಮಾಡಲಾಗಿದ್ದು, ಈ ಅಲೆಮಾರಿ ಸಮುದಾಯಗಳ ಅಧ್ಯಯನ ನಿಖರವಾದ ಫಲಿತಗಳನ್ನು ಕಂಡುಕೊಳ್ಳಲು ಅಲೆಮಾರಿ ಸಮುದಾಯಗಳು ನೆಲೆಸಿರುವ ಶಹಾಪುರ ನಗರದ ಪರಿಸರದಲ್ಲಿನ ಕ್ಷೇತ್ರವನ್ನು ಒಳಗೊಂಡಂತೆ ಇಡೀ ಶಹಾಪುರವನ್ನು ಕ್ಷೇತ್ರಕಾರ್ಯದ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿ

ಕೊಂಡು ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಅಲೆಮಾರಿ ಸಮುದಾಯಗಳು ಮೂಲತಃ ಬೇರೆ-ಬೇರೆ ಪ್ರದೇಶಗಳಿಂದ ಸಂಚರಿಸುತ್ತಾ ಅಲೆಮಾರಿಗಳಾಗಿ ಇಂದು ದೇಶದ ಉದ್ದಗಲದಲ್ಲೂ ನೆಲೆಸಿದ್ದಾರೆ. ಹೀಗೆ ಸಂಚರಿಸುತ್ತಾ ಅಲೆಮಾರಿಗಳಾಗಿ ಈ ಸಮುದಾಯಗಳು ಇಂದು ಶಹಾಪುರ ನಗರದ ಪರಿಸರದಲ್ಲಿ ಬಹುದಿನಗಳಿಂದ ನೆಲೆಸಿ ಈ ನಗರದ ಖಾಯಂ ನಿವಾಸಿಗಳಾಗಿದ್ದಾರೆ. ಮತ್ತೆ ಕೆಲವರು ಇಲ್ಲಿನ ಪರಿಸರದಲ್ಲಿಯೇ ಅರೆ ಅಲೆಮಾರಿಗಳಾಗಿ ಜೀವನ ಸಾಗಿಸುತ್ತಿದ್ದಾರೆ. ಈ ಎಲ್ಲಾ ಸಮುದಾಯಗಳು ಅಲೆಮಾರಿ ಸಂಸ್ಕೃತಿಯ ಚಹರೆಗಳನ್ನು ಹೊಂದಿದ್ದು, ತಮ್ಮ ಅಂತರಾಳದಲ್ಲಿ ತಮ್ಮದೇ ಆದಂತಹ ವಿಭಿನ್ನ ಸಂಸ್ಕೃತಿಗಳನ್ನು ಮೈಗೂಡಿಸಿಕೊಂಡಿರುವ ವಿಶಿಷ್ಟ ಸಮುದಾಯಗಳಾಗಿವೆ. ಇಂತಹ ವಿಶಿಷ್ಟ ಪರಂಪರೆಯ ಸಮುದಾಯಗಳು ಒಳಪದರುಗಳನ್ನೇ ಈ ಪ್ರಬಂಧದಲ್ಲಿ ವಿವರಿಸಲಾಗಿದೆ. ಇಲ್ಲಿ ಅಧ್ಯಯನಕ್ಕೆ ಅನುಕೂಲ ವಾಗುವಂತೆ ಒಟ್ಟು ಐದು ಅಧ್ಯಾಯಗಳನ್ನು ರೂಪಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆ, ವಿವರಣೆಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಈ ಪ್ರಬಂಧದ ಪ್ರಥಮ ಅಧ್ಯಾಯವನ್ನು ಪ್ರವೇಶವೆಂಬ ಪೀಠಿಕಾ ಭಾಗದಿಂದ ಪ್ರಾರಂಭಿಸಲಾಗಿದೆ. ಈ ಅಧ್ಯಾಯದಲ್ಲಿ ಶಹಾಪೂರದ ಅಲೆಮಾರಿ ಸಮುದಾಯಗಳ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವದ ಅಧ್ಯಯನದ ವಿಧಿ-ವಿಧಾನಗಳು ಮತ್ತು ಇದುವರೆಗೆ ಸಮುದಾಯಗಳ ಕುರಿತು ನಡೆದ ಅಧ್ಯಯನಗಳ ಅವಲೋಕನವನ್ನು ಕುರಿತು ವಿಶ್ಲೇಷಿಸಲಾಗಿದೆ.

ಎರಡನೆಯ ಅಧ್ಯಾಯವು **ಶಹಾಪುರ ಪರಿಸರ ಮತ್ತು ಅಲೆಮಾರಿಗಳ ಜೀವನ** ಎಂಬ ಶೀರ್ಷಿಕೆಯನ್ನು ಹೊಂದಿದೆ. ಸಂಶೋಧನಾ ಅಧ್ಯಯನದ ಕಾರ್ಯವ್ಯಾಪ್ತಿ ಶಹಾಪುರ ನಗರಕ್ಕೆ ಸೀಮಿತವಾಗಿರುವುದರಿಂದ ಶಹಾಪುರದ ಒಟ್ಟು ಭೌಗೋಳಿಕ ಪರಿಚಯವನ್ನು ನೀಡಲಾಗಿದೆ. ಹಾಗೂ ಅಲೆಮಾರಿ ಸಮುದಾಯಗಳ ಜೀವನ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಲೆಮಾರಿ ಸಮುದಾಯಗಳ ಪರಿಚಯ ಎಂಬ ಶೀರ್ಷಿಕೆಯ ಮೂರನೆ ಅಧ್ಯಾಯದಲ್ಲಿ ಇಲ್ಲಿನ ಒಟ್ಟು ಎಂಟು ಅಲೆಮಾರಿ ಸಮುದಾಯಗಳ ಪರಿಚಯವನ್ನು ಮಾಡುವುದರ ಜೊತೆಗೆ ಅಲೆಮಾರಿ ಸಮುದಾಯಗಳ ಸಾಮಾಜಿಕ ಜೀವನದಲ್ಲಿ ಸಮುದಾಯಗಳ ಕೌಟಂಬಿಕ ರಚನೆ, ಬಳಿಗಳು, ಆಹಾರ ಪದ್ಧತಿ, ಉಡುಗೆ-ತೊಡುಗೆ, ವಸತಿ ವ್ಯವಸ್ಥೆ, ಕುಲಪಂಚಾಯ್ತಿ ರಚನೆ, ಬಹಿಷ್ಕಾರ ಸಂದರ್ಭಗಳಂತ ಸಾಮಾಜಿಕ ಅಂಶಗಳು ಜೊತೆಗೆ ಸಮುದಾಯಗಳ ರಾಜಕೀಯ ಜೀವನ ಹಾಗೂ ಎಂಟು ಸಮುದಾಯಗಳ ಆರ್ಥಿಕ ಸ್ಥಿತಿಗತಿ ಹಾಗೂ ಶೈಕ್ಷಣಿಕ ಸ್ಥಿತಿ-ಗತಿಗಳನ್ನು ನೋಡಲಾಗಿದೆ. ಅದೇ ರೀತಿ ಈ ಸಮುದಾಯಗಳ ಧಾರ್ಮಿಕ ಜೀವನದಲ್ಲಿ ಇವರು ಪೂಜಿಸುವ ದೈವಗಳು ಮತ್ತು ಆಚರಿಸುವ ಹಬ್ಬಗಳನ್ನು ಕುರಿತು ಹೇಳಲಾಗಿದೆ. ಹಾಗೂ ಅಲೆಮಾರಿ ಸಮುದಾಯಗಳ ಸಾಂಸ್ಕೃತಿಕ ಸ್ಥಿತಿಗತಿಯಲ್ಲಿ ಇವರು ಆಚರಿಸುವ

ಆಚರಣೆಗಳಾದ ಜನನದಿಂದ ಮರಣದವರೆಗಿನ ಸಂಸ್ಕಾರಗಳನ್ನು ಕುರಿತು ಸಮಗ್ರವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ನಾಲ್ಕನೆ ಅಧ್ಯಾಯವು **ಅಲೆಮಾರಿಗಳ ಇತರೆ ಸಮುದಾಯಗಳೊಂದಿಗಿನ ಸಂಬಂದ** ಎಂಬ ಶೀರ್ಷಿಕೆ ಹೊಂದಿದ್ದು, ಇಲ್ಲಿ ನೆಲೆಸಿರುವ ಅಲೆಮಾರಿ ಸಮುದಾಯಗಳು ತಮ್ಮ ಕುಲಕಸುಬುಗಳ ಮೂಲಕ ಇತರ ಸಮುದಾಯಗಳೊಂದಿಗೆ ಹೊಂದಿರುವ ಸಂಬಂಧಗಳನ್ನು ಕುರಿತು ಹೇಳಲಾಗಿದೆ.

ಹಾಗೂ ಅಲೆಮಾರಿ ಸಮುದಾಯಗಳು ಪ್ರಸ್ತುತ ಸಂದರ್ಭದಲ್ಲಿ ಎದುರಿಸುತ್ತಿರುವ ಸಮಸ್ಯೆಗಳಾದ ವಸತಿ, ವೃತ್ತಿ, ಜಾತಿ ಪ್ರಮಾಣ ಪತ್ರ, ಶೈಕ್ಷಣಿಕ ಸಮಸ್ಯೆ, ಸಂಘಟನೆ ಸಮಸ್ಯೆಗಳ ಕುರಿತು ಚರ್ಚಿಸಲಾಗಿದೆ. ಹಾಗೂ ಪರಿಹಾರೋಪಾಯದಲ್ಲಿ ಸಮುದಾಯಗಳಿಗೆ ವಸತಿ ಸೌಲಭ್ಯ, ಶೈಕ್ಷಣಿಕ ಸೌಲಭ್ಯ, ಆರ್ಥಿಕ ಸೌಲಭ್ಯ ಹಾಗೂ ಮೀಸಲಾತಿಗಳೆಂಬ ಸೌಲಭ್ಯಗಳ ಕುರಿತು ವಿಶ್ಲೇಷಿಸಲಾಗಿದೆ. ಸಮುದಾಯಗಳ ಪ್ರಗತಿಗೆ ಪರಿಹಾರೋಪಾಯಗಳನ್ನು ನೀಡಲಾಗಿದೆ.

ಐದನೇ ಅಧ್ಯಾಯವು ಸಮಾರೋಪವಾಗಿದ್ದು ಇದರಲ್ಲಿ ಎಲ್ಲಾ ಅಧ್ಯಾಯಗಳ ಸಂಕ್ಷಿಪ್ತ ಸಾರಾಂಶ ಹಾಗೂ ಅವುಗಳಲ್ಲಿಯ ಸಂಶೋಧಿತ ವಿಷಯಗಳ ಮುಖಾಂತರ ವಿವರಿಸಲಾದ ವಿಷಯಗಳನ್ನೊಳಗೊಂಡಿದೆ. ಅಂದರೆ ಸಮುದಾಯಗಳ ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವಗಳಿಂದ ಹಿಡಿದು ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಜೀವನ ಹಾಗೂ ಸ್ಥಿತಿ-ಗತಿಗಳು ಅಂತೆಯೇ ಸಮುದಾಯಗಳ ಸಮಸ್ಯೆಗಳು ಹಾಗೂ ಸಮಸ್ಯೆಗಳಿಗೆ ಪರಿಹಾರೋಪಾಯಗಳ ಮಾರ್ಗಗಳಂತಹ ವಿಷಯಗಳ ಮೇಲೆ ಬೆಳಕು ಚೆಲ್ಲುವುದರ ಮೂಲಕ ವಿಶ್ಲೇಷಿಸುವ ಅಂಶಗಳ ತಿರುಳುಗಳನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಸಮಾರೋಪದ ನಂತರ ಅನುಬಂಧದಲ್ಲಿ ಮಾಹಿತಿದಾರರ ವಿವರಣೆ ಹಾಗೂ ಗ್ರಂಥ ಋಣಗಳನ್ನು ನೀಡಲಾಗಿದೆ.

ಪ್ರಸ್ತುತವಾಗಿ ಗುಲಬರ್ಗಾ ಜಿಲ್ಲೆ ಶಹಾಪುರದಲ್ಲಿ ವಾಸವಾಗಿರುವ ಅಲೆಮಾರಿ ಸಮುದಾಯದ ಅಧ್ಯಯನವು ಅಲೆಮಾರಿ ಸಮುದಾಯದವರು ಇವತ್ತಿಗೂ ಅಲೆಮಾರಿಗಳಾಗಿ ಅಲೆಯುವುದು ಕಂಡುಬರುತ್ತಿದೆ. ಇವರು ಒಂದು ಕಡೆ ನೆಲೆ ನಿಲ್ಲಲು ಏಕೆ ಸಾಧ್ಯವಾಗುತ್ತಿಲ್ಲ? ಎಂಬ ಪ್ರಶ್ನೆ ಎಲ್ಲರನ್ನು ಕಾಡದೆ ಇರದು. ಆದ್ದರಿಂದ ಅಲೆಮಾರಿಗಳು ತಮ್ಮ ಮೂಲ ವೃತ್ತಿಗಳನ್ನು ಬಿಡದೆ ಹೊಸದನ್ನು ಮಾಡದೆ, ತೊಳಲಾಟದಲ್ಲಿ ಸಿಲುಕಿಕೊಂಡಿರುವುದರ ಜೊತೆಗೆ ಅನೇಕ ಸಮಸ್ಯೆಗಳು ಎದುರಿಸುತ್ತಿರುವುದು ಕಂಡುಬರುತ್ತದೆ. ಈ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಇಲ್ಲಿಯವರೆಗೆ ನಡೆದ ವಿವಿಧ ಸಮುದಾಯಗಳ ಅಧ್ಯಯನ ಮಾದರಿಗಳನ್ನು ಪರಿಶೀಲಿಸಲಾಗಿದೆ.

ಶಹಾಪುರದ ಅಲೆಮಾರಿ ಸಮುದಾಯಗಳ ಸಾಮಾಜಿಕ ಅಧ್ಯಯನವು ನೀಡಲಾದ ಅಲ್ಪಕಾಲವಧಿಯಲ್ಲಿ

ದೊರಕಿದ ಮಾಹಿತಿಯನ್ವಯ ಹಾಗೂ ಕ್ಷೇತ್ರಕಾರ್ಯದಲ್ಲಿ ನಮೂನೆಯಾಧಾರಿತ ಸಮುದಾಯಗಳ ಅಧ್ಯಯನ ಮಾಡಲಾಗಿದೆ. ಈ ಸಮುದಾಯಗಳ ಕುರಿತು ಮಾಹಿತಿಗಳ ತೀವ್ರ ಕೊರತೆ ಇರುವುದರಿಂದ ಅಧ್ಯಯನ ಪೂರ್ಣಗೊಳ್ಳುವರೆಗೂ ಸದಾಕಾಲ ಕ್ಷೇತ್ರದ ಮಾಹಿತಿದಾರರ ಸಂಪರ್ಕದಲ್ಲಿದ್ದುಕೊಂಡು ಈ ಅಧ್ಯಯನವನ್ನು ಪೂರ್ಣಗೊಳಿಸಲಾಗಿದೆ. ಈ ಅಧ್ಯಯನಕ್ಕೆ ಇಲ್ಲಿಯವರೆಗೆ ನಡೆದ ವಿವಿಧ ಸಮುದಾಯಗಳ ಅಧ್ಯಯನ ಮಾದರಿಗಳನ್ನು ಪರಿಶೀಲಿಸಿ ಹೊಸ ವಿಧಾನ ಮತ್ತು ಮಾದರಿಗಳನ್ನು ಬಳಸಿಕೊಳ್ಳಲಾಗಿದೆ.

ಅಲೆಮಾರಿ ಸಮುದಾಯಗಳ ನಮೂನೆ ಆಧಾರದ ಮೇಲೆ ಕುಟುಂಬಗಳ ಅಂಕಿ-ಸಂಖ್ಯಾಗಳ ಮಾಹಿತಿ ಅವರು ಹೊಂದಿರುವ ಮನೆ ಗುಡಾರ, ಆಸ್ತಿ-ಪಾಸ್ತಿಗಳ ವಿವರಣೆ ಮತ್ತು ಇತ್ತೀಚಿನ ದಿನಗಳಲ್ಲಿ ಸಮುದಾಯಗಳ ಕುಲ ಕಸುಬುಗಳ ಅವನತಿ ಹಾಗೂ ಅವಲಂಬಿತ ವೃತ್ತಿಗಳು ಮಾಹಿತಿಗಳನ್ನು ವಿಶ್ಲೇಷಲಾಗಿದೆ. ಹಾಗೆಯೇ ಶೈಕ್ಷಣಿಕ, ರಾಜಕೀಯ ಅಧಿಕಾರದ ಕೊರತೆ ಮತ್ತು ಜಾತಿ ಪ್ರಮಾಣ ಪತ್ರ ಪಡೆದುಕೊಳ್ಳುವುದರಲ್ಲಿ ಎದುರಿಸುತ್ತಿರುವ ಸಮಸ್ಯೆ, ಸವಾಲುಗಳಿಗೆ ಪರಿಹಾರೋಪಾಯ ಮಾರ್ಗಗಳನ್ನು ಮಾತ್ರ ಪ್ರಸ್ತಾಪಿಸಲಾಗಿದೆ. ಒಬ್ಬ ಸಂಶೋಧಕನಾಗಿ ಸಲಹೆ ಸೂಚನೆಗಳನ್ನು ನೀಡುವ ಪ್ರಯತ್ನವಷ್ಟೇ ಆಗಿದೆ. ಈ ಅಧ್ಯಯನಕ್ಕೆ ನಿಲುಕದ ವಿಷಯಗಳನ್ನು ಮುಂದಿನ ಅಧ್ಯಯನಕಾರರಿಗೆ ಬಿಡಲಾಗಿದೆ.

ಅನುಬಂಧಗಳು

೧. ಮಾಹಿತಿದಾರರ ಪಟ್ಟಿ

೨. ಪರಾಮರ್ಶನ ಗ್ರಂಥಗಳು

೩. ಅಂಕಿ-ಅಂಶಗಳು

೪. ಛಾಯಾಚಿತ್ರಗಳು

ಮಾಹಿತಿದಾರರ ಪಟ್ಟಿ

ಮಾಹಿತಿದಾರರ ಹೆಸರು ಮತ್ತು ವಿಳಾಸ	ವಯಸ್ಸು	ಸಮುದಾಯ	ವೃತ್ತಿ
ಪೂಜಾರಿ ಹಣಮಂತ ತಹಶಿಲ ಏರಿಯಾ, ಶಹಾಪುರ	೫೫	ಕೊರಮ	ಬಾರಿಗೆ ಕಟ್ಟುವುದು
ಪರಶುರಾಮ ತಂದೆ ದುರುಗಪ್ಪ ತಹಶಿಲ ಏರಿಯಾ, ಶಹಾಪುರ	೨೮	ಕೊರಮ	ಹಂದಿಸಾಕಣಿಕೆ
ಪರಮೇಶ ಪೂಜಾರಿ ದೇವಿನಗರ, ಶಹಾಪುರ	೩೦	ಕೊರಮ	ಹಂದಿಸಾಕಣಿಕೆ
ಲಕ್ಷ್ಮಣ ತಂದೆ ಕಾಮಣ್ಣ ತಹಶಿಲ ಏರಿಯಾ, ಶಹಾಪುರ	೪೫	ಕೊರಮ	ಬಾರಿಗೆ ಕಟ್ಟುವುದು
ರೇಣುಕಮ್ಮ ಗಂಡ ಲಕ್ಷ್ಮಣ ತಹಶಿಲ ಏರಿಯಾ, ಶಹಾಪುರ	೩೫	ಕೊರಮ	ಬಾರಿಗೆ ಕಟ್ಟುವುದು
ಹರಿಶ್ಚಂದ್ರ ತಂದೆ ಬಾಲಾಜಿ ಪುರಸಭೆ ಹಿಂದೆ, ಶಹಾಪುರ	೩೦	ಘಿಸಾಡಿ	ಕಮ್ಮಾರಿಕೆ
ಮಾದೇಶ ತಂದೆ ಕೇಶವ ಪುರಸಭೆ ಹಿಂದೆ, ಶಹಾಪುರ	೩೫	ಘಿಸಾಡಿ	ಕಮ್ಮಾರಿಕೆ
ಸುಶೀಲಾಬಾಯಿ ಗಂಡ ಗಣೇಶ ಪುರಸಭೆ ಹಿಂದೆ, ಶಹಾಪುರ	೨೫	ಘಿಸಾಡಿ	ಕಮ್ಮಾರಿಕೆ
ಬಾಬುರಾವ್ ರಾಂಪೂರೆ ದೇವಿನಗರ, ಶಹಾಪುರ	೩೫	ಚನ್ನದಾಸ	ವ್ಯಾಪಾರ
ರಾಮುಲು ತಂದೆ ಕಾಶಣ್ಣ ದೇವಿನಗರ, ಶಹಾಪುರ	೫೦	ಚನ್ನದಾಸ	ಕೂಲಿ
ಭಾಗಮ್ಮ ಗಂಡ ಭಾಗಣ್ಣ ದೇವಿನಗರ, ಶಹಾಪುರ	೪೦	ಚನ್ನದಾಸ	ಕೂಲಿ
ವಿಠೋಬ ತಂದೆ ಬಾಲಪ್ಪ ದೇವಿನಗರ, ಶಹಾಪುರ	೩೮	ಚನ್ನದಾಸ	ಕೂಲಿ
ಯಲ್ಲಪ್ಪಾ ದೇವಿನಗರ, ಶಹಾಪುರ	೬೫	ಚನ್ನದಾಸ	ಕೂಲಿ

ಮಾಹಿತಿದಾರರ ಹೆಸರು ಮತ್ತು ವಿಳಾಸ	ವಯಸ್ಸು	ಸಮುದಾಯ	ವೃತ್ತಿ
ಯಮನಪ್ಪ ತಂದೆ ಈರಪ್ಪ ಬಿ.ಗುಡಿ, ಶಹಾಪುರ	೩೫	ಬುಡ್ಗಜಂಗಮ	ಸಮಾಜ ಸೇವೆ
ಲಕ್ಷ್ಮೀಬಾಯಿ ಗಂಡ ಈರಪ್ಪ ಬಿ.ಗುಡಿ, ಶಹಾಪುರ	೬೮	ಬುಡ್ಗಜಂಗಮ	ಗೃಹಿಣಿ
ರಾಮು ತಂದೆ ಈರಪ್ಪ ಬಿ.ಗುಡಿ, ಶಹಾಪುರ	೪೨	ಬುಡ್ಗಜಂಗಮ	ವ್ಯಾಪಾರ
ಮಲ್ಲಮ್ಮ ಗಂಡ ಸುಗಣ್ಣ ಬಿ.ಗುಡಿ, ಶಹಾಪುರ	೩೮	ಬುಡ್ಗಜಂಗಮ	ಕೂಲಿ
ಶಂಕ್ರಪ್ಪ ತಂದೆ ಕೃಷ್ಣಪ್ಪ ಬಿ.ಗುಡಿ, ಶಹಾಪುರ	೬೮	ಬುಡ್ಗಜಂಗಮ	ವಿಶ್ರಾಂತಾ
ಚಂದ್ರಶೇಖರ ಅಂಕೋಶಿ ತಹಶಿಲ ಏರಿಯಾ, ಶಹಾಪುರ	೬೦	ಬೈಲಪತ್ತಾರ	ಪತ್ತಾರಿಕೆ
ಪದ್ಮಾವತಿ ಗಂಡ ಚಂದ್ರಪ್ಪ ತಹಶಿಲ ಏರಿಯಾ, ಶಹಾಪುರ	೫೦	ಬೈಲಪತ್ತಾರ	ಕೂಲಿ
ರಮೇಶ ತಹಶಿಲ ಏರಿಯಾ, ಶಹಾಪುರ	೩೦	ಬೈಲಪತ್ತಾರ	ಪತ್ತಾರಿಕೆ
ಕ್ರಿಷ್ಣಪ್ಪ ತಹಶಿಲ ಏರಿಯಾ, ಶಹಾಪುರ	೬೦	ಬೈಲಪತ್ತಾರ	ಪತ್ತಾರಿಕೆ
ಮಹಾನಂದ ತಹಶಿಲ ಏರಿಯಾ, ಶಹಾಪುರ	೪೦	ಬೈಲಪತ್ತಾರ	ಪತ್ತಾರಿಕೆ
ಯಲ್ಲಮ್ಮ ಗಂಡ ಯಲ್ಲಪ್ಪ ಹಳಿಸಗರ, ಶಹಾಪುರ	೪೨	ಶಿಳ್ಳೇಕ್ಯಾತ	ವ್ಯಾಪಾರ
ಆಗ್ನೇಪ್ಪ ತಂದೆ ಹಣಮಂತ ಹಳಿಸಗರ, ಶಹಾಪುರ	೩೫	ಶಿಳ್ಳೇಕ್ಯಾತ	ಮೀನುಗಾರಿಕೆ
ಹಣಮಂತ ತಂದೆ ನಾಗಪ್ಪ ಹಳಿಸಗರ, ಶಹಾಪುರ	೪೦	ಶಿಳ್ಳೇಕ್ಯಾತ	ಮೀನುಗಾರಿಕೆ
ಸತ್ಯಮ್ಮ ಗಂಡ ವಿಠಲ ಹಳಿಸಗರ, ಶಹಾಪುರ	೩೨	ಶಿಳ್ಳೇಕ್ಯಾತ	ವ್ಯಾಪಾರ

ಮಾಹಿತಿದಾರರ ಹೆಸರು ಮತ್ತು ವಿಳಾಸ	ವಯಸ್ಸು	ಸಮುದಾಯ	ವೃತ್ತಿ
ಮುದುಕಪ್ಪ ಹಳಿಸಗರ, ಶಹಾಪುರ	೬೦	ಶಿಳ್ಳೇಕ್ಯಾತ	ಮೀನುಗಾರಿಕೆ
ತೊಂಟ ತಂದೆ ನರಸಪ್ಪ ತಹಶಿಲ ಏರಿಯಾ, ಶಹಾಪುರ	೪೦	ಸಿಂಧೋಳ್ಳು	ಧಾರ್ಮಿಕ ಭಿಕ್ಷಾಟನೆ
ಜಮ್ಮಣ್ಣ ತಂದೆ ಮಲ್ಲಪ್ಪ ತಹಶಿಲ ಏರಿಯಾ, ಶಹಾಪುರ	೩೫	ಸಿಂಧೋಳ್ಳು	ಧಾರ್ಮಿಕ ಭಿಕ್ಷಾಟನೆ
ಪೋಚಮ್ಮ ಗಂಡ ಮಾರೇಪ್ಪ ತಹಶಿಲ ಏರಿಯಾ, ಶಹಾಪುರ	೩೦	ಸಿಂಧೋಳ್ಳು	ಧಾರ್ಮಿಕ ಭಿಕ್ಷಾಟನೆ
ಯಲ್ಲಪ್ಪ ತಂದೆ ಮಲ್ಲಪ್ಪ ತಹಶಿಲ ಏರಿಯಾ, ಶಹಾಪುರ	೪೦	ಸಿಂಧೋಳ್ಳು	ಕೂಲಿ
ಮಾರೇಪ್ಪ ತಂದೆ ಜಂಬಯ್ಯ ತಹಶಿಲ ಏರಿಯಾ, ಶಹಾಪುರ	೩೫	ಸಿಂಧೋಳ್ಳು	ಕೂಲಿ
ಬಸವಣ್ಣ ದೇವಿನಗರ, ಶಹಾಪುರ	೬೦	ಹೆಳವ	ವ್ಯಾಪಾರ
ಮಲ್ಲೇಶಪ್ಪ ತಂದೆ ಬಸವಣ್ಣಾ ದೇವಿನಗರ, ಶಹಾಪುರ	೩೩	ಹೆಳವ	ವ್ಯಾಪಾರ
ಯಲ್ಲಮ್ಮ ಗಂಡ ಹಣಮಂತ ದೇವಿನಗರ, ಶಹಾಪುರ	೪೦	ಹೆಳವ	ಕೂಲಿ
ಸೋಪವ್ವಾ ಗಂಡ ಮಾರೆಪ್ಪ ದೇವಿನಗರ, ಶಹಾಪುರ	೪೨	ಹೆಳವ	ಕೂಲಿ
ಬಸಣ್ಣಾ ತಂದೆ ಸಾಬಣ್ಣ ದೇವಿನಗರ, ಶಹಾಪುರ	೬೫	ಹೆಳವ	ವ್ಯಾಪಾರ

ಪರಾಮರ್ಶನ ಗ್ರಂಥಗಳು

ಕಂಬಾರ, ಚಂದ್ರಶೇಖರ., *ಕನ್ನಡ ಜಾನಪದ, ವಿಶ್ವಕೋಶ* ಸಂಪುಟ ೧೨, ೧೯೮೫., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,

ಗಂಟಿ, ಎಂ ಎಸ್., *ಸುಡುಗಾಡು ಸಿದ್ಧ,* ೨೦೦೮, ಕನ್ನಡ ಪುಸ್ತಕ ಪ್ರಾದಿಕಾರ, ಬೆಂಗಳೂರು.

ದೈವಜ್ಞ, ಗಂಗಾಧರ., ೨೦೦೦, *ಬುಡಕಟ್ಟು ಸಮಾಜ* (ಹುಟ್ಟು-ಸಾವಿನ ನಡುವೆ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ದೊಡ್ಡಮನಿ, ಲೋಕರಾಜ, ರಾವಲೋಳು ಶ್ರೀನಿವಾಸ, *ಸಿಂಧೋಳ್ಳು,* ೨೦೦೮, ಕನ್ನಡ ಪುಸ್ತಕ ಪ್ರಾದಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು.

ಪ್ರಭಾಕರ್, ಎ ಎಸ್., *ಬುಡಕಟ್ಟು ಸ್ಥಿತ್ಯಾಂತರಗಳು,* ೨೦೦೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಬಾಲಗುರುಮೂರ್ತಿ, ಬಹುರೂಪಿ ಪ್ರತಾಪ ಆರ್., *ಬುಡ್ಗ ಜಂಗಮರು,* ೨೦೦೮, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಭಾಸ್ಕರ್, ಟಿ ಎಂ., *ಸುಡುಗಾಡು ಸಿದ್ಧರು: ಒಂದು ಸಾಂಸ್ಕೃತಿಕ ಅಧ್ಯಯನ;* ೨೦೦೦, ಮರುಗ ಪ್ರಕಾಶನ, ಗುಲಬರ್ಗಾ.

ಬೇಟಗೇರಿ, ಪ್ರಹ್ಲಾದ., *ಆಡವಿಚೆಂಚರ ಸಂಸ್ಕೃತಿ,* ೧೯೯೪,ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಬೈಲಪತ್ತಾರ, ವಿಶ್ವನಾಥ, ಜಗನಾಥ್ ಎಂ., *ಬೈಲಪತ್ತಾರ,* ೨೦೦೮, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಬೋರಲಿಂಗಯ್ಯ, ಹಿ ಚಿ.,*ಗಿರಿಜನ ನಾಡಿಗೆ ಪಯಣ,* ೧೯೯೧, ರಾಗಿರೋಟ್ಟಿ ಪ್ರಕಾಶನ, ಬೆಂಗಳೂರು.

ಬೋರಲಿಂಗಯ್ಯ, ಹಿ ಚಿ., *ಕಾಡು ಕಾಂಕ್ರೀಟ್ ಮತ್ತು ಜನಪದ,* ೧೯೯೫, ಅಕ್ಷರ ಪ್ರಕಾಶನ, ಬೆಂಗಳೂರು.

ಮೈತ್ರಿ, ಕೆ ಎಂ., *ಬುಡಕಟ್ಟು ಕುಲ ಕಸುಬುಗಳು,* ೨೦೦೨, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾನ್ಪಡೆ, ಮಲ್ಲಿಕಾರ್ಜುನ ಬಿ., *ಕೊರಮ,* ೨೦೦೮, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ರಮೇಶ್, ಸ ಚಿ., *ಬೇಟೆ ಸಾಂಸ್ಕೃತಿಕ ಪದಕೋಶ,*೨೦೦೧, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಮಣ್ಣ, ಯು ಎಸ್., ಮಲೆನಾಡಿನಲ್ಲಿ ಪ್ರಾಣಿಬೇಟೆ,೨೦೦೦, (ಗ್ರಾಮೀಣ ಬೇಟೆಗಳು ಸಂ. ದೇವೇಂದ್ರಕುಮಾರ್ ಹಕಾರಿ), ಬೆಂಗಳೂರು, ಕನ್ನಡ ಪುಸ್ತಕ ಪ್ರಾದಿಕಾರ, ಕರ್ನಾಟಕ ಸರ್ಕಾರ.

ಲಕ್ಕಪ್ಪಗೌಡ, ಹೆಚ್ ಜೆ., (ಸಂ) *ಕರ್ನಾಟಕದ ಬುಡಕಟ್ಟುಗಳು,* ಸಂಪುಟ-೧ ಮತ್ತು ೨.

ಹಿಮ್ಮಡಿ, ಯಲ್ಲಪ್ಪ, *ಚನ್ನದಾಸರು,* ೨೦೦೮, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಹಿರೇಮಠ, ಬಸವರಾಜ, ಅಂಜಲಿ ಸಾಳಂಕಿ, *ಘಿಸಾಡಿ,* ೨೦೦೮, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಇಂಗ್ಲಿಷ್

Enthoven, R.E., *The Tribes and Castes of Bombay,* Vol. III, (Bombay : Governament of Bombay Presidency), 1922.

Gunda, *Bella or "The Cultural Ecology and Service Nomads",* Eastern Anthropologist, 34-04-1981.

Hassan, S S., *The Castes and Tribes of H E H Nizam's Dominions* (Bombay: Government Central Press, 1920; rpt. 1989, New Delhi: Asian Educational Services).

Havanur, L G (Chairman)., *Karnataka Backward Classes Commission Report* (Bangalore: Government Press, 1975), 5 Vols.

Kamaladevi Chattopadhyaya. *Tribalism in India,* (New Delhi : Vikas Publishing House), 1978.

Kanak Mital., *Tribes Identity in Changing Industrial Environment - The Santal Case,* (New Delhi Ashish Publications), 1986.

Nanjundaiah H.V.and L.K. Ananthakrishna Iyer. *The Mysore Tribes and Castes,* Vol. II, (Mysore : University of Mysore Press), 1928.

Pradhan, M.C. *The Political System of the Jats of Northern India,* (Bombay : Oxford University Press), 1966.

Thurston, Edgar., *Ethnographic Notes in Southern India*, (Madras : Governament Press), 1909.

Russel, R.V. and Hiralal., *The Tribes and Castes of Central Provinance of India* (in four Vols.), Vol.II, (London ; Macmillan and Co.,) 1916.

Ravivarma Kumar (Chairman)., *The Karnataka State Commission for Backward Classes Special Report -2000* (Bangalore: Government Press, 2000).

Reddy, O Chinnappa (Chairman).,*Report of the Karnataka Third Backward Classes Commission* (Bangalore: Government Press, 1990), 2 Vols.

Russell, R V and Hiralal, *The Tribes and Castes of the Central Provinces of India* (London: Macmillan and Co., 1916; rpt. 1975, New Delhi:Cosmo Publications), vols

Sachchidananda., *Encyclopaedic Profile of Indian Tribes* (New Delhi:Discovery Publishied House)

Shashi, S S., *The World of Nomads* (New Delhi: Lotus Press, 2006).

Singh, K S., *The Scheduled Castes* (Delhi: Oxford University, Press,1993) People of Inida National Series, vol.2

Tribal World of Verrier Elwin - *An Autobiography,* Oxford University, Third Edition, 1992.

ಅಂಕಿಅಂಶಗಳು ೧. ಗುಲಬರ್ಗಾ ಜಿಲ್ಲೆಯ ಶಹಾಪುರದ ಅಲೆಮಾರಿ ಸಮುದಾಯಗಳ ಕುಟುಂಬವಾರು ಲಿಂಗವಾರು ವಯೋಗುಂಪುವಾರು ಜನಸಂಖ್ಯೆ

ಕ್ರ.ಸಂ.	ಸಮುದಾಯಗಳು	ಕುಟುಂಬ	ಜನಸಂಖ್ಯೆ			ವಯೋಗುಂಪು														
						೦ - ೬			೭ - ೧೫			೧೬ - ೫೦			೫೧ - ೬೦			೬೦ ಮೇಲ್ಪಟ್ಟು		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಬೈಲಪತ್ತಾರ	8	17	11	28	2		2	7	4	11	6	5	11	2	2	4	1		1
2	ಬುಡ್ಗಜಂಗಮ	37	122	109	231	27	19	46	40	37	77	44	42	86	10	6	16	1	5	6
3	ಚೆನ್ನದಾಸರು	40	123	89	212	12	3	15	50	40	90	41	41	82	13	7	20	3	4	7
4	ಘಿಸಾಡಿ	9	26	28	54		5	5	14	13	27	9	10	19	1	1	2			
5	ಪಳವ	9	20	26	46	2	3	5		7	7	11	11	22	3	3	6	4	2	6
6	ಕೊರಮ	10	33	23	56	7	3	10	13	7	20	9	11	20	2	1	3	2	1	3
7	ಶಿಳ್ಳೆಕ್ಯಾತ	39	93	94	187	13	12	25	38	38	76	27	31	58	12	12	24	3	1	4
8	ಸಿಂಧೋಳ್ಳು	11	33	39	72	3	3	6	15	24	39	14	11	25	1	1	2			
		163	450	408	858	64	48	112	170	166	336	155	157	312	42	31	73	13	13	26

ಅಂಕಿಅಂಶಗಳು ೨. ಗುಲಬರ್ಗಾ ಜಿಲ್ಲೆಯ ಶಹಾಪುರದ ಅಲೆಮಾರಿ ಸಮುದಾಯಗಳ ಕುಟುಂಬವಾರು ಲಿಂಗವಾರು ವೈವಾಹಿಕ ಸ್ಥಾನಮಾನಗಳು

ಕ್ರ.ಸಂ.	ಸಮುದಾಯಗಳು	ಕುಟುಂಬ	ವೈವಾಹಿಕ ಸ್ಥಾನಮಾನ								
			ಅವಿವಾಹಿತ			ಮದುವೆಯಾದ			ವಿಧುರ ಮತ್ತು ವಿಧವೆಯರು		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಬೈಲಪತ್ತಾರ	8	10	4	14	7	7	14	1		1
2	ಬುಡ್ಗಜಂಗಮ	37	79	62	141	40	42	82	1	7	8
3	ಚೆನ್ನದಾಸರು	40	74	40	114	45	45	90	4	4	8
4	ಫಿಸಾಡಿ	9	18	19	37	8	8	16		1	1
5	ಹೆಳವ	9	5	11	16	15	15	30			
6	ಕೊರಮ	10	23	12	35	9	9	18	1	1	2
7	ಶಿಳ್ಳೆಕ್ಯಾತ	39	54	52	106	39	39	78		3	3
8	ಸಿಂಧೋಳ್ಳು	11	22	27	49	11	11	22		1	1
		163	**275**	**223**	**498**	**167**	**169**	**336**	**6**	**17**	**23**

ಅಂಕಿಅಂಶಗಳು ೩. ಗುಲಬರ್ಗಾ ಜಿಲ್ಲೆಯ ಶಹಾಪುರದ ಅಲೆಮಾರಿ ಸಮುದಾಯಗಳ ಕುಟುಂಬವಾರು ಲಿಂಗವಾರು ಶೈಕ್ಷಣಿಕ ಸ್ಥಾನಮಾನಗಳು

ಕ್ರ.ಸಂ.	ಸಮುದಾಯಗಳು	ಕುಟುಂಬ	ಶೈಕ್ಷಣಿಕ ಮಟ್ಟ																	
			ಪ್ರಾಥಮಿಕ			ಮಾಧ್ಯಮಿಕ			ಪ್ರೌಢಶಾಲೆ			ಡಿಪ್ಲೊಮಾ			ಪದವಿಪೂರ್ವ			ಪದವಿ		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಬೈಲಪತ್ತಾರ	8				3	5	8	7	1	8				4		4			
2	ಬುಡ್ಗಜಂಗಮ	37	26	25	51	1	1	2										2		2
3	ಚೆನ್ನದಾಸರು	40	18	13	31	1		1	1		1									
4	ಘಿಸಾಡಿ	9																		
5	ಹೆಳವ	9		4	4															
6	ಕೊರಮ	10	6	5	11	1		1												
7	ಶಿಳ್ಳೆಕ್ಯಾತ	39	8	15	23															
8	ಸಿಂಧೋಳ್ಳು	11																		
		163	58	62	120	6	6	12	8	1	9				4		4	2		2

ಅಂಕಿಅಂಶಗಳು ೮. ಗುಲಬರ್ಗಾ ಜಿಲ್ಲೆಯ ಶಹಾಪುರದ ಅಲೆಮಾರಿ ಸಮುದಾಯಗಳ ಕುಟುಂಬವಾರು ಲಿಂಗವಾರು ಕಸುಬುಗಳು

ಕ್ರ.ಸಂ.	ಸಮುದಾಯಗಳು	ಕುಟುಂಬ	ಕಸುಬುಗಳು														
			ಕೃಷಿ			ಕೃಷಿಕೂಲಿ			ಸಣ್ಣ ವ್ಯಾಪಾರ			ಸರ್ಕಾರಿ			ಇತರೆ		
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಬೈಲಪತ್ತಾರ	8				6	6	12	2		2		1	1			
2	ಬುಡ್ಗಜಂಗಮ	37					17	17	56	34	90				2		2
3	ಚೆನ್ನದಾಸರು	40					5	5	57	53	110						
4	ಫಿಸಾಡಿ	9				11	11	22									
5	ಹೆಳವ	9					17	17	16		16						
6	ಕೊರಮ	10				14	13	27									
7	ಶಿಳ್ಳೆಕ್ಯಾತ	39				8	11	19	35	32	67				3	2	5
8	ಸಿಂಧೋಳ್ಳು	11				16	14	30									
		163				**55**	**94**	**149**	**166**	**119**	**285**		**1**	**1**	**5**	**2**	**7**

ಅಂಕಿಅಂಶಗಳು ೫. ಗುಲಬರ್ಗಾ ಜಿಲ್ಲೆಯ ಶಹಾಪುರದ ಅಲೆಮಾರಿ ಸಮುದಾಯಗಳ ಕುಟುಂಬವಾರು ಅಂಗವಾರು ಸರ್ಕಾರಿ ಸೌಲಭ್ಯಗಳು ಹಾಗೂ ಪಶುಸಂಪತ್ತು, ಮನೆಗಳ ಮಾದರಿ

ಕ್ರ.ಸಂ.	ಸಮುದಾಯಗಳು	ಕುಟುಂಬ	ಸರ್ಕಾರಿ ಸೌಲಭ್ಯಗಳು							ಪಶು ಸಂಪತ್ತು		ಮನೆಗಳ ಮಾದರಿ				ವಿದ್ಯುತ್	
			ಮತಚೀಟಿ			ವಿಧವಾ ವೇತನ			ಪಡಿತರ ಚೀಟಿ	ಕುರಿ	ಕೋಳಿ	ಗುಡಾರ	ಗುಡಿಸಲು	ಟಿನ್	ಮಾಳಿಗೆ	ಸ್ವಂತ	ಸರ್ಕಾರ
			ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು									
1	ಬೈಲಪತ್ತಾರ	8	9	7	16				5				2	5	1	4	
2	ಬುಡ್ಗಜಂಗಮ	37	42	26	68		1	1				36	1				
3	ಚೆನ್ನದಾಸರು	40	40	34	74		3	3	17				40				
4	ಘಿಸಾಡಿ	9										7	2				
5	ಹೆಳವ	9	7	7	14				4			1	7	1			
6	ಕೊರಮ	10	13	11	24				3			7	3				
7	ಶಿಳ್ಳೆಕ್ಯಾತ	39	37	37	74		1	1	39			39					
8	ಸಿಂಧೋಳ್ಳು	11	8	8	16				6	7	6	10	1				
		163	156	130	286		5	5	74	7	6	100	56	6	1	4	



ಬೆಟ್ಟದ ಮೇಲೆ ಮಲಗಿರುವ ಬುದ್ಧನ ದೃಶ್ಯ , ಶಹಾಪೂರ



ಐತಿಹಾಸಿಕ ಶಹಾಪೂರ ಕೋಟೆ



ಬೈಲಪತ್ತಾರ ಸಮುದಾಯದ ವಯೋವೃದ್ದ ಮಹಿಳೆ, ಶಹಾಪೂರ



ವೃತ್ತಿಯಲ್ಲಿ ನಿರತರಾದ ಬೈಲಪತ್ತಾರ ಸಮುದಾಯದ ವಯೋವೃದ್ದ, ಶಹಾಪೂರ



ಧಾರ್ಮಿಕ ಭಿಕ್ಷಾಟನೆಯಲ್ಲಿ ತೊಡಗಿರುವ ಬುಡ್ಗಜಂಗಮ ಮಹಿಳೆಯರು



ವ್ಯಾಪರಕ್ಕೆ ಹೊರಟಿರುವ ಬುಡ್ಗಜಂಗಮ ಮಹಿಳೆಯರು



ಚನ್ನದಾಸ ಸಮುದಾಯದ ಮಹಿಳೆಯರು, ಶಹಾಪೂರ



ವೃತ್ತಿಯಲ್ಲಿ ನಿರತರಾದ ಘಿಸಾಡಿ ಸಮುದಾಯದವರು, ಶಹಾಪೂರ



ವೃತ್ತಿಯಲ್ಲಿ ನಿರತರಾದ ಘಿಸಾಡಿ ಸಮುದಾಯದವರು, ಶಹಾಪೂರ



ಹೆಳವ ಸಮುದಾಯದವರ ಗುಡಾರಗಳು, ಶಹಾಪೂರ



ಧಾನ್ಯಸ್ವಚ್ಛಗೊಳಿಸುವ ಕಾಯಕದಲ್ಲಿ ನಿರತಳಾದ ಹೆಳವ ಸಮುದಾಯದ ಮಹಿಳೆ,
ಶಹಾಪೂರ



ಕೊರವ ಸಮುದಾಯದ ವಯೋವೃದ್ಧ, ಶಹಾಪೂರ



ಕೊರವಸಮುದಾಯದ ಹನುಮಂತದೇವರ ಪೂಜಾರಿ, ಶಹಾಪೂರ



ವೃತ್ತಿಯಲ್ಲಿ ನಿರತಕೊರಮ ಸಮುದಾಯದವರು, ಶಹಾಪೂರ



ಶಿಳ್ಳೇಕ್ಯಾತ ಸಮುದಾಯದವರು ವಾಸಿಸುವ ಗುಡಾರಗಳು, ಶಹಾಪೂರ



ಸಿಂಧೋಳ್ಳ ಸಮುದಾಯದ ಆರಾದ್ಯ ದೈವವಾದ ಕಾಟಮ್ಮ ದುರ್ಗಮ್ಮ
ದೇವಸ್ಥಾನ, ಶಹಾಪೂರ



ಭಿಕ್ಷಾಟನೆಗೆ ಹೊರಟಿರುವ ಸಿಂಧೋಳ್ಳ ಸಮುದಾಯದ ಮಹಿಳೆ, ಶಹಾಪೂರ



ಅಲೆಮಾರಿ ಸಮುದಾಯದವರ ಗಾಳಿ ಮರಮ್ಮ ದೇವಾಸ್ಥಾನ



ಅಲೆಮಾರಿ ಸಮುದಾಯಗಳ ಟೆಂಟಶಾಲೆ, ಶಹಾಪೂರ



ಅಲೆಮಾರಿಸಮುದಾಯದವರೊಂದಿಗೆ ಸಂಶೋಧಕರು, ಶಹಾಪೂರ